ಕನ್ನಡ ಸಾಹಿತ್ಯ

4

ಸಂಚಿಕೆ

967

ಸ್ನಾತಕೋತ್ತರ ಪದವಿ ಪೂರ್ವಸಿದ್ಧತಾ ಕಾರ್ಯಕ್ರಮ

ಎಂಪಿಪಿ

MPP

MASTER'S PREPARATORY PROGRAMME

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮಾನಸ ಗಂಗೋತ್ರಿ, ಮೈಸೂರು - 570 006

ಉನ್ನತ ಶಿಕ್ಷಣಕ್ಕಾಗಿ ಇರುವ ಅವಕಾಶಗಳನ್ನು ಹೆಚ್ಚಿಸುವುದಕ್ಕೆ ಮತ್ತು ಶಿಕ್ಷಣವನ್ನು ಪ್ರಜಾತಂತ್ರೀಕರಿಸುವುದಕ್ಕೆ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥೆಯನ್ನು ಆರಂಭಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 1986

The Open University system has been initiated in order to augment opportunities for higher education and as instrument of democrating education.

National Education Policy 1986

ಮುಕ್ತ ವಿಶ್ವವಿದ್ಯಾನಿಲಯವು ದೂರಶಿಕ್ಷಣ ಪದ್ಧತಿಯಲ್ಲಿ ಬಹುಮಾಧ್ಯಮಗಳನ್ನು ಉಪಯೋಗಿಸುತ್ತದೆ. ....ವಿದ್ಯಾಕಾಂಕ್ಷಿಗಳನ್ನು ಜ್ಞಾನ ಸಂಪಾದನೆಗಾಗಿ ಕಲಿಕಾ ಕೇಂದ್ರಕ್ಕೆ ಕೊಂಡೊಯ್ಯುವ ಬದಲು, ಜ್ಞಾನ ಸಂಪತ್ತನ್ನು ವಿದ್ಯೆ ಕಲಿಯುವವರ ಬಳಿ ಕೊಂಡೊಯ್ಯುವ ವಾಹಕವಾಗಿದೆ.

ಡಾ. ಕುಳಂದೈಸ್ವಾಮಿ

"The Open University system makes use of Multimedia in distance education system. .... it is vehicle which transports knowledge to the place of learners rather than transport to the place of learning.

Dr. Kulandai Swamy

ವಿಶ್ವಮಾನವ ಸಂದೇಶ

ಪ್ರತಿಯೊಂದು ಮಗುವು ಹುಟ್ಟುತ್ತಲೇ - ವಿಶ್ವಮಾನವ. ಬೆಳೆಯುತ್ತಾ ನಾವು ಅದನ್ನು 'ಅಲ್ಪ ಮಾನವ'ನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು.

ಮನುಜ ಮತ, ವಿಶ್ವ ಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ ಈ ಪಂಚಮಂತ್ರ ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ. ಅಂದರೆ, ನಮಗೆ ಇನ್ನು ಬೇಕಾದುದು ಆ ಮತ ಈ ಮತ ಅಲ್ಲ; ಮನುಜ ಮತ. ಆ ಪಥ ಈ ಪಥ ಅಲ್ಲ; ವಿಶ್ವ ಪಥ. ಆ ಒಬ್ಬರ ಉದಯ ಮಾತ್ರವಲ್ಲ; ಸರ್ವರ ಸರ್ವಸ್ತರದ ಉದಯ. ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಲ್ಲ; ಸಮನ್ವಯಗೊಳ್ಳುವುದು. ಸಂಕುಚಿತ ಮತದ ಆಂಶಿಕ ದೃಷ್ಟಿ ಅಲ್ಲ; ಭೌತಿಕ ಪಾರಮಾರ್ಥಿಕ ಎಂಬ ಭಿನ್ನದೃಷ್ಟಿ ಅಲ್ಲ; ಎಲ್ಲವನ್ನು ಭಗವದ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ.

ಕುವೆಂಪು

Gospel of Universal Man

Every Child, at birth, is the universal man. But, as it grows, we turn it into "a petty man". It should be the function of education to turn it again into the enlightened "universal man".

The Religion of Humanity, the Universal Path, the Welfare of All, Reconciliation, the Integral Vision- these ***five mantras*** should become View of the Future. In other words, what we want henceforth is not this religion or that religion, but the Religion of Humanity ; not this path or that path, but the Universal Path ; not the well-being of this individual or that individual, but the Welfare of All ; not turning away and breaking off from one another, but reconciling and uniting in concord and harmony ; and, above all, not the partial view of a narrow creed, not the dual outlook of the material and the spiritual, but the Integral Vision of seeing all things with the eye of the Divine.

Kuvempu

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸ ಗಂಗೋತ್ರಿ
ಮೈಸೂರು - 570 006

ಎಂ.ಪಿ.ಪಿ.
ಕನ್ನಡ ಸಾಹಿತ್ಯ

ಸಂಚಿಕೆಗಳು	ವಿಷಯಗಳು	
1	ಕನ್ನಡ ಸಾಹಿತ್ಯ ಚರಿತ್ರೆ ಹಳಗನ್ನಡ ಸಾಹಿತ್ಯ ಚಂಪೂ ಸಾಹಿತ್ಯ - ವಚನ ಸಾಹಿತ್ಯ	ಘಟಕ - 1 ಕನ್ನಡ ಸಾಹಿತ್ಯದ ಪ್ರಾಚೀನತೆ ಘಟಕ - 2 ೧ನೇ ನಾಗವರ್ಮ, ನಾಗಚಂದ್ರ, ನಯಸೇನ, ನೇಮಿಚಂದ್ರ, ರುದ್ರಭಟ್ಟ, ಜನ್ನ ಮತ್ತು ಆಂಡಯ್ಯ ಘಟಕ - 3 ವಚನ ಸಾಹಿತ್ಯ : ಹಿನ್ನೆಲೆ, ಉಗಮ, ಬೆಳವಣಿಗೆ, ಲಕ್ಷಣ ಘಟಕ - 4 ಪ್ರಮುಖ ವಚನಕಾರರು, ವಚನ ಸಾಹಿತ್ಯದ ಕೊಡುಗೆ
2	ಕನ್ನಡ ಸಾಹಿತ್ಯ ಚರಿತ್ರೆ ನಡುಗನ್ನಡ ಸಾಹಿತ್ಯ	ಘಟಕ - 1 ರಗಳೆ : ಸ್ವರೂಪ, ಪ್ರಭೇದಗಳು ಘಟಕ - 2 ಕವಿ ಹರಿಹರ ಮತ್ತು ಆತನ ಕೃತಿಗಳು ಘಟಕ - 3 ಷಟ್ಪದಿ ಸಾಹಿತ್ಯ - ಪರಿಚಯ, ರಾಘವಾಂಕ : ಕವಿ, ಕೃತಿಗಳು ಘಟಕ - 4 ಷಟ್ಪದಿ ಕವಿಗಳು : ಕುಮಾರವ್ಯಾಸ, ಚಾಮರಸ, ಕುಮಾರವಾಲ್ಮೀಕಿ
3	ಕನ್ನಡ ಸಾಹಿತ್ಯ ಚರಿತ್ರೆ ನಡುಗನ್ನಡ ಸಾಹಿತ್ಯ	ಘಟಕ - 1 ದಾಸ ಸಾಹಿತ್ಯ : ಶ್ರೀಪಾದರಾಜರು, ಪುರಂದರ, ಕನಕ, ಜಗನ್ನಾಥದಾಸರು ಮೊದಲಾದವರು ಘಟಕ - 2 ತ್ರಿಪದಿ ಸಾಹಿತ್ಯ : ಪರಿಚಯ, ಸರ್ವಜ್ಞ ಕವಿ ಘಟಕ - 3 ಸಾಂಗತ್ಯ ಸಾಹಿತ್ಯ - ೧ : ದೇಪರಾಜ, ಶಿಶುಮಾಯಣ, ನಿಜಗುಣಶಿವಯೋಗಿ, ಕನಕದಾಸರು ಘಟಕ - 4 ಸಾಂಗತ್ಯ ಸಾಹಿತ್ಯ - ೨ : ನಂಜುಂಡ ಕವಿ, ರತ್ನಾಕರವರ್ಣಿ, ಸಂಚಿಯ ಹೊನ್ನಮ್ಮ
4	ಕನ್ನಡ ಸಾಹಿತ್ಯ ಚರಿತ್ರೆ ಆಧುನಿಕ ಕನ್ನಡ ಸಾಹಿತ್ಯ	ಘಟಕ - 1 ಹೊಸಗನ್ನಡದ ಅರುಣೋದಯ : ಭಾಗ - ೧ ಘಟಕ - 2 ಹೊಸಗನ್ನಡ ಅರುಣೋದಯ : ಭಾಗ - ೨ ಘಟಕ - 3 ನವೋದಯ ಮತ್ತು ಪ್ರಗತಿಶೀಲ ಸಾಹಿತ್ಯ ಘಟಕ - 4 ನವ್ಯ ಮತ್ತು ದಲಿತ ಬಂಡಾಯ ಸಾಹಿತ್ಯ
5	ಕನ್ನಡ ಸಾಹಿತ್ಯ ಚರಿತ್ರೆ ಆಧುನಿಕ ಕನ್ನಡ ಸಾಹಿತ್ಯ	ಘಟಕ - 1 ಭಾವಗೀತೆ, ಕಾದಂಬರಿ ಘಟಕ - 2 ಸಣ್ಣ ಕಥೆ : ಸ್ವರೂಪ, ಲಕ್ಷಣ ಮತ್ತು ಇತಿಹಾಸ ಘಟಕ - 3 ನಾಟಕ : ವಸ್ತು, ಸಂವಿಧಾನ, ರಂಗಭೂಮಿ, ನಾಟಕ ಪರಂಪರೆ ಘಟಕ - 4 ಪ್ರಬಂಧ, ವಿಮರ್ಶೆ
6	ಛಂದಸ್ಸು	ಘಟಕ - 1 ಲಯ, ಯತಿ, ಪ್ರಾಸ, ಪಾದ, ಮಾತ್ರಾಗಣ ಸ್ವರೂಪ, ಕನ್ನಡ ಛಂದೋಗ್ರಂಥಗಳ ಪರಿಚಯ ಘಟಕ - 2 ವರ್ಣವೃತ್ತಗಳು, ಖ್ಯಾತ ಕರ್ಣಾಟಕಗಳು; ಮಾತ್ರಾವೃತ್ತಗಳು, ಕಂದ, ರಗಳೆ; ಅಂಶವೃತ್ತಗಳು ಘಟಕ - 3 ಹೊಸಗನ್ನಡ ಛಂದಸ್ಸು - ೧ : ಗಣವಿನ್ಯಾಸ, ಪ್ರಯೋಗಗಳು, ಸ್ವರಾಘಾತ, ಗಣಪರಿವೃತ್ತಿ ಘಟಕ - 4 ಹೊಸಗನ್ನಡ ಛಂದಸ್ಸು - ೨ : ಮಾತ್ರೆ, ಮುಡಿ, ಪದ್ಯಗಣ
7	ಭಾರತೀಯ ಕಾವ್ಯಮೀಮಾಂಸೆ	ಘಟಕ - 1 ಮೀಮಾಂಸೆಯ ಉಗಮ, ಕಾವ್ಯದ ಆಕರ, ಪರಿಕರ, ಸಹೃದಯ, ಕಾವ್ಯ ಲಕ್ಷಣ ಇತ್ಯಾದಿ ಘಟಕ - 2 ಪ್ರಸ್ಥಾನಗಳು : ಅಲಂಕಾರ, ರೀತಿ, ಧ್ವನಿ , ಔಚಿತ್ಯ, ಮೀಮಾಂಸಕರು ಘಟಕ - 3 ರಸಸಿದ್ಧಾಂತ, ರಸಪ್ರಭೇದಗಳು ಘಟಕ - 4 ಧ್ವನಿ ಸಿದ್ಧಾಂತ, ಧ್ವನಿ ಪ್ರಭೇದಗಳು ಘಟಕ - 5 ಔಚಿತ್ಯ ತತ್ವ
8	ಸಾಹಿತ್ಯ ವಿಮರ್ಶೆ	ಘಟಕ - 1 ಪಾಶ್ಚಿಮಾತ್ಯ ವಿಮರ್ಶಕರ ಪರಿಚಯ, ವಿಮರ್ಶೆಯ ಪರಿಚಯ ಘಟಕ - 2 ವಿಮರ್ಶೆಯ ಸ್ವರೂಪ ಘಟಕ - 3 ವಿಮರ್ಶೆಯ ವಿಧಾನಗಳು - 1 ಘಟಕ - 4 ವಿಮರ್ಶೆಯ ವಿಧಾನಗಳು - 2
9	ಕನ್ನಡ ಭಾಷೆಯ ಚರಿತ್ರೆ	ಘಟಕ - 1 ಭಾಷೆ : ಸ್ವರೂಪ, ಲಕ್ಷಣ, ವರ್ಗೀಕರಣ, ದ್ರಾವಿಡ ಭಾಷೆಗಳು, ದ್ರಾವಿಡ ಭಾಷಾವರ್ಗೀಕರಣ ಘಟಕ - 2 ಕನ್ನಡ ಕರ್ಣಾಟಕ ಶಬ್ದ ನಿಷ್ಪತ್ತಿ, ಕನ್ನಡ ಸಂಸ್ಕೃತ - ಸಂಬಂಧ, ಪ್ರಾಂತ ಭೇದಗಳು ಇತ್ಯಾದಿ ಘಟಕ - 3 ವರ್ಣಮಾಲೆ, ನಾಮಪದ, ಲಿಂಗ, ವಚನ, ವಿಭಕ್ತಿ, ಕ್ರಿಯಾಪದ, ಗುಣವಾಚಕ, ಅವ್ಯಯ ಇತ್ಯಾದಿ ಘಟಕ - 4 ಶಬ್ದಕೋಶ ಬೆಳವಣಿಗೆ, ದೇಶ್ಯ - ಅನ್ಯದೇಶ್ಯ ಪದಗಳು
10	ವ್ಯಾಕರಣ	ಘಟಕ - 1 ಶಬ್ದಮಣಿದರ್ಪಣಂ : ವ್ಯಾಕರಣ ಪರಿಚಯ, ವರ್ಣಮಾಲೆ ಘಟಕ - 2 ಸಂಧಿಪ್ರಕರಣ, ನಾಮಪ್ರಕರಣ ಘಟಕ - 3 ಸಮಾಸ ಪ್ರಕರಣ, ತದ್ಧಿತ ಪ್ರಕರಣ ಘಟಕ - 4 ಆಖ್ಯಾತ, ಧಾತು, ಅಪಭ್ರಂಶ, ಅವ್ಯಯ ಪ್ರಕರಣ

ಸಂಚಿಕೆ - 4

ಆಧುನಿಕ ಕನ್ನಡ ಸಾಹಿತ್ಯ

ಪಠ್ಯಕ್ರಮ ವಿನ್ಯಾಸ ಮತ್ತು ಸಂಪಾದಕ ಮಂಡಳಿ

ಪ್ರೊ.ಕೆ.ಸುಧಾರಾವ್
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಡೀನ್ (ಶೈಕ್ಷಣಿಕ) ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಪ್ರೊ. ಬಿ.ಎನ್. ನಾಗರಾಜ ಭಟ್ — ಸಂಪಾದಕರು
ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮೈಸೂರು.

ಡಾ. ಡಿ.ಟಿ. ಬಸವರಾಜ್ — ಸಂಪಾದಕರು / ಸಂಯೋಜಕರು
ಅಧ್ಯಕ್ಷರು,
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮೈಸೂರು.

ಪಠ್ಯಕ್ರಮ ನಿರೂಪಕರು

ಸಂಚಿಕೆ - 4

ಶ್ರೀ ಡಿ. ನಾಗಣ್ಣ — ಘಟಕ 1, 2, 3 ಮತ್ತು 4
ಅಧ್ಯಾಪಕರು,
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮೈಸೂರು.

ಪ್ರಕಾಶಕರು

ಶ್ರೀ ವಿ. ರಾಮಣ್ಣ
ಕುಲಸಚಿವರು (ಆಡಳಿತ)

ಕ.ರಾ.ಮು.ವಿ.,ಯ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ 2002

ಎಲ್ಲಾ ಹಕ್ಕುಗಳನ್ನು ಕಾದಿರಿಸಲಾಗಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ, ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕೋರ್ಸ್‌ಗಳ ಹೆಚ್ಚಿನ ವಿವರಗಳಿಗೆ
ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸಗಂಗೋತ್ರಿ, ಮೈಸೂರು - 570 006 ಇಲ್ಲಿಂದ ಪಡೆಯಬಹುದು.

ಪ್ರಿಯ ವಿದ್ಯಾರ್ಥಿ,

ಕನ್ನಡ ಎಂ.ಎ., ವ್ಯಾಸಂಗಕ್ಕಾಗಿ ನಮ್ಮ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶ ಪಡೆದಿರುವ ತಮ್ಮನ್ನು ನಮ್ಮ ಕನ್ನಡ ವಿಭಾಗದ ಅಧ್ಯಾಪಕ ವೃಂದ ಹೃತ್ಪೂರ್ವಕವಾಗಿ ಸ್ವಾಗತಿಸುತ್ತದೆ.

ತಮ್ಮ ಕೈಯಲ್ಲಿರುವ ಈ ಸಾಮಗ್ರಿಯು ನಮ್ಮಲ್ಲಿ 'ಮುಕ್ತ' ಪದ್ಧತಿಯಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆಂದೇ ವಿಶೇಷವಾಗಿ ಸಿದ್ಧಪಡಿಸಿದುದಾಗಿದೆ. ತಾವು ತಮ್ಮ ಸ್ವಂತ ಇಚ್ಛೆ ಮತ್ತು ಪರಿಶ್ರಮದಿಂದ ಕನ್ನಡ ಸಾಹಿತ್ಯವನ್ನು ವ್ಯಾಪಕವಾಗಿ ಓದಿಕೊಂಡಿದ್ದೀರಿ ಮತ್ತು ಅಭಿಮಾನವನ್ನೂ ಬೆಳೆಸಿಕೊಂಡಿದ್ದೀರಿ ಎಂದು ಭಾವಿಸಿದ್ದೇವೆ. ಇದನ್ನು ತುಂಬು ಮನಸ್ಸಿನಿಂದ ತಾವು ಗೌರವಿಸುತ್ತೇವೆ ಕೂಡ. ಈ ಬಗೆಯಲ್ಲಿ ತಾವು ಓದುವಿಕೆಯನ್ನು ಮಾಡಿದವರಾಗಿದ್ದರೂ ಅದು ಕೆಲವೊಮ್ಮೆ ಒಂದು ಶಿಸ್ತಿಗೆ ಒಳಪಟ್ಟ ಅಧ್ಯಯನವಾಗದೆಯೂ ಇರಬಹುದು. ಇಂತಹ ಸ್ಥಿತಿಯಿಂದ ನಿರ್ದಿಷ್ಟ ಶಿಸ್ತಿನ ಪದ್ಧತಿಗೆ ಪ್ರವೇಶ ಪಡೆದಾಗ ತಮಗೆ ಕೆಲಮಟ್ಟಿಗೆ ಶೈಕ್ಷಣಿಕ ತೊಡಕು (ಕೆಲವರಿಗಾದರೂ) ಎದುರಾಗಬಹುದು. ಈ ಕೊರತೆಯನ್ನು ನೀಗುವ ಸಲುವಾಗಿ ***'ಸ್ನಾತಕೋತ್ತರ ಪದವಿ ಪೂರ್ವಸಿದ್ಧತಾ ಕಾರ್ಯಕ್ರಮ'*** **[*Master's Degree Preparatory Programe (MPP)*]** ವನ್ನು ಮುಕ್ತಪದ್ಧತಿಯ ವಿದ್ಯಾರ್ಥಿಗಳಿಗೆ ರೂಪಿಸಲಾಗಿದೆ. ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯಲ್ಲಿ ಒಬ್ಬ ವಿದ್ಯಾರ್ಥಿ (ಬಿ.ಎ., ಪದವಿಯವರೆಗೆ) ವ್ಯಾಸಂಗ ಮಾಡಿರುವ ವಸ್ತು-ವಿಷಯಗಳ ಸ್ಥೂಲ ಮಾಹಿತಿಯನ್ನು ಈ (ಎಂಪಿಪಿ) ಸಾಮಗ್ರಿಯಲ್ಲಿ ಅಳವಡಿಸಲಾಗಿದೆ. ಮುಕ್ತ ಪದ್ಧತಿಯಲ್ಲಿ ಪ್ರವೇಶ ಪಡೆದ ತಮಗೆ ಈ ಸಾಮಗ್ರಿಯು ಕನ್ನಡ ಎಂ.ಎ. ವ್ಯಾಸಂಗಕ್ಕೆ ಸೂಕ್ತ ತಳಹದಿಯನ್ನು ನೀಡುವುದರೊಂದಿಗೆ ಆತ್ಮವಿಶ್ವಾಸವನ್ನು ಮೂಡಿಸುತ್ತದೆ.

ಕನ್ನಡ ಸಾಹಿತ್ಯ ಕುರಿತ 10 ಸಂಚಿಕೆಗಳಲ್ಲಿ ಇದು 4 ನೆಯದು. ಇದರಲ್ಲಿ ಆಧುನಿಕ ಕನ್ನಡ ಸಾಹಿತ್ಯವನ್ನು ವಿವೇಚಿಸಲಾಗಿದೆ. ಮುಖ್ಯವಾಗಿ, ಹೊಸಗನ್ನಡದ ಅರುಣೋದಯ; ನವೋದಯ ಮತ್ತು ಪ್ರಗತಿಶೀಲ ಸಾಹಿತ್ಯ; ನವ್ಯ ಸಾಹಿತ್ಯ, ದಲಿತ ಮತ್ತು ಬಂಡಾಯ ಸಾಹಿತ್ಯವನ್ನು ಕುರಿತ ಸಂಗತಿಗಳು ಇಲ್ಲಿ ಪ್ರಸ್ತಾಪಿಸಿಲ್ಪಟ್ಟಿವೆ.

ಈ ಸಾಮಗ್ರಿಯಲ್ಲಿನ ವಿಷಯಗಳನ್ನು ಸೂಕ್ಷ್ಮವಾಗಿ ತಾವು ಓದಬೇಕು, ಒಂದೊಂದು ಅಂಕಗಳಿಗೆ ಉತ್ತರಿಸಬಹುದಾದ 'ವಸ್ತುನಿಷ್ಠ' (Objective Type) ಪ್ರಶ್ನೆಗಳನ್ನು ತಾವೇ ಸಿದ್ಧಪಡಿಸಿಕೊಂಡು ಉತ್ತರಗಳನ್ನು ಕಂಡುಕೊಂಡು ಈ ಸಾಮಗ್ರಿ ಕುರಿತ ಪರೀಕ್ಷೆಗೆ ಸಿದ್ಧವಾಗಬೇಕು ಎಂದು ಸೂಚಿಸುತ್ತ; ಈ ಸಾಮಗ್ರಿಯ ಓದು ತಮಗೆ ಉದ್ದಿಷ್ಟಫಲವನ್ನು ನೀಡಲಿ ಎಂದು ಆಶಿಸುತ್ತೇವೆ.

ಅಧ್ಯಾಪಕ ವೃಂದದ ಪರವಾಗಿ
ತಮ್ಮ ವಿಶ್ವಾಸಿ

ಡಾ. ಡಿ.ಟಿ. ಬಸವರಾಜ್
ಅಧ್ಯಕ್ಷರು, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

ಸಂಚಿಕೆ - 4
ಕನ್ನಡ ಸಾಹಿತ್ಯ ಚರಿತ್ರೆ - ಆಧುನಿಕ ಕನ್ನಡ ಸಾಹಿತ್ಯ

ಘಟಕ - 1
ಹೊಸಗನ್ನಡದ ಅರುಣೋದಯ : ಭಾಗ - ೧
ಹೊಸನ್ನಡದ ಹಿನ್ನೆಲೆ, ಮುದ್ರಣ ಮತ್ತು ಗ್ರಂಥೋದ್ಯಮ, ಮಿಶನರಿಗಳ ಪಾತ್ರ

ಪರಿವಿಡಿ :

1.0 ಉದ್ದೇಶ

- ಪೀಠಿಕೆಯ ಹಿನ್ನೆಲೆಯಲ್ಲಿ ಘಟಕದ ಉದ್ದೇಶ ಮತ್ತು ವ್ಯಾಪ್ತಿಯನ್ನು ಅರಿಯುವಿರಿ.
- ಹೊಸಗನ್ನಡದ ಅರುಣೋದಯ ಸಾಹಿತ್ಯ ಸೃಷ್ಟಿಯ ಹಿಂದೆ ಇದ್ದ ಮನೋಧರ್ಮ ಮತ್ತು ಮೌಲ್ಯವನ್ನು ಕುರಿತು ತಿಳಿಯುವಿರಿ.
- ಹೊಸಗನ್ನಡ ಸಾಹಿತ್ಯ ಹಿನ್ನೆಲೆಯಲ್ಲಿ ಸುಧಾರಕರ ಪಾತ್ರ ಏನೆಂಬುದನ್ನು ಅರಿಯುವಿರಿ.
- ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಮುದ್ರಣ ಮತ್ತು ಗ್ರಂಥೋದ್ಯಮವು ಉಂಟು ಮಾಡಿದ ಕ್ರಾಂತಿಯ ಅರಿಯುವನ್ನು ತಿಳಿಯುವಿರಿ.
- ಒಂದು ಹೊಸ ಸಾಮಾಜಿಕ ವ್ಯವಸ್ಥೆಯ ಬದಲಾವಣೆಯ ಹಿನ್ನೆಲೆಯಲ್ಲಿ ಶಿಕ್ಷಣವು ವಹಿಸುವ ಪಾತ್ರ ತುಂಬ ಮೌಲಿಕವಾದುದೆಂಬುದನ್ನು ಅರಿಯುವಿರಿ.
- ಹೊಸಗನ್ನಡ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಕ್ರೈಸ್ತ ಮಿಶನರಿ ಮತ್ತು ವಿದ್ವಾಂಸರು ವಹಿಸಿದ ಪಾತ್ರವನ್ನು ಕುರಿತು ತಿಳಿಯುವಿರಿ.
- ಹೊಸಗನ್ನಡದ ಸಾಹಿತ್ಯ ಹಿನ್ನೆಲೆಯಲ್ಲಿ ಮುಮ್ಮಡಿ ಕೃಷ್ಣ ರಾಜರು ಒಬ್ಬ ಮಂಚೂಣಿ ಲೇಖಕರಾಗಿ ವಹಿಸಿದ ಜವಾಬ್ದಾರಿಯನ್ನು ಗ್ರಹಿಸುವಿರಿ.
- ಅಭ್ಯಾಸ ಪ್ರಶ್ನೆಗಳನ್ನು ಗಮನಿಸುವಿರಿ.
- ಘಟಕದ ಸಾರಾಂಶದ ಹಿನ್ನೆಲೆಯಲ್ಲಿ ಘಟಕದ ಸ್ವರೂಪ ಮತ್ತು ಮಹತ್ವವನ್ನು ಅರಿಯುವಿರಿ.
- ಸ್ವಪರೀಕ್ಷಾ ಪ್ರಶ್ನೆಗಳಿಗೆ ಗಮನಿಸುವಿರಿ.
- ಸ್ವಪರೀಕ್ಷಾ ಪ್ರಶ್ನೆಗಳಿಗೆ ಉತ್ತರಗಳನ್ನು ತಿಳಿಯುವಿರಿ.
- ಘಟಕದ ಅಭ್ಯಾಸಕ್ಕೆ ಸಹಾಯಕವಾಗುವ ಉಪಯುಕ್ತ ಗ್ರಂಥಗಳನ್ನು ಗಮನಿಸುವಿರಿ.

1.1 ಪೀಠಿಕೆ

ಹಿಂದಿನ "ಯಾವುದೇ ಸಾಹಿತ್ಯ ಚರಿತ್ರೆ ನಿರಂತರವಾದ ಕ್ರಾಂತಿ ಚಳುವಳಿಗಳ, ಪ್ರಯೋಜಗಳ ಕತೆಯೇ ಆಗಿರುತ್ತದೆ. ಕನ್ನಡ ಈ ಮಾತಿಗೆ ಅಪವಾದವಲ್ಲ. ಕನ್ನಡ ಸಾಹಿತ್ಯ ಉದ್ದಕ್ಕೂ ಪರಂಪರೆಯ ನೆಲೆಗಟ್ಟಿನ ಮೇಲೆ ನಿಂತೇ ಹೊಸತನವನ್ನು ಸ್ವಾಗತಿಸುತ್ತ, ಅರಗಿಸಿಕೊಳ್ಳುತ್ತ ಸಮನ್ವಯವಾದ ಹಾದಿಯಲ್ಲಿ ಸಾಗಿ ಬಂದಿದೆ. ಹಳಗನ್ನಡ ನಡುಗನ್ನಡ ಸಾಹಿತ್ಯಗಳಂತೆಯೆ ಹೊಸಗನ್ನಡ ಸಾಹಿತ್ಯ ಅಥವಾ ಆಧುನಿಕ ಕನ್ನಡ ಸಾಹಿತ್ಯ ಕೂಡ ಇಂಥ ಸಮನ್ವಯದ ಫಲವೇ ಆಗಿದೆ". ಈ ದೃಷ್ಟಿಯಿಂದ ೧೭ನೆಯ ಶತಮಾನದ ಅಂತ್ಯ ಮತ್ತು ೧೮ನೆಯ ಶತಮಾನದ ಆರಂಭ ರೂಪಿತವಾದ ಸಾಹಿತ್ಯ ಚಳುವಳಿಯು ಹಿಂದಿನ ಚರ್ವಿತ -ಚರ್ವಣವಾದ ಪರಂಪರೆಯ ಭಾಷೆ. ಸಾಹಿತ್ಯ - ಸಂಸ್ಕೃತಿಯಿಂದ ಬಿಡಿಸಿಕೊಂಡು ಮುಂದಿನ ಹೊಸತನಕ್ಕಾಗಿ ಹಾತೊರೆಯುತ್ತಿದ್ದ ಸ್ಥಿತ್ಯಂತ ಬದುಕಿನ ಸಂಕ್ರಮಣ ಕಾಲವನ್ನು "ಹೊಸಗನ್ನಡ ಅರುಣೋದಯ ಸಾಹಿತ್ಯ ಯುಗ" ವೆಂದು ಗುರುತಿಸಲಾಗುವುದು. ಅಂತೆಯೆ ಈ ಯುಗವವನ್ನು ಆಧುನಿಕ ಕನ್ನಡ ಸಾಹಿತ್ಯ - ಸಂಸ್ಕೃತಿಯ ಪೂರ್ವಸಿದ್ಧತೆಯ ಪೀಠಿಕೆಯ ರೂಪದಲ್ಲಿ ಮೂಡಿದ "ಮುಂಬೆಳಕಿನ ಕಾಲ"ವೆಂದು ಕೂಡಿದ ಕರೆಯಲಾಗುವುದು. ಅಂದರೆ ಪ್ರಾಚೀನ ಕನ್ನಡದಿಂದ ನಡುಗನ್ನಡ ಸಾಹಿತ್ಯದವರೆಗೂ ಅವ್ಯಾಹಿತವಾಗಿ ಹರಿದು ಬಂದ ಪರಂಪರೆಯ ಮನೋಧರ್ಮವು ಶ್ರೀಮಂತವಾಗಿದ್ದರೂ, ಸುಮಾರು 1750ರ

ಚಿಕ್ಕದೇವರಾಜರ ಒಡೆಯರ ಕಾಲದ ಹೊತ್ತಿಗೆ ಶುರುವಾದ ಆಧುನಿಕ ಬದುಕಿನ ಸಮಸ್ಯೆ -ಸವಾಲುಗಳನ್ನು ಎದುರಿಸಲಾರದೆ, ಚರ್ವಿತ - ಚರ್ವಣವಾದ ಹಿನ್ನೆಲೆಯಲ್ಲಿ ಚಾರಿತ್ರಿಕ ದೃಷ್ಟಿಯಿಂದ ತುಂಬ ಮಹತ್ವದೆಂದು ಗುರುತಿಸಬಹುದು. ಅಂದರೆ, ಈ ಹೊತ್ತಿನಲ್ಲಿ ಪಶ್ಚಿಮದ ಇಂಗ್ಲೆಂಡ್, ಫ್ರೆಂಚ್, ಜಪಾನ್. ಮೊದಲಾದ ಪ್ರಮುಖ ದೇಶಗಳು ವಸಾಹತುಗಳ ಶೋಧನೆ, ವ್ಯಾಪಾರದ ಆಸ್ಥೆ. ಸಾಮ್ರಾಜ್ಯ ವಿಸ್ತರಣೆ, ಮುತ್ತು-ರತ್ನ, ಸಾಂಬಾರು ಪದಾರ್ಥ, ಧರ್ಮಪ್ರಚಾರ ಇನ್ನು ಮುಂತಾದ ಹತ್ತು ಹಲವು ಆಸ್ಥೆಯಿಂದ ಭಾರತವನ್ನು ಹರಸಿ ಬಂದು ಸಾಮ್ರಾಜ್ಯಶಾಹಿಗಳಾದರು. ಆದರೆ ಇದು, ಭಾರತೀಯರಿಗೆ ಒಂದು ರೀತಿಯಲ್ಲಿ ಪ್ರತಿ ಕೂಲವಾದರೆ, ಮತ್ತೊಂದು ರೀತಿಯಿಂದ ಅವರಿಗೆ ಆವರೆಗಿನ ಜಡಗಟ್ಟಿದ ಅವರ ಸಾಂಸ್ಕೃತಿಕ ಬದುಕಿನ ಸಂದರ್ಭದಲ್ಲಿ ಹೊಸತನವನ್ನು ಬಯಸಲು ಅನುಕೂಲವಾಯಿತೆಂದು ತಿಳಿಯಬಹುದು. ಹೀಗಾಗಿ ಭಾರತೀಯರು ಪರಂಪರೆಯಿಂದಲೂ ನಂಬಿಕೊಂಡು ಬಂದಿದ್ದ ಸಾಂಪ್ರಾದಾಯಿಕ ಬದುಕು, ಸಾಮಾಜಿಕ ಸಂರಚನೆ, ಆಚಾರ-ವಿಚಾರ, ಉಡುಗೆ-ತೊಡುಗೆ, ರಾಜಪ್ರಭುತ್ವ ಪ್ರೀತಿ ಮುಂತಾದವುಗಳ ಪ್ರೇಮ ಬಗೆಗೆ ನಂಬಿಕೆ ಕಳಚಿ, ಪಶ್ಚಿಮ ಮತ್ತು ಪೌರಾತ್ಯದ ಹೊಸ ಸಂವೇದನೆಗಳ ಹಿನ್ನೆಲೆಯಲ್ಲಿ ರೂಪಿತವಾದ ಒಂದು ಹೊಚ್ಚ ಹೊಸ ಬದುಕನ್ನು ರೂಪಿಸಿಕೊಳ್ಳಲು ಸಾಧ್ಯವಾಯಿತ್ತೆಂದು ತಿಳಿಯಬಹುದು. ಅಂತೆಯೆ ಇದರ ಪ್ರತೀಕವಾಗಿ ಸೃಷ್ಟಿಯಾದ ಸಾಹಿತ್ಯ ಪರಿಸರವನ್ನು 'ಹೊಸಗನ್ನಡ ಅರುಣೋದಯ|ಸಾಹಿತ್ಯ' ವೆಂದು ಕರೆಯಲಾಗುವುದು.

ಈ ಹಿನ್ನೆಲೆಯಲ್ಲಿ ಕ್ರೈಸ್ತ ಮಿಶನರಿಗಳು, ದೇಶೀಯ ಸಂತಕವಿಗಳು, ಪಾಶ್ಚಾತ್ಯ ಮತ್ತು ಪೌರಾತ್ಯ ವಿದ್ವಾಂಸರು, ಮುದ್ರಣ ಮತ್ತು ಗ್ರಂಥೋಧ್ಯಮ, ದೇಶಿಯ ಸುಧಾರಕರ ಪಂಥ ಹಾಗೂ ಶಿಕ್ಷಣರಂಗದ ಆಧುನಿಕ ಪ್ರಯೋಗಗಳು, ಮುಮ್ಮಡಿ ಕೃಷ್ಣರಾಜ ಮುಂತಾದವರ ಪಾತ್ರವು ತುಂಬ ಮಹತ್ವದ್ದಾಗಿದ್ದು. ಈ ಹಂತವನ್ನು "ಹೊಸಗನ್ನಡ ಅರುಣೋದಯ ಸಾಹಿತ್ಯ" ಸೃಷ್ಟಿಯ ಆರಂಭಿಕ ಹಂತವೆಂದು ಗುರುತಿಸಲಾಗುವುದು. ಅಂತೆಯ ಅದರ ಒಟ್ಟು ಸ್ವರೂಪ ಮತ್ತು ವೈಶಿಷ್ಟ್ಯತೆಯನ್ನು ಕುರಿತು ಈ ಘಟಕದಲ್ಲಿ ನಾವು ಅಧ್ಯಯನ ಮಾಡಬಹುದು.

1.2 ಹೊಸಗನ್ನಡ ಅರುಣೋದಯ ಸಾಹಿತ್ಯದ ಹಿನ್ನೆಲೆ

ಒಂದು ಸಾವಿರಕ್ಕೂ ಹೆಚ್ಚಿನ ಇತಿಹಾಸ ಹೊಂದಿರುವ ಕನ್ನಡ ಸಾಹಿತ್ಯವು ಹದಿನೆಂಟನೆ ಶತಮಾನದ ಆರಂಭದಲ್ಲಿ ಹಿಂದಿನ ಚರ್ವಿತ -ಚರ್ವಣವಾಗುತ್ತ ಬಂದ ಪರಂಪರೆಯನ್ನು ಬಿಟ್ಟು, ಹೊಸ ಹಾದಿಗಾಗಿ ಹಾತೊರೆಯುತಿತ್ತು. ಅಂದರೆ ಆ ಹೊತ್ತಿನ ಕರ್ನಾಟಕದ ಸ್ಥಿತಿಗತಿಯೂ ರಾಜಕೀಯವಾಗಿ, ಸಾಮಾಜಿಕವಾಗಿ ಹಾಗೂ ವೈಚಾರಿಕವಾಗಿ ದುರ್ಬಲವಾಗಿತ್ತೆಂದು ತಿಳಿಯಬಹುದು. ಈ ದೃಷ್ಟಿಯಿಂದ ಗಮನಿಸಿದರೆ ಅಂದಿನ ಉತ್ತರ ಕರ್ನಾಟಕವು ಹೈದರಬಾದಿನ ನಿಜಾಮನ ಪ್ರಭಾವಕ್ಕೆ ಒಳಗಾಗಿ ಉರ್ದು ಭಾಷೆಯ ಜೊತೆ ಸೆಣಸಾಡಬೇಕಾಗಿತ್ತು. ಹಾಗೆಯೇ ಅದರ ಮತ್ತೊಂದು ಭಾಗವು ಮದರಾಸು ಪ್ರಾಂತ್ಯದ ಆದಿಪತ್ಯಕ್ಕೊಳಗಾಗಿದ್ದರೂ ಜೊತೆಗೆ ತೆಲುಗಿನ ಪ್ರಾಬಲ್ಯವನ್ನೂ ಸಹಿಸಕೊಳ್ಳಬೇಕಾಗಿತ್ತು. ಅಲ್ಲದೆ ಅದರ ಮತ್ತೊಂದು ಭಾಗವು ಮಹಾರಾಷ್ಟ್ರಕ್ಕೆ ಸೇರಿಕೊಂಡು ಮರಾಠಿ ಜನರ ಆಕ್ರಮಣಕಾರಿ ಸ್ವಭಾವದಿಂದ ತನ್ನ ಅಸ್ತಿತ್ವಕ್ಕಾಗಿ ಹೋರಾಡಬೇಕಾದ ಸ್ಥಿತಿ ಇತ್ತು. ಇದಲ್ಲದೆ ಇನ್ನು ಗಡಿನಾಡುಗಳ ಸ್ಥಿತಿ ಬೇರೆಯಾಗಿರಲಿಲ್ಲವೆಂದು ಅರಿಯಬಹುದು. ಅಂದರೆ ಗಡಿನಾಡುಗಳಾದ ಕಾಸರಗೂಡು, ಹೊಸೂರು, ಹೈದರನಾದ್ ಕರ್ನಾಟಕ ಮುಂತಾದವು ಅಂದಿನ ಕೇರಳ, ಮಹಾರಾಷ್ಟ್ರ, ಮದರಾಸುಗಳ ಪ್ರಭಾವಗಳಿಗೆ ಒಳಗಾಗಿದ್ದರೂ ಆಗಿನ ಆಂಗ್ಲ ವಸಾಹತುಶಾಹಿಗಳ ದಟ್ಟ ಪ್ರಭಾವಗಳಿಂದ ನಾಡು-ನುಡಿ ಹೋರಾಟದ ಹಿನ್ನೆಲೆಯಲ್ಲಿ ಪುನರ್‌ಜನ್ಮವನ್ನು ಪಡೆದುಕೊಂಡ ಕೊಳ್ಳಲು ಯಶಸ್ವಿಯಾದವುವೆಂದು ಸ್ಮರಿಸಿಕೊಳ್ಳಬಹುದು ಹೀಗೆ ಇನ್ನು ಮುಂತಾದ ಬದುಕಿನ ಸಮಸ್ಯೆಗಳನ್ನು- ಸವಾಲು ಎದುರಿಸಲಾಗದೆ ಅಥವಾ ನುಡಿಕೊಡಲು ಸಾಧ್ಯವಾಗದೆ ಚರ್ವಿತ-ಚರ್ವಣ ಸ್ಥಿತಿಯನ್ನು ಮುಟ್ಟಿ, ದೌರ್ಬಲ್ಯ, ನಿಸ್ಸಾರತೆಯಿಂದ ನಿಷ್ಪಲವಾಗಿ ನಿಂತು, ಹೊಸ ಕಾವ್ಯ ಪರಿಕಲ್ಪನೆಗಳಿಗಾಗಿ, ಭಾಷೆಯ ಹೊಸ

ನುಡಿಗಟ್ಟಿಗಳಿಗಾಗಿ ಹಾತೊರೆಯುವ ಪರಿಸ್ಥಿತಿ ನಿರ್ಮಾಣವಾಯಿತು. ಇದರ ಪ್ರತಿಫಲವಾಗಿ ಕಾಣಿಸಿಕೊಂಡ ಸಾಹಿತ್ಯವೇ ಹೊಸಗನ್ನಡ ಅರುಣೋದಯವೆಂದು ಸಾಹಿತ್ಯಹಾಸದಿಂದ ನಾವಿಂದು ಮನಗಾಣಬಹುದು.

ಈ ದಿಸೆಯಲ್ಲಿ (1832 ರಿಂದ 1890ರವೆಗೆ) ನರಸಪ್ಪ ಕುಲಕರ್ಣಿ, ಐಹೊಳೆ ವೆಂಕಟೇಶ, ಕೋಳಿವಾಡದ ಹುಲಿಗಪ್ಪ, ಶ್ರೀನಿವಾಸದಾಸ, ಕೂಡುಲೂರೇಶ, ಶ್ರೀನಿವಾಸತೀರ್ಥ, ಬೆರಟೂರೇಶ, ಕಡಕೊಳದ ಮಡಿವಾಳೇಶ, ಗಿರಿಮಲ್ಲೇಶ, ಪಂಚಾಕ್ಷರಿ ನೀರಲಕೇರಿ, ನರಸಿಂಹ ನಂದ್ಯಾಳಸಂಗ ಇನ್ನು ಮುಂತಾದ ಪ್ರಮುಖ ಅನುಭಾವ ಕವಿಗಳು ಹೊಸ ಸಂವೇಧನೆಯ ಹಿನ್ನೆಲೆಯಲ್ಲಿ ಕಾವ್ಯ ಬರೆಯಲು ತೊಡಗಿದ್ದರು. ಅನಂತರ ಚುರಮುರಿ ಶೇಷಗಿರಿರಾಯರು (1827 ರಿಂದ 24) ಕಾಳಿದಾಸನ 'ಶಾಕುಂತಲ', ಭವಭೂತಿಯ 'ಉತ್ತರಕುಮಾರ ಚರಿತೆ', ಶೂದ್ರ ಕವಿಯ 'ಮೃಚ್ಛಕಟಿಕ', ಭಟ್ಟನಾರಾಯಣನ 'ವೇಣೀಸಂಹಾರ', ಕಾಳಿದಾಸನ 'ಮೊಳವಿಕಾಗ್ನಿ ಮಿತ್ರ' ಮೊದಲಾದ ಪ್ರಮುಖ ಕಾವ್ಯಮಯ ನಾಟಕಗಳನ್ನು ಸಂಸ್ಕೃತದಿಂದ ಕನ್ನಡಕ್ಕೆ ಭಾಷಾಂತರ ಮತ್ತು ರೂಪಾಂತರಗಳನ್ನು ಮಾಡಿದನು. ಇವರ ಬಳಿಕ ಕನ್ನಡ ಸೇವೆಯೆ ತನ್ನ ಪರಮ ಪೂಜ್ಯ ಕೆಲಸವೆಂದು ತಮ್ಮ ಇಡೀ ಬದುಕನ್ನು ಅರ್ಪಿಸಿಕೊಂಡವರು ಶಾಂತಕವಿ (ಸಕ್ಕರೆ ಬಾಳಾಚಾರ್ಯಗಳು) (1856-1920) ಆಗಿದ್ದು. ಇವರು ಕನ್ನಡಕ್ಕೆ ಸತ್ವಪೂರ್ಣವಾದ ಬಹು ಬೆಲೆಯುಳ್ಳ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ವಿದ್ಯಾರಣ್ಯಕೀರ್ತಿನೆ', 'ಉಷಾಹರಣ', 'ರತಿಕಲ್ಯಾಣ', 'ನಾಟಕಾವಲೋಕನ' ಹಾಗೂ 'ಕನ್ನಡ ದಾಸಯ್ಯ' ಮೊದಲಾದವು ಪ್ರಮುಖ ಕೃತಿಗಳು ಗಮನಾರ್ಹವಾಗಿವೆ. ಅವರ ಕವನದ ಸಾಲೊಂದು ಹೀಗಿದೆ.

ಬೇಡಲು ಕನ್ನಡ ದಾಸಯ್ಯ ಬಂದಿಹ
ನೀಡಿರಮ್ಮಾ! ತಡಮಾಡದಲೇ ||ಪ||
ಹಾಡೊಂದನಾತನು ಹೊಸದಾಗೆ| ಮಾಡಿದ
ಕೂಡಿರಿ ಕೇಳಿರಿ ಹಾಡುವನು ||ಅನು||

ಹೀಗೆ ಅವರು ಕನ್ನಡ ನಾಡಿನ ಪ್ರತಿಯೊಂದು ಮನೆ ಮನೆಗೂ ಹೋಗಿ ಕನ್ನಡ ಸೇವೆಗಾಗಿ ಚಂದದ ಹಣವನ್ನು ಎತ್ತುವ ಮೂಲಕ ಕನ್ನಡವನ್ನು ಬೆಳೆಸುವ ಕೃಷಿ ಮಾಡಿದನು. ಅಲ್ಲದೆ ಅವರು ಪರಂಪರೆಯಿಂದಲೂ ಕನ್ನಡವು ಸಂಸ್ಕೃತ ನೆರಳಲ್ಲಿ ಬೆಳೆಯುವ ಕೊಂಡಿಯಿಂದ ಬಿಡಿಸಿಕೊಂಡು, ಹದಿನೆಂಟನೆಯ ಶತಮಾನದ ಹೊಸ ಬದುಕಿನ ಆಶೋತ್ತರಗಳಿಗೆ ನುಡಿ ಕೊಡುವ ಸಾಹಿತ್ಯವನ್ನು ಕಟ್ಟಿ ಬೆಳೆಸುವ ಆಧುನಿಕ ಪರಂಪರೆಯ ಮೊದಲು ವಕ್ತಾರನಾಗಿ ಆತನು ಗುರುತಿಸಿಕೊಂಡನು.

ಈತನ ಸಮಕಾಲೀನ ಸಂದರ್ಭದಲ್ಲಿ ಹೊಸಾಹತುಗಳ ಪ್ರತೀಕವಾಗಿ ಇಂಡಿಯಾವನ್ನು ಪ್ರವೇಶಿಸಿದ ಕ್ರೈಸ್ತ ಮಿಶನರಿಗಳ ಪಾತ್ರವು ತುಂಬ ಮಹತ್ವದ್ದೆಂದು ನಾವಿಲ್ಲಿ ಸ್ಮರಿಸಿಕೊಳ್ಳಬಹುದು. ಅವರು ಪ್ರಾಚೀನ ಕನ್ನಡ, ನಡುಗನ್ನಡಗಳ ಪ್ರಮುಖ ಕೃತಿಗಳನ್ನು ಪುನಃ ಮುದ್ರಿಸಿ, ಅವುಗಳಿಗೆ ತುಂಬ ಉಪಯುಕ್ತ ಮುನ್ನುಡಿ, ಟೀಕೆ -ಟಿಪ್ಪಣಿಗಳನ್ನು ಬರೆಯುವ ಮೂಲಕ, ಅವುಗಳನ್ನು ಆಧುನಿಕ ಕನ್ನಡದ ಸರಳ ಭಾಷೆಯಲ್ಲಿ ಗದ್ಯಾನುವಾದಗಳನ್ನು ಮಾಡುವ ಮೂಲಕ ಹೊಸಗನ್ನಡ ಅರುಣೋದಯ ಸಂದರ್ಭದಲ್ಲಿ ತುಂಬ ಮಹತ್ವದ ಕೆಲಸವೆಂದು ಗುರುತಿಸಬಹುದು. ಅಂತೆಯೆ ಈ ಹಿನ್ನೆಲೆಯಲ್ಲಿ ಅವರಿಗೆ ನೆರವಾದುದು ಮುದ್ರಣ ಮತ್ತು ಪತ್ರಿಕೋದ್ಯಮವಾಗಿದ್ದು, ಇದು ಹೊಸ ಶಿಕ್ಷಣ ನೀತಿ, ಹೊಸ ಚಿಂತನೆ, ಆಲೋಚನೆ, ಸಾಹಿತ್ಯ ಸೃಷ್ಟಿಗೆ ಪ್ರೇರಣೆ ನೀಡಿದವೆಂದು ಗುರುತಿಸಬಹುದು.

ಈ ಹಿನ್ನೆಲೆಯಲ್ಲಿ ಕನ್ನಡ ಅರುಣೋದಯ ಸಾಹಿತ್ಯದ ಎರಡು ಸ್ಪಷ್ಟ ಮಾರ್ಗಗಳನ್ನು ನಾವಿಂದು ಗುರುತಿಸಬಹುದು. ಅವುಗಳಲ್ಲಿ ಒಂದು, ಹೊಸ ಕ್ರಮದಲ್ಲಿ ಕನ್ನಡ ಪ್ರಾಚೀನ ಕೃತಿಗಳನ್ನು ಪ್ರಕಟಿಸುವುದು. ಗ್ರಂಥ ಸಂಪಾದನೆ, ಶಬ್ದಕೋಶ ರಚನೆ, ವ್ಯಾಕರಣ, ಪಾಶ್ಚಾತ್ಯ ಮತ್ತು ಪೌರಾತ್ಯದ (ಸಂಸ್ಕೃತ, ದೇಶಿಯ ಭಾಷೆಗಳ) ಕೆಲವು ಪ್ರಮುಖ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರ, ಅನುವಾದ ಮತ್ತು ರೂಪಾಂತರ ಮಾಡುವುದು. ಇತಿಹಾಸ, ಐತಿಹ್ಯ, ಪುರಾಣ ಮೊದಲಾದವನ್ನು ಪುನರ್ ಮೌಲ್ಯಕರಿಸುವುದು, ಎರಡನೆಯದು, ಕ್ರೈಸ್ತಮಿಶನರಿಗಳು ಮತ್ತು ಆಡಳಿತಾಧಿಕಾರಿಗಳು ಧಾರ್ಮಿಕವಾಗಿ ಮಾಡಿದ ಪ್ರಸಾರವು

ಸ್ವಾರ್ಥಪರವಾಗಿದ್ದರೂ, ಆಧುನಿಕ ಬದುಕಿನ ಸಮಸ್ಯೆ -ಸವಾಲುಗಳನ್ನು ಹೇಗೆ ಎದುರಿಸಬೇಕೆಂಬುದನ್ನು ಸೃಜನಾತ್ಮಕ ನೆಲೆಯಲ್ಲಿ ನುಡಿಕೊಡುವ ಮೂಲಕ ಕನ್ನಡವನ್ನು ಕಟ್ಟುವ ಸ್ತುತ್ಯಾರ್ಹ ಕೆಲಸವನ್ನು ಮಾಡಿದರೆಂದು ಅರಿಯಬಹುದು.

ಅನಂತರ ಇದರಿಂದ ಪ್ರೇರಿತರಾದ ನಮ್ಮ ಕನ್ನಡಿಗರು ಸುಮಾರು 1850ರ ಬಳಿಕ ಸ್ವಭಾಷೆ, ಸ್ವಧರ್ಮ, ಇತಿಹಾಸ, ಐತಿಹ್ಯ, ಜಾನಪದ, ಪುರಾಣಗಳು ಕುರಿತು ಸ್ವಾಭಿಮಾನ ಉಕ್ಕಿಬಂದಿದ್ದರಿಂದ, ಅವುಗಳನ್ನು ಆಧುನಿಕ ಸಂವೇದನೆಯಲ್ಲಿ ಪುನರ್ರಚಿಸಿ ಪಡೆಯುವುದರತ್ತ ಪ್ರಯೋಗ ಶೀಲರಾದರು. ಒಟ್ಟಿನಲ್ಲಿ ಈ ಮೇಲಿನ ಪ್ರಮುಖ ಅಂಶಗಳ ಮೂಲಕ ಹೊಸಗನ್ನಡ ಅರುಣೋದಯ ಸಾಹಿತ್ಯ ರೂಪಿತವಾಯಿತೆಂದು ಮನಗಾಣಬಹುದು. ಹೀಗೆ ಅದರ ಒಟ್ಟು ಸ್ವರೂಪವನ್ನು ಈ ಘಟಕದ ಪ್ರಮುಖ ಅಂಶಗಳ ಹಿನ್ನೆಲೆಯಲ್ಲಿ ನಾವು ತಿಳಿಯಬಹುದು:

1.3 ಸುಧಾರಕರ ಪಂಥ

ಒಂದು ಕಡೆ, ಪಾಶ್ಚತ್ಯ ಬದುಕಿನ ಚಿಂತನೆ, ಮಿಶನರಿಗಳ ಧಾರ್ಮಿಕ ಪ್ರಚಾರವು, ಭಾರತೀಯ ಪರಂಪರೆಯ ಮೇಲೆ ನೇರ ಅಘಾತವನ್ನುಂಟು ಮಾಡಿದರೆ, ಮತ್ತೊಂದು ಕಡೆ ಅದರಿಂದ ಎಚ್ಚೆತ್ತು ಪರಂಪರೆಯ ಒಳ್ಳೆಯ ಮೌಲ್ಯಗಳನ್ನು ಅದರ ಬೆಳಕಿನಲ್ಲಿ ಪುನರ್ ಮೌಲ್ಯಕರಿಸಿ ಮೈಗೂಡಿಸಿಕೊಳ್ಳಲು ಪ್ರೇರಣೆಯನ್ನುಂಟು ಮಾಡಿತು. ಈ ಹಿನ್ನೆಲೆಯಲ್ಲಿ ರಾಜಾರಾಮ್ ಮೋಹನರಾಯ್ (ಕ್ರಿ.ಶ. 1774 ರಿಂದ 1833), ಈಶ್ವರ ಚಂದ್ರ ವಿದ್ಯಾಸಾಗರ (1820ರಿಂದ 1891), ಮೈಕೇಲ್ ಮಧುಸೂದನದತ್ತ (1824 ರಿಂದ 1873), ಬಂಕಿಮಚಂದ್ರ ಚಟರ್ಜಿ (1838 ರಿಂದ 1893), ವಿರೇಶಲಿಂಗಪಂತಲು (1848ರಿಂದ 1919) ಮುಂತಾದ ಪ್ರಮುಖ ಮಂಚೂಣಿಯ ದೇಶಿಯ ಚಿಂತನಶೀಲ ಬರೆಹಗಾರರು ಮತ್ತು ಸುಧಾರಕರು ಪಶ್ಚಿಮ ಮತ್ತು ಪೌರಾತ್ಯ ಬದುಕಿನ ಮೌಲ್ಯಗಳನ್ನು ನಿಕಷಕ್ಕೊಳಪಡಿಸಿ, ಆ ಮೂಲಕ ಭಾರತೀಯರ ಮೂಢನಂಬಿಕೆಗಳಂಥ ಬಾಲ್ಯವಿವಾಹ, ಬಹುಪತ್ನಿತ್ವ, ಸತಿಸಹಗಮನ ಪದ್ಧತಿಗಳಂಥ ವೊದಲಾದ ಕೆಟ್ಟ ಪದ್ಧತಿಗಳನ್ನು ಹೋಗಲಾಡಿಸುವತ್ತ ದಿಟ್ಟ ಪ್ರಯತ್ನಪಟ್ಟರು. ಅದರ ತೀವ್ರಸಂವೇಧನೆಯು ಅಂದಿನ ಹೊಸಗನ್ನಡ ಅರುಣೋದಯ ಸಾಹಿತ್ಯಕ್ಕೆ ಪ್ರಮುಖ ಪ್ರೇರಣೆಯಾಗಿದ್ದು, ಅವರೆಗಿನ ದೇವರು, ಧರ್ಮಗಳ ಹಿನ್ನೆಲೆಯಲ್ಲಿ ನಡೆಯುತ್ತಿದ್ದ ಅಪಮೌಲಿಕ ಬದುಕಿನಿಂದ ಹೊರಬಂದು ಚಿಂತಿಸುವ ಮೂಲಕ ಹೊಸ ಸಾಹಿತ್ಯ ಪರಿಕಲ್ಪನೆಗಳನ್ನು ಸೃಷ್ಟಿಸುವತ್ತ ಅನುವು ನೀಡಿತ್ತೆಂದು ಗುರುತಿಸಬಹುದು.

1.4 ಮುದ್ರಣ ಮತ್ತು ಗ್ರಂಥೋದ್ಯಮ

ಮುದ್ರಣ ಯಂತ್ರಣದ ಆವಿಷ್ಕಾರವು ಒಂದು ಅಕ್ಷರ ಕ್ರಾಂತಿಯಾಗಿದ್ದು. ಶೈಕ್ಷಣಿಕ ಸಂದರ್ಭದಲ್ಲಿ ಒಂದು ಮಹತ್ವದ ಹೆಜ್ಜೆಯೆಂದು ಗುರುತಿಸಬಹುದು. ಈ ಕುರಿತು ಜಾಗತಿಕ ಇತಿಹಾಸ ಸಂದರ್ಭದಲ್ಲಿ ಸುಮಾರು ವರ್ಷಗಳ ಪರಂಪರೆ ಇರಬಹುದಾದರೂ, ಅದು ನಮ್ಮಲ್ಲಿ ೧೯ನೆಯ ಶತಮಾನದಿಂದ ಪ್ರಾರಂಭವಾಯಿತೆಂದು ಗುರುತಿಸಬಹುದು. ಆದರೂ ಅದು ಸಮರ್ಥವಾಗಿ ಕಾರ್ಯನಿರ್ವಹಿಸಲು ಸಾಧ್ಯವಾದದ್ದು ೧೮ನೆಯ ಶತಮಾನದಿಂದೆಂಬುದು ಗಮನಾರ್ಹ. ಆ ಹೊತ್ತಿಗೆ ಅಚ್ಚುಕೂಟಗಳೂ ವೃತ್ತಪತ್ರಿಕೆಗಳೂ ಪ್ರಾರಂಭವಾದವು. ಇದರ ಪರಿಣಾಮದಿಂದ ಜನಸಾಮಾನ್ಯರಲ್ಲಿ ಓದುವ ಅಭ್ಯಾಸ ಬೆಳೆಯಿತು. ನೂರಾರು ಪುಸ್ತಕಗಳು ಸುಲಭ ಬೆಲೆಗೆ ಮುದ್ರಣಗೊಂಡು ಸಾಮಾನ್ಯ ಜನರಿಗೂ ದೊರಕುವಂತಾಯಿತು. ಈ ದಿಸೆಯಲ್ಲಿ ಕ್ರೈಸ್ತಮಿಶನರಿ ಮತ್ತು ಸರಕಾರಿ ಮುದ್ರಣ ಯಂತ್ರಣಗಳ ಪಾತ್ರವು ತುಂಬ ಮಹತ್ವದೆಂದು ಗುರುತಿಸಬಹುದು.

ಅಂದರೆ ಹೀಗೆ ಸೃಷ್ಟಿಯಾದ ಹೊಸಗನ್ನಡ ಅರುಣೋದಯ ಸಾಹಿತ್ಯದಕ್ಕೂ ಮುದ್ರಣ ಕಲೆಗೂ ಅತ್ಯಂತ ನಿಕಟ ಸಂಬಂಧವಿದ್ದು. ಅವುಗಳು ಒಂದನ್ನೊಂದು ಪೂರಕವಾಗಿ ಉಳಿದುಕೊಂಡೇ ಏಕಕಾಲಕ್ಕೆ

ಬೆಳದವೆಂಬುದು ಗಮನಾರ್ಹ. ಈ ದೃಷ್ಟಿಯಿಂದ ಮುದ್ರಣಯಂತ್ರವು ವಹಿಸಿದ ಪಾತ್ರವು ಹೊಸಗನ್ನಡ ಸಾಹಿತ್ಯ ದೃಷ್ಟಿಯಿಂದ ತುಂಬ ಮಹತ್ವದೆಂದು ಗುರುತಿಸಬಹುದು. ಹೀಗೆ ಅದರ ಒಟ್ಟು ಸ್ವರೂಪವನ್ನು ಮುಂದಿನ ಘಟಕಾಂಶಗಳಿಂದ ನಾವು ತಿಳಿಯಬಹುದು.

1.4.1 ಮಿಶನರಿಗಳ ಮುದ್ರಣ ಕಾರ್ಯ : ಹೊಸಗನ್ನಡ ಅರುಣೋದಯ ಸಾಹಿತ್ಯ ಸಂದರ್ಭದಲ್ಲಿ ಮಿಶನರಿಗಳ ಮುದ್ರಣ ಕಾರ್ಯವು ಒಂದು ಪ್ರಮುಖ ಸಚೇತಕ ಶಕ್ತಿಯಾಗಿದ್ದು, ಅದರ ಪ್ರಮುಖ ಅಡಿಗಲ್ಲೆಂದು ಗುರುತಿಸಬಹುದು. ಯರೋಪಿನಿಂದ ಮೊತ್ತ ಮೊದಲು ಮುದ್ರಣ ಕಲೆಯು ಎಆರಂಭವಾದುದುವಿ ಅವಿಷ್ಕಾರಗೊಂಡು, ಕ್ರಿ.ಶ. ೧೪೫೬ರಲ್ಲಿ ಪ್ರಕಟವಾಯಿತು. ಅನಂತರ ಸರಿಯಾಗಿ ನೂರು ವರ್ಷಕ್ಕೆ ಭಾರತದಲ್ಲಿ ಮುದ್ರಣ ಯಂತ್ರಣವು ಬೆಳಕನ್ನು ಕಂಡಿತು. ಇದರ ಪ್ರತಿಫಲದಿಂದ ಗೋವಾದಲ್ಲಿ ಪೋರ್ಚಿಗೀಸ್ ಪಾದ್ರಿಗಳಿಂದ ಸಂತ ಝೇವಿಯಾರ್‌ನ ವಿರಚಿತ 'ಡೌಟ್ರಿನಾ ಕ್ರಿಸ್ತಾ' ಗ್ರಂಥವನ್ನು ಕ್ರಿ.ಶ. ೧೫೫೭ರಲ್ಲಿ ಪ್ರಕಟವಾಯಿತು. ಇದನ್ನು ಭಾರತದ ಆದ್ಯಮುದ್ರಿತ ಕೃತಿಯೆಂದು ಗುರುತಿಸಲಾಗುವುದು. ಹೀಗೆ ಇದರ ಪರಿಣಾಮದ ಫಲದಿಂದ ದೇಶಿಯ ಭಾಷೆಗಳಲ್ಲಿಯೇ ಗ್ರಂಥಗಳನ್ನು ಬರೆದು ಮುದ್ರಿಸುವುದು ಹೆಚ್ಚು ಸೂಕ್ತವೆಂದು ಗೋನ್ಸಾಲಿಸ್‌ನು ಅರಿತುಕೊಂಡು, ಎಂಬುವನು ಕಾರ್ಯಪ್ರವೃತ್ತನಾಗಿ ೫೨ ಸಂಜ್ಞೆಗಳುಳ್ಳ ಕನ್ನಡ ಲಿಪಿಯ ಮೊಳೆಗಳನ್ನು ಕಂಡುಹಿಡಿದನು. ಅದು ಕಾಲಕ್ರಮೇಣ ಮುಂದಿನ ಶೋಧನೆಯ ಬೆಳವಣೆಗೆಯ ಹಿನ್ನೆಲೆಯಲ್ಲಿ ಪರಿಪೂರ್ಣತೆಯನ್ನು ಪಡೆದುಕೊಂಡಿತು. ಅದರ ಪ್ರತಿಫಲದಿಂದ ೧೮೧೭ರ ಲ್ಲಿ ವಿಲಿಯಂಕೇರಿ ಎಂಬ ಮಿಶನರಿ ವಿದ್ವಾಂಸನು ಬಂಗಾಳದ ಶ್ರೀರಾಂಪುರದ ಪ್ರೆಸ್ಸಿನಲ್ಲಿ "A Grammer of the Karnataka Language" ಎಂಬ ಕೃತಿಯನ್ನು ಮುದ್ರಿಸಿ ಹೊರತಂದನು. ಇದು ಹೊಸಗನ್ನಡ ಸಾಹಿತ್ಯದ ದೃಷ್ಟಿಯಿಂದ ಕನ್ನಡದ ಮೊತ್ತಮೊದಲ ಕೃತಿಯಾಗಿ ಗಮನಾರ್ಹತೆ ಪಡೆದುಕೊಂಡಿತು. ಅನಂತರ ಜಾನ್‌ಮೆಕ್ಕೆರೆಲ್‌ನು ೧೮೧೭ರಲ್ಲಿ " A Grammer of the Karnataka Language" ಕನ್ನಡ ವ್ಯಾಕರಣ ಪ್ರಕಟವಾದ ಎರಡನೆಯ ಕೃತಿಯಾಗಿದೆ. ಅನಂತರ ಮದ್ರಾಸಿನಲ್ಲಿ ವಿಲಿಯಮ್ ರೀವ್‌ನ ವಿರಚಿತು ಇಂಗ್ಲೀಷ್ ಕನ್ನಡ ಶಬ್ದ ಕೋಶ ಕೃತಿ (೧೮೨೪)ರಲ್ಲಿ ಪ್ರಕಟವಾಯಿತು. ಬಳಿಕ 1850-1870ರ ನಡುವೆ ಉಚ್ಛರಾಯ ಸ್ಥಿತಿಯಲ್ಲಿದ್ದ "ವೆಸ್ಲಿಮನ್ ಮಿಶನ್ ಪ್ರೆಸ್" ಹಳಗನ್ನಡ ಮತ್ತು ಹೊಸಗನ್ನಡ ಕೃತಿಗಳನ್ನು ಹೊಸ ರೀತಿಯಿಂದ ಮುನ್ನುಡಿಗಳನ್ನು ಬರೆದು ಪುನರ್ರ ಮೌಲೀಕರಿಸಿ ಪ್ರಕಟಿಸಲಾಯಿತು. ಅಂತೆಯೆ ಮಂಗಳೂರಿನ 'ಬಾಸೆಲ್ ಮಿಶನ್' ಕನ್ನಡ ಮುದ್ರಣಾಲಯವು ವಿಚಾರದಲ್ಲಿ ಅಜರಾಮರ ಹೆಸರನ್ನು ಹೊಂದಿದ್ದು. 'ಕುಮಾರವ್ಯಾಸ', 'ಬಸವಪುರಾಣ', 'ಚೆನ್ನಬಸವಪುರಾಣ, 'ಜೈಮುನಿ ಭಾರತ' ಮೊದಲಾದ ದೊಡ್ಡಗಾತ್ರದ ಬೃಹತ್ ಸಂಚಿಕೆಯ ಪುಸ್ತಕಗಳನ್ನು ಕಲ್ಲಚ್ಚಿನಿಂದ ಹೊರತಂದಿತು.

ಅನಂತರ 1865ರಲ್ಲಿ ವೆಸ್ಲಿಯನ್ನರು ಸಮಗ್ರ ಬೈಬಲ್‌ನ್ನು ಹೊರತರುವ ದೃಷ್ಟಿಯಿಂದ ಕನ್ನಡ ಲಿಪಿಯುನ್ನು ಸುಧಾರಣೆ ಮಾಡಿಕೊಂಡು, ಭಾಷಿಕವಾಗಿ ಹೊಸಗನ್ನಡ ಪದಗಳನ್ನು ಸೃಜನಾತ್ಮಕ ಸ್ತರದಲ್ಲಿ ಚಾಲ್ತಿಗೆ ತಂದರು. ಬಳಿಕ ಇದು, ಕ್ರಿ.ಶ. 1850ರಲ್ಲಿ ಜಾನ್ ಗ್ಯಾರೇಟನ್ ನೇತೃತ್ವದಲ್ಲಿ ಪರಿಷ್ಕರಗೊಂಡುಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿತು. ಅನಂತರ ಇದನ್ನು ಬಿ.ಎಲ್.ರೈಸ್ ತನ್ನ ಸಂಶೋಧನೆಯ ಹಿನ್ನೆಲೆಯಲ್ಲಿ ಕನ್ನಡ ಶಾಸನಗಳ ಹಳೆಯ ಕಾವ್ಯಗಳ ಮುದ್ರಣಕ್ಕೆ ಅಣಿಗೊಳಿಸಿ ಬಳಸಿದನು. ಕಾಲಕ್ರಮೇಣ ದೇಶಿಯ ವಿದ್ವಾಂಸ ಅನಂತಾಚಾರಿಯವರು ಸಮರ್ಪಕವಾದ ಅಚ್ಚು ಮೊಳೆಗಳನ್ನು ಮಿಶನರಿಗಳಿಗೆ ಸಮರ್ಪಕವಾಗಿ ಸಿದ್ಧಪಡಿಸಿಕೊಟ್ಟ, ಬಳಿಕ ಅದು ಕರ್ನಾಟಕದಲ್ಲಿಯೇ ಉಚ್ಛತಮ ಸ್ಥಾನವನ್ನು ಪಡೆದು ಕೊಂಡಿತು. ಒಟ್ಟಿನಲ್ಲಿ ಹೀಗೆ ಮುದ್ರಣ ಬೆಳವಣಿಗೆಯ ಹಿನ್ನೆಲೆಯಿಂದ ಹೊಸಗನ್ನಡ ಅರುಣೋದಯ ಸಾಹಿತ್ಯವು ಭಾಷಿಕವಾಗಿ, ವ್ಯಾಕರಣ ದೃಷ್ಟಿಯಿಂದ ಹೊಸದೃಷ್ಟಿದೋರಣೆಯನ್ನು ಬೆಳೆಸಿಕೊಂಡಿತೆಂಬುದು ಗಮನಾರ್ಹ.

1.4.1 ಸರಕಾರಿ ಅಚ್ಚುಕೂಟ : ಮದ್ರಾಸು, ಮುಂಬಯಿ ಮತ್ತು ಮೈಸೂರು ಅಧಿಪತ್ಯಗಳಲ್ಲಿ ಆಡಳಿತ, ಶೈಕ್ಷಣಿಕ ಕಾರ್ಯಗಳ ಅನುಕೂಲಗಳಿಗಾಗಿ ಮುದ್ರಣವು ಅನಿವಾರ್ಯವಾಗಿದ್ದು. ಆ ಮೂಲಕ ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿನಿಧಿಸುವ ಶಾಲೆಯ ಶೈಕ್ಷಣಿಕ ಪಠ್ಯಕೃತಿಗಳು ಮುದ್ರಿಸಲು ಚಾಲನೆ ಸಿಕ್ಕಿತು. ಇದರ ಪರಿಣಾಮ ಹೊಸ ಬದುಕಿನ ಸಮಸ್ಯೆಸವಾಲುಗಳಿಗೆ ನುಡಿಕೊಡುವ ಪಠ್ಯಗ್ರಂಥಗಳು ರಚನೆಯಾಗುವ ಸಂದರ್ಭ ಒದಗಿಬಂದು ಅದು ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಪ್ರಮುಖ ಪಾತ್ರವಹಿಸಿತೆಂಬುದನ್ನು ಗುರುತಿಸಲಾಗುವುದು.

1.4.2. ವೈಯುಕ್ತಿಕ ಅಥವಾ ಖಾಸಗಿ ಮುದ್ರಣ ಯಂತ್ರಗಳ ಪಾತ್ರ : ಮಿಶನರಿ ವಲಯ ಮತ್ತು ಸರಕಾರಿ ಮುದ್ರಣ ಚಟುವಟಿಕೆಗಳ ಬೆಳವಣಿಗೆಯನ್ನು ಕಂಡ ಖಾಸಗಿ ವ್ಯಕ್ತಿಗಳಿಗೂ ಅದರಲ್ಲಿ ಆಸಕ್ತಿ ಹುಟ್ಟಿತು. ಇಂಥ ಮನೋಧರ್ಮವು ಮೊದಲು ಲಾಭದಾಯಕ ಉದ್ಯಮದಲ್ಲಿ ಹುಟ್ಟಿದರೂ ಅನಂತರ ಸಾಕ್ಷರತೆಯನ್ನು ಕ್ರಮೇಣ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದು ಒಂದು ಗಮನಾರ್ಹ ಬೆಳವಣಿಗೆಯಾಗಿದೆ. ಕನ್ನಡ ಪ್ರಾಚೀನ ಪರಂಪರೆಯ ಪ್ರಮುಖ ಕೃತಿಗಳನ್ನು ಬೆಳಕಿಗೆ ತಂದು, ಅವುಗಳನ್ನು ಆಧುನಿಕ ಸಂವೇದನೆಯಲ್ಲಿ ಹೊಸ ರೀತಿಯಿಂದ ವ್ಯಾಖ್ಯಾನ ಮಾಡುವ ಮೂಲಕ ಜನಸಾಮಾನ್ಯರಲ್ಲಿ ಹೊಸ ಪ್ರಜ್ಞೆಯನ್ನುಂಟು ಮಾಡಿದವು. ಅವುಗಳಲ್ಲಿ "ಸುಬುದ್ಧಿ ಪ್ರಕಾಶನ" (೧೮೪೯), "ದೇಶಬಾಂಧವ ಪ್ರೆಸ್" "ಸಮಾಚಾರ್ ಪ್ರೆಸ್" "ಬೆಳಗಾಂ ಪ್ರೆಸ್" ಮುಂತಾದವು ಪ್ರಮುಖವೆಂದು ನಾವಿಲ್ಲಿ ಗುರುತಿಸಬಹುದು. ಅನಂತರ ೧೮೮೩ರಲ್ಲಿ ಸೂರಿ ವೆಂಕಟರಮಣ ಶಾಸ್ತ್ರಿಯವರ ಪರಿಶ್ರಮದ ಫಲವಾಗಿ ಕರ್ನಾಟಕ ಛಾಪಖಾನೆ, ಭಾರತೀಯ ಪ್ರೆಸ್ ಗಳಿಂದ ಕನ್ನಡ ಸುವಾರ್ತೆ, ಹವ್ಯಕ ಸುಬೋಧೆ ಪ್ರಮುಖ ಹಿತೋಪದೇಶಗಳು ಪತ್ರಿಕೆಗಳಿಂದ ಬೆಳಕನ್ನು ಕಂಡವು. ಹೀಗೆ ಹೊಸಗನ್ನಡ ಸಾಹಿತ್ಯವು ಸಾಕಷ್ಟು ತೀವ್ರಪರಿಣಾಮ ಪಡೆದುಕೊಳ್ಳುವ ಮೂಲಕ, ಒಂದು ಭದ್ರ ಬುನಾದಿಯನ್ನು ಪಡೆದುಕೊಂಡಿತೆಂಬುದು ಗಮನಾರ್ಹ.

1.4.3 ಗ್ರಂಥೋದ್ಯಮ ಮತ್ತು ಗ್ರಂಥ ಪ್ರಸಾರದ ಕಾಯಿದೆ : ಮುದ್ರಣಾಲಯುಗಳು ಸರಕಾರ ಮತ್ತು ಮಿಶನರಿ ಸ್ವಾಮ್ಯದ ಅಧೀನದಲ್ಲಿರುವವರೆಗೂ ಅವುಗಳ ಕುರಿತು ಅಂದಿನ ಸರಕಾರವು ಏನನ್ನೂ ಯೋಚಿಸಿರಲಿಲ್ಲ. ಯಾವಾಗ ಮುದ್ರಣಾಲಯಗಳು ದೇಶಿಯರಿಂದ ಸ್ಥಾಪಿಸಲ್ಪಟ್ಟು, ಅವುಗಳಿಂದ ಯಾವ ನಿರ್ಬಂಧವಿಲ್ಲದೆ ಪುಸ್ತಕ, ಪತ್ರಿಕೆಗಳು ಪ್ರಕಟವಾದ ಅಂದಿನಿಂದಲೂ ಬ್ರಿಟೀಷ್ ಸರಕಾರವು ಅವುಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು 1867 ರಲ್ಲಿ "ಮದ್ರಣ ಮತ್ತು ಪುಸ್ತಕಗಳ ಕಾಯಿದೆ" ಜಾರಿಗೆ ತಂದಿತು. ಇದರಿಂದ ಕೆಲವು ನಿರ್ದಿಷ್ಟ ಪುಸ್ತಕಗಳು ಗ್ರಂಥ ಭಂಡಾರಗಳಲ್ಲಿ ಸಿಗುವಂತಾಯಿತು. ಅಂತೆಯೆ ದೇಶಿಯ ಭಾಷಾ ಪುಸ್ತಕಗಳು ಶೇಖರಿಸಿಟ್ಟುಕೊಳ್ಳಲು ಅವುಗಳಿಗೊಂದು ರಕ್ಷಣೆ ಒದಗಿಸಿದಂತಾಯಿತು. ಈ ರಕ್ಷಣೆಯಿಂದ ಧಾರ್ಮಿಕ, ಸಾಹಿತ್ಯಿಕ ಪುಸ್ತಕಗಳಿಗೆ ತುಂಬ ಮಹತ್ವವು ದೊರಕಿ, ಅವುಗಳಿಗೆ ಪ್ರೋತ್ಸಾಹದಾಯಕವಾಗಿ ಬಾಸೆಲ್, ವೆಸ್ಲಿಯನ್ ಮಿಶನರಿಗಳ ಮುದ್ರಣಾಲಯಗಳು ನಿಂತು ಜನಸಾಮಾನ್ಯರಲ್ಲಿ ಓದುವ ಅಭಿರುಚಿ, ಸಾಹಿತ್ಯ ಕಟ್ಟುವ ಪ್ರೇರಣೆಯನ್ನೊದಗಿಸಿದವು. ಈ ನಿಟ್ಟಿನಲ್ಲಿ "ಧಾರವಾಡ ಕರ್ನಾಟಕ ಬುಕ್ ಡಿಪೋ ಪ್ರೆಸ್", "ಕರ್ನಾಟಕ ಬುಕ್ ಡಿಪೋ","ಮೈಸೂರು ಬುಕ್‌ಡಿಪೋ", "ಬೆಳಗಾವಿಯ ರಾಮತತ್ವ ಪ್ರಕಾಶ ಮಂದಿರ" ಮುಂತಾದ ಪ್ರಮುಖ ಖಾಸಗಿ ಮುದ್ರಣಗಳು ಹೊಸಗನ್ನಡ ಅರುಣೋದಯ ಸಾಹಿತ್ಯ ಪ್ರಸಾರಕ್ಕೆ ಸಾಕಷ್ಟು ಬೆಂಬಲ ಮತ್ತು ಪ್ರೋತ್ಸಾಹ ನೀಡುವ ಮೂಲಕ ತುಂಬ ಗಮನಾರ್ಹ ಸಾಧನೆಯನ್ನು ಮಾಡಿದವು.

1.5 ಶಿಕ್ಷಣರಂಗದ ಹಿನ್ನೆಲೆಯಲ್ಲಿ ಸಾಹಿತ್ಯಕ ಬೆಳವಣಿಗೆ

ಹತ್ತೊಂಭತ್ತನೆಯ ಶತಮಾನದ ವರೆಗಿನ ದೇಶಿಯ ಶಿಕ್ಷಣವು ದೂಳಾಕ್ಷರ, ಹಸ್ತಪ್ರತಿ, ಕಡತಗಳು ಮೂಲಕ ನಡೆಯುತ್ತಿದ್ದು. ಇದರ ಗುರಿಯು ಶೀಲಸಂವರ್ಧನೆ ಆಗಿತು. ಅದನ್ನು ರಾಮಾಯಣ, ಮಹಾಭಾರತದಿ ಕಾವ್ಯಗಳ ಮೂಲಕ ಎಳೆಯರಿಂದಲೆ ಪೋಷಿಸಲಾಗುತ್ತಿತ್ತು. ಅವುಗಳಲ್ಲಿ ಕುಮಾರವ್ಯಾಸ ಭಾರತ, ಬಸವಪುರಾಣ, ರಾಜಶೇಖರ ವಿಲಾಸ, ಹರಿಭಕ್ತಸಾರ, ದಾಸರ ಹಾಡುಗಳು, ಸರ್ವಜ್ಞನ ತ್ರಿಪದಿಗಳು ಮೊದಲಾದವು ಪ್ರಮುಖವಾಗಿದ್ದು. ಅವುಗಳು 'ಅನಕ್ಷರಸ್ಥ' ಜನರ ಬಾಯಿಯಲ್ಲಿಯೂ ನಲಿದಾಡುತ್ತಿದ್ದವು. ಹೀಗೆ ಕಾವ್ಯದ ಮೂಲಕ ನಡೆಯುತ್ತಿದ್ದ ಶಿಕ್ಷಣದಿಂದ ಕರ್ನಾಟಕವು ತನ್ನದೇ ಆದಂತಹ ಒಂದು ವಿಶಿಷ್ಟತೆಯ ಸ್ಥಾನಮಾನವನ್ನು ಹೊಂದಿತ್ತೆಂದು ಆಗಿನ ಮುಂಬಯಿನ ಪ್ರಾಂತ್ಯಾಧಿಕಾರಿಗಳು ಉಲ್ಲೇಖಿಸಿರುವುದರಿಂದ ನಾವಿಂದು ಮನಗಾಣಬಹುದು.

ಹಾಗಾಗಿ ಈ ಬಗೆಯ ಶಿಕ್ಷಣವು ಬ್ರಿಟೀಷರ ದೃಷ್ಟಿಯಲ್ಲಿ ಒಂದು ವರ್ಗದ ಸ್ವತ್ತೆಂದು ತಿಳಿಯಲಾಗಿತ್ತು. ಅಂದರೆ ಅಂದಿನ ಶಿಕ್ಷಣವು ಉನ್ನತ ವರ್ಗದ ಮನೆ ಪಾಠವಾಗಿದ್ದು. ಸಾರ್ವಜನಿಕವಾಗಿ ಜನರಿಗೆ ಅಷ್ಟೇನು ಸುಲಭವಾಗಿ ದೊರಕುವಂತಿರಲಿಲ್ಲ. ಆದುದ್ದರಿಂದ ಈ ಬಗೆಯ ಈ ಪರಂಪರೆಯ ಶಿಕ್ಷಣದಿಂದ ಪ್ರಪಂಚದ ಅನೇಕ ಆಗು-ಹೋಗು ಮತ್ತು ಉಪಯುಕ್ತ ವೈಜ್ಞಾನಿಕ ಮತ್ತು ವೈಚಾರಿಕ ವಿಷಯಗಳನ್ನೂ ಕುರಿತ ಪರಿಜ್ಞಾನವು ದೊರಕದೆಯಿರುವುದು ಅವರಲ್ಲಿ ಒಂದು ದೊಡ್ಡಕೊರತೆಯಾಗಿ ಕಂಡಿತು. ಹೀಗಾಗಿ ಇದನ್ನು ಸುಧಾರಿಸುವ ದೃಷ್ಟಿಯನ್ನಿಟ್ಟುಕೊಂಡು ಬ್ರಿಟೀಷರು ಕನ್ನಡ ಪ್ರದೇಶಗಳಲ್ಲಿ ಕಾರ್ಯಪ್ರವೃತರಾದರು. ಈ ಹಿನ್ನೆಲೆಯಲ್ಲಿ ಆಗಿನ ಮದರಾಸಿನ ಮೊತ್ತಮೊದಲ ಗೌರ್‍ನರ್ ಆಗಿದ್ದ ಮನ್ರೋ ಮತ್ತು ಮುಂಬಯಿನ ಎಲ್‌ಫಿನ್‌ಸ್ಟನ್‌ರು ಪ್ರಮುಖ ಆಸಕ್ತಿಯನ್ನು ವಹಿಸಿದರು. ಅಂದು ಅವರು ಕೇವಲ ಮುತ್ಸದ್ದಿ ಅಧಿಕಾರಿಗಳಾಗಿ ಮಾತ್ರವಲ್ಲ ಶ್ರೇಷ್ಠ ಶಿಕ್ಷಣ ತಜ್ಞರೂ ಆಗಿದ್ದು, "ಬಾಂಬೆ ಏಜ್ಯುಕೇಶನ್ ಸೊಸೈಟಿ" ಮತ್ತು " ನೇಟಿವ್ ಸ್ಕೂಲ್ ಆ್ಯಂಡ್ ಬುಕ್ ಸೊಸೈಟಿ" ಸ್ಥಾಪಿಸುವ ಮೂಲಕ ಶಿಕ್ಷಣದ ಸಪ್ತ ಸೂತ್ರಗಳನ್ನು ಅನುಷ್ಠಾನದಲ್ಲಿ ಜಾರಿಗೆ ತಂದರು. ಅಂತೆಯೆ ಈ ದೃಷ್ಟಿಯಿಂದ ಪಠ್ಯಪುಸ್ತಕಗಳನ್ನು ಬರೆಯಿಸಿ, ಕನ್ನಡಕ್ಕೆ ಅನುವಾದಿಸಿ ಮುದ್ರಿಸುವ ಯೋಜನೆಯನ್ನು ರೂಪಿಸಿದರು. ಅನಂತರ ತಮ್ಮ ಮುಂದಿನ ದಿನಗಳಲ್ಲಿ ದೇಶಿಯ ಭಾಷೆಗಳಲ್ಲಿಯೆ ಶಿಕ್ಷಣ ನೀಡಬೇಕು ಮತ್ತು ಅದಕ್ಕೆ ಪೂರಕವಾದ ಪದ್ಯಗಳನ್ನು ರಚಿಸಬೇಕೆಂದು ಅವರ ಪ್ರಮುಖ ಆಸ್ಥೆಯಾಗಿತ್ತು. ಈ ದೃಷ್ಟಿಯಿಂದ ಅವರು ಪರಂಪರೆಯ ಪಠ್ಯವನ್ನು ಮಿತಗೊಳಿಸಿ ವೈಜ್ಞಾನಿಕ ಶಿಕ್ಷಣ ಪಠ್ಯಪುಸ್ತಕಗಳನ್ನು ರಚಿಸುವತ್ತ ಗಮನಹರಿಸಿದರು. ಇದು ಅಂದಿನ ಹೊಸಗನ್ನಡ ಅರುಣೋದಯ ಸಾಹಿತ್ಯಕ್ಕೊಂದು ಮಹತ್ವದ ಮನೋಧರ್ಮವನ್ನು ಸೃಷ್ಟಿಸಿತ್ತೆಂದು ಗುರುತಿಸಬಹುದು.

1.6 ಹೊಸಗನ್ನಡ ಸಾಹಿತ್ಯದಲ್ಲಿ ಮಿಶನರಿಗಳು ವಹಿಸಿದ ಪಾತ್ರ

ಅಂದಿನ ಮುಂಬಯಿ ಕರ್ನಾಟಕದ ಎಲ್ಲೆಯೊಳಗೆ ಶೈಕ್ಷಣಿಕ ಕಾರ್ಯವನ್ನು ಸರಕಾರದವರು ಪ್ರಾರಂಭಿಸಿದರೆ, ಆ ಕೆಲಸವನ್ನು ಮದರಾಸು ಮತ್ತು ಮೈಸೂರಿನ ಪ್ರಾಂತ್ಯಗಳಲ್ಲಿ ಮಿಶನರಿಗಳು ಮಾಡುತ್ತಿದ್ದವು. ಆದರೆ ಈ ಕೆಲಸವನ್ನು ಅಂದಿನ ಸರಕಾರಗಳಿಗಿಂತ ಮೊದಲೇ ಮಿಶನರಿಗಳು ಶಿಕ್ಷಣ ಕ್ಷೇತ್ರವನ್ನು ಪ್ರವೇಶ ಮಾಡಿದ್ದರಿಂದ ಇಲ್ಲಿಯ ಜನರ ಶಿಕ್ಷಣದ ಆಶೋತ್ತರಗಳು ಏನೆಂಬುದನ್ನು ಅರಿತು ಕೊಂಡಿದ್ದರು. ಅಂದರೆ ಇಲ್ಲಿಯ ಜನತೆಯ ಮೂಢನಂಬಿಕೆ ಮತ್ತು ಸ್ವಧರ್ಮದ ಅಂದಿನ ಅಂಧ ನಿಷ್ಠೆಯಿಂದ ಬಿಡಿಸಲು ಪಾಶ್ಚಾತ್ಯ ಮಾದರಿಯ ಶಿಕ್ಷಣ ಕ್ರಮಗಳನ್ನು ಪ್ರಬಲ ಅಸ್ತ್ರವನ್ನಾಗಿ ಪ್ರಯೋಗಿಸಿದರು. ಆದರೆ ಇದು ಕ್ರೈಸ್ತಧರ್ಮದ ದೃಷ್ಟಿ ಸ್ವಲ್ಪಮಟ್ಟಿಗೆ ಸ್ವಾರ್ಥಪರವಾಗಿದರೂ ಶೈಕ್ಷಣಿಕವಾಗಿ ಜನತೆಯನ್ನು ತಿದ್ದುವ ಮತ್ತು ವೈಜ್ಞಾನಿಕವಾದ ಮನೋಧರ್ಮವನ್ನು ಬೆಳೆಸಿಕೊಳ್ಳುವುದನ್ನು ಕಲಿಸಿದರು. ಇದು ಜನತೆ ಮತ್ತು ಸರಕಾರಗಳ ಆದರವನ್ನು ಗಳಿಸಿಕೊಂಡಿತ್ತಲ್ಲದೆ, ಹೊಸಗನ್ನಡ

ಅರುಣೋದಯ ಸಾಹಿತ್ಯದ ಹಿನ್ನೆಲೆಯಲ್ಲಿ ಒಂದು ಹೊಸ ಸಂವೇದನೆ ಮತ್ತು ಪರಂಪರೆಯನ್ನು ಸೃಷ್ಟಿಸುವಷ್ಟು ಉತ್ಕೃಷ್ಟದ ಸ್ಥಾನ ಮಾನವನ್ನು ಪಡೆದುಕೊಂಡಿತೆಂದು ಗುರುತಿಸಲಾಗುವುದು. ಈ ಹಿನ್ನೆಲೆಯಲ್ಲಿ ಲಂಡನ್ ಮಿಶನರಿ, ವೆಸ್ಲಿಮನ್ ಮಿಶನರಿ, ಬಾಶೆಲ್ ಮಿಶನರಿ, ಕಥೋಲಿಕ್ ಮಿಶನರಿ ಇನ್ನು ಮುಂತಾದವುಗಳ ಪಾತ್ರವು ತುಂಬ ಪ್ರಮುಖವೆಂದು ನಾವಿಲ್ಲಿ ಗುರುತಿಸಿಕೊಳ್ಳಬಹುದು.

1.6.1 ಲಂಡನ್ ಮಿಶನರಿ : ಇದು ಶಿಕ್ಷಣ ಕ್ಷೇತ್ರದ ಬಗ್ಗೆ ತೀವ್ರ ಆಶಕ್ತಿ ಇಟ್ಟಿಕೊಂಡಿದ್ದ ಒಂದು ಕ್ರೈಸ್ತ ಧಾರ್ಮಿಕ ಸಂಸ್ಥೆ. ಇದರ ಪ್ರಮುಖ ವಕ್ತಾರರು ಮ್ಯಾಸ್ಲೆ ಮತ್ತು ಲೇಡ್ಲರ್ ಆಗಿದ್ದು. ಇವರು ಇಂಗ್ಲೆಂಡಿನ "ಪೋರ್ಟ್‌ಮಿಲಿಯಂ" ಮತ್ತು "ಪೋರ್ಟ್‌ಸೆಂಟ್ ಚಾರ್ಜ್" ಮಾದರಿಯ ಕಾಲೇಜುಗಳನ್ನು ಬೆಂಗಳೂರಿನಲ್ಲಿ ನಿರ್ಮಿಸಬೇಕೆಂದು ಅಂದು ತುಂಬ ಅದಮ್ಯ ಆಸೆಯನ್ನಿಟ್ಟುಕಂಡು ಬಂದರು. ಹಾಗೆಯೆ ಆ ಕಾಲೇಜುಗಳಲ್ಲಿ ತತ್ತ್ವಜ್ಞಾನ, ವಿಜ್ಞಾನ ಮತ್ತು ವಾಙ್ಮಯಗಳಂಥ ವಿಷಯಗಳನ್ನು ಕಲಿಸಲು ಯರೋಪಿನ ಮತ್ತು ಪ್ರಮುಖ ದೇಶಿಯ ಪಂಡಿತರನ್ನು ನೇಮಿಸಿಕೊಳ್ಳಬೇಕೆಂದು ಯೋಚಿಸಿದ್ದರು. ಆದರೆ ಇದಕ್ಕೆ ಮತೀಯ ಕಾರಣ ಎದುರಾದ್ದರಿಂದ ಅದರ ಬದಲು 'ಸೆಮಿನರಿ' ಎಂಬ ಬೋಧಕ ಶಾಲೆಯನ್ನು ಆರಂಭಿಸಿದರು. ಇದರ ಮಾಧ್ಯಮವು ಕನ್ನಡ ಭಾಷೆಯಾಗಿದ್ದು, ಈ ಬಗೆಯ ಶಾಲೆಗಳನ್ನು ದೇಶದಾದಂತ್ಯ ಸ್ಥಾಪಿಸಿದ್ದು ಅಂದಿನ ಅದರ ಪ್ರಮುಖ ಸಾಧನೆ ಎಂದು ಗುರುತಿಸಬಹುದು. ಅನಂತರ ಅದರ ಪ್ರಮುಖ ಉಸ್ತುವಾರಿಯನ್ನು ಬೆಂಜಮಿನ್ ರೈಸ್ ವಹಿಸಿಕೊಂಡ ಮೇಲೆ ವಿದ್ಯಾಭ್ಯಾಸ ಸುಧಾರಣೆಗೆ ವಿಶೇಷ ಗಮನ ನೀಡಿದನು. ಆದರೆ ಅದನ್ನು ದೇಶಿಯ ಕನ್ನಡ ಭಾಷೆಯಲ್ಲೇ ನೀಡಲು ಹೆಚ್ಚು ಶ್ರಮಿಸಿದ್ದು ಆತನ ಒಂದು ಬೆಳವಣಿಗೆಯಾಗಿತ್ತು. ಇದು ಅಂದಿನ ಆಧುನಿಕ ಕನ್ನಡ ನಾಂದಿಗೆ ಪ್ರಮುಖವಾದ ಅಸ್ತಿತ್ವವನ್ನೊದಗಿಸಿತ್ತೆಂದು ಗುರುತಿಸಬಹುದು.

1.6.2 ವೆಸ್ಲಿಯನ್ ಮಿಶನರಿ : ಇದರ ಮುಖ್ಯ ಗುರಿ ಶೈಕ್ಷಣಿಕ ಕ್ರಾಂತಿಯಾಗಿದ್ದು. ಆ ಮೂಲಕ ಧರ್ಮ ಪ್ರಚಾರ ಎರಡನೆಯ ಧ್ಯೇಯವನ್ನು ಹೊಂದಿದ ಒಂದು ಪ್ರಮುಖ ಕ್ರೈಸ್ತ ಸಂಸ್ಥೆಯಾಗಿತ್ತು. ಇದರ ಮುಖಂಡ ಥಾಮಸ್ ಹಡ್ಸನ್ ಆಗಿದ್ದು. ಆತನು ಬೆಂಗಳೂರು, ಮೈಸೂರು ಮೊದಲಾದ ಪ್ರಾದೇಶಿಕ ಕೇಂದ್ರಗಳಲ್ಲಿ "ಮಾದರಿ ಇಂಗ್ಲೀಷ್ ಶಾಲೆ"ಗಳನ್ನು ಸ್ಥಾಪಿಸಬೇಕೆಂಬುದು ಪ್ರಮುಖ ಗುರಿಯಾಗಿತ್ತು. ಆದರೆ ಈ ಮೊದಲು ಮುಮ್ಮಡಿ ಕೃಷ್ಣರಾಜ ಒಡೆಯರು ದೇಶಿಯ ನೆಲದಲ್ಲಿ "ರಾಜಾ ಸ್ಕೂಲ್" (1833) ಎಂಬ ಹೆಸರಿನಲ್ಲಿ ಒಂದು ಮಾದರಿ ಆಂಗ್ಲ ಶಾಲೆಯನ್ನು ಸ್ಥಾಪಿಸಿ ನಡೆಸುತ್ತಿದ್ದರು. ಆದರೆ ಆದರ ಶಿಸ್ತು, ಸಂಯಮ ವ್ಯವಸ್ಥೆಯನ್ನು ಕಂಡ ಆಗಿನ ವೆಸ್ಲಿಯನ್ ಮಿಶನ್ ಮೆಚ್ಚುಗೆ ವ್ಯಕ್ತಪಡಿಸಿದ್ದರಿಂದ ಅದನ್ನು ರಾಜರು ಅವರಿಗೇ ವಹಿಸಿಕೊಟ್ಟರು. ಅನಂತರ ಅದು ಕಾಲಕ್ರಮೇಣ 'ಮಹಾರಾಜ ಕಾಲೇಜ್' ಸ್ಥಾಪನೆಯ ಬೀಜಾಂಕುರಕ್ಕೆ ಕಾರಣವಾಯಿತು.

ಆದರೆ ಈ ನಿಟ್ಟಿನಲ್ಲಿ ಕನ್ನಡ ಅಭ್ಯಾಸಕ್ಕಾಗಿ ಮೆಕ್ಕರಲ್‌ನ ವ್ಯಾಕರಣವೊಂದೇ ಇದ್ದಿತು. ಹಡ್ಸನ್‌ನು ಪುನಃ ಅದನ್ನು ಸಂಕ್ಷೇಪಗೋಳಿಸಿ ಪರಿಷ್ಕಾರ ಮಾಡಿದನು. ಅಲ್ಲದೆ ಅದರ ಜೊತೆಗೆ ಮೈಸೂರಿನ ನಕಾಶೆಯನ್ನು ದೊಡ್ಡ ಸೈಜಿನಲ್ಲಿ ಮೊತ್ತ ಮೊದಲು ಸಿದ್ಧಪಡಿಸಿದ ಶ್ರೇಯಸ್ಸು ಆತನದ್ದೆಂದು ಗುರುತಿಸಬಹುದು. ಒಟ್ಟಿನಲ್ಲಿ ಇವೆಲ್ಲವೂ ಅಂದಿನ ಹೊಸಗನ್ನಡ ಅರುಣೋದಯ ಸಾಹಿತ್ಯದ ಪೂರ್ವಸಿದ್ಧತೆಯ ಪ್ರಮುಖ ಆಕರಗಳೆಂದು ಗುರುತಿಸಕೊಳ್ಳಲಾಗುವುದು.

1.6.3 ಬಾಸೆಲ್ ಮಿಶನ್ : ಇದರ ಗುರಿ ಪ್ರಧಾನವಾಗಿ ಶೈಕ್ಷಣಿಕ ಚಟುವಟಿಕೆಯಾಗಿದ್ದು. ಅದರ ಮೂಲಕ ತನ್ನ ಧರ್ಮ ಬೋಧನೆ ಮಾಡುವುದು ಅದರ ಎರಡನೇ ಧ್ಯೇಯವೆಂದು ಗುರುತಿಸಬಹುದು. ಅದರ ಸಂಸ್ಥಾಪಕ ಸಾಮ್ಯುಯಲ್ ಹೆಬಿಕ್ ಆಗಿದ್ದು ೧೮೩೬ರಲ್ಲಿ ಪ್ರಥಮವಾಗಿ ಒಂದು ಶಾಲೆಯನ್ನು ತೆರೆಯುವ ಮೂಲಕ ದೇಶಿಯ ನೆಲೆಯಲ್ಲಿ ಕಾಲೂರಿತು. ಅನಂತರ ಧಾರವಾಡ ಮತ್ತಿತರ ನೆಲೆಗಳಲ್ಲಿ ತನ್ನ ಕಾರ್ಯ ವೈಖರಿಯನ್ನು ವಿಸ್ತರಿಸಿಕೊಂಡಿತು. ಇದರ ಮುಂದಿನ ಕಾರ್ಯನಿರ್ವಾಹಕನಾಗಿ ಬಂದ ಮೊಗ್ಲಿಂಗ್‌ನು ಆತನ ಕಾರ್ಯವೈಖರಿಯು ಕನ್ನಡ ವ್ಯಾಕರಣ, ಕನ್ನಡ ಕಾವ್ಯ, ಬೈಬಲ್‌ನ ಮೊದಲಾದ

ಕನ್ನಡದ ತಾತ್ವಿಕ ವಿಚಾರಗಳನ್ನು ಬೋಧಿಸುವತ್ತ ಕೃತಿಗಳ ರಚನೆಯನ್ನು ವಿಸ್ತರಿಸಿತು. ಈ ಮೂಲಕ ಆತನು ಆಧುನಿಕ ಕನ್ನಡ ಸಾಹಿತ್ಯ ಒಂದು ಭದ್ರಬುನಾದಿಯನ್ನು ಹಾಕಿಕೊಟ್ಟ ಪ್ರಮುಖರಲ್ಲಿ ಒಬ್ಬನೆಂದು ಗುರುತಿಸಲಾಗುವುದು.

1.6.4 ಕೆಥೋಲಿಕ್ ಮಿಶನರಿ : ಇದರ ಪ್ರಮುಖಗುರಿ ಶೈಕ್ಷಣಿಕ ಚಟುವಟಿಕೆಯಾಗಿದ್ದರೂ ಮುದ್ರಣ, ದೇಶಿಯ ಸಂಸ್ಕೃತಿ, ಭಾಷೆ ಇನ್ನು ಮೊದಲಾದ ಪ್ರಮುಖ ಸೇವೆಯನ್ನು ಮಾಡುವ ಧ್ಯೇಯವನ್ನು ಹೊಂದಿದ್ದು. ಅದು ಹಿಂದಿನ ಮಿಶನರಿಗಳ ಮತೀಯ ಸಂವೇದನೆಯಿಂದ ಹೊರಬಂದು ನಿರ್ಮತ್ಸರತೆ, ಜಾತ್ಯತೀತತೆ ಮತ್ತು ನಿರ್ವ್ಯಾಜ ಪ್ರೀತಿಯ ಭಾವನೆಯಿಂದ ಸಾಮಾಜಿಕ ಸೇವೆಯನ್ನು ಮಾಡುವುದು ಅದರ ಪ್ರಧಾನ ಗುರಿಯಾಗಿಟ್ಟು ಕೊಂಡು, ತನ್ನ ಇಡೀ ಸೇವೆಯನ್ನು ಈ ನಾಡಿನ ಮಣ್ಣಿನ ವಾಸನೆಗಾಗಿ ಅರ್ಪಿಸಿಕೊಂಡಿದ್ದು ಹೊಸಗನ್ನಡ ಇತಿಹಾಸದ ಸಂದರ್ಭದಲ್ಲಿ ಒಂದು ಪ್ರಮುಖ ಸಂಗತಿಯಾಗಿದೆ.

1.7 ಹೊಸಗನ್ನಡ ಅರುಣೋದಯ ಸಾಹಿತ್ಯದ ಹಿನ್ನೆಲೆಯಲ್ಲಿ ಮಿಶನರಿ ವಿದ್ವಾಂಸರ ಪಾತ್ರ

ಈಗಾಗಲೇ ನಾವು ಈ ಮೇಲಿನ ಪ್ರಮುಖ ಮಿಶನರಿಗಳನ್ನು ಕುರಿತು ತಿಳಿದುಕೊಂಡಿದ್ದೇವೆ. ಆದರೆ ಅವುಗಳ ಹಿನ್ನೆಲೆಯಲ್ಲಿ ಪ್ರಮುಖ ಪಾತ್ರವಹಿಸಿದ ಧರ್ಮ ನಿಮಿತ್ತ. ಅಧಿಕಾರಿಗಳು ಸಾಹಿತ್ಯಿಕ ಮತ್ತು ಸಾಂಸ್ಕೃತಿಕವಾಗಿ ಮಾಡಿದ ಕೆಲಸವು ತುಂಬ ಅವಿಸ್ಮರಣೀಯವಾದುದು. ಅವರಲ್ಲಿ ಲಿಯೋನಾರ್ಡೋಡ ಸಿನ್ನಾಮಿ, ಬಾರ್ಬೋನಾ ಹ್ಯಾಂಡ್ಸ್ ಮತ್ತು ರೀವ್, ರೀಡ್, ಬೆಯ್ನನ್ ಮತ್ತು ಕ್ಯಾಂಬೆಲ್, ಬಿ.ಎಲ್.ರೈಸ್, ಜಾನ್‌ಗ್ಯಾರೆಟ್, ಡ್ಯಾನಿಯಲ್ ಸ್ಯಾಂಡರ್ಸ್, ಜೆ. ಸ್ಟೀವನ್ಸ್‌ನ್, ಹೆನ್ರಿಹೇಗ್, ಹರ್ಮನ್ ಮೊಗ್ಲಿಂಗ್, ಜೆ.ಎಡ್.ವೈಗಲ್, ಡಬ್ಲ್ಯೂ.ಜಿ.ವರ್ತ್, ಫರ್ನಾಂಡೀಸ್ ಕಿಟೆಲ್, ಎಫ್. ತ್ರಿಗ್ಲರ್ ಇನ್ನು ಮುಂತಾದವರು ಪ್ರಮುಖರಾಗಿದ್ದು. ಅವರು ಶಿಕ್ಷಣ, ಸಾಹಿತ್ಯ, ಭಾಷೆ, ವೈಚಾರಿಕತೆ, ವಿಜ್ಞಾನ, ಸಂಶೋಧನೆ, ಧಾರ್ಮಿಕ ಮೌಲ್ಯಗಳ ಪ್ರಚಾರ, ಶಬ್ದಕೋಶರಚನೆ, ಜಾತ್ಯತೀತಭಾವನೆ ಪ್ರಸಾರ, ಹೊಸ ಬದುಕಿನ ಹೊಸ ಸವಾಲುಗಳನ್ನು ಎದುರಿಸಲು ಹತ್ತು ಹಲವಾರು ಸಿದ್ಧಾಂತ ಮತ್ತು ತಂತ್ರವಿಧಾನಗಳನ್ನಿಟ್ಟುಕೊಂಡು ಭಾರತವನ್ನು ಪ್ರವೇಶಿಸಿದವರಾಗಿದ್ದರು. ಅವರ ಈ ಬಗೆಯ ಚಿಂತನೆ ಮತ್ತು ಪ್ರಸಾರವು ಹೊಸಗನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ತುಂಬ ಮಹತ್ವದ ಪಾತ್ರವನ್ನು ವಹಿಸಿತೆಂಬುದು ಗಮನಾರ್ಹ. ಅವರ ಈ ಕೊಡುಗೆಯ ಒಂದು ಸಂಕ್ಷಿಪ್ತ ಪರಿಚಯವನ್ನು ಮುಂದೆ ಮಾಡಿಕೊಳ್ಳೋಣ.

1.7.1 ಲಿಯೋನಾರ್ಡೋಡ ಸಿನ್ನಾಮಿ (೧೬೮೯:೧೬೭೬) : ಈತನು ಭಾರತದಲ್ಲಿ ಕ್ರೈಸ್ತ ಧರ್ಮ ಪ್ರಸಾರವಾಗಬೇಕಾದರೆ ದೇಶಿಯ ಭಾಷೆಗಳಲ್ಲೇ ಗ್ರಂಥರಚನೆ ಮಾಡಬೇಕೆಂದು ತಿಳಿದು ಬಂದವನು. ಈ ಸಂವೇದನೆಯ ಹಿನ್ನೆಲೆಯಲ್ಲಿ ಕನ್ನಡಿಗರ ಮತಾಂದತೆ, ಮೂಢನಂಬಿಕೆ, ಸಂಕುಚಿತ ಭಾವನೆಗಳನ್ನು ಹೋಗಲಾಡಿಸಲು ಪ್ರಯತ್ನಿಸಿದನು. ಈ ದಿಸೆಯಲ್ಲಿ ಆತನಿಗೆ ಮೈಸೂರಿನ ಕಂಠೀರವ ನರಸರಾಜ ಒಡೆಯರ ಪರಧರ್ಮಸಹಿಷ್ಣತೆಯ ಪ್ರೋತ್ಸಾಹ ಮತ್ತು ರಕ್ಷಣೆ ಸಿಕ್ಕಿದ್ದರಿಂದ ಕ್ರೈಸ್ತಧರ್ಮದ ರಹಸ್ಯ ತತ್ವಗಳನ್ನು ಸಾರಲು ಸಾಧ್ಯವಾಯಿತು. ಈ ನಿಟ್ಟಿನಲ್ಲಿ ಆತನು ಕನ್ನಡ ವ್ಯಾಕರಣ, ಶಬ್ದಕೋಶ ರಚನೆ, ಕ್ರೈಸ್ತಜೀವನ ಚರಿತ್ರೆ, ಕ್ರೈಸ್ತ ಮತ ಸಮರ್ಥನೆ, ಮೈಸೂರು ಜನರ ಜಾತಿಯತೆ, ಮೂಢನಂಬಿಕೆ ಕುರಿತು ಬರೆದ ಆತನ ಚಿಂತನೆಯುತ ಬರವಣಿಗೆಗಳು ಕನ್ನಡ ಅರುಣೋದಯ ಸಾಹಿತ್ಯ ಸಂದರ್ಭದಲ್ಲಿ ತುಂಬ ಪ್ರಮುಖ ಪಾತ್ರ ವಹಿಸಿದವೆಂದು ಗುರುತಿಸಲಾಗುವುದು.

1.7.2 ಬಾರ್ಬೋನಾ : ಈತನು ಕೂಡಾ ಎಲ್ಲ ಕ್ರೈಸ್ತ ಮಿಶನರಿಗಳಂತೆ ಮತೀಯ ಭಾವನೆಯಿಂದ ಇಂಡಿಯಾಯನ್ನು ಪ್ರವೇಶಿಸಿದರು. ಆದರೆ ಅದನ್ನು ಶೈಕ್ಷಣಿಕ ಕ್ಷೇತ್ರದ ಮೂಲಕ ಸಾರವ ಪ್ರಯತ್ನ ಮಾಡಿದನು. ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ, ಭಾಷೆಯ ಬಗೆಗೆ ಹೆಚ್ಚುಪ ಆಶಕ್ತಿ ವಹಿಸಿದನು. ಅದಕ್ಕಾಗಿ ಆತನು ಒಂದು :ಕೆಥೋಲಿಕ್ ಪ್ರೆಸ್‌ಎಂಲಅಂಪನ್ನು ಸ್ಥಾಪಿಸುವ ಮೂಲಕ ಸುಮಾರು ೩೦ಕ್ಕೂ ಹೆಚ್ಚು

ಕನ್ನಡ ಗ್ರಂಥಗಳನ್ನು ಹೊರತಂದದ್ದು ಆತನ ಗಮನಾರ್ಹ ಬೆಳವಣಿಗೆಯಾಗಿದೆ. ಅವುಗಳಲ್ಲಿ 'ದೈವಪರೀಕ್ಷೆ' (1986) 'ಸುಕೃತ ಮಂತ್ರಗಳು' (1852), 'ದಿವ್ಯಮಾತೃಕೆ' (1862), 'ಸತ್ಯಮೇದ ಪರೀಕ್ಷೆ'(1852) 'ಜನಪದ' (1863) ಹಾಗೂ ವೇದವನ್ನು ಮಾರ್ಪಡಿಸುವಿಕೆ ಕಂಡನೆಪ ಮೊದಲಾದ ಪ್ರಮುಖ ಕೃತಿಗಳು ಅಂದಿನ ಹೊಸಗನ್ನಡ ಸಾಹಿತ್ಯ ದೃಷ್ಟಿಯಿಂದ ತುಂಬ ಗಮನಾರ್ಹ ಕೃತಿಗಳಾಗಿವೆ.

1.7.3 ಹ್ಯಾಂಡ್ಸ್ ಮತ್ತು ರೀವ್: ಇವರಿಬ್ಬರೂ ಲಂಡನ್ ಮಿಶನ್‌ನ ಮಿಶನರಿಗಳಾಗಿದ್ದು. ಬಳ್ಳಾರಿಯ ಪ್ರಾದೇಶಿಕ ಕೇಂದ್ರವನ್ನಾಗಿ ಮಾಡಿಕೊಂಡು, ಅತಿ ಬೇಗ ಕನ್ನಡವನ್ನು ಕಲಿತು ಕನ್ನಡ ವ್ಯಾಕರಣ, ಶಬ್ದಕೋಶಗಳನ್ನು ರಚಿಸಲು ವಿದ್ಯುಕ್ತರಾದವರು. ಅವರ ಪ್ರಾರಂಭದ ದಿನಗಳಲ್ಲಿ ಹಳಗನ್ನಡ ಕಾವ್ಯಗಳು ಪ್ರಕಟವಾಗದಿರುವುದನ್ನು ಗುರುತಿಸಿ ಪ್ರಕಟಿಸಿದರು. ಅವರಲ್ಲಿ ಮಿಲಿಯಂ ರೀವ್ ಭಾಷಾಕೋವಿದನಾಗಿದ್ದು ಹತ್ತು ಹಲವಾರು ಅನುವಾದ ಕಾರ್ಯದಲ್ಲಿ ತೊಡಗಿಕೊಂಡು 'ಇಂಗ್ಲಿಷ್ ಕನ್ನಡ ಶಬ್ದಕೋಶ' ರಚಿಸಿದರು. ಇದು "ರೀವ್‌ಕೋಶ' ವೆಂದೇ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಒಟ್ಟಿನಲ್ಲಿ ಆತನು ಆಧುನಿಕವಾದ ಕನ್ನಡ ಶಬ್ದಕೋಶ ರಚನಾ ಕಾರ್ಯಕ್ಕೆ ಸೂಕ್ತವಾದ ತಳಹದಿಯನ್ನು ಹಾಕಿಕೊಟ್ಟನೆಂಬುದನ್ನು ಗುರುತಿಸಬಹುದು.

1.7.4 ರೀಡ್ ಬೆಯ್ನನ್ ಹಾಗೂ ಕ್ಯಾಂಬೆಲ್ : ಈ ಮೂವರು ವಿದ್ವಾಂಸರು ಇಂಗ್ಲೇಂಡಿನಲ್ಲಿದ್ದಾಗಲೇ ಹ್ಯಾಂಡ್ಸ್‌ನ ಸಹಾಯದಿಂದ ಪರಿಶ್ರಮಪಟ್ಟು ಕನ್ನಡವನ್ನು ಕಲಿತುಕೊಂಡು, ಬಳ್ಳಾರಿಯ ಮಿಶನರಿ ಕೆಲಸದ ಮೇಲೆ ಒಂದು ಬೈಬಲ್‌ನ್ನು ಕನ್ನಡೀಕರಿಸುವ ಮೂಲಕ ಕನ್ನಡ ಕೆಲಸಕ್ಕೆ ತೊಡಗಿಕೊಂಡು ಯಶಸ್ವಿಯಾದರು. ಈ ಹಿನ್ನೆಲೆಯಲ್ಲಿ ರೀಡ್‌ನು "Evidence of the Chrissian Revelution" ಎಂಬ ಕೃತಿಯನ್ನು ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ಅನುವಾದಿಸಿರುವುದು ಗಮನಾರ್ಹ. ಅನಂತರ ಭೂಗೋಳ ವಿಷಯ ಕುರಿತು ಒಂದು ಪಠ್ಯ ಪುಸ್ತಕವನ್ನು ರಚಿಸಿದನು. ಹೀಗೆ ಬಿಡುವಿಲ್ಲದೆ ಕನ್ನಡ ಕ್ರೈಸ್ತ ಸಾಹಿತ್ಯ ರಚನೆಯಲ್ಲಿ ವಿಶೆಷ ಸಾಧನೆಯನ್ನು ಮಾಡಿದನು.

ರೀಡ್‌ನ ಮತ್ತೊಬ್ಬ ಸಮಕಾಲೀನ ಸ್ನೇಹಿತನಾಗಿದ್ದಂತಹ ರೆವರೆಂಡ್ ವೀಗಲ್ ಎಂಬುವರು ಇಂಗ್ಲೀಷ್‌ನ ಬನಿಯನ್‌ನ "ಪಿಲಿಗ್ರಿಮ್ಸ್ ಪ್ರೋಗ್ರೆಸ್'ಕೃತಿಯನ್ನು 'ದೇಶಾಂತ್ರಿಯ ಪ್ರಯಾಣ' ಎಂಬ ಹೆಸರಿನಲ್ಲಿ ಕನ್ನಡೀಕರಣ ಮಾಡಿದನು. ಇವರ ಜೊತೆಯಲ್ಲೇ ಇದ್ದ ಬೆಯ್ನನ್ ಕ್ಯಾಂಬೆಲ್‌ನು ಕೂಡ ಕನ್ನಡ ಶಿಕ್ಷಣ, ಸಾಹಿತ್ಯ ವಿಷಯಗಳಲ್ಲಿ ವಿಶೇಷ ಆಶಕ್ತಿಯನ್ನಿಟ್ಟುಕೊಂಡು ಅವರ ಜೊತೆ ಗೂಡಿ ಬರೆದ "ಕನ್ನಡ ವ್ಯಾಕರಣಸಾರ" ಮೊದಲಾದ ಪ್ರಮುಖ ಪಠ್ಯಪುಸ್ತಕ ಕೃತಿಗಳನ್ನು ರಚಿಸಿದ್ದು ಹೊಸಗನ್ನಡ ಸಾಹಿತ್ಯ ದೃಷ್ಟಿಯಿಂದ ಆತನ ಕೊಡುಗೆ ತುಂಬ ಅಮೂಲ್ಯವಾಗಿದೆ.

1.7.5 ಬಿ.ಎಲ್. ರೈಸ್ : ಈತನು ತನ್ನ ಗುರು ಡಾ. ವಾಯ್‌ಸ್ಮಿತ್ ಪ್ರಭಾವದಿಂದ ಲಂಡನ್‌ನಿಂದ ಹಂಬಲಿತನಾಗಿ ದಕ್ಷಿಣ ಭಾರತಕ್ಕೆ ಮಿಶನರಿಯಾಗಿ ಬಂದನು. ಈತನು ಬುದ್ಧಿವಂತನೂ, ಭಾವುಕನೂ ಆಗಿದ್ದು. ಕವಿತ್ವರಚನೆ, ಸಂಗೀತ, ಸಂಶೋಧನೆ ಮುಂತಾದ ಪ್ರಮುಖ ವಿಷಯಗಳಲ್ಲಿ ತೀವ್ರ ಆಶಕ್ತಿ ಹೊಂದುವ ಮೂಲಕ ಜೀವನದಲ್ಲಿ ಏನಾದರೂ ವಿಶೇಷ ಕಾರ್ಯವನ್ನು ಸಾಧಿಸಬೇಕೆಂಬ ಛಲದಿಂದ ಭಾರತಕ್ಕೆ ಆಗಮಿಸಿದ ಮಹತ್ವಾಕಾಂಕ್ಷಿ. ಅನಂತರ ಆತನು ಬಂದ ಕೆಲವೇ ತಿಂಗಳುಗಳಲ್ಲಿ ಕನ್ನಡ ಕಲಿತು ಜನರೊಡನೆ ಬೆರತನು. ಹೀಗಾಗಿ ಆತನು ತನ್ನ ಮುಂದಿನ ದಿನಗಳಲ್ಲಿ ಕನ್ನಡದಲ್ಲಿಯೆ ಪ್ರವಚನ ಮಾಡತೊಡಗಿದ್ದಾಗಿಯೂ ಬರೆದಿದ್ದಾನೆ. ಅನಂತರ ಆತನು ಸ್ವತಂತ್ರ ಮತ್ತು ಅನುವಾದಿತವಾದ "ಕನ್ನಡ ಸಂಗೀತ"ವನೆಂಬ ಪ್ರಾರ್ಥನಾ ಗೀತೆಗಳನ್ನು ರಚಿಸಿದನು. ಅನಂತರ ಆತನು ತನ್ನ ಮತೀಯ ತತ್ವಗಳನ್ನು ಬೋಧಿಸುವ ಅಧ್ಯಾಪಕ ವೃತ್ತಿಯನ್ನು ಅವಲಂಬಿಸಿ, ಆ ಅವಧಿಯಲ್ಲಿ ಬಿಡಿ ಬಿಡಿಯಾದ ಕನ್ನಡ ವಚನ. ಬರವಣಿಗೆಗೆ ತೊಡಗಿಸಿ ಕೊಂಡಿದ್ದನ್ನು ಗುರುತಿಸಬಹುದು. ಅಂದರೆ ಆತನು ಜಿಜ್ಞಾಸೆ ಭಾವನೆ ಅಂತಹ ಕೃತಿಗಳನ್ನು ರಚಿಸುವತ್ತ ಒಲವು ಬೆಳೆಸಿಕೊಂಡನು. ಈ ಹಿನ್ನೆಲೆಯಲ್ಲಿ ಆತನು ದೇಶಿಯರು ಕೂಡಾ ಮತ ಪ್ರಚಾರಕ ದೃಷ್ಟಿಯಿಂದ ಉಪಯುಕ್ತ ಸಾಹಿತ್ಯವನ್ನು ರಚಿಸಬಲ್ಲವಲ್ಲರೆಂಬುವನ್ನು ಅರಿತು, ಅವರಿಗೂ ಅವಕಾಶ ಕಲ್ಪಿಸಲು ಆಸ್ಥೆ ತಳೆದನು.

ಒಟ್ಟಿನಲ್ಲಿ ಈ ದೃಷ್ಟಿಯಿಂದ ಭಾರತೀಯರು ಮಿಶನರಿ ಶಾಲೆಗಳನ್ನು ಸೇರಬೇಕು. ಆ ಮೂಲಕ ಕ್ರೈಸ್ತ ಧರ್ಮದ ತಾತ್ವಿಕ ಚಿಂತನೆಗಳನ್ನು ಅರಿಯಬೇಕು. ಜೊತೆಗೆ ಪರಂಪರೆಯಿಂದಲೂ ಶೋಷಣೆಗೆ ಒಳಗಾಗಿರುವ ಸ್ತ್ರೀ ಸಮಾಜಕ್ಕೆ ಹೆಚ್ಚಿನ ಶಿಕ್ಷಣ ನೀಡುವುದನ್ನು ಪ್ರೋತ್ಸಾಹಿಸಿದನು. ಈ ಎಲ್ಲವನ್ನೂ ಪ್ರತಿಬಿಂಬಿಸುವ "ಅರುಣೋದಯ"ವೆಂಬ ಅಂಗ್ಲ ಕನ್ನಡ ಸಚಿತ್ರ ಮಾಸಪತ್ರಿಕೆಯನ್ನು ತಂದನು. ಹೀಗೆ ಒಟ್ಟಾರೆ ದೃಷ್ಟಿಯಿಂದ ಆತನ ಸಾಹಿತ್ಯಿಕ ಮತ್ತು ಸಾಹಿತ್ಯೇತರ ಕೃಷಿಯು ಹೊಸಗನ್ನಡ ಸಾಹಿತ್ಯಿಹಾಸದ ದೃಷ್ಟಿಯಿಂದ ತುಂಬ ಅಸ್ಮರಣಿಯವಾದುದ್ದೆಂದು ಗುರುತಿಸಬಹುದು.

1.7.6 ಜಾನ್ ಗ್ಯಾರೆಟ್ : ಈತನು ವೆಸ್ಲಿಮನ್‌ನ ಶ್ರೇಷ್ಠ ವಿದ್ವಾಂಸರ ಪೈಕಿ ಒಬ್ಬನು. ವೆಸ್ಲಿಯನ್ ಅಚ್ಚು ಕೂಟದ ಆರಂಭದಿಂದಲೂ ಹಿಡಿದು ಅದರ ಮ್ಯಾನೇಜರ್ ಕೆಲಸದ ವರೆಗೂ ಕೆಲಸ ಮಾಡಿದವನು. ಆದರೆ ಆತನಿಗೆ ಪ್ರಿಯವಾದುದು ಶಿಕ್ಷಣರಂಗವಾಗಿದ್ದು. ಆ ಹಿನ್ನೆಲೆಯಲ್ಲಿ ಪಠ್ಯಕೃತಿಯರಚನೆ ಮತ್ತು ಪ್ರಾಚೀನ ಕೃತಿಗಳನ್ನು ಹೊಸಕ್ರಮದಿಂದ ತಿದ್ದಿ ಮುದ್ರಿಸುವುದು. ಶಿಕ್ಷಣಾಧಿಕಾರಿ ಆಗಿದ್ದಾಗ ಚಿಕ್ಕವರಿಗೆ ತಕ್ಕಂತೆ ಪಾಠಗಳು ಮತ್ತು ಕನ್ನಡ ಕೋಶಗಳ ರಚನೆ, ಪರಿಷ್ಕರಣ ಕೆಲಸಗಳನ್ನು ಮಾಡಿದನು. "ಭಗವದ್ಗೀತೆ", "ಪಂಚತಂತ್ರ"ಮೊದಲಾದ ಪ್ರಮುಖ ಕೃತಿಗಳನ್ನು ಗದ್ಯಾನುವಾದ ಮಾಡಿದನು. ಕೇಶಿರಾಜನ "ಶಬ್ದಮಣಿ ದರ್ಪಣ"ವನ್ನು ಸಂಪಾದಿಸಿ ಹೊರ ತಂದನು. ಅನಂತರ ಚಿ. ರಾಮರಾವ್‌ರ "ರೇಖಾಗಣಿತ" (1866)ವನ್ನು ಸಂಪಾದಿಸಿ ವಿದ್ಯಾ ಇಲಾಖೆಯ ವತಿಯಿಂದ ಪ್ರಕಟಿಸಿದನು. ಕೊನೆಯಲ್ಲಿ "ಹಿಂದೂ ನಾಮಕೋಶ" ವೆಂಬ ವಿಶೇಷವಾದ ಕೃತಿಯನ್ನು ಪ್ರಕಟಿಸಿ, ಅದರಲ್ಲಿ ಕನ್ನಡ ಧರ್ಮಗ್ರಂಥಗಳ ವಿಚಾರ, ಕಾವ್ಯ-ಕಲೆಗಳು, ಆಚಾರ - ವಿಚಾರಗಳು ಮೊದಲಾದ ಭಾರತೀಯ ಪರಂಪರೆಗೆ ಸಂಬಂಧಿಸಿದ ವಿಚಾರಗಳನ್ನು ತುಂಬಿ ಉಲ್ಲೇಖಿಸಿರುವುದು ಗಮನಾರ್ಹ. ಒಟ್ಟಿನಲ್ಲಿ ಗ್ಯಾರೆಟ್‌ನ ಕನ್ನಡ ಕೃಷಿಯು ಆಧುನಿಕ ಕನ್ನಡ ಇತಿಹಾಸದಲ್ಲಿ ತುಂಬ ಅಮೂಲ್ಯವಾದುದೆಂದು ಗುರುತಿಸಬಹುದು.

1.7.7 ಡ್ಯಾನಿಯಲ್ ಸ್ಯಾಂಡರ್ಸನ್ : ಈತನು ವೆಸ್ಲಿಯನ್‌ನ ಒಬ್ಬ ಪ್ರಮುಖ ಮಿಶನರಿ ಆಗಿದ್ದು. ಕನ್ನಡ ಬೈಬಲ್ಲಿನ ಅಧಿಕೃತ ಪರಿಷ್ಕರಣ ಸಮಿತಿಯಲ್ಲಿದ್ದು ಸಿ.ಎನ್. ಹಾಲ್ ವಿರಚಿತ "come to jesus" ಎಂಬ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದನು. ಆದರೆ ಅವನ ಜನಪ್ರಿಯ ಕೃತಿಯೆಂದರೆ "ಕನ್ನಡ ಕಥಾ ಸಂಗ್ರಹ" (1863) ಆಗಿದ್ದು. ಯರೋಪಿಯನ್ ಜನರಿಗೆ ಕನ್ನಡ ಭಾಷೆಯನ್ನು ಪರಿಚಯಿಸುವ ದೃಷ್ಟಿಯಿಂದ ಒಟ್ಟು ನಾಲ್ಕು ಕಥಾ ಸಂಗ್ರಹಗಳನ್ನು ಮಾಡಿದ್ದಾನೆ. ಅವುಗಳಲ್ಲಿ "ಸುಲಭ ಗದ್ಯಕಥೆಗಳು", "ಸುಲಭ ಪದ್ಯ ಕಥೆಗಳು", "ಪ್ರೌಢ ಗದ್ಯ ಬರವಣಿಗೆ ಕಥಾ ಸಂಗ್ರಹ", "ಹಳಗನ್ನಡ ಶೈಲಿಯ ಪದ್ಯಕಥೆಗಳು" ತುಂಬ ಪ್ರಮುಖವಾದ ಕೃತಿಗಳಾಗಿದ್ದು, ಆತನ "ಕನ್ನಡ ಇಂಗ್ಲೀಷ್ ಶಬ್ದ ಕೋಶ"ವು ಒಂದು ಮಹತ್ವದ ಕೃತಿಯಾಗಿ ಗಮನಾರ್ಹತೆ ಪಡೆದುಕೊಂಡಿದೆ. ಈ ಎಲ್ಲ ದೃಷ್ಟಿಯಿಂದ ಆತನು ಹೊಸಗನ್ನಡ ಅರುಣೋದಯ ಸಾಹಿತ್ಯ ದೃಷ್ಟಿಯಿಂದ ತುಂಬ ಮಹತ್ವದ ಸ್ಥಾನವನ್ನು ಪಡೆದುಕೊಂಡಿದ್ದಾನೆ.

1.7.8 ಹರ್ಮನ್ ಮೊಗ್ಲಿಂಗ್ : ಈತನು ಪ್ರತಿಷ್ಠಿತ ಬಾಸೆಲ್ ಮಿಶನರಿಯ ಪ್ರಮುಖ ವಿದ್ವಾಂಸರ ಪೈಕಿ ಒಬ್ಬನಾಗಿದ್ದು, ಆತನು ಬಾಲ್ಯದಿಂದಲೇ ತಾಯಿ ಕಳೆದುಕೊಂಡು ತಂದೆಯ ನೆರಳಲ್ಲಿ ಬೆಳೆಯುತ್ತಿದ್ದಾಗಲೇ ತನ್ನ ಮುಂದಿನ ಬದುಕಿನಲ್ಲಿ ಒಬ್ಬ ಕ್ರೈಸ್ತ ಮಿಶನರಿಯಾಗಿ ಕೆಲಸ ಮಾಡಬೇಕೆಂಬ ಆತನ ಅದಮ್ಯ ಅಪೇಕ್ಷೆಯಾಗಿತ್ತು. ಆದರಂತೆ ಆತನ ಅಪಾರ ಕ್ರೈಸ್ತ ಭಕ್ತಿ, ಗೌರವಗಳಿಂದ ತಂದೆ ತಾಯಿಯಿಂದ ಹಿಡಿದು ಆತನು ನಾಡಿನ ಅಧಿಕಾರಿ ವರ್ಗಗಳ ಹಾದಿಯಾಗಿ ಮೆಚ್ಚಿಗೆಗೆ ಪಾತ್ರನಾಗಿದ್ದು. ಒಬ್ಬ ಪ್ರಮುಖ ಪಾದ್ರಿಯಾಗಿ ರೂಪಗೊಂಡನು. ಅನಂತರ ಆತನು ಕ್ರೈಸ್ತ ದೈವಾಂಶ ಸಂಭೂತನಂತೆ ಬೆಳೆದು, ಜೊತೆಗೆ ಶಿಕ್ಷಣ ಪಡೆದೆ ಕ್ರಿ.ಶ. 1822ರಲ್ಲಿ ತೀಬಿಂಚೆನ್ ವಿಶ್ವವಿದ್ಯಾನಿಲಯವನ್ನು ಸೇರಿ ಐದು ವರ್ಷ ಅವಿರತ ವಿದ್ಯಾಭ್ಯಾಸ ಮಾಡಿ ಡಾಕ್ಟರೇಟ್ ಪದವಿಯನ್ನು ಪಡೆದನು. ಅನಂತರ ಆತನು ಭಾರತವನ್ನು ಮತೀಯ ಧರ್ಮದ ಹಿನ್ನೆಲೆಯಲ್ಲಿ ಪ್ರವೇಶಿಸಿ, ಕ್ರೈಸ್ತ ಧರ್ಮ ಪ್ರಚಾರಕ್ಕೆ ಮೊದಲು ತೊಡಗಿಕೊಂಡನು. ಆದರೆ ಆತನು ತನ್ನ ಮುಂದಿನ ಜೀವನದಲ್ಲಿ ಶಿಕ್ಷಣ, ಕನ್ನಡ ಗ್ರಾಂಥಿಕ ಸೇವೆಗಾಗಿ ತೊಡಗಿಸಿಕೊಂಡನು. ಈ ಹಿನ್ನೆಲೆಯಲ್ಲಿ ದಕ್ಷಿಣ ಭಾರತದಾದ್ಯಂತ ತಿರುಗಾಡಿ ಮೆಚ್ಚುಗೆಗೆ ಪಾತ್ರನಾದನು. ಈ ದಿಸೆಯಲ್ಲಿ ಜಾತಿ

ವಿಚಾರಣೆ (1845), "ದೇವರ ವಿಚಾರಣೆ", (1982) ಎಂಬ ಕೃತಿಗಳು ಆತನ ಸ್ವಂತ ಬರವಣಿಗೆಯಾಗಿದ್ದು, ಇವು ಹೊಸಗನ್ನಡ ಸಾಹಿತ್ಯದ ಆದ್ಯಪ್ರಬಂಧಗಳೆಂಬ ಹೆಗ್ಗಳಿಕೆಗೆ ಪಾತ್ರವಾಗಿವೆ. ಹಾಗೆಯೆ ಆತನು ಕನ್ನಡ ಪತ್ರಿಕಾ ಪ್ರಪಂಚಕ್ಕೂ ಅವನೇ ಮೊದಲಿಗನಾಗಿದ್ದು. ಕ್ರಿ.ಶ. 1843ರ "ಮಂಗಳೂರು ಸಮಾಚಾರ", "ಕನ್ನಡ ಸಮಾಚಾರ" ಪತ್ರಿಕೆಗಳ ಸಂಪಾದಕೀಯ ಮತ್ತು ಪ್ರಕಟನೆ ಅವನದೇ ಆಗಿತ್ತು. ಕನ್ನಡದ ಎರಡನೇ ಪತ್ರಿಕೆಯೆನಿಸಿದ ಎಕನ್ನಡ ಸುವಾರ್ತಿಕುವನ್ನೂ ಆತನೆ ಸಂಪಾದಕನಾಗಿ ಪ್ರಕಟಿಸುತ್ತಿದ್ದನು. ಅಷ್ಟೇ ಅಲ್ಲದೆ ಆತನು ಜನತೆಯೊಡನೆ ನಿಕಟ ಸಂಪರ್ಕವನ್ನಿಟ್ಟುಕೊಂಡು ನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ಸುತ್ತಾಡುತ್ತಿದ್ದಾಗ ಜನತೆಯ ಬಾಯಲ್ಲಿನ ಪಡೆನುಡಿಗಳು ಆತನನ್ನು ಆಕರ್ಷಿಸುತ್ತಿದ್ದವು. ಅವುಗಳನ್ನು ಆತನು ತನ್ನ ಬಿಡುವಿನ ವೇಳೆಯಲ್ಲಿ ಕಲೆ ಹಾಕುವ ಮೂಲಕ ಅವುಗಳ ಸಾಮಾಜಿಕ ಮಹತ್ವವನ್ನು ಅರಿತಿದ್ದನು. ಈ ನಿಟ್ಟಿನಲ್ಲಿ ಆತನು ಮೂರು ಸಾವಿರ ಗಾದೆಗಳನ್ನು 1847ರಷ್ಟು ಹಿಂದೆಯೆ ಪ್ರಕಟಿಸಿ, ಮುಂದಿನ ಸಂಗ್ರಹಗಾರರಿಗೆ ಮಾದರಿಯಾಗಿ ನಿಂತನು.

ಒಟ್ಟಿನಲ್ಲಿ ಶುದ್ಧ ಸಾಹಿತ್ಯ ದೃಷ್ಟಿಯಿಂದ ಮೊಗ್ಲಿಂಗನ ಸೇವೆ ಅನುಪಮವಾಗಿದ್ದು. "ಬಿಬ್ಲಿಯೋಗ್ರಾಫಿಕಾ ಕರ್ನಾಟಕ"ದ ಮೂಲಕ "ಕುಮಾರವ್ಯಾಸ ಭಾರತ", "ಜೈಮಿನಿಭಾರತ", "ಬಸವ ಪುರಾಣ", ಹಾಗೂ "ದಾಸರ ಪದಗಳು" ಮೊದಲಾದ ಹಳಗನ್ನಡ, ನಡುಗನ್ನಡ ಪ್ರಮುಖ ಕೃತಿಗಳನ್ನು ಮೊದಲು ಪರಿಷ್ಕರಿಸಿ ಹೊಸ ಕ್ರಮದಲ್ಲಿ ಹೊಸ ಬೆಲೆಯುಳ್ಳ ಮುನ್ನುಡಿಗಳಿಂದ ಪ್ರಕಟಿಸಿದನು. ಅಲ್ಲದೆ ಆತನು "ದಾಸರ ಪದಗಳು" ಎಂಬ ನೂರು ಹಾಡುಗಳ ಸಂಕಲನವೊಂದನ್ನು ಮೊದಲಿಗೆ ಹೊರತಂದು, ಅದನ್ನು ಹರ್ಮನ್ ಬಾಷೆಗೂ ಅನುವಾದಿಸಿದನು. ಹೀಗೆ ಆತನು ಎಲ್ಲಿಯೋ ಹುಟ್ಟಿ ಆಕಸ್ಮಿಕವಾಗಿ ನಮ್ಮ ಕನ್ನಡ ನಾಡಿಗೆ ಬಂದು ಹಳಗನ್ನಡದಿಂದ ಹೊಸಗನ್ನಡ ಕಾವ್ಯಗಳವರೆಗೂ ಅಭ್ಯಾಸ ಮಾಡಿ, ಹಳಗನ್ನಡ-ಹೊಸಗನ್ನಡ ಸಾಹಿತ್ಯಕ್ಕೆ ಭದ್ರಬುನಾದಿ ಹಾಕಿದ ಪ್ರಮುಖರಲ್ಲಿ ಒಬ್ಬನಾಗಿ ಗಮನಾರ್ಹ.

1.7.9 ಜಿ.ಎಚ್.ವೈಗಲ್ : ಮಂಗಳೂರಿನ ಮಿಶನ್ನಿನ ಕಾರ್ಯಸಾಧನೆಯಲ್ಲಿ ವೈಗಲ್‌ನ ಹೆಸರು ಬಹುದೊಡ್ಡದು. ಆತನು ಮೊಗ್ಲಿಂಗ್‌ನಿಗಿಂತಲೂ ಮಿಗಿಲಾದ ಸೂಕ್ಷ್ಮದರ್ಶಿಯೂ. ಸಾರ ಸಾರ ವಿವೇಚನೆಯುಳ್ಳವನೂ ಆಗಿದ್ದನು. ಭಾರತೀಯ ತತ್ವಜ್ಞಾನ ಮತ್ತು ಕನ್ನಡ ಭಾಷಾ ಪರಿಣತಿಯಲ್ಲಿ ಈತನಿಗೆ ಸಮಾನರಾದವರು ಈ ಕಾಲಾವಧಿಯಲ್ಲಿ ಲಂಡನ್, ವೆಸ್ಲಿಯನ್ ಮಿಶನರಿಗಳಲ್ಲಿಯೂ ಮತ್ತೊಬ್ಬರಿರಲಿಲ್ಲವೆಂಬುದು ಗಮನಾರ್ಹ. ಅಲ್ಲದೆ ಆತನಿಗೆ ಆರ್ಷೇಯ ವ್ಯಾಸಂಗದ ಬಗೆಗೆ ತುಂಬ ಪ್ರಬುದ್ಧತೆಯಿದ್ದು, "ಭಗವದ್ಗೀತೆ" ಕುರಿತು ಆತನು ಅಂದು ಕೊಟ್ಟ ಉಪನ್ಯಾಸ ಮತ್ತು ಬರವಣಿಗೆಯು ತುಂಬ ಗಮನಾರ್ಹತೆ ಪಡೆದುಕೊಂಡಿತ್ತು. ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತು ಕಿಟೆಲ್‌ಗಿಂತ ಮೂವತ್ತು ವರ್ಷಗಳ ಹಿಂದೆಯೆ ಬರೆದಿರುವುದು ಗಮನಾರ್ಹ. ಆತನ ಇನ್ನೊಂದು ಪ್ರಮುಖ ಸಾಹಿತ್ಯಿಕ ಕೊಡುಗೆಯೆಂದರೆ ಬನಿಯನ್‌ನ "Piligims progress" ಕೃತಿಯ ಮೊದಲ ಭಾಗವನ್ನು ಕನ್ನಡಕ್ಕೆ ಅನುವಾದಿಸಿದ್ದಾನೆ. ಆತನು ಕನ್ನಡ ಬಾಷೆಯು ಯಾವ ಭಾಷಾ ವರ್ಗಕ್ಕೆ ಸೇರಿದ್ದಾಗಿದೆಂಬದನ್ನು ಗುರುತಿಸಿ, ತಮಿಳು, ತೆಲುಗು, ಸಂಸ್ಕೃತ ಭಾಷೆಗಳೊಂದಿಗೆ ತೌಲನಿಕವಾಗಿ ಅಧ್ಯಯನ ಮಾಡಿದ್ದು ಆತನ ಪ್ರಬುದ್ಧತೆಗೆ ಹಿಡಿದ ಕನ್ನಡಿಯಾಗಿದೆ. ಒಟ್ಟಿನಲ್ಲಿ ಆತನ ಈ ಕೊಡುಗೆಯು ಆಧುನಿಕ ಕನ್ನಡ ಸಾಹಿತ್ಯ ದೃಷ್ಟಿಯಿಂದ ತುಂಬ ಮಹತ್ವದ್ದೆಂದು ಗುರುತಿಸಲಾಗುತ್ತದೆ.

1.7.10 ಫರ್ಡಿನಾಂಡ್ ಕಿಟೆಲ್ : ಈತನು 1832ರಲ್ಲಿ ಹರ್ಮನ್ ದೇಶದ ರಾಸ್ಟರ್ ಹಾಫ್‌ನಲ್ಲಿ ಹುಟ್ಟಿದನು. ಸಾಮಾನ್ಯವಾಗಿ ಎಲ್ಲ ಮಿಶನರಿಗಳಂತೆ ಈತನೂ ಒಬ್ಬ ಮತ ಪ್ರಚಾರ ಮನೆತನಕ್ಕೆ ಸೇರಿದವನು. ಹೀಗಾಗಿ ಆತನು ಶಾಲೆಯ ಜೀವನಕ್ಕೆ ಕಾಲಿಟ್ಟಾಗಲೇ ಆತನ ತಂದೆಯು ಅವನನ್ನು ಮಿಶನರಿಯಾಗಿ ಮಾಡಬೇಕೆಂದು ನಿರ್ಧರಿಸಿದ್ದನು. ಹೆಚ್ಚಿನ ವ್ಯಾಸಂಗಕ್ಕೆಂದು ಯಾವ ವಿಶ್ವವಿದ್ಯಾನಿಲಯವನ್ನೂ ಸೇರದೆ ಮೂರು ವರ್ಷಗಳ ಕಾಲ ಮತ ಪ್ರಚಾರದ ವಿಷಯವನ್ನು ಕುರಿತು ಅಧ್ಯಯನವನ್ನು ಕುರಿತು ಕೈಗೊಂಡು 1853ರಲ್ಲಿ ಮಂಗಳೂರಿಗೆ ಬಂದನು. ಅನಂತರ ಧಾರವಾಡ, ಹುಬ್ಬಳ್ಳಿ ಕೇಂದ್ರಗಳಿಗೆ ಬಂದು ಕನ್ನಡ ಕಲಿತು ಆಳವಾದ ಅಭ್ಯಾಸ ಕೈಗೊಂಡು. ಆಗಿನ ಕಾಲದಲ್ಲಿ ಲಭ್ಯವಿದ್ದ ಹಿಂದೂ ಧರ್ಮ, ಇತಿಹಾಸಗಳಿಗೆ

ಸಂಬಂಧಿಸಿದ ಇಂಗ್ಲೀಷ್, ಸಂಸ್ಕೃತ, ಕನ್ನಡ ಕೃತಿಗಳನ್ನು ಅಭ್ಯಾಸ ಮಾಡಿದನು. ಅಂತೆಯೆ ಭಾಷಾ ವಿಷಯದಲ್ಲಿ ಸುಕ್ಷ್ಮಮತಿಯೂ, ಕಾವ್ಯ, ತತ್ವಜ್ಞಾನಗಳಲ್ಲಿ ಅಪಾರ ಶ್ರದ್ಧೆಯೂ ಇದ್ದು. ಆತನು ಗಳಿಸಿದ ಅದ್ಭುತ ಮೇದಾಶಕ್ತಿಯಿಂದ ವಿದ್ವಾಂಸರ ಮಂಡಲಿಯಲ್ಲಿ ಒಬ್ಬನಾಗಿ ಗಣಿಸಲ್ಪಟ್ಟನು.

ಆತನ ವಾಙ್ಮಯವು ಕವಿತಾರಚನೆಯಿಂದ ಪ್ರಾರಂಭಗೊಂಡು. ಅವನ್ನೊಬ್ಬ ಓರ್ವ ಹಿರಿಯ ಮಿಶನರಿ ಕವಿಯಾಗುವವರೆಗೂ ಬೆಳೆದನು. ಇದು ಆತನು ನಡುಗನ್ನಡ ಕಾವ್ಯಾಭ್ಯಾಸದಿಂದ ಪಡೆದ ಪ್ರೇರಣೆಯಾಗಿದ್ದು. ಆತನ ಪ್ರಕಾರ ಕ್ರೈಸ್ತ ಮತ ಪ್ರಸಾರ ಮಾಡುವ ಮಿಶನರಿಗಳು ಕನ್ನಡ ಕಾವ್ಯಗಳನ್ನು ಅಭ್ಯಾಸಿಸಬೇಕು ಮತ್ತು ಆ ವಿಷಯವು ದೈವಜ್ಞಾನ ಶಾಲೆಯಲ್ಲಿ ಓದುವವರಿಗೆ ಕಡ್ಡಾಯವಾಗಿರಬೇಕೆಂದು ಎಂದು ಸಂಸ್ಥೆಗಳಿಗೆ ಸೂಚಿಸಿದನು. ಹಾಗೆಯೆ ಕಲಿತವರು ಮುಂದೆ ಕನ್ನಡದಲ್ಲಿ ಅದೂ ದೇಶಿಯ ರಾಗಗಳಲ್ಲಿ ಪದ್ಯಗಳನ್ನು ರಚಿಸಬೇಕೆಂದು ಪ್ರತಿಪಾದಿಸಿದ್ದಾರೆ.

ಅನಂತರ ಕ್ರಿ.ಶ. 1872ನೇ ಇಸವಿ ಕಿಟಿಲ್‌ನ ಸಾಹಿತ್ಯ ಜೀವನದ ಮಹತ್ವದ ಘಟ್ಟವಾಗಿದ್ದು. ಆ ವರ್ಷ "ಶಬ್ದಮಣಿದರ್ಪಣ" ವನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಹೊರತಂದನು. ಅತನ ಕೋಶ ಮತ್ತು ವ್ಯಾಕರಣ ಸಂಶೋಧನೆಗಳಿಗೆ ಇದುವೇ ತಾಯಿ ಬೇರಿನಂತಿದ್ದು. ಈ ದೃಷ್ಟಿಯಿಂದ ಕೇಶಿರಾಜನೆ ಕಿಟೆಲ್‌ನ ಗುರುವೆಂದು ಭಾವಿಸಿದರೆ ಅತಿಶಯೋಕ್ತಿಯಾಗಲಾರದು. ಆತನ ಸಂಪಾದನೆಯ ಕೃತಿಯಲ್ಲಿ ಸೂತ್ರಗಳನ್ನು ಇಂಗ್ಲೀಷ್ ಭಾಷೆಗೆ ಸೂತ್ರವನ್ನು ಕುರಿತ ಭಾಷಾಂತರ, ಟಿಪ್ಪಣಿ ಇರುವುದರಿಂದ ವ್ಯಾಕರಣ ಅಭ್ಯಾಸಕ್ಕೆ ಅದೊಂದು ಕೈದೀವಿಗೆಯಾಗಿದೆ. ಅನಂತರ ಮೂರು ವರ್ಷಗಳ ಬಳಿಕ ಹೊರತಂದ ನಾಗವರ್ಮನ "ಛಂದೋಂಬುದಿ" (1875) ಪರಿಷ್ಕರಣವಾದರೂ ಅದು ಹೊಚ್ಚ ಹೊಸ ಕೃತಿಯೆಂಬಷ್ಟರ ಮಟ್ಟಿಗೆ ಕೀರ್ತಿಗೆ ಪಾತ್ರವಾಗಿದೆ.

ಕಿಟಿಲ್‌ನು 1857ರಿಂದಲೇ "ಇಂಡಿಯನ್ ಆಂಟಿಕ್ವೆರಿ" ಪತ್ರಿಕೆಯಲ್ಲಿ ಆರ್ಯ-ದ್ರಾವಿಡಿಯನ್ ಶಬ್ದಗಳ ತುಲನೆ, ವಾಙ್ಮಯ ವಿಚಾರಗಳಿಗೆ ಸಂಬಂಧಿಸಿದ ಬರೆಹಗಳು ಅಚ್ಚಾಗುತ್ತಿದ್ದವು. ಜೊತೆಗೇ ಸರ್ವಜ್ಞ, ವೀರಶೈವ ಶರಣರು, ದಾಸರ ಪರಿಚಯ, ರೈಸ್ ತಯಾರಿಸಿದ ಮೈಸೂರು ಶಾಸನವನ್ನು ಪುನಃ ಪ್ರಕಟಿಸಿದನು. ಆದರೆ ಅವುಗಳನ್ನು ಪುನಃ ಭಾಷಾಶಾಸ್ತ್ರ, ಛಂದಸ್ಸುಗಳ ದೃಷ್ಟಿಯಿಂದ ಪರಿಶೀಲಿಸಿ ಅವುಗಳ ಮಹತ್ವವನ್ನು ಹೆಚ್ಚಿಸಿದ್ದು ತುಂಬ ಗಮನಾರ್ಹತೆ ಪಡೆದುಕೊಂಡಿತು. ಇನ್ನು ಆರ್ಯರು ಮತ್ತು ಲಿಂಗ ಪೂಜೆಗೆ ಸಂಬಂಧಿಸಿದ ತೌಲನಿಕ ವಿಷಯಗಳ ಚರ್ಚೆಗಳಲ್ಲಿ ಆತನಿಗಿದ್ದ ಪ್ರಗಲ್ಭ ಪಾಂಡಿತ್ಯವು ಗಮನಾರ್ಹವಾಗಿದ್ದು. ಇದು ಕಿಟಿಲ್‌ಗೆ ಕಾಲ್ಡವೆಲ್‌ನ ಬರಹಗಳಿಂದ ಸ್ಫೂರ್ತಿ ಬಂದಿತೆಂದು ಗುರುತಿಸಬಹುದು.

ಅನಂತರ ಕಿಟೆಲ್‌ನು ಕನ್ನಡ ನಾಡಿನಾದ್ಯಂತ ತಿರುಗಿ ತುಂಬ ಪರಿಶ್ರಮದಿಂದ ಕಲೆಹಾಕಿದ "ಕನ್ನಡ ಇಂಗ್ಲೀಷ್ ನಿಘಂಟು" ಕೃತಿ ತುಂಬ ಅಮೂಲ್ಯವಾದುದು. ಅದು ಕನ್ನಡ ಪದಗಳ ನಿಷ್ಪತ್ತಿ ಮತ್ತು ಬೆಳವಣಿಗಳನ್ನು ಸವಿವರವಾಗಿ ಮತ್ತು ನಿಖರವಾಗಿ ಚರ್ಚಿಸುವ ನಿಟ್ಟಿನಲ್ಲಿ ತುಂಬ ಉಪಯುಕ್ತ ಆಕರವೆಂದು ಗುರುತಿಸಬಹುದು. ಅನಂತರ ಈ ನಿಘಂಟಿಗೆ 1886ರಲ್ಲಿ ತಿಬೆಂಚ್ ವಿಶ್ವವಿದ್ಯಾನಿಲಯದಿಂದ "ಡಾಕ್ಟರ್ ಆಫ್ ಫಿಲಾಸಫಿ" ಪದವಿಯನ್ನು ಕೂಡಾ ದೊರಕಿತು. ಒಟ್ಟಿನಲ್ಲಿ ಆತನ ಕೊಡುಗೆಯು ತುಂಬಾ ಅಪೂರ್ವವಾಗಿದ್ದು, ಈ ಪ್ರಪಂಚದಲ್ಲಿ ಕನ್ನಡದ ಸೊಲ್ಲು ಕೇಳಿ ಬರುವ ಪರ್ಯಂತ ಸ್ಥಿರವಾಗಿ ಉಳಿಯುವಂತದ್ದಾಗಿದೆ.

1.7.11 ಜೆ.ಎಫ್.ಫ್ಲೀಟ್ : ಕನ್ನಡ ನಾಡಿನ ಸಂಶೋಧನೆಯ ಇತಿಹಾಸದಲ್ಲಿ ರೈಸ್, ಫ್ಲೀಟರು ಅಶ್ವಿನೀ ದೇವತೆಗಳಿದ್ದಂತೆ. ಇಬ್ಬರೂ ಶಾಸನಗಳನ್ನೇ ತಮ್ಮ ಸಂಶೋಧನೆಯ ಪ್ರಮುಖ ಕ್ಷೇತ್ರವನ್ನಾಗಿ ಮಾಡಿಕೊಂಡು ತುಂಬ ಮಹತ್ವದ ಕೊಡುಗೆಯನ್ನು ನೀಡಿದರು. ರೈಸ್‌ನಿಗಿಂತ ತುಸು ಮೊದಲೇ ಶಾಸನಾನ್ವೇಷಣೆಯಲ್ಲಿ ತೊಡಗಿಕೊಂಡವನಾದರೂ ಮುಂಬಯಿ ಸರಕಾರದ ವಿವಿಧ ಆಡಳಿತ ಜವಾಬ್ದಾರಿಯನ್ನು ಹೊತ್ತು ಬಿಡುವಿನ ವೇಳೆಯಲ್ಲಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದನು. ರೈಸ್‌ನ

ಸಂಶೋಧನಾ ಕಾರ್ಯವು "ಎಪಿಗ್ರಾಫಿಯಾ ಕರ್ನಾಟಕ"ದಲ್ಲಿ ಒಟ್ಟು ಗೂಡಿದ್ದರೆ, ಫ್ಲೀಟನ ಶಾಸನ ಸಂಶೋಧನೆ ಇನ್ನೂರಕ್ಕೂ ಮೀರಿದ ಬಿಡಿ ಲೇಖನಗಳಲ್ಲಿ ಚದುರಿ ಹೋಗಿವೆ. ಈ ದೃಷ್ಟಿಯಿಂದ ಆತನ ಕನ್ನಡ ಸೇವೆಯು ತುಂಬ ಸ್ಮರಣೀಯವಾದುದೆಂದು ಗುರುತಿಸಲಾಗುವುದು.

ಒಟ್ಟಿನಲ್ಲಿ ಹೀಗೆ ಇನ್ನು ಮುಂತಾದ ಪಶ್ಚಿಮದ ಪ್ರಮುಖ ವಿದ್ವಾಂಸರು ಕನ್ನಡಕ್ಕೆ ಸಲ್ಲಿಸಿದ ಸೇವೆಯು ತುಂಬ ಮಹತ್ವದ್ದೆಂದು ಗುರುತಿಸುವುದು ಅವಶ್ಯಕವಾಗಿದೆ. ಅವರಲ್ಲಿ ಹುಲ್ಷ, ಕೆ.ಟಿ. ಪಾಠಕ್‌ರು ಶಾಸನಗಳ ಹಿನ್ನೆಲೆಯಲ್ಲಿ ಐತಿಹಾಸಿಕತೆ, ಸಾಂಸ್ಕೃತಿಕತೆ ಮತ್ತು ಸಾಹಿತ್ಯ -ಭಾಷೆಯ ಬಗೆಗೆ ಹೆಚ್ಚು ಶ್ರಮಿಸಿದರೆ, ಫರ್ಗ್ಯುಸನ್, ಹೆನ್ರಿಕಸಿನ್ಸ್ ಮುಂತಾದ ಭಾರತೀಯ ಶಿಲ್ಪಕಲೆಗಳನ್ನು ಕುರಿತು ಅಪೂರ್ವಕೊಡುಗೆಯನ್ನು ನೀಡಿದ್ದಾರೆ. ಗ್ರಿಯರ್‌ಸನ್ ಮೊದಲಾದವರು ಭಾರತೀಯ ಭಾಷಾ ಸಮೀಕ್ಷೆಗಳನ್ನು ಕುರಿತು ತಲಸ್ಪರ್ಶಿಯಾದ ಅಧ್ಯಯನವನ್ನು ಮಾಡುವ ಮೂಲಕ ಕನ್ನಡ ಶಿಲ್ಪಕಲೆ, ಭಾಷೆಯನ್ನು ಕುರಿತು ಆಳವಾಗಿ ಅಭ್ಯಾಸಗೊಂಡು ಕನ್ನಡ ಅರುಣೋದಯ ಸಾಹಿತ್ಯದ ಹಿನ್ನೆಲೆಯಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿದ್ದಾರೆ.

1.8 ಹೊಸಗನ್ನಡ ಅರುಣೋದಯ ಸಾಹಿತ್ಯದಲ್ಲಿ ಮುಮ್ಮಡಿ ಕೃಷ್ಣರಾಜರ ಪಾತ್ರ

ನಡುಗನ್ನಡ ಮತ್ತು ಹೊಸಗನ್ನಡಗಳ ಸಂಧಿಕಾಲದಲ್ಲಿ ಜನಿಸಿದ ಮುಮ್ಮಡಿ ಕೃಷ್ಣರಾಜರು ಸುಮಾರು ಎಪ್ಪತ್ತೈದು ವರ್ಷಗಳು ಬದುಕಿದ್ದು. ಸುಮಾರು 68ವರ್ಷಗಳ ಕಾಲ ಪಟ್ಟಾಭಿಷಕ್ತ ರಾಜರಾಗಿ ದೀರ್ಘಾವಧಿಯಲ್ಲಿ ರಾಜ್ಯ ಮಾಡಿದರು. ಈ ಸಂಗತಿ ಕರ್ನಾಟಕದ ಯಾವ ರಾಜಮನೆಜನದಲ್ಲೂ ಸಿಗುವುದು ಅಪರೂಪ. ಅವರ ಈ ದೀರ್ಘಾವಧಿಯ ಆಳ್ವಿಕೆಯ ಜೊತೆಗೇ ಸ್ವತಃ ಒಬ್ಬ ಸತ್ವಶಾಲಿ ಬರೆಹಗಾರನಾಗಿದ್ದು, ನಾಡು - ನುಡಿಯ ಇತಿಹಾಸದ ಸಂದರ್ಭದಲ್ಲಿ ತುಂಬ ಮಹತ್ವದ ಸ್ಥಾನವನ್ನು ಪಡೆದುಕೊಂಡಿರುವುದು ಗಮನಾರ್ಹ.

ಮುಮ್ಮಡಿ ಕೃಷ್ಣರಾಜರು ನಾಡು - ನುಡಿ, ಸಾಹಿತ್ಯ, ಪಾಂಡಿತ್ಯ, ಧರ್ಮ, ಸಂಸ್ಕೃತಿ, ಸತ್ಯ, ಶಾಂತಿ ಮೊದಲಾದ ಪ್ರಮುಖ ಅಂಶಗಳ ಬಗೆಗೆ ಇದ್ದ ತೀವ್ರ ಕಾಳಜಿಯಿಂದ ಆತನ ಆಸ್ಥಾನವು ಕವಿ ಪಂಡಿತರಿಂದ ತುಂಬಿಕೊಂಡಿತ್ತು. ನೂರೊಂದು ಮಂದಿ ವಿದ್ವಾಂಸರು ತಮ್ಮ ವೈದಿಕ ಮತ್ತು ಇತರ ಪರಂಪರಾಗತ ಹೆಚ್ಚೆಗಳನ್ನು ಪ್ರದರ್ಶಿಸಿ ರಾಜರಿಂದ ಮನ್ನಣೆ, ಪ್ರೋತ್ಸಾಹಗಳನ್ನು ಪಡೆದುಕೊಂಡಿದ್ದಾರೆ. ಯಾರಲ್ಲಿ ನಿಜವಾದ ವಿದ್ವತ್ತು ಇದ್ದಿತೋ ಅವರನ್ನು ಆದರದಿಂದ ಕಂಡು ಅವರ ವಿದ್ಯೆಗೆ ಮನ್ನಣೆಯನ್ನಿಡುತ್ತಿದ್ದರು. ಹೀಗಾಗಿ ಕನ್ನಡದ ಆಗಿನ ಪ್ರಮುಖ ಕವಿಗಳಾದ ಯಾದವ, ಕಬ್ಬಿಗ, ಕೆಂಪುನಾರಾಯಣ, ಶ್ರೀನಿವಾಸ, ತಮ್ಮಯ್ಯ, ಮದ್ದಗಿರಿ ನಂಜಪ್ಪ, ಅಳಿಯ ಲಿಂಗರಾಜ ಮೊದಲಾದವರು ಕೃಷ್ಣರಾಜರ ಪೋಷಣೆಯನ್ನು ಪಡೆದವರಾಗಿದ್ದರು. ಹಾಗೆಯೆ ಅವರು ಪ್ರಾಚೀನ ಮತ್ತು ಆಧುನಿಕ ಕಾಲವನ್ನು ಸಂಧಿಸುವ ಸ್ಥಿತ್ಯಂತರ ಬದುಕಿನ ಪ್ರತೀಕ ಕವಿಗಳಾಗಿದ್ದರು. ಮುಮ್ಮಡಿಯವರು ಮಧ್ಯಯುಗೀನ ಸಂಸ್ಥಾನೀ ಪದ್ಧತಿಯ ರಾಜರಾಗಿದ್ದರೂ ಆ ಕಾಲದ ರೀತಿ ರಿವಾಜುಗಳಿಂದ ಆಗ ಯುದ್ಧಮಾಡುವ ಪ್ರಸಂಗಬಾರದೇ, ಹೊಸ ಕಾಲಕ್ಕೆ ತಕ್ಕಂತೆ ರಾಜಕೀಯ ಹೋರಾಟದಲ್ಲಿ ನಿರತರಾಗಿದ್ದರು. ಅಲ್ಲದೆ ಅವರು ಪರಂಪರಾಗತ ವಿದ್ಯೆಯನ್ನು ಪೋಷಿಸುತ್ತಿದ್ದರು. ಅವರಿಗೆ ಆಧುನಿಕ ವಿಷಯಗಳಲ್ಲಿ ತೀವ್ರ ಆಶಕ್ತಿ, ಕಳಕಳಿ ಇದ್ದು. ಅವರು ಭಾರತೀಯ ಜ್ಯೋತಿಷ್ಯ ಶಾಸ್ತ್ರವನ್ನು ಅರಿತವರಾಗಿದ್ದರೂ. ಪಾಶ್ಚಾತ್ಯರಿಂದ ಪಡೆದ ದೂರದರ್ಶಕ ಉಪಕರಣ ಸಹಾಯಕದಿಂದ ಗ್ರಹ, ನಕ್ಷತ್ರಗಳ ವೀಕ್ಷಣೆಯನ್ನು ಮಾಡುತ್ತಿದ್ದರು. ಮುದ್ರಣ ಯಂತ್ರವನ್ನು ಅರಮನೆಯಲ್ಲಿ ಸ್ಥಾಪಿಸಿ ತುಂಬ ಪ್ರಮುಖ ಗ್ರಂಥಗಳನ್ನು ಪ್ರಕಟಿಸುವ ಪರಂಪರೆಯನ್ನು ಸೃಷ್ಟಿಸಿದರು.

ಅಲ್ಲದೆ ಮುಮ್ಮಡಿ ಕೃಷ್ಣರಾಜರು ವಿದ್ವಾಂಸರ ಗೋಷ್ಠಿಯಲ್ಲಿ ಭಾಗವಹಿಸುತ್ತಿದ್ದರಲ್ಲದೆ ಸ್ವತಃ ವಿದ್ವಾಂಸರಾಗಿದ್ದು, ಅವರು ಸೌಗಂಧಿಕಾ ಪರಿಣಾಮ, ನಂಜುಂಡಶತಕ, ಶಾಕುಂತಲ ಟೀಕೆ, ಕೃಷ್ಣಕಥಾಸಾಗರ ಸಂಗ್ರಹ, ಕಾದಂಬರಿ, ತಲ ಕಾವೇರಿ ಮಹಾತ್ಮೆ, ದಶಕುಮಾರ ಕಥಾಕಾಲನಿಧಿ, ನಂಜುಂಡಶತಕ, ಭಗವದ್ಗೀತೆ, ಬತ್ತೀಸ ಪುತ್ತಲಿಯ ಕಥೆ, ಭಾಗವತ, ಶಂಕರ ಸಂಹಿಕೆ, ಶನ್ಯೇಶ್ವರ ಕಥೆ, ಹರಿವಂಶ, ಹಾಲಾಸ್ಯ ಮಹಾತ್ಮೆ

ರಾಮಾಯಣ ತಾತ್ಪರ್ಯ ದೀಪಿಕೆ, ವತ್ಸರಾಜಕಥೆ (ನಾಟಕ) ಇನ್ನು ಮೊದಲಾದ ಸುಮಾರು 50ಕ್ಕೂ ಮೀರಿದಂತೆ ತುಂಬ ಮಹತ್ವದ ಕೃತಿಗಳನ್ನು ಅವರು ರಚಿಸಿದ್ದಾರೆ. ಒಟ್ಟಿನಲ್ಲಿ ಅವರ ಸಮಗ್ರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕೊಡುಗೆಯು ಹೊಸಗನ್ನಡ ಅರುಣೋದಯ ಸಂದರ್ಭದಲ್ಲಿ ತುಂಬ ಮಹತ್ವದ ಕಾಣಿಕೆಗಳೆಂದು ಗುರುತಿಸಲಾಗುವುದು.

1.9 ಅಭ್ಯಾಸ ಪ್ರಶ್ನೆಗಳು

1.9.1 ಹೊಸಗನ್ನಡ ಅರುಣೋದಯ ಸಾಹಿತ್ಯದ ಪ್ರಮುಖ ಪ್ರೇರಣೆ -ಪ್ರಭಾವಗಳಾವುವು? ಅದರ ಪ್ರಾರಂಭಿಕ ಬೆಳವಣಿಕೆಯನ್ನು ಕುರಿತು ಬರೆಯಿರಿ.

1.9.2 ಹೊಸಗನ್ನಡ ಸಾಹಿತ್ಯಕ್ಕೆ ಪಾಶ್ಚಾತ್ಯ ವಿದ್ವಾಂಸರು ನೀಡಿದ ಕೊಡುಗೆಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿ.

1.10 ಘಟಕದ ಸಮಾರೋಪ

ನಡುಗನ್ನಡ ಹೊಸಗನ್ನಡವನ್ನು ಸಂದಿಸುವ ಹೊತ್ತಿನಲ್ಲಿ ರೂಪಿತವಾದ ಅಥವಾ ಅಂದಿನ ಸ್ಥಿತ್ಯಂತರ ಬದುಕಿನ ಪ್ರತೀಕವಾಗಿ ಅಭಿವ್ಯಕ್ತಿಗೊಂಡ ಸಾಹಿತ್ಯ ಪರಿಸರವನ್ನು ಹೊಸಗನ್ನಡ ಅರುಣೋದಯ ಸಾಹಿತ್ಯವೆಂದು ಗುರುತಿಸಲಾಗುವುದು. ಈ ಹಿನ್ನೆಲೆಯಲ್ಲಿ ಅಂದಿನ ಅನುಭಾವಿಕವಿಗಳು, ಶಾಂತಕವಿಗಳು, ಚುರಮುರಿಶೇಷಗಿರಿರಾಯರು. ಮುದ್ರಣ ಮತ್ತು ಗ್ರಂಥೋದ್ಯಮ, ಪಶ್ಚಿಮದ ಕ್ರೈಸ್ತ ಮಿಶನರಿ ಮತ್ತು ವಿದ್ವಾಂಸರು, ಮುಮ್ಮಡಿ ಕೃಷ್ಣರಾಜ ಒಡೆಯರು ಮುಂತಾದವರು ವಹಿಸಿದ ಪಾತ್ರವು ಹೊಸಗನ್ನಡ ಅರುಣೋದಯ ಸಾಹಿತ್ಯ ದೃಷ್ಟಿಯಿಂದ ತುಂಬ ಮೌಲಿಕವಾಗಿದ್ದು, ಇದು ಆಧುನಿಕ ಕನ್ನಡಸಾಹಿತ್ಯ ಸೃಷ್ಟಿಯ ಆರಂಭದ ಬೆಳವಣಿಗೆಯಾಗಿ ಗಮನಾರ್ಹತೆ ಪಡೆದುಕೊಂಡಿದೆ. ಇದರ ಒಟ್ಟಾರೆ ಸಾರವನ್ನು ಈ ಘಟಕದ ಹಿನ್ನೆಲೆಯಲ್ಲಿ ನಾವು ಸವಿವರವಾಗಿ ಅಧ್ಯಯನ ಮಾಡಬಹುದು.

1.11 ಸ್ವಪರೀಕ್ಷಾ ಪ್ರಶ್ನೆಗಳು

1.11.1 ಹೊಸಗನ್ನಡ ಅರುಣೋದಯ ಸಾಹಿತ್ಯವೆಂದರೇನು? ಒಂದೆರಡು ಸಾಲುಗಳಲ್ಲಿ ಉತ್ತರಿಸಿ.

....

....

....

1.11.2 ನಡುಗನ್ನಡ ಸಾಹಿತ್ಯದ ಅನಂತರದ ಕಾಲ ಯಾವುದು ?

....

....

....

1.11.3 ಪ್ರೌಢ ಕಾವ್ಯ ರಚನೆ ಯಾವ ಕಾಲದಲ್ಲಿ ನಿಂತಿತು? ಹೆಸರಿಸಿ.

....

....

....

1.11.4 ಶಾಂತ ಕವಿಗಳು ರಚಿಸಿದ ಕೃತಿಗಳು ಯಾವುವು? ಹೆಸರಿಸಿ.

....

....

....

1.11.5 ಹೊಸಗನ್ನಡ ಅರುಣೋದಯ ಸಾಹಿತ್ಯ ಸೃಷ್ಟಿಯ ಕಾಲ ಯಾವುದು?

....

....

....

1.11.6 ಶಾಂತ ಕವಿಗಳ ನಿಜವಾದ ಹೆಸರೇನು?

....

....

....

1.11.7 ಹೊಸಗನ್ನಡ ಅರುಣೋದಯ ಸಾಹಿತ್ಯದ ಪ್ರಮುಖ ಲಕ್ಷಣಗಳು ತಿಳಿಸಿ.

....

....

....

1.11.8 ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದಲ್ಲಿ ಕರ್ನಾಟಕಕ್ಕೆ ಕಾಲಿಟ್ಟ ಕ್ರೈಸ್ತ ಮಿಶನರಿಗಳಾವುವು?

....

....

....

1.11.9 ಮುಮ್ಮಡಿ ಕೃಷ್ಣರಾಜರು ಮೈಸೂರಿನಲ್ಲಿ ಸ್ಥಾಪಿಸಿದ ಆಂಗ್ಲಶಾಲೆ ಯಾವುದು ? ಅದು ಯಾರಿಂದ ಮೆಚ್ಚಿಗೆ ಪಡೆಯಿತು. ಹೆಸರಿಸಿ.

....

....

....

1.11.10 ಹೊ.ಗ.ಸಾಹಿತ್ಯದ ಹಿನ್ನೆಲೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಸುಧಾರಕ ಚಿಂತರಕರು ಯಾರು?

....

....

....

1.11.11 ಜಾನ್ ಮೆಕ್ಕರೆಲ್‌ನ ಕೃತಿ ಯಾವುದು ?

....

....

....

1.11.12 1967ರ ಕಾಯಿದೆ ಯಾವುದು ? ಅದನ್ನು ಯಾರು ಜಾರಿಗೆ ತಂದರು, ಹೆಸರಿಸಿ.

....

....

....

1.11.13 ಹೊಸಗನ್ನಡ ಅರುಣೋದಯ ಸಾಹಿತ್ಯದ ಹಿನ್ನೆಲೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಖಾಸಗಿ ಪ್ರೆಸ್‌ಗಳು ಯಾವುವು ?

....

....

....

1.11.14 ಗೌರ್‍ನರ್ ಮನ್ರೋ ಮತ್ತು ಎಲ್.ಫಿನ್.ಸ್ಟನ್‌ರು ಸ್ಥಾಪಿಸದ ಏಜ್ಯುಕೇಷನ್ ಸೊಸೈಟಿಗಳು ಯಾವುವು ?

....

....

....

1.11.15 "ಸೆಮಿನರಿ" ಎಂದರೇನು? ಅದರ ಬೋಧನೆಯ ಮಾಧ್ಯಮ ಯಾವುದು ? ಹೆಸರಿಸಿ.

....

....

....

1.11.16 "ರಾಜಾಸ್ಕೂಲ್"ನ್ನು ಸ್ಥಾಪಿಸಿದವರು ಯಾರು ? ಅದು ಯಾರಿಂದ ಮೆಚ್ಚಿಗೆ ಪಡೆಯಿತು. ಹೆಸರಿಸಿ.

....

....

....

1.11.17 "ಕ್ಯಾಥೋಲಿಕ್" ಪ್ರೆಸ್‌ನ್ನು ಸ್ಥಾಪಿಸಿದವರು ಯಾರು ? ಅದರಿಂದ ಪ್ರಕಟಕವಾದ ಕನ್ನಡ ಕೃತಿಗಳನ್ನು ಹೆಸರಿಸಿ.

....

....

....

1.11.18 "ರೀವ್‌ಕೋಶ"ದ ಮತ್ತೊಂದು ಹೆಸರು ಯಾವುದು ?

....

....

....

1.11.19 ರೀಡ್‌ನು ಮೂರು ಭಾಷೆಗಳಲ್ಲಿ ಅನುವಾದಿಸಿದ ಕೃತಿ ಯಾವುದು ? ಹೆಸರಿಸಿ.

....

....

....

1.11.20 "ಅರುಣೋದಯ" ಪತ್ರಿಕೆಯನ್ನು ಪ್ರಕಟಿಸಿದವರು ಯಾರು ?

....

....

....

1.11.21 "ಕನ್ನಡ ಕಥಾ ಸಂಗ್ರಹ" ಕೃತಿಯನ್ನು ಪ್ರಕಟಿಸಿದವರು ಯಾರು ?

....

....

....

1.11.22 ಹರ್ಮನ್ ಮೊಗ್ಲಿಂಗ್ ಸಂಪಾದಿಸಿದ ಪತ್ರಿಕೆಗಳು ಯಾವುವು ? ಹೆಸರಿಸಿ.

....

....

....

1.11.23 ಬನಿಯನ್‌ನ " Piligrims progress"ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದವರು ಯಾರು?

....

....

....

1.11.24 "ಶಬ್ದ ಮಣಿ ದರ್ಪಣ"ವನ್ನು ಶಾಸ್ತ್ರೀಯವಾಗಿ ಸಂಪಾಧಿಸಿ ಪ್ರಕಟಿಸಿದ ಆಂಗ್ಲಪ್ರಸಿದ್ಧ ಮಿಶನರಿ ಯಾರು ?

....

....

....

1.11.25 "ಕನ್ನಡ ಇಂಗ್ಲೀಷ್ ನಿಘಂಟು" ಕೃತಿ ಯಾರು? ಅದು ಮುಂದೆ ಯಾವ ಪದವಿಗೆ ಅರ್ಹವಾಯಿತು, ಹೆಸರಿಸಿ.

....

....

....

1.11.26 ಮುಮ್ಮಡಿ ಕೃಷ್ಣರಾಜರು ಬರೆದ ಕೃತಿಗಳಾವುವು? ಹೆಸರಿಸಿ.

....

....

....

1.12 ಸ್ವಪರೀಕ್ಷಾ ಪ್ರಶ್ನೆಗಳಿಗೆ ಉತ್ತರ

1.12.1 ನಡುಗನ್ನ ಹೊಸಗನ್ನಡ ಸಾಹಿತ್ಯವನ್ನು ಸಂಧಿಸುವ ಸಂಕ್ರಮಣ ಕಾಲದ ಸಾಹಿತ್ಯವನ್ನು ಅಥವಾ ಹೊಸಗನ್ನಡ ಸಾಹಿತ್ಯ ಸೃಷ್ಟಿಗೆ ಪೂರ್ವ ಸಿದ್ಧತೆಯ ಪೀಠಿಕೆಯ ರೂಪದಲ್ಲಿ ಮೂಡಿದ ಸಾಹಿತ್ಯ ಪರಿಸರವನ್ನು ಹೊ.ಗ.ಅರುಣೋದಯ ಸಾಹಿತ್ಯವೆಂದು ಕರೆಯುತ್ತೇವೆ.

1.12.2 "ಹೊ.ಗ. ಅರುಣೋದಯ ಸಾಹಿತ್ಯ" ವೆಂದು ಕರೆಯುತ್ತೇವೆ.

1.12.3 ಚಿಕ್ಕದೇವರಾಜ ಒಡೆಯರ ಕಾಲದ ಹೊತ್ತಿಗೆ ಪ್ರೌಢಕಾವ್ಯ ರಚನೆ ನಿಂತಿತು.

1.12.4 ಕಾಳಿದಾಸನ "ಶಾಕುಂತಲ", ಭವಭೂತಿಯ "ಉತ್ತರಕುಮಾರ ಚರಿತೆ" ಮೊದಲಾದವು ಗಮನಾರ್ಹ.

1.12.5 1750ರಿಂದ 1890ರ ನಡುವಿನ ಕಾಲವಾಗಿದೆ.

1.12.6 ಭಾಷಾಂತರ, ಅನುವಾದ, ಟೀಕೆ, ರೂಪಾಂತರ, ರಾಷ್ಟ್ರೀಯಪ್ರಜ್ಞೆ, ಆಧುನಿಕತೆ, ವೈಜ್ಞಾನಿಕತೆ, ವೈಚಾರಿಕತೆಯ ಮೊದಲಾದ ಲಕ್ಷಣಗಳನ್ನು ಹೊಂದಿದೆ.

1.12.7 ಮುಂದಿನ ಎಲ್ಲ ಪ್ರಶ್ನೆಗಳಿಗೂ ಉತ್ತರಗಳನ್ನು ಘಟಕದಿಂದ ನೀವುಗಳೇ ಹುಡುಕಿಕೊಳ್ಳಲು ಪ್ರಯತ್ನಿಸಿ.

1.13 ಘಟಕದ ಓದುವಿಗೆ ಸಹಾಯಕವಾಗುವ ಗ್ರಂಥಗಳು

1.13.1 ಕನ್ನಡ ಸಾಹಿತ್ಯ ಚರಿತ್ರೆ - ರಂ. ಶ್ರೀ. ಮುಗಳಿ
1.13.2 ಕನ್ನಡ ಸಾಹಿತ್ಯದ ಇತಿಹಾಸ : ರಂ.ಶ್ರೀ. ಮುಗಳಿ
1.13.3 ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ -6-ಬೆಂಗಳೂರು ವಿಶ್ವವಿದ್ಯಾನಿಲಯ.
1.13.4 ಕರ್ನಾಟಕ ಕವಿ ಚರಿತೆ : ರಾ. ನರಸಿಂಹಾಚಾರ್ಯ
1.13.5 ಹೊಸಗನ್ನಡ ಅರುಣೋದಯ : ಡಾ. ಶ್ರೀನಿವಾಸ ಹಾವನೂರು.
1.13.6 ಕನ್ನಡ ಸಾಹಿತ್ಯ ಚರಿತ್ರೆಯ ಘಟ್ಟಗಳು : ಡಾ. ಎಂ.ಎಸ್.ಹಿರೇಮಠ.
1.13.7 ಸಾಮಾನ್ಯನ ಸಾಹಿತ್ಯ ಚರಿತ್ರೆ ಸಂಪುಟ 1 ರಿಂದ 10, ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.
1.13.8 ಹೊಸಗನ್ನಡ ಸಾಹಿತ್ಯ : ಶೇಷಗಿರಿರಾಯ.

ಟಿಪ್ಪಣಿಗಳು

ಸಂಚಿಕೆ - 4

ಕನ್ನಡ ಸಾಹಿತ್ಯ ಚರಿತ್ರೆ - ಆಧುನಿಕ ಕನ್ನಡ ಸಾಹಿತ್ಯ

ಘಟಕ - 2

ಹೊಸಗನ್ನಡ ಅರುಣೋದಯ : ಭಾಗ - ೨

ಪರಿವಿಡಿ :

2.11 ವಿದ್ಯಾವರ್ಧಕ ಸಂಘದ ಪಾತ್ರ

2.12 ಹೊಸಗನ್ನಡ ಸಾಹಿತ್ಯದಲ್ಲಿ ಕೆಂಪುನಾರಾಯಣನ ಪಾತ್ರ

2.13 ಹೊಸಗನ್ನಡ ಸಾಹಿತ್ಯದಲ್ಲಿ ಮುದ್ದಣ್ಣ ಕವಿಯ ಪಾತ್ರ

2.14 ಸ್ವಪರೀಕ್ಷಾ ಪ್ರಶ್ನೆಗಳು

2.15 ಘಟಕದ ಸಾರಾಂಶ

2.16 ಅಭ್ಯಾಸ ಪ್ರಶ್ನೆಗಳು

2.17 ಸ್ವಪರೀಕ್ಷಾ ಪ್ರಶ್ನೆಗಳಿಗೆ ಉತ್ತರ

2.18 ಘಟಕದ ಅಭ್ಯಾಸಕ್ಕೆ ಉಪಯುಕ್ತ ಗ್ರಂಥಗಳು

2.0 ಉದ್ದೇಶ

- ಪೀಠಿಕೆಯ ಹಿನ್ನೆಲೆಯಲ್ಲಿ ಘಟಕದ ಸ್ವರೂಪ ಮತ್ತು ಮಹತ್ವವನ್ನು ಅರಿಯುವಿರಿ.
- ಹೊಸಗನ್ನಡ ಅರುಣೋದಯ ಸಾಹಿತ್ಯದ ಹಿನ್ನೆಲೆಯಲ್ಲಿ ಧಾರ್ಮಿಕ ವಾಙ್ಮಯಕಾರರ ಮೌಲ್ಯಗಳನ್ನು ಅರಿಯುವಿರಿ.
- ಹೊಸಗನ್ನಡ ಸಾಹಿತ್ಯ ಉದಯದ ಹಿನ್ನೆಲೆ ಬಂದ ಕವಯಿತ್ರಿಯರ ಪಾತ್ರವನ್ನು ಕುರಿತು ತಿಳಿಯುವಿರಿ.
- ಹೊಸಗನ್ನಡ ಸಂವೇದನೆಯ ಹಿನ್ನೆಲೆಯಲ್ಲಿ ಯಕ್ಷಗಾನ ಕವಿಗಳ ಮಹತ್ವವನ್ನು ಕುರಿತು ಗ್ರಹಿಸುವಿರಿ.
- ಹೊಸಗನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ಪ್ರಾತಿನಿಧಿಕ ಬರೆಹಗಾರರು ವಹಿಸಿದ ಪಾತ್ರವೇನೆಂಬುದನ್ನು ಗಮನಿಸುವಿರಿ.
- ಸಾಂಪ್ರದಾಯಿಕ ಮತ್ತು ಹೊಸದೃಷ್ಟಿಯ ಗದ್ಯಕಾರರ ಮೌಲ್ಯಗಳನ್ನು ಕುರಿತು ಅರಿಯುವಿರಿ.
- ಹೊಸಗನ್ನಡಸಾಹಿತ್ಯ ಹಿನ್ನೆಲೆಯಲ್ಲಿ ಕೆಂಪುನಾರಾಯಣ ಮತ್ತು ಮುದ್ದಣ್ಣರು ವಹಿಸಿದ ಪಾತ್ರವನ್ನು ಕುರಿತು ತಿಳಿಯುವಿರಿ
- ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ವಿದ್ಯಾವರ್ಧಕ ಸಂಘವು ವಹಿಸುವುದರಿಂದ ಪಾತ್ರವನ್ನು ಕುರಿತು ತಿಳಿಯುವಿರಿ.
- ಸ್ವಪರೀಕ್ಷಾ ಪ್ರಶ್ನೆಗಳನ್ನು ಗಮನಿಸುವಿರಿ
- ಘಟಕದ ಸಾರಾಂಶವನ್ನು ಗ್ರಹಿಸುವಿರಿ.
- ಅಭ್ಯಾಸ ಪ್ರಶ್ನೆಗಳನ್ನು ಗಮನಿಸುವಿರಿ.
- ಸ್ವಪರೀಕ್ಷಾ ಪ್ರಶ್ನೆಗಳ ಉತ್ತರಗಳನ್ನು ತಿಳಿಯುವಿರಿ.
- ಘಟಕಕ್ಕೆ ಉಪಯುಕ್ತವಾದ ಅಭ್ಯಾಸ ಗ್ರಂಥಗಳನ್ನು ಗಮನಿಸುವಿರಿ.

2.1 ಪೀಠಿಕೆ

ನೀವು ಈಗಾಗಲೇ ಹಿಂದಿನ ಘಟಕದಿಂದ ಹೊಸಗನ್ನಡ ಅರುಣೋದಯ ಸಾಹಿತ್ಯದ ಆರಂಭಿಕ ಘಟ್ಟದ ಬೆಳವಣಿಗೆಯನ್ನು ಕುರಿತು ತಿಳಿದು ಕೊಂಡಿದ್ದೀರಿ. ಇನ್ನು ಪ್ರಸ್ತುತ ಘಟಕದ ಅಭ್ಯಾಸದಲ್ಲಿ ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ (1850 - 1825)ಕವಿಗಳು ಮತ್ತು ಕನ್ನಡ ಸಾಂಸ್ಥಿಕ ಸೇವಾ ಸಂಸ್ಥೆಗಳು ಆಗಿನ ಪಶ್ಚಿಮದ ದಟ್ಟ ಪ್ರಭಾವಗಳಿದ್ದಾಗಿಯೂ ಪರಂಪರೆಯ ಮೌಲ್ಯಗಳನ್ನು ಆಧುನಿಕ ಸಂವೇದನೆಯ ಹಿನ್ನೆಲೆಯಲ್ಲಿ ಮೈಗೂಡಿಸಿ ಕೊಳ್ಳುವ ಮೂಲಕ ಗದ್ಯ -ಪದ್ಯ ಸಂಮಿಶ್ರವಾದ ಹೊಚ್ಚ ಹೊಸ ಸಾಹಿತ್ಯ ಚಳುವಳಿಯನ್ನು ಪ್ರಾರಂಭಿಸಿದರು ಪ್ರಕಟಿಸಿದರು. ಅವರಲ್ಲಿ ಜೈನ, ವೀರಶೈವ, ದ್ವೈತ ಮತ್ತು ಅದ್ವೈತಿಗಳು, ಸಾಹಿತಿಗಳು, ಕೆಂಪುನಾರಾಯಣ, ಮುದ್ದಣ್ಣ, ಕವಯತ್ರಿಯರು, ಯಕ್ಷಗಾನಕವಿಗಳು, ಚಾಮರಾಜ ಒಡೆಯರು ಮತ್ತು ಅವರ ಆಸ್ಥಾನದ ಕವಿ ಮತ್ತು ನಾಟಕಕಾರರು. ಹೊಸ ದೃಷ್ಟಿಯ ಗದ್ಯಕಾರರು, ಪಶ್ಚಿಮ ಕರಾವಳಿಯ ಲೇಖಕರು, ಮುಂಬಯಿನ ಪ್ರಮುಖ ಸುಧಾರಣವಾದಿಗಳು ಮತ್ತು ನಾಟಕಕಾರರು ಹಾಗೂ ವಿದ್ಯಾವರ್ಧಕ ಸಂಘ ಮುಂತಾದ ಪ್ರಮುಖರು

ತುಂಬ ಗಮನಾರ್ಹರು . ಇವರ ಒಟ್ಟಾರೆ ಕೊಡುಗೆಯು ಹೊಸಗನ್ನಡ ಅರುಣೋದ ಸಾಹಿತ್ಯದ ಎರಡನೆಯ ಹಂತದ ಈ ಘಟ್ಟದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಬೆಳಸು ಸಾಹಿತ್ಯಪರಂಪರೆಯ ಸಾಹಿತ್ಯ ಸಂಬಂದೊಂದಿಗೆ ಹೊಸಗನ್ನಡ ಸಾಹಿತ್ಯಕ್ಕೆ ಭದ್ರಬುನಾದಿಯನ್ನು ಹಾಕಿದ್ದನ್ನು ಈ ಘಟಕದಿಂದ ತಿಳಿಯಬಹುದು.

2.2 ಧಾರ್ಮಿಕ ವಾಙ್ಮಯಕಾರರು :

ಪಾಶ್ಚಾತ್ಯ ಪ್ರಭಾವ, ಆಧುನಿಕವಾದ ಹೊಸ ವಿಚಾರಗಳ ಬಿರುಸಿನ ಪ್ರಣಾಳಿಕೆಯ ನಡುವೆಯೂ ಜೈನ, ವೀರಶೈವ, ಅದ್ವೈತಿಗಳು, ರಾಮಾನುಜ ಮತ್ತು ಮಾಧ್ವರು ಪರಂಪರಾಗತ ಮೌಲ್ಯಗಳನ್ನು ಪುನರ್‌ಮೌಲ್ಯಕರಿಸುವ ಜೊತೆಗೇ ಹೊಸಗನ್ನಡ ಸಾಹಿತ್ಯದ ಭದ್ರ ಬುನಾದಿಗೆ ಪೂರಕವಾಗಿ ಶ್ರಮಿಸಿದರೆಂದು ನಾವಿಂದು ಮನಗಾಣಬಹುದು. ಅದನ್ನು ಅವರು ತಂತಮ್ಮ ಸೃಜನಶೀಲ ಕೃತಿಗಳ ಮೂಲಕ ಪ್ರಕಟಿಸಿದ್ದಾರೆ. ಅದರ ಒಂದು ಸಂಕ್ಷಿಪ್ತ ನೋಟವೊಂದನ್ನು ಮುಂದಿನ ಅಂಶಗಳಿಂದ ನಾವು ತಿಳಿಯಬಹುದು.

2.2.1 ಹೊಸಗನ್ನಡ ಸಾಹಿತ್ಯ ಹಿನ್ನೆಲೆಯಲ್ಲಿ ಜೈನರ ಪಾತ್ರ : ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಒಂದು ಕಾಲಕ್ಕೆ ವೈಭವದ ಶಿಖರದಲ್ಲಿದ್ದ ಜೈನ್ಯ ಸಾಹಿತ್ಯವು ಕ್ರಮೇಣ ಇಳಿಮುಖವಾಗುತ್ತ ಬಂದಿತು. ಆದರೆ ಹತ್ತೊಂಬತ್ತನೆಯ ಶತಮಾನದ ಜೈನ ಸಾಹಿತಿಗಳು ಆಧುನಿಕ ಸಂವೇದನೆಯಲ್ಲಿ ಜಿನಧರ್ಮಬದ್ಧವಾಗಿದ್ದರೂ ಸೃಜನಾತ್ಮಕವಾಗಿ ಹೊಸಗನ್ನಡ ಸಾಹಿತ್ಯಕ್ಕೆ ತಮ್ಮದೇ ಆದಂತಹ ಮಹತ್ವದ ಕೊಡುಗೆಯನ್ನು ನೀಡಿರುವುದನ್ನು ನಾವಿಲ್ಲಿ ಗುರುತಿಸುವುದು ಅವಶ್ಯಕ. ಅವರಲ್ಲಿ ಬ್ರಹ್ಮಣಾಂಕ, ಚಂದ್ರಸಾಗರ, ಚಂದ್ರಸಾಗರವರ್ಣಿ, ಪದ್ಮರಾಜಪಂಡಿತ ಮೊದಲಾದ ಪ್ರಮುಖರು ತುಂಬ ಗಮನಾರ್ಹರರು.

ಬ್ರಹ್ಮಣಾಂಕ : ಈತನು ಹತ್ತೊಂಬತ್ತನೆಯ ಶತಮಾನದ ಒಬ್ಬ ಪ್ರಮುಖ ಜೈನ ಕವಿಯಾಗಿದ್ದು. "ಜಿನ ಭಾರತ" ಮತ್ತು "ಕಂದರ್ಪದೇವ ಕೊರವಂಜಿ" ಎಂಬಿತ್ಯಾದಿ ಪ್ರಮುಖ ಕೃತಿಗಳನ್ನು ರಚಿಸಿದ್ದು. ಅದರಲ್ಲಿ ಎರಡನೆಯದು ಯಕ್ಷಗಾನ ರೂಪದ ಕೃತಿಯಾಗಿದ್ದು. ಆತನ ಈ ಕೃತಿಗಳು ಪರಂಪರೆ ಮತ್ತು ಆಧುನಿಕ ಸಂವೇದನೆಯ ದೃಷ್ಟಿಯಿಂದ ಮೂಡಿದ ಮಹತ್ವದ ಕೃತಿಗಳಾಗಿದ್ದು ತುಂಬ ಗಮನಾರ್ಹತೆ ಪಡೆದುಕೊಂಡಿದೆ.

ಚಂದ್ರಸಾಗರ ವರ್ಣಿ : ಈತನು ಕೂಡಾ ಹತ್ತೊಂಬತ್ತನೆಯ ಶತಮಾನದ ಒಬ್ಬ ಪ್ರಮುಖ ಜೈನಕವಿ. "ಧರ್ಮಪರೀಕ್ಷೆ", "ಜಿನಭಕ್ತಿಸಾರ", "ಪರಶುರಾಮ ಭಾರತ", ಹಾಗೂ "ಹೀಮ ಶೀತಳನ ಕಥೆ", "ಕದಂಬ ಪುರಾಣ" ಮೊದಲಾದ ಪ್ರಮುಖ ಕೃತಿಗಳನ್ನು ಬರೆದಿದ್ದು. ಅವುಗಳು ಪರಂಪರೆ ಮತ್ತು ಆಧುನಿಕಗತೆ, ಐತಿಹಾಸಿಕತೆ ಮತ್ತು ಬ್ರಿಟೀಷ್ ಸಾಮ್ರಾಜ್ಯ ನಡುವೆ ಸಂಘರ್ಷಕ್ಕೊಳಗಾದ ಬದುಕಿನ ಬಗೆಗೆ ಬೆಳಕನ್ನು ಚೆಲ್ಲುವುವು. ಅಲ್ಲದೆ ಆ ಆತನ ಎಲ್ಲ ಕೃತಿಗಳಿಗೂ ಗದ್ಯ -ಪದ್ಯ ಮಾದರಿಯ ಬಂಧವನ್ನೊಳಗೊಂಡಿದ್ದು, ಆಧುನಿಕ ಕನ್ನಡ ಸಾಹಿತ್ಯಕ್ಕೆ ಭದ್ರಬುನಾದಿಯನ್ನು ಹಾಕಿಕೊಟ್ಟ ಪ್ರಮುಖ ಕವಿಗಳಲ್ಲಿ ಒಬ್ಬನಾಗಿ ಗಮನಾರ್ಹ.

ಚಂದ್ರಸಾಗರ ವರ್ಣಿ : ಈತನು ಸಹ ೧೯ನೆಯ ಶತಮಾನದ ಆಧುನಿಕ ಆದ್ಯರಲ್ಲಿ ಒಬ್ಬನಾಗಿದ್ದು. "ಮುಲ್ಲಾಶಾಸ್ತ್ರ"ಎಂಬ ಒಂದು ಮಹತ್ವದ ಕೃತಿಯನ್ನು ಬರೆದಿದ್ದು, ಅದು ಇಂದ್ರನಿಂದ ಅಪಮಾನಿತನಾದ ಪಾರ್ಶ್ವಭಟ್ಟಾರಕನ ಕಥೆಯಾಗಿದ್ದರೂ, ಬಸದಿಯು ಮಸೀದಿಯ ರೂಪ ತಾಳಿದ ಕಥೆಯ ಉಲ್ಲೇಖಗಳಿಂದ ಆಧುನಿಕ ಸಂವೇದನೆಯ ಹಿನ್ನಲೆಯಲ್ಲಿ ಒಂದು ಗಮನಾರ್ಹ ಕೃತಿಯಾಗಿದ್ದು ಗಮನಾರ್ಹತೆ ಪಡೆದುಕೊಂಡಿದೆ.

2.2.2 ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ವೀರಶೈವ ಕವಿಗಳ ಪಾತ್ರ : ನಡುಗನ್ನಡ ಹೊಸಗನ್ನಡವನ್ನು ಸಂದಿಸುವ ಸಂದಿಕಾಲದಲ್ಲಿ ವೀರಶೈವಕವಿಗಳು ಕೂಡ ಶೈವ ಧರ್ಮನಿಮಿತ್ತ ಅಟವೀಶ್ವರ

ಸ್ವಾಮಿಗಳು, ಲಿಂಗನಾಯ್ಕನ ಹಳ್ಳಿಯ ವಿರಕ್ತ ಮಠದ ಚನ್ನವೀರಸ್ವಾಮಿಗಳು, ಹಾನಗಲ್ಲಿನ ವಿರಕ್ತ ಮಠದ ಕುಮಾರ ಪ್ರಭುಸ್ವಾಮಿಗಳು, ಬಾಲಲೀಲಾ ಮಹಂತಸ್ವಾಮಿಗಳು, ನಾಗಭೂಷಣ ಘನ ಮಠದಾರ್ಯ ಇನ್ನು ಮೊದಲಾದ ಪ್ರಮುಖರು ಲೌಕಿಕವಾದ ಬದುಕಿನ ವಿಚಾರಗಳನ್ನು ಆಧ್ಯಾತ್ಮಿಕ ಸಂವೇಧನೆಯ ಹಿನ್ನೆಲೆಯಲ್ಲಿ ಕೃತಿಗಳನ್ನು ಬರೆದು ಪ್ರಕಟಿಸುತ್ತಿದ್ದರು. ಅವುಗಳಲ್ಲಿ "ಸಿರಿಯಾಳ", "ಚೋರಬಸವ ಚರಿತ್ರೆ", "ಬಿಕ್ಷುಕ ಮಹೇಶ ವಿಲಾಸ", "ಕುಮಾರೇಶ್ವರ ಪ್ರಹಾರಿ", "ಕೈವಲ್ಯದರ್ಪಣ", "ಭಕ್ತಿ ಸುಧಾಸಾರ", "ಕೃಷಿಜ್ಞಾನದೀಪಿಕೆ" ಮೊದಲಾದವು ತುಂಬ ಪ್ರಮುಖ ಕೃತಿಗಳಾಗಿವೆ. ಈ ಹಿನ್ನೆಲೆಯಲ್ಲಿ ಭಾಷೆಯನ್ನು ಜಡವಾಗಿಸದೆ, ಆಧುನಿಕ ಗದ್ಯ-ಪದ್ಯ ಸಂಮಿಶ್ರ ಲಯದೊಂದಿಗೆ ವಸ್ತುವನ್ನು ಅಭಿವ್ಯಕ್ತಿಗೊಳಿಸುತ್ತಿದ್ದರು. ಈ ದೃಷ್ಟಿಯಿಂದ ಆಧುನಿಕ ಅರುಣೋದಯ ಸಾಹಿತ್ಯದ ಹಿನ್ನೆಲೆಯಲ್ಲಿ ಇವು ತುಂಬ ಗಮನಾರ್ಹವೆಂದು ಗುರುತಿಸಬಹುದು.

2.2.3 ಹೊಸಗನ್ನಡ ಸಾಹಿತ್ಯದ ಹಿನ್ನಲೆಯಲ್ಲಿ ಅದ್ವೈತಿ ಸಾಹಿತಿಗಳ ಪಾತ್ರ : ಇವರು ಕೂಡ ವೀರಶೈವರಂತೆ ಶಂಕರ, ಮಾಧ್ವ, ರಾಮಾನುಜಚಾರ್ಯರಿಂದ ಉತ್ತುಂಗಶಿಖರವನ್ನು ಮುಟ್ಟಿ ಇಳಿಮುಖವನ್ನು ಕಂಡು ಅವರ ಎಳೆಯು ೧೭ನೆಯ ಶತಮಾನದವರೆಗೂ ಜೀವಂತಿಕೆಯಿಂದ ಕೂಡಿತ್ತು. ಈ ಅವಧಿಯಲ್ಲಿ ಸಚ್ಚಿದಾನಂದ, ಬ್ರಹ್ಮಾನಂದ, ನಿಜಾನಂದ, ಚಿದಾನಂದರಿಂದ ಪುನಃ ಮೊಳೆತು ತುಂಬ ಮಹತ್ವದ ಕೃತಿಗಳನ್ನು ರಚಿಸಿದ್ದು ಗಮನಾರ್ಹ. ಅಂದರೆ ಅದ್ವೈತದ ಸಂವೇದನೆಯ ಹಿನ್ನೆಲೆಯಲ್ಲಿ ಜೀವನ ವಿವೇಕವನ್ನು ಹೇಳುವ ತುಂಬ ಪ್ರಮುಖವಾದ ಹಾಡುಗಳನ್ನು ಅವರು ರಚಿಸಿದರು. ಅಲ್ಲದೆ ಭಗವದ್ಗೀತೆಯನ್ನೂ ಸುಲಭ ಶೈಲಿಯಲ್ಲಿ ಕನ್ನಡೀಕರಿಸಿದರು.

ಹಾಗೆಯೆ ಈ ಅವಧಿಯಲ್ಲೇ ಶಿಶುನಾಳ ಶರೀಫ ಸಾಹೇಬರು (1819-1891) ಕರ್ನಾಟಕದ ಕಬೀರರೆಂಬ ಹೆಗ್ಗಳಿಕೆ ಪಾತ್ರರಾಗಿದ್ದು. ಇವರು ಬ್ರಾಹ್ಮಣ ಗುರು ಗೋವಿಂದಭಟ್ಟನೆಂಬ ಸಿದ್ಧ ಪುರುಷನಿಂದ ದೀಕ್ಷೆ ಪಡೆದು ಅದ್ವೈತದ ಹಿನ್ನೆಲೆಯಲ್ಲಿ ಅನುಭವ ಸಾಹಿತ್ಯವನ್ನು ರಚಿಸಿದರು. ಜನಪದರ ಜೀವನ ಮರ್ಮವನ್ನು ಅರಿತಿದ್ದ ಷರೀಫರು ಜನಜೀವನವನ್ನು ಉದ್ದೇಶಿಸಿ ಹಾಡುಕಟ್ಟಿದರು. ಇದರಲ್ಲಿ ಅವರ ಸ್ವಂತದ ಅನುಭಾವಕ್ಕೆ ಹತ್ತು ಊರುಗಳ ಮಣ್ಣಿನ ಬಣ್ಣವಿದೆ. ಭಾಷೆಯಂತೆ ಭೌತಿಕ ಅನುಭವವೂ ಅವರ ಕಾವ್ಯಾಭಿವ್ಯಕ್ತಿಯ ಇಂಬಾಗಿದ್ದು, "ಸೋರುತಿಹುದು ಮನಿಯ ಮಾಳಿಗೆ", "ಹಾವು ತುಳಿದೇನೆ ಮಾನಿನಿ", "ಅಳಬ್ಯಾಡಾ ತಂಗೀ ಅಳಬ್ಯಾಡಾ"ಮೊದಲಾದವು ಅವರ ಸ್ವಾನುಭವದ ಭಾಷೆಯೊಂದಿಗೇ ಸ್ವಂತ ಅನುಭವದ ಪ್ರಾದೇಶಿಕತೆಯನ್ನು ಕಟ್ಟಿಕೊಡುವ ರೀತಿ ತುಂಬ ಮಹತ್ವದ್ದೆಂದು ಗುರುತಿಸಬಹುದು.

ಶರೀಫರ ಲೌಕಿಕದ ಗುರಿ ಪಾರಲೌಕಿಕವಾಗಿದ್ದರೂ ಅದು ಲೌಕಿಕ ತ್ಯಾಜ್ಯವೇನಲ್ಲ. ಅದು ತ್ಯಾಜ್ಯವಾಗುವುದು ಅನಿವಾರ್ಯವಾಗಿದ್ದರೂ ಅದು ಪ್ರಿಯವೇನಲ್ಲ. ಆದುದರಿಂದ ಅವರ ಲೌಕಿಕದ ಬಗೆಗೆ ಇರುವ ಪ್ರೀತಿ ಅವರ ಉಳಿದ ಹಾಡುಗಳಲ್ಲಿಯೂ ಗಮನಾರ್ಹ. ಅಂತೆಯೆ ಅವರ ಸ್ವಾನುಭವದ ಪ್ರೀತಿ, ಆಶಯ, ಭಾಷೆಯ ಬಳಕೆ ಮುಂದಿನ ಆಧುನಿಕ ಕನ್ನಡ ಕವಿಗಳಿಗೆ ಸಾಕಷ್ಟು ದಟ್ಟಪ್ರಭಾವ ನೀಡಿವೆಂಬುದನ್ನು ಗುರುತಿಸಬಹುದು. ಒಟ್ಟಿನಲ್ಲಿ ಶರೀಫರು ಕನ್ನಡ ಅರುಣೋದಯ ಸಾಹಿತ್ಯದ ಒಬ್ಬ ಪ್ರಮುಖ ಕವಿಯಾಗಿದ್ದರೆಂಬದನ್ನು ನಾವೆಂದೂ ಮರೆಯುವಂತಿಲ್ಲ.

2.2.4 ಹೊಸಗನ್ನಡ ಸಾಹಿತ್ಯದಲ್ಲಿ ವೈಷ್ಣವ ಕವಿಗಳ ಪಾತ್ರ : ಹತ್ತೊಂಬತ್ತನೆಯ ಶತಮಾನದ ಆದಿಯಲ್ಲಿ ರಾಮಾನುಜ, ಮಾಧ್ವರ ಅನುಯಾಯಿಗಳು ಸ್ವಮತೀಯ ಸಾಹಿತ್ಯ ರಚಿಸುವ ಬದಲು ಭಾಗವತಾದಿ ಪುರಾಣಗಳಿಂದ ಆಯ್ದು ವಿವಿಧ ಆಖ್ಯಾಯಿಕೆಗಳನ್ನು ಕುರಿತು ಆಧುನಿಕ ಸಂವೇದನೆಯಿಂದ ಕವನ ಕಟ್ಟಿಕೊಟ್ಟಿರುವುದು ಗಮನಾರ್ಹ. ಈ ಹಿನ್ನೆಲೆಯಲ್ಲಿ ಅವರು ಶ್ರೀಕೃಷ್ಣನ ಚರಿತೆಯನ್ನು ಕುರಿತು ಎಷ್ಟು ಸಲ ಹಾಡಿದರೂ ತಣಿಯರು. ಅವರಲ್ಲಿ ರಾ. ನರಸಿಂಹಾಚಾರ್ಯರ "ಕೃಷ್ಣಲೀಲಾಮೃತ", ವೆಂಕಟವರದಾಚಾರ್ಯರ "ಶ್ರೀ ಕೃಷ್ಣಲೀಲಾ", "ಗೋಪಿಗೀತೆ", ವೆಂಕಟೇಶ ಕವಿಯ "ರಾಮಕೊರವಂಜಿ", "ನ್ಯಾಸರತಿ ಲಕ್ಷ್ಮೀನರಸಿಂಹ", "ರಾಮಕಥಾರಂಜನ", ಅಪರಾಳ ತಮ್ಮಣ್ಣನ "ಶ್ರೀಕೃಷ್ಣ ಪಾರಿಜಾತ", ಹಾಗೆಯೆ

ಇದನ್ನು ಆದರಿಸಿ ಇತರರು ಬರೆದ "ವೆಂಕಟೇಶ ಪಾರಿಜಾತ", "ಬಿಳಿಗಿರಿರಂಗನ ಪಾರಿಜಾತ", "ಶಿವ ಪಾರಿಜಾತ", "ವೀರಭದ್ರ ಪಾರಿಜಾತ" ಮೊದಲಾದ ಪ್ರಮುಖ ಕೃತಿಗಳ ಭಾಷೆ, ಲಯ, ಗದ್ಯ-ಪದ್ಯದ ಸಂಮಿಲನತೆ, ಬದುಕಿನ ಮೌಲ್ಯಗಳು ಇನ್ನು ಮೊದಲಾದ ದೃಷ್ಟಿಯಿಂದ ಹೊಸಗನ್ನಡ ಅರುಣೋದಯ ಸಾಹಿತ್ಯದ ಹಿನ್ನೆಲೆಯಲ್ಲಿ ತುಂಬ ಗಮನಾರ್ಹರರು.

2.3 ಹೊಸಗನ್ನಡ ಅರುಣೋದಯ ಸಾಹಿತ್ಯದ ಕವಯಿತ್ರಿಯರು

ವಚನಕಾರ್ತಿಯರ ಕಾಲ ಮುಗಿದ ಬಳಿಕ ಚಿಕ್ಕದೇವರಾಜ ಒಡೆಯರ ಆಸ್ಥಾನದಲ್ಲಿ ಸಂಚಿ ಹೊನ್ನಮ್ಮ, ಶೃಂಗಾರಮ್ಮ ಕಾಣಿಸಿಕೊಂಡರು. ಅನಂತರದ ಸ್ತ್ರೀಯರು ದೇವರ ಹಾಡುಗಳನ್ನು ಕುರಿತು ಬರೆದರು. ಅವರಲ್ಲಿ ಪುರಂದರದಾಸರ ಮಗಳು, ಹೆಳವನ ಕಟ್ಟೆಗಿರಯಮ್ಮ, ಗಲಗಲಿ ಅವ್ವ ಮುಂತಾದವರು ಇಲ್ಲಿ ಗಮನಾರ್ಹರರು. ಆದರೆ ಕಾಲಕ್ರಮೇಣ ಬಂದ ಕವಯಿತ್ರಿಯರು ಸ್ತ್ರೀಯರ ಸಾತ್ವಿಕ ಮನೋಧರ್ಮಕ್ಕೆ ಪ್ರತೀಕವಾದ ಪದ್ಯಗಳನ್ನು ರಚಿಸುತ್ತಿದ್ದರೆಂಬುದು ಗಮನಾರ್ಹ ಗುರುತಿಸಬಹುದು. ಅವರಲ್ಲಿ ಸರೋಜಿನಿ ಮಹಿಷಿ (ಉತ್ತರಕನ್ನಡ), ಹಾಡಿನ ರಂಗಮ್ಮ, ಮೇಲುಕೋಟೆ ರಾಜಮ್ಮ, ಎಣ್ಣೆಹೊಳೆಕೊಪ್ಪಲಿನ ವೆಂಕಟಲಕ್ಷ್ಮಮ್ಮ ಮುಂತಾದವರು ಮೈಸೂರಿನ ಒಳಭಾಗದಲ್ಲಿ ಪದ್ಯಗಳನ್ನು ಬರೆಯುತ್ತಿದ್ದರು. ಒಟ್ಟಿನಲ್ಲಿ ದೇವರ ವಿಷಯದಲ್ಲಿ ಭಕ್ತಿಶ್ರದ್ಧೆಗಳಿರುವುದು ಸ್ತ್ರೀಯರ ಸಹಜ ಮನೋಧರ್ಮವಾಗಿದ್ದು. ಹೊಸಗರ್ನಡ ಸಾಹಿತ್ಯ ಹಿನ್ನೆಲೆಯಲ್ಲಿ ಅವರ ಕೊಡುಗೆಯು ತುಂಬ ಪ್ರಮುಖವಾದುದ್ದೆಂದು ಗುರುತಿಸಬಹುದು.

2.4 ಹೊಸಗನ್ನಡ ಸಾಹಿತ್ಯದ ಯಕ್ಷಗಾನ ಕವಿಗಳು ಪಾತ್ರ

ನದಿ ಮೂಲ ಋಷಿಮೂಲ ಹುಡುಕಬಾರದೆಂಬ ನಾಣ್ಣುಡಿಯಂತೆ ಜಾನಪದ ಮೂಲವನ್ನು ಕೂಡ ಹುಡುಕಬಾರದೆಂಬುದನ್ನು ವಿದ್ವಾಂಸರ ಅಭಿಪ್ರಾಯ. ಅಂದರೆ ಅದರ ಮೂಲ ಭೇರು ಹುಡುಕಲು ತುಂಬ ಕಷ್ಟವೆಂಬುದು ಗಮನಾರ್ಹ. ಅಂತಹ ಪ್ರಭೇದಕ್ಕೆ ಸೇರಿದ "ಯಕ್ಷಗಾನ"ವು ಒಂದು ಪ್ರಮುಖ ಪ್ರಕಾರವಾಗಿದ್ದು. ಅದು ಪೌರಾಣಿಕ ಐತಿಹಾಸಿಕ ಕಥೆಗಳನ್ನು ನಿರೂಪಿಸಲು ಒಂದು ಪ್ರಮುಖ ಸಂವಹನ ಮಾದ್ಯಮವಾಗಿದ್ದು. ಅದು ಮೊತ್ತಮೊದಲು ದಾಸ ಸಾಹಿತ್ಯ ವಾಹಿನಿಯಲ್ಲಿ ಒಂದು ಸ್ಪಷ್ಟ ಸ್ವರೂಪವನ್ನು ಪಡೆದುಕೊಂಡು ಭಕ್ತಿ, ಅಮೂರ್ತಶಕ್ತಿಗಳಿಗೆ ನುಡಿಯನ್ನು ಕೊಟ್ಟಿತು. ಅನಂತರ ಅದು ಒಂದು ಸಮೃದ್ಧ ಸಾಹಿತ್ಯ ಪ್ರಕಾರವಾಗಿ ಗಮನಾರ್ಹತೆ ಪಡೆದುಕೊಂಡಿತು. ಅವರಲ್ಲಿ ೧೯ನೆಯ ಶತಮಾನದ ವಿಷ್ಣು, ದೇವಿದಾಸ, ಮುಲ್ಕಿರಾಮಕೃಷ್ಣಯ್ಯ, ಎಣ್ಣೆಮಡಿರಾಮಕೃಷ್ಣಯ್ಯ ಗೇರೆಸೊಪ್ಪೆಶಾಂತಯ್ಯ, ಮುದ್ದಣ್ಣ ಮುಂತಾದವರು ಪ್ರಮುಖರು ಯಕ್ಷಗಾನ ಕವಿಗಳಾಗಿದ್ದು. ಅಧುನಿಕ ಕನ್ನಡದ ಆಡುನುಡಿ, ವಾಸ್ತವ ಬದುಕಿನ ಹಂಬಲ. ಆಶಯಗಳನ್ನು ಗದ್ಯ ಪದ್ಯ ಸಂಮಿಶ್ರಮಾದ್ಯಮದ ಹಿನ್ನೆಲೆಯಲ್ಲಿ ನಿರೂಪಣೆ ಅಭಿವ್ಯಕ್ತಿಗೊಳಿಸಿದ್ದಾರೆ. ಈ ದೃಷ್ಟಿಯಿಂದ ಅವರು ಹೊಸಗನ್ನಡ ಅರುಣೋದಯ ಸಾಹಿತ್ಯದ ಪ್ರಮುಖ ಕವಿಗಳೆಂದು ದಾಖಲಿಸಬಹುದು.

2.5 ಹೊಸಗನ್ನಡ ಅರುಣೋದಯ ಸಾಹಿತ್ಯದಲ್ಲಿ ಪ್ರಾತಿನಿಧಿಕ ಬರೆಹಗಾರರು

ವಿದೇಶಿ ಪ್ರಭಾವದಿಂದ ದೂರ ಉಳಿದು ಹಳೆಯ ಪರಂಪರೆಯ ಜಾಡಿನಲ್ಲಿ ಸೃಜನಶೀಲ ಸಾಹಿತ್ಯ ರಚಿಸಿದ ಕೆಲವು ಬರೆಹಗಾರರುಂಟು. ಅವರಲ್ಲಿ ಕೆಲವರು ಗದ್ಯ ಬರೆಹವನ್ನು ಮಾಡಿದ್ದರೂ ಹೊಸದೇನನ್ನೂ ಸೃಷ್ಟಿಸಲಿಲ್ಲವೆಂದು ಗುರುತಿಸಬಹುದು. ಅಂದರೆ ಈ ಬಗೆಯ ಬರವಣಿಗೆಯನ್ನು ಕೆಲವರು ಮಾತ್ರ ೧೭೯ರಿಂದ ೧೮೯೫ರವರೆಗೂ ಮುಂದುವರಿಸಿಕೊಂಡು ಬಂದಿದ್ದರೆಂಬುದು ಗಮನಾರ್ಹ. ಆದರೆ ಪಾಶ್ಚಾತ್ಯಶಿಕ್ಷಣ ಪದ್ಧತಿಯ ಪರಿಣಾಮದ ಫಲದಿಂದ ಹೊಸ ಪೀಳಿಗೆಯೊಂದು ರೂಪಗೊಳ್ಳಲು ತೊಡಗಿತು. ಹೀಗಾಗಿ ಸಾಹಿತ್ಯ ರಚನೆಯಲ್ಲಿಯೂ ಕೂಡ ಹೊಸ ವಿಚಾರವನ್ನು ತರಬೇಕೆಂದು ಹವಣಿಕೆ

ಉಂಟಾಯಿತು. ಇದು ಬೇರೆ ಭಾಷೆಗಳಲ್ಲಿಯೂ ತಲೆದೋರಿದ್ದರಿಂದ ಅದನ್ನು ಕನ್ನಡದಲ್ಲಿಯೂ ಕೊಡಬೇಕೆಂಬ ಸಹಜಾಕಾಂಕ್ಷೆಯಿಂದ ಆ ಬಗೆಯೆ ಸಾಹಿತ್ಯಗಳನ್ನು ಕೆಲವರು ತಂದರು. ಈ ದೃಷ್ಟಿಯಿಂದ ಬರೆದ ಕೆಲವು ಲೇಖಕರು ಹಳೆಯದನ್ನು ಬಿಟ್ಟುಕೊಡದೆ ಪೌರಾಣಿಕ ಕಥೆಗಳನ್ನು ವೃತ್ತಧಾಟಿಗಳನ್ನು ಹಾಗೆಯೆ ಉಳಿಸಿಕೊಂಡು ಬರೆದರು. ಆದರೆ ಅವರು ಹೊಸತನವನ್ನು ಹರಸಿಕೊಂಡು ಹೋಗುವ ಮನೋಭಾವವನ್ನು ಹೊಂದಿದ್ದರೆಂದು ತಿಳಿಯಬಹುದು. ಹಾಗಾಗಿ ನಾವು ಅವರನ್ನು ಹೊಸಗನ್ನಡ ಅರುಣೋದಯ ಸಾಹಿತ್ಯದ ಪ್ರಾತಿನಿಧಿಕ ಬರೆಹಗಾರರೆಂದು ಗುರುತಿಸುತ್ತೇವೆ. ಅವರಲ್ಲಿ ಚಾಮರಾಜ ಒಡೆಯ ಮತ್ತು ಅವರ ಆಸ್ಥಾನದ ಕವಿ, ನಾಟಕಕಾರ ಮೊದಲಾದವರು ತುಂಬ ಪ್ರಮುಖರೆಂದು ಗುರುತಿಸಲಾಗುವುದು.

2.5.1 ಚಾಮರಾಜರು (1881-1894) : ಚಾಮರಾಜರು ಮುಮ್ಮಡಿ ಕೃಷ್ಣರಾಜರಷ್ಟು ದೀರ್ಘಾವಧಿಯ ಆಳ್ವಿಕೆ ನಡೆಸದಿದ್ದರೂ, ಯೋಗತ್ಯೆಯ ದೃಷ್ಟಿಯಿಂದ ಮುಮ್ಮಡಿಯವರಷ್ಟೇ ಬುದ್ಧಿವಂತರೂ, ತೀಕ್ಷ್ಣಮತಿಗಳೂ ಆಗಿದ್ದರೆಂದು ಗುರುತಿಸಬಹುದು. ಅಂದರೆ ಅವರು ಮುಮ್ಮಡಿಯವಷ್ಟು ತೀರಾ ಪರಂಪರೆಗೆ ಅಂಟಿಕೊಳ್ಳದೆ ಹೊಸ ದೃಷ್ಟಿಯ ಧೋರಣೆಯನ್ನು ಬೆಳಸಿಕೊಂಡವರು. ಅವರು ಮುಮ್ಮಡಿಯವರಂತೆ ಸಾಹಿತ್ಯ ರಚಿಸದಿದ್ದರೂ ಅಂತಹ ವಾತಾವರಣವನ್ನು ಸೃಷ್ಟಿಯಾಗುವುದಕ್ಕೆ ಪ್ರೋತ್ಸಾಹವನ್ನುಂಟು ಮಾಡಿದ್ದರೆಂದು ತಿಳಿಯಬಹುದು. ಪ್ರಗತಿಪರ ದೃಷ್ಟಿಕೋನದಲ್ಲಿ ಪಾಶ್ಚಾತ್ಯ ಸುಧಾರಣೆಗಳನ್ನು ಬರಮಾಡಿಕೊಳ್ಳುವಲ್ಲಿ ಚಾಮರಾಜರು ಮುಮ್ಮಡಿಯವಗಿಂತ ಒಂದು ಹೆಜ್ಜೆ ಮುಂದೆ ನಡೆದಿದ್ದರೆಂಬುದು ಗಮನಾರ್ಹ.

ಚಾಮರಾಜರು ಸ್ವತಃ ಯಾವ ಗ್ರಂಥಗಳನ್ನು ಬರೆಯದಿದ್ದರೂ ಮುಮ್ಮಡಿ ಕಾಲದಲ್ಲಿ ರಚಿತವಾದ ಗ್ರಂಥಗಳ ಪ್ರಕಟಣೆಗಳಿಗೆ ಚಾಲನೆ ನೀಡಿದರು. ಅವರು ಮುಖ್ಯವಾಗಿ ಕನ್ನಡ ನಾಟಕ ರಂಗವನ್ನು ಪುನರುಜ್ಜೀವನ ಗೊಳಿಸಿದರು. ರಾಜ್ಯ ಸೂತ್ರ ವಹಿಸಿದ ಮರು ವರ್ಷವೆ "ಚಾಮರಾಜೇಂದ್ರ ಕರ್ನಾಟಕ ನಾಟಕ ಸಭೆ"ಯನ್ನು ಸ್ಥಾಪಿಸಿ ತಾವು ನೋಡಿದ್ದ ಪಾರ್ಸೀ ಮರಾಠೀ ನಾಟಕಗಳನ್ನು ಕನ್ನಡದಲ್ಲಿ ಆಡಿಸಲು ಪ್ರಯತ್ನಪಟ್ಟರು. ಅದಕ್ಕಾಗಿ ಅವರು "ಕರ್ನಾಟಕ ನಾಟಕ ನಿರ್ಮಾಪಕ" ಬಿರುದಿಗೆ ಪಾತ್ರರಾದರು. ಇದು ಹೊಸಗನ್ನಡ ಅರುಣೋದಯ ಸಾಹಿತ್ಯದ ಒಂದು ಮಹತ್ವದ ಹೆಜ್ಜೆಗುರುತಾಗಿದೆ. ಚಾಮರಾಜರ ಆಸ್ಥಾನದ ಕವಿವರ್ಮರು ಮುಮ್ಮಡಿ ಕೃಷ್ಣರಾಜರ ಆಸ್ಥಾನದ ವಿದ್ವಾಂಸರಿಗಿಂತ ಮನೋಧರ್ಮದಲ್ಲಿ ಭಿನ್ನರಾಗಿದ್ದು. ಚಾಮರಾಜರ ಆಸ್ಥಾನ ಕವಿಗಳು ತಾಯ್ನುಡಿಯಲ್ಲಿಯೆ ಸಾಹಿತ್ಯ ಬರೆಯಬೇಕೆಂಬ ಕಾಳಜಿಯನ್ನು ಹೊಂದಿದ್ದರೆಂಬುದು ಗಮನಾರ್ಹ. ಅದರಂತೆ ಆತನ ಆಸ್ಥಾನ ಕವಿಗಳು ಬರಿ ಸಂಸ್ಕೃತ ಪಂಡಿತರಾಗಿ ಉಳಿಯದೆ ಕನ್ನಡದಲ್ಲಿ ಪದ್ಯ ಮತ್ತು ನಾಟಕಗಳನ್ನು ಗ್ರಂಥಗಳನ್ನು ರಚಿಸಿದ್ದರೆಂದು ಗುರುತಿಸಬಹುದು. ಹಾಗೆಯೆ ಅವರು ಕನ್ನಡ ಅಭ್ಯಾಸವನ್ನು ವ್ಯಾಪಕ ಗೊಳಿಸಲು "ಕರ್ನಾಟಕ ಭಾಷೋಜ್ಜೀವಿನೀ ಪಾಠಶಾಲೆ"ಯನ್ನು ಆರಂಭಿಸಿದುದು ಒಂದು ಮಹತ್ವದ ಹೆಚ್ಚೆಯಾಗಿದೆ. ಈ ಕಾಲದಲ್ಲಿಯೆ ವಿದ್ಯಾರ್ಥಿನಿಯರಗೋಸ್ಕರವೇ ಹಲವು ಆಧುನಿಕ ಕನ್ನಡ ಗ್ರಂಥಗಳನ್ನು ಕೂಡ ರಚನೆಯಾದವೆಂದು ನಾವಿಂದು ಮನಗಾಣಬಹುದು.

1.5.2 ಆಸ್ಥಾನದ ಕವಿ ಮತ್ತು ನಾಟಕಕಾರರು : ಚಾಮರಾಜರ ಆಸ್ಥಾನದಲ್ಲಿ ಪರಂಪರಾಗತ ಕಾವ್ಯರಚನೆಗೆ ಹೆಚ್ಚಿನ ಮನ್ನಣೆ ನೀಡಿದ್ದರೂ ಆಧುನಿಕ ಕನ್ನಡದಲ್ಲಿ ನಾಟಕ ಬರೆಯಲು ಹೆಚ್ಚಿನ ಪ್ರೋತ್ಸಹವನ್ನು ನೀಡಿದ್ದರೆಂಬುದು ಗಮನಾರ್ಹ. ಅವರಲ್ಲಿ ಪರಕಾರ ಮಠದ ಕೃಷ್ಣಬ್ರಹ್ಮರ "ಕಲ್ಯಾಣ ದೀಪಮಂಜರಿ", ನಂಜನಗೂಡು ಸುಬ್ಬ ಶಾಸ್ತ್ರಿಗಳು "ಮೃಚ್ಛ ಕಟಿಕ" ಮತ್ತು "ಮಾಳವಿಕಾಗ್ನಿಮಿತ್ರ"ಕೃತಿಗಳನ್ನು ಸಂಸ್ಕೃತದಿಂದ ಕನ್ನಡಕ್ಕೆ ತಂದರು. ಅನಂತರ "ಶಾಕುಂತಲ", "ರತ್ನಾವಳಿ"ಗಳನ್ನು ಕನ್ನಡೀಕರಿಸಿ, ರಂಗಭೂಮಿಯತ್ತ ತಂದರು. ಇದು ಮುಂದಿನ ಸಾಹಿತ್ಯಿಕ ಬೆಳವಣಿಗೆಯಲ್ಲಿ ಸಾಮಾಜಿಕ ನಾಟಕಗಳನ್ನು ಬರೆಯಲು ವಿದ್ವಾಂಸರಲ್ಲಿ ಸ್ಫೂರ್ತಿ ತುಂಬಿತು.

ಅನಂತರ ಚಾಮರಾಜರ ಆಸ್ಥಾನದಲ್ಲಿ ಬಸಪ್ಪಶಾಸ್ತ್ರಿಗಳು ತುಂಬ ಪ್ರಮುಖ ವಿದ್ವಾಂಸರಾಗಿದ್ದು. ಆಧುನಿಕ ಸಾಹಿತ್ಯ ಲೋಕದ "ಅಭಿನವ ಕಾಳಿದಾಸ" ನೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಅವರು ಬಾಲ್ಯದಲ್ಲಿಯೆ ತಂದೆ ತಾಯಿಗಳನ್ನು ಕಳೆದುಕೊಂಡು ವಿಶೇಷತ: ಲಿಂಗರಾಜರ ಆಶ್ರಯದಲ್ಲಿ ಬೆಳೆದರು. ಅನಂತರ ಅವರು ತಮ್ಮ ಸ್ವಂತ ಪ್ರತಿಭೆಯ ಪರಿಶ್ರಮದಿಂದ ಸಾಹಿತ್ಯ-ವಿದ್ಯೆಯ ಬೆಳವಣಿಗೆಯನ್ನು ಕಂಡುಕೊಳ್ಳುವ ಮೂಲಕ ಮುಂದೆ ಬಂದರು. ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿಯೇ ಮುಮ್ಮಡಿ ಕೃಷ್ಣರಾಜರ ಅಭ್ಯುದಯ ಸಾರುವ ಸಂಸ್ಕೃತದ ದಿವ್ಯ ಚರಿತ್ರೆ ರಚಿಸುವಷ್ಟು ಪಾಂಡಿತ್ಯ ಪ್ರತಿಭೆಗಳನ್ನು ಹೊಂದಿದವರಾದ್ದು. ಜೊತೆಗೇ ವಕ್ತೃತ್ವ, ಗಮಕ ಕತೆಗಳಲ್ಲಿ ಪಾಂಡಿತ್ಯ ಹೊಂದಿದ್ದರು. ಬಸಪ್ಪ ಶಾಸ್ತ್ರಿಗಳು ಸಹಜ ಕವಿತ್ವ ಶಕ್ತಿ ಅಭಿಜಾತರಾಗಿದ್ದರೂ ನಾಟಕದ ಭಾಷಾಂತರ ಪ್ರಯೋಗದಲ್ಲಿ ಆಧುನಿಕರಾಗಿದ್ದರು. ಕಾಳಿದಾಸನ "ಅಭಿಜ್ಞಾನ ಶಾಕುಂತಲ"ನಾಟಕವನ್ನು ೧೮೮೦ರಲ್ಲಿ ಕನ್ನಡಕ್ಕೆ ತಂದು ತುಂಬ ಮಹತ್ವದ ಸ್ಥಾನವನ್ನು ಪಡೆದುಕೊಂಡರು. ಅಲ್ಲದೇ ಅವರಿಗೆ ಇಂಗ್ಲೀಷ್ ಗೊತ್ತಾಗದಿದ್ದರೂ ಷೇಕ್ಸಪಿಯರ್‌ನ ಇಂಗ್ಲೀಷ್ ನಾಟಕಗಳನ್ನು ಕೇಳಿ ತಿಳಿದುಕೊಂಡು ಕನ್ನಡಿಕರಿಸಿದ್ದು ಅವರ ಸಾಮಾರ್ಥ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಒಟ್ಟಾರೆ ಅವರ ಈ ಬಗೆಯ ಕೃಷಿಯು ಒಂದು ಹೊಸ ಮನೋಧರ್ಮ ಸೃಷ್ಟಿಗೆ ಕಾರಣವಾಗಿದ್ದು, ಅವರು ಕೂಡಾ ಒಬ್ಬ ಹೊಸಗನ್ನಡ ಅರುಣೋದಯ ಸಾಹಿತ್ಯದ ಪ್ರಮುಖ ಪ್ರಾತಿನಿಧಿಕ ನಾಟಕರಾರರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರೆಂಬುದು ಗಮನಾರ್ಹ.

1.5.3 ಚಾಮರಾಜರ ಕಾಲದ ವೃತ್ತಿರಂಗಭೂಮಿ ಮತ್ತು ಇತರ ನಾಟಕಕಾರರು : ಅರಮನೆಯಲ್ಲಿ ಉದಯಿಸಿದ ಕನ್ನಡ ನಾಟಕ ವೃತ್ತಿ ರಂಗಭೂಮಿ ಪ್ರೇರಣೆಯಿಂದ ಗುಬ್ಬಿಯ "ಶ್ರೀ ಚನ್ನ ಬಸವೇಶ್ವರ ಕೃಪಾಪೋಷಿತ ನಾಟಕ ಸಂಘ "(1811), "ಶಾಕುಂತಲ ನಾಟಕ ಸಭಾ", "ಚಾಮುಂಡೇಶ್ವರಿ ನಾಟಕ ಸಂಘ", "ರಾಜಧಾನಿ ನಾಟಕ ಮಂಡಲಿ", "ರತ್ನಾವಳಿ ನಾಟಕ ಸಭಾ"," ಶ್ರೀಕಂಠೇಶ್ವರ ನಾಟಕ ಸಭಾ", ಮೊದಲಾದ ಪ್ರಮುಖ ನಾಟಕ ಕಂಪನಿಗಳು ಬೆಳಕಿಗೆ ಬಂದವು. ಅಂತೆಯೆ ಈ ಸಂಸ್ಥೆಗಳಿಗೋಸ್ಕರ ನಾಟಕ ರಚಿಸುವ ಪರಂಪರೆಯೊಂದು ಕೂಡಾ ಸೃಷ್ಟಿಯಾಯಿತು. ಅವರಲ್ಲಿ ವೀರನಗೆರೆ ಪುಟ್ಟಣ್ಣನ "ಗಿರಿಜಾ ಕಲ್ಯಾಣ", "ಹರಿಶ್ಚಂದ್ರ", "ದ್ರೌಪದಿಯ ಸ್ವಯಂವರ" ಹಾಗೂ "ದುಶ್ಯಾಸನನ" ಮೊದಲಾದ ನಾಟಕಗಳನ್ನು ಬರೆದರು. ಎಂ.ಎಲ್.ಶ್ರೀಕಂಠೇಗೌಡರು ಒಬ್ಬ ಮಹತ್ವದ ಅನುವಾದಕರಾಗಿದ್ದು ಶೇಕ್ಸ್‌ಪಿಯರ್‌ನ ಪ್ರಮುಖ ನಾಟಕಗಳನ್ನು ಕನ್ನಡೀಕರಣ ಮಾಡಿದರು. ಅವುಗಳಲ್ಲಿ "ಮ್ಯಾಕ್‌ಬೆತ್" (ಪ್ರತಾಪರುದ್ರದೇವ) "ಮಿಡ್‌ಸಂಮರ್‌ನೈಟ್ಸ್ ಡ್ರೀಮ್" (ಪ್ರಮೀಳಾರ್ಜುನ ವಿಜಯ) ಮೊದಲಾದ ನಾಟಕಗಳು ಗಮನಾರ್ಹ. ಅನಂತರ ಆನಂತರಾವ್ ಅವರು ಕೂಡಾ ಶೇಕ್ಸ್‌ಪಿಯರ್ "ರೋಮಿಯೊ ಆ್ಯಂಡ್ ಜೂಲಿಯೆಟ್" (ರಾಮವರ್ಮ ಲೀಲಾವತಿ ಚರಿತ್ರೆ) "ಮರ್ಚೆಂಟ್ ಆಫ್ ವೆನ್ನೀಸ್' (ಪಾಂಚಾಲಿ ಪರಿಣಯ) ಮೊದಲಾದ ಪ್ರಮುಖ ಕೃತಿಗಳನ್ನು ಕನ್ನಡೀಕರಿಸಿದ್ದರು. ಒಟ್ಟಿನಲ್ಲಿ ಇನ್ನು ಮೊದಲಾದ ಪಶ್ಚಿಮದ ಪ್ರಮುಖ ನಾಟಕಗಳನ್ನು ನಮ್ಮವರು ಕನ್ನಡಕ್ಕೆ ಅನುವಾದ, ರೂಪಾಂತರ ಮತ್ತು ಭಾಷಾಂತರಗಳ ಮೂಲಕ ತಂದುಕೊಟ್ಟರು. ಆದುದರಿಂದ ಇವು ಆವರೆಗಿನ ಜಡ್ಡು ಗಟ್ಟಿದ ಕನ್ನಡ ಸಾಹಿತ್ಯಕ್ಕೆ ಚಿಕಿತ್ಸೆ ಮಾಡುವ ಮೂಲಕ ಒಂದು ಹೊಸ ಪರಂಪೆರೆಯನ್ನೇ ಸೃಷ್ಟಿಸಿದವು.

2.6 ಸಾಂಪ್ರದಾಯಿಕ ಗದ್ಯಲೇಖಕರು

ಇವರು ಹೊಸ ಶಿಕ್ಷಣ ವ್ಯವಸ್ಥೆಯ ಹಿನ್ನೆಲೆಯಲ್ಲಿ ಪರಂಪರೆಯನ್ನು ಪುನರ್‌ಸೃಷ್ಟಿಸುವ ಜೊತೆಗೇ ಆಧುನಿಕ ಕನ್ನಡ ಭಾಷೆಯನ್ನು ಕಟ್ಟುವ ಪ್ರಯತ್ನವನ್ನು ಮಾಡಿದರು. ಅವರಲ್ಲಿ ಬೇಗೂರು ಮಲ್ಲಪ್ಪ, ಎಂ. ರಾಮುಸ್ವಾಮಿಶಾಸ್ತ್ರಿ, ಕುಂಡಲಗಿರಿಚಾರ್ಯ, ದೊಡ್ಡಬೆಲೆ ನಾರಾಯಣಶಾಸ್ತ್ರಿ, ಪಿ.ಆರ್. ಕರಿಬಸವಶಾಸ್ತ್ರಿಗಳು ಪ್ರಮುಖರಾಗಿದ್ದು. ಅವರು ಕನ್ನಡ ವ್ಯಾಕರಣ, ಶಬ್ದಕೋಶಗಳನ್ನು ರಚಿಸಿದರು. ಅವರು ಇವುಗಳೊಂದಿಗೇ ಇಂಗ್ಲೀಷ್, ಸಂಸ್ಕೃತ, ಪರ್ಷಿಯನ್ ಭಾಷೆಗಳ ಸಂಪರ್ಕಗಳ ಸಂಸ್ಕಾರದಿಂದ ಕನ್ನಡದಲ್ಲಿ ಸುಲಭವೂ ಸರಳವೂ ಆದ ಸಾರ್ವತ್ರಿಕವಾದ ಕೃತಿಗಳ ಬರವಣಿಗೆಯನ್ನು ಮಾಡಿದರು.

ಹಾಗಾಗಿ ಇವರು ಕೂಡಾ ಹೊಸಗನ್ನಡ ಅರುಣೋದಯ ಸಾಹಿತ್ಯ ಸೃಷ್ಟಿಯ ಪ್ರಮುಖ ಬರೆಹಗಾರರೆಂದು ಗುರುತಿಸಬಹುದು.

2.7 ಹೊಸದೃಷ್ಟಿಯ ಗದ್ಯಕಾರರು

ಇವರು ಆಧುನಿಕ ಶಿಕ್ಷಣವನ್ನು ಪಡೆದುಕೊಂಡು ಸರಕಾರಿ ನೌಕರಿಯಲ್ಲಿದ್ದು, ಇಂಗ್ಲೀಷ್ ಭಾಷೆಯ ಜೊತೆಗೇ ತೆಲುಗು, ತಮಿಳು, ಹಿಂದೂಸ್ಥಾನಿ, ಮರಾಠಿ ಹಾಗೂ ಬಂಗಾಳಿ ಭಾಷೆಗಳನ್ನೂ ಓದಿಕೊಂಡು, ಹಿಂದಿನವರಷ್ಟು ಪ್ರವೀಣರಾಗದಿದ್ದರೂ ಅದನ್ನು ಅರಿತುಕೊಂಡವರಾಗಿದ್ದರು. ಅಂದರೆ ಅವರು ಹಳೆತು-ಹೊಸತುಗಳೆರಡನ್ನೂ ರೂಢಿಸಿಕೊಂಡ ಗದ್ಯ ಬರವಣಿಗೆಯನ್ನು ಶುರುಮಾಡಿದರು. ಅವರಲ್ಲಿ ಕೆಲವರು ಶಾಲಾ-ಕಾಲೇಜುಗಳ ಅಧ್ಯಾಪನ ವೃತ್ತಿಯವರಾಗಿದ್ದರೆ, ಇನ್ನು ಕೆಲವರು ಶಿಕ್ಷಣ ಇಲಾಖೆ, ಭಾಷಾಂತರ ಶಾಖೆ, ರೆವಿನ್ಯೂ ಇಲಾಖೆಗಳಲ್ಲಿದ್ದು ಕನ್ನಡ ವಚನ, ಲೇಖನ ಬರವಣಿಗೆಯಲ್ಲಿ ಆಸಕ್ತಿಯನ್ನು ಹೊಂದಿದವರಾಗಿದ್ದರು. ಆದರೆ ಕೆಲವರು ವಿದ್ಯಾವಂತರು ಪತ್ರಿಕೋದ್ಯಮದ ಮೂಲಕ ಕಾವ್ಯ ಧಾರವಾಹಿಯಾಗಿ ಬರೆಯುವ ಮೂಲಕ ಹೊಸಗನ್ನಡ ಸಾಹಿತ್ಯದ ಅಭಿವೃದ್ಧಿಗೆ ಶ್ರಮಿಸಿದವರಿದ್ದರು. ಹಾಗೆಯೆ ಇನ್ನು ಕೆಲವರು ಅಚ್ಚುಕೂಟ ಪ್ರಾರಂಭಿಸಿ ಆ ಮೂಲಕ ಗ್ರಂಥದ ಅಭಿವೃದ್ಧಿಗೆ ಸಾಕಷ್ಟು ಪ್ರೋತ್ಸಾಹವನ್ನು ಒದಗಿಸಿದರು. ಅವುಗಳಲ್ಲಿ "ಗ್ರ್ಯಾಜ್ಯುಯೇಟ್ ಟ್ರೈಡಿಂಗ್ ಅಸೋಸಿಯೇಷನ್" ಮತ್ತು "ಕರ್ನಾಟಕ ಗ್ರಂಥಮಾಲೆ"ಯು ತುಂಬ ಪ್ರಮುಖವಾದ ಪಾತ್ರವನ್ನೊದಗಿಸಿದವೆಂದು ಗುರುತಿಸಬಹುದು.

ಸಹೃದಯ ವಿದ್ವಾಂಸನೆಂಬ ಖ್ಯಾತಿಯನ್ನು ಗಳಿಸಿದ್ದ ಎಸ್.ಜಿ.ನರಸಿಂಹಾಚಾರ್ಯರು ಹೊಸಗನ್ನಡ ಅರುಣೋದಯ ಸಾಹಿತ್ಯದ ಕಣ್ಮಣಿಗಳಲ್ಲೊಬ್ಬರು. ಅವರ ಕಾವ್ಯಾಸಕ್ತಿಯು ಹಳೆತು-ಹೊಸತು ಎರಡರಲ್ಲಿ ಹರಿದು ಬಂದಿತು. ಅಲ್ಲದೆ ಅವರು ಸ್ವತಃ ಸಹಜ ಪ್ರತಿಭೆಯ ಕವಿಗಳೂ ಆಗಿದ್ದು. ಸಂಸ್ಕೃತದ ಕಾಳಿದಾಸ ಮತ್ತು ಇಂಗ್ಲೀಷ್‌ನ ಶೇಕ್ಸಪಿಯರ್ ನಾಟಕಗಳನ್ನು ಕನ್ನಡಿಕರಿಸಿದರು. ಹಾಗೆಯೇ ಅವರು ಇಂಗ್ಲೀಷ್‌ನಿಂದ ಭಾವಗೀತೆಗಳನ್ನು ಕೂಡಾ ಕನ್ನಡಕ್ಕೆ ತಂದ ಮೊದಲಿಗರಾಗಿದ್ದಾರೆ.

2.8 ಪಶ್ಚಿಮ ಕರಾವಳಿಯ ದೇಶಿಯರು ಬರೆಹಗಾರರು

ಮಡಕೇರಿಯ ವೆಂಕಟಾದ್ರಿ ಶಿವರಾಮರು (1848-1913) ಅರಣ್ಯ ಇಲಾಖೆಯ ನೌಕರಿಯಲ್ಲಿದ್ದು, ನಾಟಕ, ಸಂಗೀತಗಳಲ್ಲಿ ವಿಶೇಷ ಆಸಕ್ತಿಯನ್ನು ಬೆಳೆಸಿಕೊಂಡು ಕೆಲವು ಪೌರಾಣಿಕ ನಾಟಕಗಳನ್ನು ಬರೆದಿದ್ದಾರೆ. ಅಲ್ಲದೆ ಅವರು ಇಂಗ್ಲೀಷ್‌ನ ಶೇಕ್ಸ್‌ಪಿಯರ್‌ನ "ಅ್ಯಸ್‌ಯು ಲೈಕ್ ಹಿಟ್" (ಕಮಲಾಪತಿ ಪರಿಣಯ) ನ್ನು ಕನ್ನಡಕ್ಕೆ ಅನುವಾದಿಸಿದರು. ಇನ್ನು ಕನ್ನಡದಲ್ಲಿ ಸ್ವತಂತ್ರ ಸಾಮಾಜಿಕ ಕಾದಂಬರಿಗಳನ್ನು ರಚಿಸುವ ನಿಟ್ಟಿನಲ್ಲಿ ಮುಂದಾದ ಗುಳವಾಡಿ ವೆಂಕಟರಾವ್, ಗುಳಮುಡಿ ಅಣ್ಣಾಜಿರಾವ್ ಹಾಗೂ ಬೋಳಾರ ಬಾಬುರಾವ್ ಈ ಮೂವರ ದಕ್ಷಿಣ ಕನ್ನಡದ ಸಾರಸ್ವತ ಸಮಾಜಕ್ಕೆ ಸೇರಿದವರಾಗಿದ್ದು. ಇವರು ಅರುಣೋದಯ ಬೆಳಕನ್ನು ಬರಮಾಡಿಕೊಳ್ಳುವ ಮೂಲಕ ಇತರರಿಗಿಂತ ಹೆಚ್ಚು ಆತುರ ಮತ್ತು ಕಾಳಜಿಯನ್ನು ತೋರಿದವರಾಗಿದ್ದರು. ಆದರೆ ಹಾಗೆಂದ ಮಾತ್ರಕ್ಕೆ ಅವರು ಹಳೆಯದನ್ನು ಅಸಡ್ಡೆಯಿಂದ ಕಂಡವರಲ್ಲ. ಹಳೆಯ ಪರಂಪರೆಯ ಸಂಸ್ಕಾರಗಳನ್ನು ಹೊಸಕಾಲಕ್ಕನುಗುಣವಾಗಿ ಒರೆಗೆ ಹಚ್ಚಿನೋಡಿ, ಅರ್ಥಹೀನವಾದುದ್ದೆಂದು ತೋರಿದ್ದನ್ನು ಖಂಡಿಸುವ ಇಲ್ಲವೆ ಪುನರ್ರಮೌಲೀಕರಿಸುವ ಮನೋಧರ್ಮವನ್ನು ಹೊಂದಿದ್ದರು.

ಪೋಲೀಸ್ ಇಲಾಖೆಯಲ್ಲಿದ್ದ ಗುಳವಾಡಿ ವೆಂಕಟರಾಯರು ಆಸ್ತಿಕರಾಗಿದ್ದು, ಅಂದರೆ ಗುರುಪೀಠದ ಬಗೆಗೆ ಆಸಕ್ತಿ, ಗೌರವವನ್ನಿಟ್ಟುಕೊಂಡು ದೇವಸ್ಥಾನದ ಜೀರ್ಣೋದ್ಧಾರದ ಕಾರ್ಯದಲ್ಲಿ ತೊಡಗಿದ್ದವರು. ಆದರೆ ಗುರುಮಠಗಳಲ್ಲಿ ನಡೆಯುವ ಡಂಬಾಚಾರಗಳು, ಗೊಡ್ಡು ಸಂಪ್ರದಾಯ ಆಚರಣೆಗಳು ಜಿಗುಪ್ಸೆಯನ್ನುಂಟು ಮೂಡಿದ ಬಗ್ಗೆ ಮತ್ತು ಸದ್ಧರ್ಮವು ಯಾವುದೆಂಬುದರ ಬಗ್ಗೆ

ಹೊಸ ದೃಷ್ಟಿಯಿಂದ ಯೋಚಿಸಿ, ತಮ್ಮದೇ ಆದ ನಿಲುವಿಗೆ ಬಂದಿದ್ದರೆಂಬುದನ್ನು ತಿಳಿಯಬಹುದು. ಈ ದೃಷ್ಟಿಯಿಂದ ಅವರ "ಇಂದಿರಾ ಬಾಯಿ" ತುಂಬ ಪ್ರಮುಖವಾಗಿದ್ದು, ಈ ಕೃತಿಯು ಕನ್ನಡದ ಪ್ರಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿ ಎಂಬ (ಹೆಸರಿಗೆ) ಹೆಗ್ಗಳಿಕೆಗೆ ಪಾತ್ರವಾಗಿದೆ. (ಇದೇ ಕೃತಿಯು "ಸದ್ಧರ್ಮ ವಿಜಯ"ವೆಂಬ ಮತ್ತೊಂದು ಹೆಸರಿನಿಂದಲೂ ಕರೆಯುವ ರೂಢಿಯುಂಟು); ಅದರಲ್ಲಿ ಸ್ತ್ರೀಶಿಕ್ಷಣದ ಉಪಯುಕ್ತತೆ, ವಿಧವಾ ವಿವಾಹ ಮೊದಲಾದ ಸುಧಾರಣಾ ವಿಚಾರಗಳನ್ನು ಪ್ರತಿಪಾದಿತವಾಗಿರುವ ಪ್ರಮುಖ ವಿಷಯಗಳಾಗಿವೆ. ಅನಂತರ ಇವರ ಸಮಕಾಲೀನರಾಗಿಯೆ ಬದುಕಿದ್ದ ಗುಲ್ವಾಡಿ ಅಣ್ಣಾಜಿರಾಯರು "ರೋಹಿಣಿ" ಇಲ್ಲವೆ "ಸಾರಸ್ವರ ಮಂಡಲಿ" (1906) ಮತ್ತು ಬೋಳಾರ ಬಾಬುರಾಯರ "ವಾಗ್ದೇವಿ" ಕಾದಂಬರಿಗಳು ಸಮಾಜಿಕವಾದ ಹೊಸ ಸುಧಾರಣೆಗಳನ್ನು ಬಯಸುವ ಪ್ರಮುಖ ಕಾಳಜಿ ಮತ್ತು ಗುರಿಯನ್ನು ಹೊಂದಿದ್ದವು. ಜೊತೆಗೆ ಪಾತ್ರ ಸನ್ನಿವೇಶ, ಭಾಷೆ, ತಂತ್ರ, ವಾಸ್ತವತೆ, ಸಂಭಾಷಣೆ ಮೊದಲಾದವುಗಳ ದೃಷ್ಟಿಯಿಂದ ತಂಬ ಧ್ವನಿಪೂರ್ಣ ಕೃತಿಯಾದುದೆಂದು ನಾವಿಂದು ಮನಗಾಣಬಹುದು. ಅಂತೆಯೆ ಈ ಮೂವರೂ ಕನ್ನಡ ಸಾಮಾಜಿಕ ಕಾದಂಬರಿಯ ತೇರನ್ನು ಮೊದಲಿಗರಾಗಿ ಎಳೆದು ಐತಿಹಾಸಿಕ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಇನ್ನು ಪಂಜೆ ಮಂಗೇಶರಾಯರ (1874-1937) ಬರವಣಿಗೆಯು ಇಂಗ್ಲೀಷ್ ಪದ್ಯಗಳ ಅನುವಾದದಿಂದ ಸುರುವಾಗಿ "ರಾಮಪಂ" ಎಂಬ ಹೆಸರಿನಿಂದ "ಸತ್ಯಪರೀಕ್ಷೆ" ಪತ್ರಿಕೆಯ ಮೂಲಕ ಹಲವು ಆಂಗ್ಲ ಕವನಗಳನ್ನು ಕನ್ನಡಕ್ಕೆ ಅನುವಾದಿಸಿದರು. ಅಲ್ಲದೆ ಇದರೊಂದಿಗೇ ಸಣ್ಣ ಕತೆಯ ಪ್ರಕಾರವನ್ನು ಮೊತ್ತ ಮೊದಲು "ನನ್ನ ಚಿಕ್ಕತಾಯಿ" ಎಂಬ ಹೆಸರಿನ ಕಥೆಯೊಂದ ಬರೆದರು. ಇದು ಆಗಿನ ಕನ್ನಡ ಪ್ರಮುಖ ಪತ್ರಿಕೆ "ಸುವಾಸಿನಿ" (1900)ಯಲ್ಲಿ ಪ್ರಕಟವಾಯಿತು. ಒಟ್ಟಿನಲಿದೀ ದೃಷ್ಟಿಯಿಂದ ಅವರು ಹೊಸಗನ್ನಡ ಅರುಣೋದಯ ಸಾಹಿತ್ಯದಲ್ಲಿ ಒಂದು ಮಹತ್ವದ ಸ್ಥಾನವನ್ನು ಪಡೆದುಕೊಂಡಿದ್ದಾರೆ.

2.9 ಮುಂಬಯಿನ ಕನ್ನಡ ಸುಧಾರಣವಾದಿಗಳು ಪಾತ್ರ

ಉತ್ತರ ಕನ್ನಡ ಜಿಲ್ಲೆಯ ೧೯ನೆಯ ಶತಮಾನದ ಬರೆಹಗಾರರು ಮುಂಬಯಿ ನಗರದಲ್ಲಿ ನೆಲೆಸಿ, ಅಲ್ಲಿಂದಲೇ ಸಾಹಿತ್ಯರಚಿಸುವ ಕೃಷಿಯನ್ನು ಕೈಗೊಂಡರು. ಅವರಲ್ಲಿ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿಯು (1852-92) ಪ್ರಮುಖರಾಗಿದ್ದು, ಅವರ ಮನೆತನವು ಕರ್ಕಿಯಲ್ಲಿ ನೆಲೆಸಿ, ವೈದ್ಯಕೀಯ, ವೈದಿಕ ವಿದ್ಯೆಗಳಿಗೆ ತುಂಬ ಹೆಸರಾಗಿತ್ತು. ಅವರ ವೈದಿಕ ವ್ಯಾಸಂಗವು ರಾಮಚಂದ್ರಪುರ ಮಠದ ಶ್ರೀಗಳಿಂದ ನಡೆಯಿತು. ಹೀಗೆ ಕಲಿತ ವಿದ್ಯೆಯು ಅವರ ಜೀವನದುದ್ದಕ್ಕೂ ಮೂಲ ದ್ರವ್ಯವಾಗುಳಿದು ತುಂಬ ಪ್ರಯೋಜನಕ್ಕೆ ಬಂದಿತು. ಅವರ ಹವ್ಯಾಸವು ಸಂಚಾರವಾಗಿದ್ದು, ಉತ್ತರ ಕನ್ನಡ ಜಿಲ್ಲೆಯಾದ್ಯಂತ ಪರಿಸರದಲ್ಲಿ ತುಂಬ ತಿರುಗಾಡಿದ ಜೀವನಾನುಭವವು ಅವರಿಗೆ ಒದಗಿತ್ತು. ಅಲ್ಲದೆ ಇದರೊಂದಿಗೇ ಜಿಲ್ಲೆಯ ಸಂಕಷ್ಟ ನಿವಾರಣೆ, ಹವ್ಯಕ ಸಮಾಜದ ಏಳಿಗೆ ಮತ್ತು ಕನ್ನಡ ಸೇವೆ ಅವರ ಕಣ್ಣ ಮುಂದಿನ ಗುರಿಗಳಾಗಿದ್ದವು. ಅವು ವೆಂಕಟರಮಣಶಾಸ್ತ್ರಿಯನ್ನು ಕನ್ನಡ ನಾಡಿನ ನವೋದಯ ರಂಗದಲ್ಲಿ ಕಂಡು ನಿಲ್ಲಿಸಿದ್ದು ಗಮನಾರ್ಹ. ಈ ಸಂವೇಧನೆಯ ಹಿನ್ನೆಲೆಯಲ್ಲಿ ಅವರು "ಪ್ರಾಚೀನ ನಾಟ್ಯ ಕಥಾದೀಪ", "ಅನಾರ್ಯವಿವರ", ಮತ್ತು "ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ" ಎಂಬ ಮಹತ್ವದ ಕೃತಿಗಳನ್ನು ಬರೆದಿದ್ದಾರೆ. ಅನಂತರ ಶಿವರಾಮ ನಾರಯಣಪ್ಪಧಾರೇಶ್ವರರು "ಕನ್ಯಾವಿಕ್ರಯ"ವೆಂಬ ಒಂದು ಕೃತಿಯನ್ನು ಬರೆದರು. ಇದು ಸಾಮಾಜಿಕ ದೃಷ್ಟಿ ಅಂದಿನ ಒಂದು ಮಹತ್ವದ ನಾಟಕವೆಂದು ತುಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇವರ ಬಳಿಕ ಸುಮಾರು ಎರಡು ದಶಕಗಳ ಕಾಲ ಡೆಪ್ಯುಟಿ ಶಿಕ್ಷಣಾಧಿಕಾರಿಯಾಗಿ ವಿಶೇಷ ಸಾಧನಗೈದ ಚೆನ್ನಬಸಪ್ಪ ಅವರಲ್ಲಿ ಎದ್ದು ತೋರುತ್ತಿದ್ದ ಕೆಚ್ಚೆದೆ, ಕನ್ನಡ ನಿಷ್ಠೆ, ಸಾಮೂಹಿಕ ಮತ್ತು ಸಾಂಸ್ಕೃತಿಕವಾದ ತೀವ್ರಕಾಳಜಿಯ ಪ್ರೀತಿಯ ಫಲವಾಗಿ "ಕರ್ನಾಟಕ ಗತ ವೈಭವ"ಕೃತಿಯನ್ನು ಬರೆದರು. ಇವರ ಅನಂತರ "ಹಿತಬೋದಿನಿ" ಪತ್ರಿಕೆಯ ಫಲವಾಗಿ ಎಂ.ಎಸ್.ಪುಟ್ಟಣ್ಣ, ಎಂ.ಬಿ. ಶ್ರೀನಿವಾಸಯ್ಯಂಗಾರ್, ವೆಂಕಟಕೃಷ್ಣಯ್ಯನವರು ಬೆಂಗಳೂರಿನಲ್ಲಿ ನೆಲೆಯಾಗಿ ನಿಂತು ಹೊಸಗನ್ನಡ

ಸಾಹಿತ್ಯಕ್ಕೆ ಭದ್ರ ಬುನಾದಿ ಹಾಕಿದವರಲ್ಲಿ ಪ್ರಮುಖರಾಗಿದ್ದಾರೆ. ಅವರಲ್ಲಿ ಎಂ.ಎಸ್.ಪುಟ್ಟಣನವರು ಆಧುನಿಕ ಯುಗಕ್ಕೆ ಹತ್ತಿರದಲ್ಲಿದ್ದು, ಬಡತನದಿಂದ ವಿದ್ಯಾಭ್ಯಾಸ ಮಾಡಿ, ಉಪಾಧ್ಯಾಯ ವೃತ್ತಿ ಅವಲಂಭಿಸಿ, ಭಾಷಾಂತರಕಾರರಾಗಿ, ಅನಂತರ ಸ್ವತಂತ್ರ ಬರವಣಿಗೆಯಲ್ಲಿ ನಿರ್ಲಿಪ್ತರಾದರು. ಅವರ "ಮಾಡಿದ್ದುಣ್ಣೋ ಮಹಾರಾಯ" ಎಂಬ ಕೃತಿಯು ಕನ್ನಡ ಸಾಮಾಜಿಕ ಪ್ರಮುಖ ಕಾದಂಬರಿಗಳಲ್ಲೊಂದಾಗಿದ್ದು. ಇಂದಿಗೂ ಅದೊಂದು ಮಹತ್ವದ ಕೃತಿಯಾಗಿ ಗಮನಾರ್ಹ. ಅಲ್ಲದೆ ಅವರು ಭಾಷಾಂತರಕಾರರಾಗಿ ಕೂಡಾ ಅವರು ಶೇಕ್ಸ್‌ಪಿಯರ್‌ನ ಪ್ರಮುಖ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಹಾಗೆಯೆ ಇವರ ಸಮಕಾಲೀನರಾಗಿದ್ದ ಎಂ.ಕೃಷ್ಣಯ್ಯನವರು (1844-1984)" ಹಿತಬೋದಿನಿ", "ವೃತ್ತಾಂತ ಬೋದಿನಿ" ಮತ್ತು ಹಲವು ಇಂಗ್ಲೀಷ್ ಪತ್ರಿಕೆಗಳನ್ನು ನಡೆಸುವ ಮೂಲಕ ಅಧುನಿಕ ಭಾಷೆಯನ್ನು ಪರಿಷ್ಕರಿಸಿ ನಾಡಿಗಾಗಿ ಶ್ರಮಿಸಿದರು. ಅವರ "ಚೋರ ಗೃಹಣತಂತ್ರ" ಮೊತ್ತ ಮೊದಲ ಪತ್ತೆದಾರಿ ಕಾದಂಬರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇವರ ಬಳಿಕ ಚ. ವಾಸುದೇವಯ್ಯನವರ "ಆರ್ಯಕೀರ್ತಿ", "ಭೀಷ್ಮಚರಿತ್ರೆ"ಮೊದಲಾದ ಪ್ರಮುಖ ಕೃತಿಗಳನ್ನು ಬರೆಯುವ ಮೂಲಕ "ಹೊಸಗನ್ನಡ ಗದ್ಯ ಶಿಲ್ಪಿ" ಎಂಬ ಹೆಸರಿಗೆ ಪಾತ್ರರಾಗಿದ್ದಾರೆ.

ಅನಂತರ ಅರುಣೋದಯದ ಪ್ರಮುಖ ಲೇಖಕರಲ್ಲಿ ಒಬ್ಬರಾದ ಬಿ. ವೆಂಕಟಾಚಾರ್ಯರರು (1845-1914) ಕುಟುಂಬದ ಸಂಸ್ಕಾರ, ಮೂಲ ಪ್ರವೃತ್ತಿಯಿಂದ ಸನಾತನಿ ಆಗಿದ್ದು ಸರಕಾರಿ ಹುದ್ದೆಯಲ್ಲಿದ್ದರೂ ವಂಗ, ಇಂಗ್ಲೀಷ್, ಸಂಸ್ಕೃತ, ತಮಿಳು ಮೊದಲಾದ ಭಾಷೆಗಳ ಪರಿಚಯವಿದ್ದುದ್ದರಿಂದ ಅವುಗಳೆಲ್ಲವನ್ನೂ ಕನ್ನಡಕ್ಕೆ ತರಬೇಕೆಂದು ಕಾಳಜಿ ಇಟ್ಟುಕೊಂಡಿದ್ದರು. ಆದರೆ ಅವರ ಒಲವು ವಂಗ ಸಾಹಿತ್ಯದತ್ತವಾಲಿದ್ದರಿಂದ ಆ ಬಗೆಗೆ ಹೆಚ್ಚು ಕೃಷಿಮಾಡಿದರು. ಅವುಗಳಲ್ಲಿ ಈಶ್ವರಚಂದ್ರ ವಿದ್ಯಾಸಾಗರರ "ಶಾಕುಂತಲ", "ಸೀತವನವಾಸ"ವನ್ನೂ, ಬಂಕಿಯ ಚಂದ್ರರರ "ದುರ್ಗೇಶ ನಂದಿನಿ" ಇನ್ನು ಮೊದಲಾದ ಪ್ರಮುಖ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದರು. ಒಟ್ಟಿನಲ್ಲಿ ಅಂದಿನ ಕನ್ನಡಿಗರ ವಾಚನಾಭಿರುಚಿಯನ್ನು ಹೆಚ್ಚಿಸುವುದಕ್ಕೆ ಅವರ ಪಾತ್ರವು ತುಂಬ ಅವಿಸ್ಮರಣೀಯವಾಗಿದ್ದು. ಮಧ್ಯಮ ವರ್ಗದ ಜನತೆಯ ಭಾವ ವಿಕಾಸಕ್ಕೆ ಕಾರಣರಾಗಿದ್ದರು. ಅಲ್ಲದೆ ಅವರ "ಕಾದಂಬರಿ" ಎಂಬ ಹೊಚ್ಚ ಹೊಸ ಸಾಹಿತ್ಯ ಪ್ರಕಾರವನ್ನು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಮೊತ್ತ ಮೊದಲ ಬಾರಿಗೆ ನೆಲೆಗೊಳಿಸಿದ ಶ್ರೇಯಸ್ಸು ಅವರಿಗೇ ಸಲ್ಲುತ್ತದೆ. ಈ ದೃಷ್ಟಿಯಿಂದ ಮುಂದೆ ಶಾಂತಕವಿಗಳು "ಮುಕುಂದ ಧಾನಮೃತ" ಮತ್ತು ವಿದ್ಯಾರಣ್ಯವಿಜಯ " ಮೊದಲಾದ ಶ್ರೇಷ್ಠ ಕೀರ್ತನೆಯ ಕೃತಿಗಳನ್ನು ರಚಿಸಿದರು. ಅನಂತರ "ಉಷಾಹರಣ" ಎಂಬ ನಾಟಕವನ್ನು ಕೂಡಾ ಬರೆದು ರಂಗಭೂಮಿಯ ಸಂದರ್ಭದಲ್ಲಿ ಒಂದು ಹೊಸ ಪರಂಪರೆಯನ್ನು ಸೃಷ್ಟಿಸಿದರು. ಒಟ್ಟಿನಲ್ಲಿ ಈ ಮೇಲಿನ ಪ್ರಮುಖ ಲೇಖಕರೆಲ್ಲರೂ ಹೊಸಗನ್ನಡ ಅರುಣೋದಯ ಸಾಹಿತ್ಯದ ದೃಷ್ಟಿಯಿಂದ ತುಂಬ ಮಹತ್ವದ ಪಾತ್ರವನ್ನು ವಹಿಸಿದವರೆಂಬುದು ಗಮನಾರ್ಹ.

2.10 ಮುಂಬಯಿನ ಪ್ರಮುಖ ರಂಗಭೂಮಿ ಮತ್ತು ನಾಟಕಕಾರರು

ಹತ್ತೊಂಬತ್ತನೆಯ ಪ್ರಾರಂಭದಲ್ಲಿ ಬೆಳಕಿಗೆ ಬಂದ ಮುಂಬಯಿ ಕರ್ನಾಟಕದ ರಂಗಭೂಮಿಯು ಯಾವ ಆಶ್ರಯವೂ ಇಲ್ಲದೆ ಬೆಳೆದು ಬಂದಿತ್ತು. ಅಂದರೆ ಅದು, ಚಾಮರಾಜೇಂದ್ರ ನಾಟಕ ಸಭೆಯು ಸ್ಥಾಪಿತವಾಗುವ ಮೊದಲೇ ಮರಾಠೀ ನಾಟಕಗಳು ಅದರ ಆಗಿನ ಪ್ರಲೋಗವೇ ಅದಕ್ಕೆ ಮುಖ್ಯ ಪ್ರೇರಣೆ ಆಗಿದ್ದು. ಕನ್ನಡದಲ್ಲಿ ನಾಟಕಗಳಿಲ್ಲವಲ್ಲವೆಂಬ ತೀವ್ರ ಛಲ, ಕಾಳಿಜಿಯಿಂದಲೂ ಶ್ರಮವಹಿಸಿ ಕೆಲವರು ನಾಟಕಗಳನ್ನು ಬರೆಯಲು ಮುಂದೆ ಬಂದರು. ಈ ನಿಟ್ಟಿನಲ್ಲಿ ಆಗಿನ ಸಂಗೀತ ಪರಂಪರೆಯು ಕೂಡ ಅದಕ್ಕೆ ಪೋಷಕವಾಗಿ ನಿಂತಿತು. ಈ ಹಿನ್ನೆಲೆಯಲ್ಲಿ ಚುರಮುರಿ ಶೇಷಗಿರಿರಾಯರು (1827-1884) ಮೊದಲಿಗರಾಗಿದ್ದು ಅವರ ತಂದೆ ತಾಯಿಗಳು ಆಗಿನ ಕಾಲದ ಪ್ರಸಿದ್ಧ ಗವಾಯಿಗಳಾಗಿದ್ದರಿಂದ ಶೇಷಗಿರಿರಾಯರೂ ಸಂಗೀತ ಪ್ರೇಮ ಮತ್ತು ಆಶು ಕವಿತ್ವಶಕ್ತಿ ಹೊಂದಿದ್ದರಿಂದ ತಂದೆಗಿಂತ ಒಂದು

ತೂಕ ಹೆಚ್ಚನ್ನು ಮೈಗೂಡಿಸಿಕೊಂಡಿದ್ದರು. ವೃತ್ತಿಯಲ್ಲಿ ಎಂಜಿನಿಯರ್ ಆಗಿದ್ದರೂ ಅವುಗಳಾವೂ ಅವರಿಗೆ ಅಡ್ಡಿಯಾಗದೆ. ಅವರು ಸೃಜನಶೀಲ ಬರವಣಿಗೆಯನ್ನು ಸಹಜವಾಗಿ ಒಗ್ಗಿಸಿಕೊಂಡಿದ್ದರು. ತನ್ನ ನೌಕರಿಯ ಮಹತ್ವದ ವರ್ಷಗಳನ್ನು ಮುಂಬಯಿನಲ್ಲಿ ಕಳೆದರೂ ಅಲ್ಲಿದ್ದಾಗಲೇ ಗ್ರಂಥ ರಚನೆ ಮಾಡಿಕೊಳ್ಳುತ್ತಿದ್ದುದರಿಂದ ಅವರು ಮುಂಬಯಿನ ಆದ್ಯಕನ್ನಡ ಸಾಹಿತಿಗಳೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

ಹಾಗೆಯೆ ಅವರ ಸುಸಂಸ್ಕೃತವಾದ ಬದುಕು, ಮನ ಪ್ರವೃತ್ತಿಯು ತೀವ್ರ ಸಂವೇದನಾಶೀಲವಾಗಿದ್ದು. ಅವರ ಈ ಬಲವನ್ನು ಕನ್ನಡಸಾಹಿತ್ಯ ರಚನೆಯತ್ತ ತಿರುಗಿಸಿದ ಶ್ರೇಯಸ್ಸು ಡೆಪ್ಯುಟಿ ಚೆನ್ನಬಸಪ್ಪನರಿಗೆ ಸಲ್ಲುತ್ತದೆ. ಇವರಿಬ್ಬರೂ ಎಂಜಿನಿಯರ್ ಆಗಿದ್ದು ಆತ್ಮೀಯ ಸಹಪಾಠಿಗಳಾಗಿದ್ದರು. "ಕೆಲವೇ ಜನ ವಿದ್ಯಾವಂತ ಕನ್ನಡಿಗರೆನಿಸಿದ ನಾವು ಕನ್ನಡವನ್ನು ಅಲಕ್ಷಿಸಬಾರದೆಂಬುದು ಅವರಿಬ್ಬರ ಅಂದಿನ ತೀವ್ರ ಕಾಳಜಿಯಾಗಿತ್ತು". ಈ ನಿಟ್ಟಿನಲ್ಲಿ ಅವರು ಬಸಪ್ಪ ಶಾಸ್ತ್ರೀಗಳಿಗಿಂತ ಮೊದಲೇ 1869ರಲ್ಲಿ ಕಾಳಿದಾಸನ "ಅಭಿಜ್ಞಾನ ಶಾಕುಂತಲ" ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದರು. ಆದುದ್ದರಿಂದ ಈ ಕೃತಿಯನ್ನು ಹೊಸಗನ್ನಡ ಅರುಣೋದಯ ಸಾಹಿತ್ಯದ ಮೊದಲ ನಾಟಕವೆಂದು ಗುರುತಿಸಲಾಗುವುದು. ಇವರ ಬಳಿಕ ಉಜ್ವಲ ಪ್ರತಿಭೆಯ ಶಾಂತಕವಿಗಳು (1856-1920) ಅಂದಿನ ಕಾಲದ ಪ್ರಮುಖ ಕವಿ, ನಾಟಕಕಾರರಾಗಿದ್ದು, ಈ ಕೃಷಿಯನ್ನು ತಮ್ಮ ಉಪಾಧ್ಯಾಯ ವೃತ್ತಿಯೊಂದಿಗೇ ಮಾಡುತ್ತಾ ಬಂದು, ಇಡೀ ಬದುಕನ್ನು ಕನ್ನಡ ಸೇವೆಗಾಗಿ ಅರ್ಪಿಸಿಕೊಂಡರು. ಅವರು ಬಾಲ್ಯದಿಂದಲೇ ಜನ್ಮಜಾತ ಪ್ರವೃತ್ತಿಯಾಗಿ ಜಾನಪದ ಹಾಡು ಆಟಗಳನ್ನು ಮೈಗೂಡಿಸಿಕೊಂಡಿದ್ದರು. ಜೊತೆಗೇ ನಾಟಕ, ಕಾವ್ಯ, ಸಂಸ್ಕೃತ ಜ್ಞಾನದ ಅಬ್ಯಾಸದಿಂದ ಸಾಹಿತ್ಯಿಕವಾದ ತೀವ್ರ ಆಸಕ್ತಿಯನ್ನು ಬೆಳೆಸಿಕೊಂಡಿದ್ದರು. ಇದರ ಫಲದಿಂದ "ಧ್ಯಾನಾಮೃತ", " ವಿದ್ಯಾರಣ್ಯ ವಿಜಯ"ಮೊದಲಾದ ಪ್ರಮುಖ ಕೀರ್ತನೆಗಳನ್ನೂ, "ಉಷಾಹರಣ" ಎಂಬ ವೊತ್ತಮೊದಲ ರಂಗಕೃತಿಯನ್ನೂ ಬರೆದರು. ಒಟ್ಟಿನಲ್ಲಿ ಈ ಮೇಲಿನ ಬರೆಹಗಾರರ ಕೊಡುಗೆಯು ಹೊಸಗನ್ನಡ ಅರುಣೋದಯ ಸಾಹಿತ್ಯ ದೃಷ್ಟಿಯಿಂದ ತುಂಬ ಮಹತ್ವದ್ದೆಂದು ಗುರುತಿಸಲಾಗುವುದು.

2.11 ವಿದ್ಯಾವರ್ಧಕ ಸಂಘದ ಪಾತ್ರ

ಕರ್ನಾಟಕ ಸಾಹಿತ್ಯ - ಸಂಸ್ಕೃತಿಯ ದೃಷ್ಟಿಯಿಂದ ವಿದ್ಯಾವರ್ಧಕ ಸಂಘದ ಪಾತ್ರವು ತುಂಬ ಪ್ರಮುಖವಾಗಿದ್ದು. ಇದು ಮುಂಬಯಿ ಕರ್ನಾಟಕ ಸಾಹಿತ್ಯ - ಸಂಸ್ಕೃತಿಯ ಸಂವರ್ಧನೆಯ ಹಿನ್ನೆಲೆಯಲ್ಲಿ ತನ್ನದೇ ಆದಂತಹ ಮಹತ್ವದ ಪಾತ್ರವನ್ನು ವಹಿಸಿದೆ. ಹಾಗೆಯೆ ಅದರ ಸ್ಥಾಪನೆಗಾಗಿ ವೆಂಕಟರಂಗೋಕಟ್ಟಿ, ಫ.ಗು. ಹಳಕಟ್ಟಿ, ಶಾಂತಕವಿಗಳು, ದೋ.ನ. ಮುಳಬಾಗಿಲ, ರಾಹ. ದೇಶಪಾಂಡೆ ಮುಂತಾದ ಪ್ರಮುಖ ಬರೆಹಗಾರರು ಬಹಳಷ್ಟು ಶ್ರಮವಹಿಸಿ ಸ್ಥಾಪಿಸಿದರು. ಅಂತೆಯೆ ಈ ನಿಟ್ಟಿನಲ್ಲಿ ಸಂಘವು ನೂರಾರು ಮಂದಿ ನಾಡಿನ ರಾಷ್ಟ್ರೀಯ ಹೋರಾಟಗಾರರನ್ನೂ, ನಾಡಿನ ಪುರೋಭಿವೃದ್ಧಿಗಾರರನ್ನೂ, ಶ್ರೇಷ್ಠ ಬರೆಹಗಾರರನ್ನೂ ಬೆಳಕಿಗೆ ತಂದಿತು. ಅವರಲ್ಲಿ ಹನುಮಂತಕೇಶವ, ಹುಯಿಲಗೋಳ, ಭೀಮರಾವ್ ಸಂತ, ವ್ಯಾಸರಾವ್‌ರೊದ್ದ, ಕೃ.ಶ್ರೀ. ಹುನಗುಂದ, ಹನುಮಂತರಾವ್ ಪಾಗರ, ಶಾಂತಕವಿಗಳು, ಬೇಂದ್ರೆ, ಬಿ.ಎಂ.ಶ್ರೀ ಮುಂತಾದ ಪ್ರಮುಖರು ತುಂಬ ಗಮನಾರ್ಹರಾಗಿದ್ದು. ಇವರು ಅನ್ಯಭಾಷೆಗಳಾದ ಸಂಸ್ಕೃತ, ಇಂಗ್ಲೀಷ್, ಬೆಂಗಾಳಿ, ಮರಾಠಿ ಮುಂತಾದ ಸಂವೇದನೆಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿದರು. ಅಂತೆಯೆ ಅವರಲ್ಲಿ ಕೆಲವರು ಬೇರೆ ಬೇರೆ ಭಾಷೆಗಳಿಂದ ನಾಟಕ, ಕಥೆ ಮೊದಲಾದ ಸಾಹಿತ್ಯ ಪ್ರಕಾರಗಳನ್ನು ಕನ್ನಡೀಕರಿಸಿ ಅಂದಿನ ಮಾತಿನಾಭಿರುಚಿಯನ್ನು ಹೆಚ್ಚಿಸಲು ಕಾರಣರಾಗಿದ್ದಾರೆ. ಹಾಗೆಯೆ ವಿದ್ಯಾವರ್ಧಕ ಸಂಘವು ಕೂಡ ಅಂದು ತನ್ನ ಆಶ್ರಯದ ಹಿನ್ನೆಲೆಯಲ್ಲಿ ಬರೆದ ಲೇಖಕರ ಕೃತಿ, ಚಳುವಳಿಗಳನ್ನು ಪ್ರೋತ್ಸಾಹಿಸುತ್ತಾ, ಪ್ರಕಟಿಸುತ್ತಾ ಬಂದಿತೆಂಬುದನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಅನೇಕ ಸ್ವತಂತ್ರ ಐತಿಹಾಸಿಕ ಸಾಮಾಜಿಕ ಕಾದಂಬರಿಗಳು ಪ್ರಕಟವಾಗಿ ಬೆಳಕನ್ನು ಕಂಡಿವೆ. ಹೀಗಾಗಿ ಈ ಸಂಘವು ಹೊಸಗನ್ನಡ ಅರುಣೋದಯ ದೃಷ್ಟಿಯಿಂದ ತುಂಬ ಮಹತ್ವದ ಸ್ಥಾನವನ್ನು ಹೊಂದಿದೆಂಬುದನ್ನು ನಾವಿಂದು ಗುರುತಿಸುವುದು ಅವಶ್ಯಕವಾಗಿದೆ.

2.12 ಹೊಸಗನ್ನಡ ಅರುಣೋದಯ ಸಾಹಿತ್ಯ ಹಿನ್ನೆಲೆಯಲ್ಲಿ ಕೆಂಪು ನಾರಾಯಣ ಪಾತ್ರ

ಈತನು ಮುಮ್ಮಡಿ ಕೃಷ್ಣರಾಜನ ಆಸ್ಥಾನದ ಕವಿ. ಅವರ ಪ್ರೋತ್ಸಾಹ, ಪೋಷಣೆ ಪಡೆದು ೧೮೨೩ರಲ್ಲಿ "ಮುದ್ರಾಮಂಜೂಷ" ಎಂಬ ಕೃತಿಯನ್ನು ರಚಿಸಿದನು. ಇವನ ಮೂಲ ಹೆಸರು ನಾರಾಯಣ ಶರ್ಮ ಆಗಿದ್ದು. ಈತನ "ಮುದ್ರಾಮಂಜೂಷ"ವು ಹೊಸಗನ್ನಡದ ಗದ್ಯಕ್ಕೆ ಬೂನಾದಿ ಹಾಕಿದ ಕೃತಿಯೆಂಬ ಗೌರವವಕ್ಕೆ ಪಾತ್ರವಾಗಿದೆ. ಇವನ ಇತರ ಕೃತಿಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲ. "ಮುದ್ರಮಂಜೂಷ"ವು ೧೮ ಆಶ್ವಾಸಗಳನ್ನುಳ್ಳ ಒಂದು ದೀರ್ಘಕೃತಿ. ಈ ಕೃತಿಗೆ ವಿಶಾಖದತ್ತನು ಸಂಸ್ಕೃತದಲ್ಲಿ ಬರೆದಿರುವ "ಮದ್ರರಾಕ್ಷಸ" ನಾಟಕವೇ ಮೂಲವೆಂದು ಸಾಮಾನ್ಯವಾಗಿ ತಿಳಿಯಲಾಗಿದೆ. ಆದರೆ ವಿಶಾಖದತ್ತನ ಮುದ್ರರಾಕ್ಷಸನ ಕಥೆ ಮುದ್ರಾಮಂಜೂಷದ ಉತ್ತರಾರ್ಧದ ೧/೩ ಭಾಗ ಮಾತ್ರ ಇದೆ. ಅದಕ್ಕಿಂತ ಪೂರ್ವದ ಕತೆಯನ್ನು ಕೆಂಪುನಾರಾಯಣ ವಿವಿಧ ಮೂಲಗಳಿಂದ ಗ್ರಹಿಸಿ ಜೊತೆಗೆ ತನ್ನ ಕಲ್ಪನಾ ವಿಲಾಸವನ್ನು ಬೆರಸಿ ಕೃತಿ ನಿರ್ಮಾಣ ಮಾಡಿದ್ದಾನೆ. ಮಗಧ ಸಿಂಹಾಸನದ ಮೇಲೆ ಚಂದ್ರಗುಪ್ತನನ್ನು ಕೂರಿಸಬೇಕೆಂದೂ, ನವನಂದರನ್ನು ನಾಶಮಾಡಬೇಕೆಂದು ಶಪತ ಮಾಡಿದ ಚಾಣಕ್ಯ ಮತ್ತು ಸ್ವಾಮಿ ನಿಷ್ಠೆಯಿಂದ ನಂದರನ್ನು ಸಂರಕ್ಷಿಸಲು ಪ್ರಯತ್ನಿಸುವ ಅಮಾತ್ಯರಾಕ್ಷಸ ಇವರ ತಂತ್ರ ಪ್ರತಿತಂತ್ರಗಳ ನಿರೂಪಣೆಯೇ ಮುದ್ರಾಮಂಜೂಷದ ವಸ್ತು. ಕೆಂಪು ನಾರಾಯಣನು ಭಾಷೆಯಲ್ಲಿ ಸಂಸ್ಕೃತ-ಕನ್ನಡಗಳ ವಿಷಮ ಮಿಶ್ರಣವನ್ನು ಕಾಣುತ್ತೇವೆ. ಹೊಸಗನ್ನಡ ಗದ್ಯವೂ ರೂಪುಗೊಳ್ಳದೆ ಇದ್ದ ಕಾಲದ ಶೈಲಿಯ ಸಂದಿಗ್ದದೆ ಈ ಕೃತಿಯಲ್ಲಿ ಕಾಣುತ್ತದೆ. ಆದರೆ ಇದೇ ದೊಡ್ಡ ದೋಷವಲ್ಲ. ಕೆಂಪುನಾರಾಯಣ ಮುದ್ರಾಮಂಜೂಷದ ಕಥೆಯನ್ನು ಸಮರ್ಥವಾಗಿಯೇ ನಿರೂಪಿಸಿದ್ದಾನೆ. ಹಾಗಾಗಿ ಈ ಕೃತಿಯೆ ಕನ್ನಡ ಕಾದಂಬರಿ ಪ್ರಕಾರವನ್ನು ಮೊತ್ತಮೊದಲು ತೆರೆಯಿತೆಂದು ಗುರುತಿಸಬಹುದು. ಒಟ್ಟಿನಲ್ಲಿ ಅದರ ಭಾಷೆ, ತಂತ್ರ, ಶೈಲಿ, ನಿರೂಪಣೆ, ಚಿಂತನೆ ಮೊದಲಾದ ದೃಷ್ಟಿಗಳಿಂದ ಹೊಸಗನ್ನಡ ಅರುಣೋದಯ ಸಾಹಿತ್ಯದ ಒಬ್ಬ ಮಹತ್ವದ ಕವಿ ಎಂದು ಗುರುತಿಸಲಾಗುವುದು.

2.13 ಹೊಸಗನ್ನಡ ಅರುಣೋದಯ ಸಾಹಿತ್ಯದ ಹಿನ್ನೆಲೆಯಲ್ಲಿ ಮುದ್ದಣ್ಣನ ಪಾತ್ರ

ಮುದ್ದಣ್ಣನು ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಸಾಹಿತ್ಯ ರಚನೆ ಮಾಡಿದ ಮಹತ್ವದ ಕವಿಗಳಲ್ಲೊಬ್ಬನಾಗಿದ್ದು. ಈತನು ಕ್ರಿ.ಶ. ೧೮೭೦ರಂದು ಉಡುಪಿ ಸಮೀಪದ ನಂದಳಿಕೆ ಎಂಬ ಗ್ರಾಮದಲ್ಲಿ ಜನಿಸಿದನು. ಇವನ ತಂದೆ ತಿಮ್ಮಪ್ಪಯ ಮತ್ತು ತಾಯಿ ಮಹಾಲಕ್ಷ್ಮಮ್ಮ ಅಗಿದ್ದು, ಅವನ ವಂಶವು ಸ್ಮಾರ್ತ ಬ್ರಾಹ್ಮಣ ಕುಲವಾಗಿದೆ. ಬಾಲ್ಯದಲ್ಲಿ ಈತನನ್ನು "ಮುತ್ತಣ್ಣ" ಎಂದು ಕರೆಯುತ್ತಿದ್ದರು. ಆದರೆ ಇವನ ನಿಜನಾಮದೇಯ ಲಕ್ಷ್ಮೀನಾರಾಣಯ್ಯ ಆಗಿತ್ತು. ಬಡತನದಲ್ಲಿ ಹುಟ್ಟಿ ಬೇಳೆದ ಮುದ್ದಣ್ಣನು ಎಳೆಯ ವಯಸ್ಸಿನಿಂದಲೂ ಯಕ್ಷಗಾನ ತಾಳಮದ್ದಳೆ ಪದ್ದತಿಗಳೆಂದರೆ ತುಂಬಾ ಆಸಕ್ತಿ. ಅದೇ ಇವನ ಸಾಹಿತ್ಯ ನಿರ್ಮಿತಿಯ ಸ್ಪೂರ್ತಿಯೂ ಕೂಡಾ ಆಗಿದೆ. ತಾರುಣ್ಯದಲ್ಲಿ ಈತನು ಯಕ್ಷಗಾನ, ಬಯಲಾಟಗಳಲ್ಲಿ ಭಾಗವಹಿಸುತ್ತಿದ್ದುದೂ ಉಂಟು. ಉಡುಪಿ ನಾಟಕ ಮಂಡಲಿಯವರು ಮಾಡುತ್ತಿದ್ದ ನಾಟಕಗಳಲ್ಲಿ ಒಂದೊಂದು ಸಲ ವಿದೂಷಕನ ವೇಷ ಹಾಕಿ ಪ್ರೇಕ್ಷಕರನನ್ನು ನಗಿಸುತ್ತಿದ್ದನೆಂದು ತಿಳಿಯಬಹುದು. ಆದರೆ ಮುಂದಿನ ಪ್ರಾಥಮಿಕ ಶಿಕ್ಷಣದ ನಂತರ ಬಡತನ ದಿಂದ ಶಿಕ್ಷಣ ಮುಂದುವರಿಸಲು ಸಾಧ್ಯವಾಗದೆ. ಕೇವಲ ದೈಹಿಕ ಶಿಕ್ಷಣವಷ್ಟನ್ನೇ ಪಡೆದು ಡ್ರಿಲ್ ಮಾಸ್ಟರ್ ಆದರು. ಹೀಗಿದ್ದಾಗಲೂ ಶ್ರೀ ಮುದ್ದಣ್ಣನು ಸಾಹಿತ್ಯ ಕ್ಷೇತ್ರದ ಒಬ್ಬ ಶ್ರೇಷ್ಠಕವಿಯಾಗಿ ಗುರುತಿಸಿಕೊಂಡು ಜೀವನವನ್ನು ಸಾರ್ಥ ಪಡಿಸಿಕೊಂಡನೆಂಬುದನ್ನು ನಾವಿಂದು ಕೂಡಾ ಮರೆಯುವಂತಿಲ್ಲ. ಮುದ್ದಣ್ಣನು ಕೇವಲ ೩೨ ವರ್ಷ ಮಾತ್ರ ಜೀವಿಸಿದ್ದರೂ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಇವನ ಸಾಧನೆ ಗಣನೀಯವಾದುದು. ಸಾಹಿತ್ಯ ರಚನೆ ಮಾಡಬೇಕೆಂದು ಅದಷ್ಟು ಆಸೆಯಿದ್ದ ಮುದ್ದಣ್ಣ ತುಂಬ ಕಷ್ಟ ಪಟ್ಟು ಅಧ್ಯಯನ ನಡೆಸಿ ಮಳಲಿ ಸುಬ್ಬರಾಯರೆಂಬುವರ ಸಹಾಯದಿಂದ ಸಾಹಿತ್ಯ ರಚನೆ ಆರಂಭಿಸಿದ. ಮುದ್ದಣ್ಣ ಮೊದಲು ಬರೆದದ್ದು ಎರಡು ಯಕ್ಷಗಾನ ಕೃತಿಗಳು. ರತ್ನಾವತೀಕಲ್ಯಾಣ ಮತ್ತು ಕುಮಾರ ವಿಜಯ. ಅನಂತರ ಅವನು ಬರೆದದ್ದು

"ಅದ್ಭುತ ರಾಮಾಯಣ" (ಗದ್ಯ ಕೃತಿ) ಮತ್ತು "ಶ್ರೀರಾಮಪಟ್ಟಾಭಿಷೇಕ" (ಪದ್ಯ ಕಾವ್ಯ). ಅವನಿಗೆ ಖ್ಯಾತಿ ಗೌರವವನ್ನು ತಂದುಕೊಟ್ಟ ಕೃತಿ "ಶ್ರೀರಾಮಶ್ವಮೇಧಂ" ಆಗಿದ್ದು ಮುದ್ದಣ್ಣ ಮನೋರಮೆಯರ ಸರಳ ಸಂಭಾಷಣೆಯ ಮಧ್ಯೆ ಕಥೆಯನ್ನು ನಿರೂಪಿಸಿರುವುದನ್ನು ಕನ್ನಡದಲ್ಲಿ ಹೊಚ್ಚ ಹೊಸದಾಗಿಸಿದೆ. ಇದನ್ನು ಕುರಿತು ಪ್ರಸಿದ್ಧ ವಿದ್ವಾಂಸರಾದ ದಿವಂಗತ ಎಸ್.ವಿ. ರಂಗಣನವರು "ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು" ಎಂದು ವರ್ಣಿಸಿದ್ದಾರೆ.

ಒಟ್ಟಿನಲ್ಲಿ ಮುದ್ದಣ್ಣನು ತನ್ನ ಕೃತಿಗಳಿಗೆ ಆಯ್ದುಕೊಂಡ ವಸ್ತುಗಳು ಪುರಾಣದ ಆಕರಗಳಾದರೂ ಅವುಗಳನ್ನು ಆಧುನಿಕ ಸಂವೇದನೆಯ ಹಿನ್ನೆಲೆಯಲ್ಲಿ ನಿರೂಪಿಸಿದ ಅಥವಾ ಅಭಿವ್ಯಕ್ತಿ ನೀಡಿದ ಧಾಟಿಯು ತುಂಬ ಮಹತ್ವದ್ದೆಂದು ಭಾವಿಸಲಾಗುವುದು. ಅಂದರೆ ಪುರಾಣದ ಕಥೆಗಳನ್ನು ನಿರೂಪಿಸುವ ತಂತ್ರ, ಅದನ್ನು ಹಳೆ ಹೊಸ ನುಡಿಗಟ್ಟಿನ ಭಾಷೆಗಳಿಂದ ನುಡಿಕೊಡುವ ವಿಧಾನ, ನಾಟಕೀಯ ಸಂಭಾಷಣೆ, ಪಾತ್ರಗಳ ಸಂವಾದ, ಪಾತ್ರಗಳ ಮನೋಧರ್ಮ, ಗದ್ಯ-ಪದ್ಯಗಳ ಬಳಕೆ ಆಶಯ ಇನ್ನು ಮೊದಲಾದ ಪ್ರಮುಖ ದೃಷ್ಟಿಯಿಂದ ಒಂದು ಹೊಚ್ಚ ಹೊಸ ಪರಂಪರೆಯನ್ನು ಸೃಷ್ಟಿಸಿದನ್ನು. ಅಂತೆಯೆ ಆತನ ಎಲ್ಲ ಕೃತಿಗಳೂ ಸ್ಥಿತ್ಯಂತರ ಸಮಾಜದ ಪ್ರತೀಕಗಳಾಗಿದ್ದು, ಪರಂಪರೆಯನ್ನು ಪುನರ್ಮೌಲ್ಯಕರಿಸುವ ಆಸ್ಥೆಯನ್ನು ಹೊಂದಿದೆ. ಹೀಗಾಗಿ ಮುದ್ದಣ್ಣನು ಹೊಸಗನ್ನಡ ಅರುಣೋದಯ ಸಾಹಿತ್ಯದ ಒಬ್ಬ ಮಹತ್ವದ ಕವಿಯಾಗಿ ಗಮನಾರ್ಹತೆ ಪಡೆದುಕೊಂಡಿದ್ದಾನೆ.

2.14 ಸ್ವಪರೀಕ್ಷಾ ಪ್ರಶ್ನೆಗಳು

2.14.1 ಧಾರ್ಮಿಕ ವಾಙ್ಮಯಕಾರರು ಯಾರು? ಹೊಸಗನ್ನಡ ಸಾಹಿತ್ಯ ದೃಷ್ಟಿಯಿಂದ ಇವರ ಪಾತ್ರವೇನು? ತಿಳಿಸಿ.

....

....

....

2.14.2 ಹೊಸಗನ್ನಡ ಸಾಹಿತ್ಯದ ಪ್ರಮುಖ ವೀರಶೈವ ಕವಿಗಳು ಯಾರು ? ಅವರು ಕೃತಿಗಳು ಯಾವ ದೃಷ್ಟಿಯಿಂದ ಪ್ರಮುಖವಾದವು? ಉತ್ತರಿಸಿ.

....

....

....

2.14.3 ಹೊಸಗನ್ನಡ ಅರುಣೋದಯ ಸಾಹಿತ್ಯದ ಪ್ರಮುಖ ಕವಯಿತ್ರಿಯರು ಯಾರು? ಅವರ ಬರವಣಿಗೆಯ ಪ್ರಮುಖ ವಸ್ತು ಯಾವುದು? ಹೆಸರಿಸಿ.

....

....

....

2.14.4 ಹೊಸಗನ್ನಡ ಅರುಣೋದಯ ಸಾಹಿತ್ಯದ ಪ್ರಮುಖ ಯಕ್ಷಗಾನ ಕವಿಗಳು ಯಾರು ? ತಿಳಿಸಿ.

....

....

....

2.14.5 ಚಾಮರಾಜೇಂದ್ರ ಕರ್ನಾಟಕ ನಾಟಕ ಸಭೆಯನ್ನು ಸ್ಥಾಪಿಸಿದವರು ಯಾರು? ಹೆಸರಿಸಿ.

....

....

....

2.14.6 ಬಸಪ್ಪಶಾಸ್ತ್ರಿಗಳು ಅನುವಾಧಿಸಿದ ಸಂಸ್ಕೃತ ಕೃತಿ ಯಾವುದು? ಹೆಸರಿಸಿ.

....

....

....

2.14.7 ಎಸ್.ಜಿ. ನರಸಿಂಹಾಚಾರರರು ಅನುವಾದಿಸಿದ ನಾಟಕಗಳಾವುವು? ಹೆಸರಿಸಿ.

....

....

....

2.14.8 "ನನ್ನ ಚಿಕ್ಕ ತಾಯಿ" ಕಥೆಯನ್ನು ಬರೆದವರು ಯಾರು? ಹೆಸರಿಸಿ.

....

....

....

2.14.9 " ವಾಗ್ದೇವಿ" ಕಾದಂಬರಿಯ ಕರ್ತೃ ಯಾರು ? ಹೆಸರಿಸಿ.

....

....

....

2.14.10 ಶಿವರಾಮ ನಾರಾಣಪ್ಪ ಧಾರೇಶ್ವರರು ಬರೆದ ಪ್ರಮುಖ ನಾಟಕ ಯಾವುದು? ಹೆಸರಿಸಿ.

....

....

....

2.14.11 ಎಂ.ಎಸ್.ಪುಟ್ಟಣ್ಣಯ್ಯನವರ ಬರೆದ ಕೃತಿಗಳು ಯಾವುವು? ಹೆಸರಿಸಿ.

....

....

....

2.14.12 ಬಂಕಿಯ ಚಂದ್ರರ "ದುರ್ಗೇಶ ನಂದಿನಿ" ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದವರು ಯಾರು? ಹೆಸರಿಸಿ.

....

....

....

2.14.13 ಮುದ್ದಣ್ಣನು ಬರೆದ ಕೃತಿಗಳಾವುವು? ಹೆಸರಿಸಿ.

....

....

....

2.14.14 ಕೆಂಪುನಾರಾಯಣನ ಕೃಷಿಗಳಾವುವು? ಅದರ ವಸ್ತು ಯಾವುದು? ಒಂದೆರಡು ಸಾಲುಗಳನ್ನು ಉತ್ತರಿಸಿ.

....

....

....

2.15 ಘಟಕದ ಸಾರಾಂಶ

ಹೊಸಗನ್ನಡ ಅರುಣೋದಯ ಸಾಹಿತ್ಯವು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಒಂದು ಮಹತ್ವದ ಮಜಲಾಗಿದ್ದು. ಅದು ಸ್ಥಿತ್ಯಂತರ ಸಮಾಜದ ಪ್ರಮುಖ ಲಕ್ಷಣಗಳನ್ನು ಗುರುತಿಸುವುದು. ಆ ಹಿನ್ನೆಲೆಯಲ್ಲಿ ಧಾರ್ಮಿಕ ವಾಙ್ಮಯಕಾರರು, ಕವಯಿತ್ರಿಯರು, ಯಕ್ಷಗಾನಕವಿಗಳು, ಚಾಮರಾಜ ಮತ್ತು ಆತನ ಆಸ್ಥಾನ ಕವಿ ಮತ್ತು ನಾಟಕಗಾರರು, ಅಂದಿನ ಹಳೆಯ ಮತ್ತು ಹೊಸ ದೃಷ್ಟಿಯ ಗದ್ಯಕಾರರು. ಪಶ್ಚಿಮ ಕರಾವಳಿಯ (ದೇಶಿಯ) ಲೇಖಕರು, ಮುಂಬಯಿನ ಕನ್ನಡ ಸುಧಾರಣವಾದಿ ಲೇಖಕರು, ಮುಂಬಯಿನ ರಂಗಭೂಮಿ ಮತ್ತು ಪ್ರಮುಖ ನಾಟಕಗಾರರು, ಕೆಂಪುನಾರಾಯಣ ಮತ್ತು ಮುದ್ದಣ್ಣ, ಧಾರವಾಡದ ವಿದ್ಯಾವರ್ಧಕ ಸಂಘ ಮುಂತಾದವುಗಳ ಪಾತ್ರವು ತುಂಬ ಗಮನಾರ್ಹವಾಗಿದ್ದು. ಅವರು ಸಾಹಿತ್ಯಿಕ ಮತ್ತು ಸಾಂಸ್ಕೃತಿಕವಾಗಿ ನೀಡಿದ ಒಟ್ಟಾರೆ ಕೊಡುಗೆಯು ಹೊಸಗನ್ನಡ ಅರುಣೋದಯ ಸಾಹಿತ್ಯದ ದೃಷ್ಟಿಯಿಂದ ತುಂಬ ಮಹತ್ವದ್ದವೆಂದು ಗುರುತಿಸಲಾಗುವುದು. ಇವರ ಒಟ್ಟಾರೆ ನೋಟವನ್ನು ನಾವು ಈ ಘಟಕದಲ್ಲಿ ತಿಳಿಯಬಹುದು.

2.16 ಅಭ್ಯಾಸ ಪ್ರಶ್ನೆಗಳು

2.16.1 ಹೊಸಗನ್ನಡ ಸಂವೇದನೆಯ ಹಿನ್ನೆಲೆಯಲ್ಲಿ ಧಾರ್ಮಿಕ ವಾಙ್ಮಯಕಾರರ ಕೊಡುಗೆಯ ಮಹತ್ವವನ್ನು ಕುರಿತು ಸಂಕ್ಷಿಪ್ತವಾಗಿ ವಿಶದ ಪಡಿಸಿ.

2.16.2 ಹೊಸಗನ್ನಡ ಸಾಹಿತ್ಯ ಅರುಣೋದಯದ ದೃಷ್ಟಿಯಿಂದ ಪಶ್ಚಿಮ ಕರಾವಳಿ, ಉತ್ತರಕನ್ನಡ ಮತ್ತು ಮುಂಬಯಿ ಕರ್ನಾಟಕದ ಸಾಹಿತಿಗಳ ಪಾತ್ರವನ್ನು ಕುರಿತು ಬರೆಯಿರಿ.

2.17 ಸ್ವಪರೀಕ್ಷಾ ಪ್ರಶ್ನೆಗಳಿಗೆ ಉತ್ತರ

2.17.1 ಜೈನರು, ವೀರಶೈವರು, ಅದ್ವೈತಿಗಳು, ವೈಷ್ಣವ ಮುಂತಾದವರು ವಹಿಸಿದ ಪಾತ್ರವು ಹೊಸಗನ್ನಡ ಅರುಣೋದಯದ ದೃಷ್ಟಿಯಿಂದ ತುಂಬ ಮಹತ್ವದ್ದು. ಅವರಲ್ಲಿ ಬ್ರಹ್ಮಣಾಂಕ, ಚಂದ್ರಸಾಗರ ವರ್ಣಿ, ಚನ್ನವೀರಸ್ವಾಮಿಗಳು, ಬಾಲಾಲೀಲಾ ಮಹಂತಸ್ವಾಮಿಗಳು, ನಾಗಭೂಷಣ ಮಠದಾರ್ಯ. ಶಿಶುನಾಳ ಷರೀಫ, ಸಚ್ಚಿದಾನಂದ, ಬ್ರಹ್ಮನಂದ; ವೆಂಕಟೇಶ, ಅಪರಾಳ ತಮ್ಮಣ್ಣ ಮುಂತಾದ ಪ್ರಮುಖ ಕವಿಗಳು ತುಂಬ ಗಮನಾರ್ಹರಾಗಿದ್ದಾರೆ.

2.17.2 ಅಟವೀಶ್ವರ ಸ್ವಾಮಿಗಳು, ವಿರಕ್ತಮಠದ ಚನ್ನವೀರಸ್ವಾಮಿಗಳು, ಹಾನಗಲ್ಲಿನ ವಿರಕ್ತಿಮಠದ ಕುಮಾರಸ್ವಾಮಿಗಳು, ಬಾಲಾಲೀಲಾ ಮಹಾಂತಸ್ವಾಮಿಗಳು. ನಾಗಭೂಷಣಮಠದಾರ್ಯ ಮುಂತಾದವರು ಪ್ರಮುಖರಾಗಿದ್ದು. ಅವರ ಕೃತಿಗಳು ಧಾರ್ಮಿಕ ಮನೋಧರ್ಮದಿಂದ ಕೂಡಿದ್ದರೂ. ಅವುಗಳಲ್ಲಿ ಬಳಸಲಾಗುವ ಭಾಷೆ, ಚಿಂತನೆ ಆಶಯ, ವಾಸ್ತವದ ತುಡಿತ, ಗದ್ಯದ ಬಳಕೆ ಮೊದಲಾದ ಅಂಶಗಳ ದೃಷ್ಟಿ ಆಧುನಿಕವಾಗಿ ಮಹತ್ವದ ಕೃತಿಗಳೆಂದು ಗುರುತಿಸಲಾಗುತ್ತದೆ.

2.17.3 ಪುರಂದರ ಹಾಸರ ಮಗಳು, ಹೆಳವನಕಟ್ಟೆಗಿರಿಯಮ್ಮ ಗಲಗಲಿ ಅವ್ವನವರು, ಸರೋಜನಿ ಮಹಿಷಿ, ಹಾಡಿನರಂಗಮ್ಮ ಮುಂತಾದ ಪ್ರಮುಖರು ಗಮನಾರ್ಹರಾಗಿದ್ದು. ಅವರ ಕೃತಿಯ ಆಕರಗಳು ಧಾರ್ಮಿಕ ಮನೋಧರ್ಮದಿಂದ ಕೂಡಿದ್ದು. ಆ ಹಿನ್ನೆಲೆಯಲ್ಲಿ ಅವರ ಆಧುನಿಕವಾದ ನೋವು, ನಲಿವು, ಬಿಡುಗಡೆ, ಸಮಸ್ಯೆಗಳನ್ನು ಕುರಿತು ಹೇಳುವ ಪ್ರಯತ್ನವನ್ನು ಮಾಡಿರುವುದನ್ನು ನಾವಿಂದು ಅರಿಯಬಹುದು.

*2.16.3.4.5.6.7.8.9.10.... ಮೊದಲಾದ ಪ್ರಮುಖ ಪ್ರಶ್ನೆಗಳಿಗೆ ಘಟಕ ಅಧ್ಯಯನದಿಂದ ಉತ್ತರಗಳನ್ನು ನೀವುಗಳೇ ಕಂಡುಕೊಳ್ಳುವ ಪ್ರಯತ್ನ ಮಾಡಿರಿ.

2.18 ಘಟಕದ ಅಭ್ಯಾಸಕ್ಕೆ ಉಪಯುಕ್ತ ಗ್ರಂಥಗಳು

2.18.1 ಹೊಸಗನ್ನಡ ಸಾಹಿತ್ಯ : ಪ್ರೊ. ಎಲ್.ಎಸ್.ಶೇಷಗಿರಿರಾವ್

2.18.2 ಹೊಸಗನ್ನಡ ಅರುಣೋದಯ : ಡಾ. ಶ್ರೀನಿವಾಸ ಹಾವನೂರು

2.18.3 ಕನ್ನಡ ಸಾಹಿತ್ಯ ಚರಿತ್ರೆ : ಡಾ. ರಂ.ಶ್ರೀ. ಮುಗಳಿ

2.18.4 ಕನ್ನಡ ಸಾಹಿತ್ಯ ಸಂಗಾತಿ : ಕೀರ್ತಿನಾಥ ಕುರ್ತಕೋಟಿ.

ಟಿಪ್ಪಣಿಗಳು

ಸಂಚಿಕೆ - 4
ಕನ್ನಡ ಸಾಹಿತ್ಯ ಚರಿತ್ರೆ - ಆಧುನಿಕ ಕನ್ನಡ ಸಾಹಿತ್ಯ

ಘಟಕ - 3
ನವೋದಯ ಮತ್ತು ಪ್ರಗತಿಶೀಲ ಸಾಹಿತ್ಯ

ಪರಿವಿಡಿ :

3.0 ಘಟಕದ ಉದ್ದೇಶ

- ಪೀಠಿಕೆಯ ಹಿನ್ನೆಲೆಯಲ್ಲಿ ಘಟಕದ ಸ್ವರೂಪ ಮತ್ತು ಮಹತ್ವವನ್ನು ಅರಿಯುವಿರಿ.
- ಆಧುನಿಕ ಕನ್ನಡ ಸಾಹಿತ್ಯ ಸೃಷ್ಟಿಯ ಹಿಂದೆ ಇದ್ದಂತಹ ಪ್ರೇರಣೆ -ಪ್ರಭಾವಗಳನ್ನು ಕುರಿತು ತಿಳಿಯುವಿರಿ.
- ನವೋದಯ ಸಾಹಿತ್ಯ ಎಂದರೇನು? ಅದರ ಪ್ರೇರಣೆ ಪ್ರಭಾವ ಲಕ್ಷಣ ಮತ್ತು ಸ್ವರೂಪ ವನ್ನು ಕುರಿತು ತಿಳಿಯುವಿರಿ.
- ಇಂಗ್ಲೀಷ್ ಭಾಷೆ, ಸಾಹಿತ್ಯ ಸಂಪರ್ಕದಿಂದ ಕನ್ನಡ ಸಾಹಿತ್ಯದಲ್ಲುಂಟಾದ ಹೊಸ ಪ್ರಯೋಗಗಳನ್ನು ಅರಿಯುವಿರಿ.
- ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬಿ.ಎಂ.ಶ್ರೀ. ಬೇಂದ್ರೆ, ಕುವೆಂಪು, ಕಾರಂತ ಮಾಸ್ತಿ, ಪು.ತಿ.ನ., ಅಡಿಗ, ಗೋಕಾಕ್ ಮೊದಲಾದ ಶ್ರೇಷ್ಠ ಎಲ್ಲ ದೊಡ್ಡ ಲೇಖಕರು ಸಾಹಿತ್ಯ ಕೃಷಿಯನ್ನು ಆರಂಬಿಸಿದ ಬಗೆಯನ್ನು ತಿಳಿಯುವಿರಿ.
- ಪ್ರಗತಿಶೀಲ ಸಾಹಿತ್ಯ ಸೃಷ್ಟಿಯ ಹಿಂದೆ ಇದ್ದ ಪ್ರೇರಣೆ ಪ್ರಭಾವ, ಅದರ ಸ್ವರೂಪ ಮತ್ತು ವ್ಯಾಪ್ತಿಯನ್ನು ಕುರಿತು ಅರಿಯುವಿರಿ.
- ಪ್ರಗತಿಶೀಲ ಸಾಹಿತ್ಯದ ಪ್ರಮುಖ ಲಕ್ಷಣ ಮತ್ತು ಮೌಲ್ಯಗಳು ಏನೆಂಬುದನ್ನು ತಿಳಿದುಕೊಳ್ಳುವಿರಿ.
- ಅಭ್ಯಾಸ ಪ್ರಶ್ನೆಗಳನ್ನು ತಿಳಿಯುವಿರಿ.
- ಸ್ವಪರೀಕ್ಷಾ ಪ್ರಶ್ನೆಗಳನ್ನು ತಿಳಿಯುವಿರಿ.
- ಸ್ವಪರೀಕ್ಷಾ ಪ್ರಶ್ನೆಗಳಿಗೆ ಉತ್ತರವನ್ನು ಗಮನಿಸುವಿರಿ.
- ಘಟಕದ ಸಾರಾಂಶದ ಹಿನ್ನೆಲೆಯಲ್ಲಿ ನವೋದಯ, ಪ್ರಗತಿಶೀಲ ಸಾಹಿತ್ಯದ ಸ್ವರೂಪ ಮತ್ತು ಮಹತ್ವವನ್ನು ಕುರಿತು ತಿಳಿಯುವಿರಿ.
- ಹೆಚ್ಚಿನ ಓದುಗೆ ಅಭ್ಯಾಸ ಗ್ರಂಥಗಳನ್ನು ಗಮನಿಸಿವಿರಿ.

3.1 ಪೀಠಿಕೆ

ಸಾಹಿತ್ಯ ನಿಂತ ನೀರಲ್ಲ : ನಿತ್ಯವೂ ಹರಿಯುವ ಜೀವನದಿಯಂತೆ. ಅದು ಕಾಲದ ಸ್ಥಿತ್ಯಂತರಕ್ಕೆ ಅನುಗುಣವಾಗಿ ತನ್ನಗತಿಯನ್ನು, ಗಮನವನ್ನು ಬದಲಾಯಿಸುತ್ತಾ ಹರಿಯುತ್ತಿರುತ್ತದೆ. ಹಾಗಾಗಿ ಸಾಹಿತ್ಯ, ಎಂದೂ ಶೂನ್ಯದಿಂದ ಉದ್ಭವಿಸುವುದಿಲ್ಲ. ಆದುದರಿಂದ ಸಾಹಿತ್ಯ ಸ್ಥಿತ್ಯಾಂತರ ಬದುಕಿನ ಪ್ರತೀಕವಾಗಿದ್ದು, ಅದು ಆಗಿಂದಾಗ್ಗೆ ಕಾಣಿಸಿಕೊಳ್ಳುವ ಸಾಮಾಜಿಕ ತಲ್ಲಣ, ರಾಜಕೀಯ ವ್ಯವಸ್ಥೆ, ಆರ್ಥಿಕ ಸ್ಥಿತ್ಯಾಂತರ, ಧಾರ್ಮಿಕ ಒತ್ತಡ, ಭೌಗೋಳಿಕ ನೆಲೆ, ವೈಚಾರಿಕ ಅರಿವು ಇನ್ನು ಮೊದಲಾದ ಒಳಗಿನ ಮತ್ತು ಹೊರಗಿನ ನಿಕಷಗಳಿಂದ ರೂಪುಗೊಳ್ಳುವ ಒಂದು ಬಗೆಯ ಸೃಜನಶೀಲ ವಿಧಾನವೆಂದು ಗುರುತಿಸಬಹುದು. ಆದುದ್ದರಿಂದ ಸಾಹಿತ್ಯ ರಚನೆಯ ಏಳು ಬೀಳುಗಳು, ದೃಷ್ಟಿಧೋರಣೆಗಳು ಕೇವಲ ಸಾಹಿತ್ಯ ಚರಿತ್ರೆಯನ್ನಷ್ಟೇ ಹೇಳುವುದಿಲ್ಲ. ಬದಲಾಗಿ ಆ ಸಮಾಜದ ರಾಜಕೀಯ ಧಾರ್ಮಿಕ ಹಾಗೂ ಸಾಂಸ್ಕೃತಿಯ ಇತಿಹಾಸದ ಕಡೆಗೂ ಬೆಳಕು ಹಾಯಿಸುತ್ತದೆ.

ಹೀಗಾಗಿ ಯಾವುದೇ ಸಾಹಿತ್ಯದ ಚರಿತ್ರೆ ನಿರಂತರವಾದ ಕ್ರಾಂತಿ ಚಳುವಳಿಗಳ, ಪ್ರಯೋಗಗಳ ಕತೆಯೇ ಆಗಿರುತ್ತದೆ. ಕನ್ನಡ ಸಾಹಿತ್ಯ ಈ ಮಾತಿಗೆ ಅಪವಾದವಲ್ಲ. ಸಂಪ್ರದಾಯ ನವ್ಯತೆಗಳು ಹೋರಾಟ,

ಅಂತಿಮವಾಗಿ ನವ್ಯತೆಯ ವಿಜಯ ಇವು ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಕಾಲಕಾಲಕ್ಕೆ ಕಂಡು ಬರುವ ಪ್ರಕ್ರಿಯೆಗಳು. ಕನ್ನಡ ಸಾಹಿತ್ಯ ಉದ್ದಕ್ಕೂ ಪರಂಪರೆಯ ನೆಲೆಗಟ್ಟಿನ ಮೇಲೆ ನಿಂತೇ ಹೊಸತನವನ್ನು ಸ್ವಾಗತಿಸುತ್ತ, ಅರಗಿಸಿಕೊಳ್ಳುತ್ತ ಸಮನ್ವಯದ ಹಿಂದಿಯಲ್ಲಿ ಸಾಗಿಬಂದಿದೆ. ಹಳಗನ್ನಡ ನಡುಗನ್ನಡ ಸಾಹಿತ್ಯಗಳಂತೆಯೆ ಹೊಸಗನ್ನಡ ಸಾಹಿತ್ಯ ಅಥವಾ ಆಧುನಿಕ ಕನ್ನಡ ಸಾಹಿತ್ಯ ಕೂಡಾ ಇಂಥ ಸಮನ್ವಯದ ಫಲವೇ ಆಗಿದೆ. ಒಂದು ಕಡೆ ಸುದೀರ್ಘವೂ ಶ್ರೀಮಂತವೂ ಆದ ಪರಂಪರೆ, ಇನ್ನೊಂದು ಕಡೆ ಪ್ರಬಲವೂ ಪ್ರಖರವೂ ಸಂಕೀರ್ಣವೂ ಆದ ಇಂಗ್ಲೀಷ್ ಸಾಹಿತ್ಯದ ಪ್ರಭಾವ. ಇವುಗಳ ದಾಂಪತ್ಯವೇ ಆಧುನಿಕ ಕನ್ನಡ ಸಾಹಿತ್ಯದ ಜನ್ಮಭೂಮಿ ಎಂದು ಕರೆಯಲಾಗುವುದು.

ಆಧುನಿಕ ಕನ್ನಡ ಸಾಹಿತ್ಯವೆಂದರೆ ಮುಖ್ಯವಾಗಿ ಇಪ್ಪನೆಯ ಶತಮಾನದ ಸಾಹಿತ್ಯವೆಂದು ಗುರುತಿಸುತ್ತೇವೆ. ಆದರೆ ಹತ್ತೊಂಬತ್ತನೆಯ ಶತಮಾನದಲ್ಲಿಯೆ ಇದರ ಪೀಠಿಕೆ ಸಿದ್ಧವಾಯಿತು. ಈ ಕುರಿತು ನೀವು ಹಿಂದಿನ ಘಟಕದಿಂದ ಅರಿತ್ತಿದ್ದೀರಿ. ಹೀಗಾಗಿ ಇನ್ನು ನೀವು, ಪ್ರಸ್ತುತ ಘಟಕದಲ್ಲಿ ಆಧುನಿಕ ಕನ್ನಡ ಸಾಹಿತ್ಯ ಸಮಗ್ರ ಸ್ವರೂಪವನ್ನು ತಿಳಿಯಲು ಪ್ರಯತ್ನಿಸುವಿರಿ. ಆದರೆ ಈ ಹೊಸ ಸಾಹಿತ್ಯದ ಬೀಜಗಳು ಕಳೆದ ಶತಮಾನದಲ್ಲೇ ಮೊಳೆತು, ಬೆಳೆ ಹುಲುಸಾಗಿ ಕೈಗೆ ಬಂದದ್ದು ಇಪ್ಪತ್ತನೆಯ ಶತಮಾನದಲ್ಲಿ. ಅಂದರೆ ಹಿಂದಿನ ಶತಮಾನದಿಂದ ದೊರಕಿದ ಪಶ್ಚಿಮದ ಪ್ರಭಾವ ಪ್ರೇರಣೆಯ ಫಲದಿಂದ ಶಿಕ್ಷಣ ಕ್ಷೇತ್ರದಲ್ಲಿ ಪ್ರವೇಶವಾದ ಆಂಗ್ಲ ವಿದ್ಯಾಭ್ಯಾಸ, ಮುದ್ರಣ, ಆಡಳಿತ, ವ್ಯವಹಾರ,ಹೊಸ ಶಿಕ್ಷಣ ಪದ್ಧತಿ, ಹೊಸ ವಿಚಾರ ಸರಣಿ, ವಿಜ್ಞಾನ, ಇಂಗ್ಲೀಷ್ ಸಾಹಿತ್ಯ, ಪ್ರಪಂಚದ ಪರಿಜ್ಞಾನ, ಮಿಶನರಿಯ ಸಮೂಹಿಕ ಪ್ರವೃತ್ತಿ ಮೊದಲಾದವು ಪ್ರವೇಶವಾಗಿ ಭಾರತೀಯರ ಜೀವನ ದೃಷ್ಟಿ ಪಲ್ಲಟಿಸಿತು ಹಾಗೂ ಮೌಲ್ಯಗಳು ಬದಲಾದವು. ಅಂತೆಯೆ ಅದರಿಂದ ಬದುಕಿನ ರೀತಿನೀತಿಗಳು ಬದಲಾದವು. ಅದುವರೆಗೆ ಮತಧರ್ಮದ ಆವರಣದಲ್ಲಿ ಬೆಳೆದು ಬಂದಿದ ಭಾರತೀಯರ ಸಮಷ್ಟಿ ಪ್ರಜ್ಞೆ ಲೌಕಿಕವಾದ ವ್ಯಷ್ಟಿಪ್ರಜ್ಞೆಯಾಗಿ ಸಂಕ್ರಮಣಗೊಂಡಿತು. ಸ್ವತಂತ್ರ ವಿಚಾರಶಕ್ತಿ ಅವರಲ್ಲಿ ಮೂಡತೊಡಗಿತು. ಇದರಿಂದ ಅವರಲ್ಲಿ ಸ್ವತಂತ್ರ್ಯಪ್ರೇಮ. ರಾಷ್ಟ್ರೀಯ ಭಾವನೆ, ಸ್ವಾಭಿಮಾನ, ಸ್ವತಂತ್ರ ವಿಚಾರ ಸರಣಿಯು ಬೆಳೆಯತೊಡಗಿತು. ಹಾಗೆಯೆ ಇವುಗಳ ಮುಂದಿನ ರಾಷ್ಟ್ರೀಯ ಮತ್ತು ರಾಜಕೀಯ ಆಂದೋಲಕ್ಕೂ ದಾರಿ ಮಾಡಿಕೊಟ್ಟಿತು. ಅಂತೆಯೆ ಈ ಸ್ಥಿತ್ಯಂತರ ಬೆಳವಣಿಗೆಯು ಆಧುನಿಕ ಸಾಹಿತ್ಯದ ವಿಕಾಸಕ್ಕೂ ಪ್ರಮುಖ ಕಾರಣವಾಯಿತೆಂದು ಗುರುತಿಸಬಹುದಾಗಿದೆ.

ಇದು ಅದುವರೆಗಿನ ಸಾಹಿತ್ಯದ ಪ್ರಮುಖ ಆಸಕ್ತಿಯ ವಸ್ತುವಾದ ದೇವರು, ಧರ್ಮದಿಂದ ಬದಲಿಸಿ, ಈ ಸಾಹಿತ್ಯದ ಆಸಕ್ತಿಯ ಕೇಂದ್ರ ಮನುಷ್ಯನೇ ಹೊರತು, ದೇವರಲ್ಲ. ಅಂದರೆ ಇದು ದೇವರನ್ನು ಮರೆಯಲೇ ಬೇಕೆಂದು ಹೇಳಲಿಲ್ಲ. ಮಾನವೀಯತೆ ಮುಖ್ಯವೆಂದು ತಿಳಿಸುವ ಮೂಲಕ, ಇಹಲೋಕದ ಬಾಳು ಪರಲೋಕಕ್ಕೆ ದಾರಿ. ಈ ಬಾಳಿನಲ್ಲೇ ಇದಕ್ಕೆ ಬಿಡುಗಡೆ ಎಂದು ತೋರಿಸಿತು. ಹಾಗೆಯೆ ಮನುಷ್ಯ ದೇವರ ಸಂಬಂಧವಲ್ಲದೆ ಮನುಷ್ಯ ಇತರ ಸಂಬಂಧಗಳು ತುಂಬ ಮೌಲಿಕವಾಗಿದ್ದು, ಆತನ ಭಾವನೆ, ಆಸೆಗಳು, ಕನಸುಗಳು, ಲೋಕದ ಬಗ್ಗೆ ಕುತೂಹಲ, ವಿಸ್ಮಯ, ಪ್ರೀತಿ, ವಾಸ್ತವತೆ. ಆಸಕ್ತಿಯ, ಮನುಷ್ಯ - ನಿಸರ್ಗ, ಮನುಷ್ಯ - ಮನುಷ್ಯರ ಸಂಬಂಧ, ಕುಟುಂಬ - ಮನುಷ್ಯ, ಸ್ನೇಹ ಪ್ರೇಮ, ರಾಗ-ದ್ವೇಷ, ನೋವು - ನಲಿವು. ಸಾಮಾಜಿಕನ್ಯಾಯ, ಸಮಾನತೆ, ಸ್ವಾತಂತ್ರ್ಯ. ಇನ್ನು ಮೊದಲಾದ ಆಧುನಿಕ ಬದುಕಿನ ನೂರಾರು ಆಸಕ್ತಿಗಳನ್ನು, ವೈಶಿಷ್ಟ್ಯತೆಗಳನ್ನು ತೋರಿಸಿತು.

ಹೀಗೆ ಇದು, ಸುಮಾರು ಒಂದು ಶತಮಾನದ ಇತಿಹಾಸವನ್ನು ಹೊಂದಿದ್ದು, ನಾಲ್ಕು ಪ್ರಮುಖ ಸಂಕ್ರಮಣ ಕಾಲಘಟ್ಟಗಳನ್ನು ಕೂಡ ಕಂಡಿದೆ. ಅವುಗಳಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯವೆಂಬ ನಾಲ್ಕು ಸಾಹಿತ್ಯ ಚಳುವಳಿಗಳು ಗಮನಾರ್ಹ. ಈ ಹಿನ್ನೆಲೆಯಲ್ಲಿ ಆಧುನಿಕ ಕನ್ನಡ ಸಾಹಿತ್ಯದ ಒಟ್ಟು ನೋಟವನ್ನು ನಾವು ತಿಳಿಯಬಹುದಾಗಿದೆ. ಆದರೆ ನಾವೀಗ ಪ್ರಸ್ತುತ ಘಟಕದಲ್ಲಿ ನವೋದಯ, ಪ್ರಗತಿಶೀಲ ಸಾಹಿತ್ಯ ಚಳುವಳಿಗಳನ್ನು ಮಾತ್ರ ತಿಳಿದುಕೊಳ್ಳುವ ಪ್ರಯತ್ನ ಮಾಡೋಣ.

3.2 ನವೋದಯ ಸಾಹಿತ್ಯ

ಪ್ರಾಚೀನ ಕನ್ನಡ ಸಾಹಿತ್ಯ ಬಹುಮಟ್ಟಿಗೆ ಸಂಸ್ಕೃತ ಸ್ವಲ್ಪಮಟ್ಟಿಗೆ ಪ್ರಾಕೃತಕ್ಕೆ ಋಣಿಯಾಗಿರುವಂತೆ, ಆಧುನಿಕ ಸಾಹಿತ್ಯ ಬಹುಮಟ್ಟಿಗೆ ಇಂಗ್ಲೀಷ್ ಸ್ವಲ್ಪಮಟ್ಟಿಗೆ ಗ್ರೀಕ್ ಭಾಷೆಗಳಿಗೆ ಋಣಿಯಾಗಿದೆ. ಈ ಹಿಂದೆಯೇ ನಿಮ್ಮ ಗಮನಕ್ಕೆ ತಂದಿರುವಂತೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೀನ ಪ್ರಯೋಗಗಳು ಪ್ರಾರಂಭವಾದದ್ದು ಇಂಗ್ಲೀಷ್ ಸಂಪರ್ಕ ಹಾಗೂ ವಿಚಾರ ಸರಣಿಗಳಿಂದ. ಹಾಗಾಗಿ ಕನ್ನಡ ನವೋದಯ ಸಾಹಿತ್ಯವು ಇಂಗ್ಲೀಷನ ರೋಮ್ಯಾಂಟಿಕ್ ಸಾಹಿತ್ಯದಿಂದ ಪ್ರೇರಣೆಯಿಂದ ಉಂಟಾಯಿತು. ಈ ಕುರಿತು ಹೊಸಗನ್ನಡದಲ್ಲಿ ನವೋದಯ ಬಂದದ್ದು ಇಂಗ್ಲೀಷ್ ರೋಮ್ಯಾಂಟಿಕ್ ಕವಿಗಳ ಕಾವ್ಯ ಕಥೆ, ಕಾದಂಬರಿ, ರೂಪಗಳ ಪ್ರೇರಣೆಯಿಂದ ಎಂದು ಜಿ.ಎಸ್.ಶಿವರುದ್ರಪ್ಪನವರು ಹೇಳಿರುವ ಮಾತುಗಳಿಂದ ನಾವು ಅರಿಯಬಹುದು. ಹಾಗಾಗಿ ಇದು, ಇಪ್ಪತ್ತನೆಯ ಶತಮಾನದ ಮಧ್ಯಭಾಗದಲ್ಲಿ ನವ್ಯ ಸಾಹಿತ್ಯವನ್ನು ಪ್ರತಿಪಾದಿಸುತ್ತಿದ್ದವರು ಅದಕ್ಕಿಂತ ಹಿಂದಿನ ಕಾಲದ ಆಧುನಿಕ ಕನ್ನಡ ಸಾಹಿತ್ಯವನ್ನು (ಪ್ರಧಾನವಾಗಿ ಕಾವ್ಯವನ್ನುದ್ದೇಶಿಸಿ) "ರೊಮ್ಯಾಟಿಕ್ ಕಾವ್ಯ"ಎಂದು ಕರೆಯುತ್ತಿದ್ದರು. ಹಾಗೆ ಕರೆಯುವಾಗ ಅವರಲ್ಲಿ ಆ ಸಾಹಿತ್ಯದ ಬಗ್ಗೆ ಒಂದು ಸಣ್ಣ ಹೀಗಳಿಕೆಯ ಧನಿ ಕೂಡಾ ಇತ್ತು. ರೊಮ್ಯಾಂಟಿಕ್ ಸಾಹಿತ್ಯವೆಂದರೆ ಅದೊಂದು ಭಾವನಾ ಪ್ರಧಾನ ಸಾಹಿತ್ಯ, ಬರೀ ಆದರ್ಶದಲ್ಲಿ ಅಲೆದಾಡುವ ಸಾಹಿತ್ಯ, ರಸನಿಷ್ಠ ಸಾಹಿತ್ಯ ಇತ್ಯಾದಿಯಾದ ಅರ್ಥ ಅವರ ದನಿಯಲ್ಲಿತ್ತು. ಅದನ್ನು " ರಮ್ಯಕಾವ್ಯ"ಎಂದು ಕೆಲವರು ಕರೆದಿದ್ದರು. ಆದರೆ ಆ ಸಾಹಿತ್ಯದಲ್ಲಿ ಕೆಲಸಮಾಡುತ್ತಿದ್ದ ಯಾರೂ ಅವರೆಗೆ ಅದಕ್ಕೆ ಯಾವ ಹೆಸರನ್ನೂ ಕೊಟ್ಟು ಕೊಂಡಿರಲಿಲ್ಲ. ಅದಕ್ಕೆಂದೇ ಕುವೆಂಪು ಅವರು ಆ ಕಾವ್ಯಪಂಥವನ್ನು "ನವೋದಯ ಕಾವ್ಯ" ಎಂದು ಹೆಸರಿಟ್ಟು ಕರೆದರು. ಅನಂತರ "ನವೋದಯ ಸಾಹಿತ್ಯ" ಎಂಬ ಆ ಹೆಸರೇ ಜನಪ್ರಿಯವಾಯಿತು.

ಹದಿನೆಂಟು -ಹತ್ತೊಂಬತ್ತನೆಯ ಶತಮಾನದಲ್ಲಿ ಇಂಗ್ಲೀಷ್ ಕಾವ್ಯದಲ್ಲಿ ನಡೆದ ಹೊಸ ಪ್ರಯೋಗಗಳನ್ನು "ರೊಮ್ಯಾಂಟಿಕ್ ಚಳವಳಿ"ಎಂದು ಕರೆಯಲಾಗುತ್ತಿತ್ತು. ಅಲ್ಲಿ ಕೂಡ ಅವರೆಗಿದ್ದ "ಕ್ಲಾಸಿಕಲ್" ಕಾವ್ಯ ಪದ್ಧತಿ ಬೇರೊಂದು ತಿರುವಿಗೆ ಹೊರಳಿಕೊಂಡು "ರೊಮ್ಯಾಂಟಿಕ್ ಕಾವ್ಯ" ಹುಟ್ಟಿತ್ತು. ಅಲ್ಲಿ ಹೇಗೆ ರೊಮ್ಯಾಂಟಿಕ್ ಕಾವ್ಯವು ಭಾವಗೀತಾತ್ಮಕ ಅಭಿವ್ಯಕ್ತಿಯಾಗಿತ್ತೋ ಹಾಗೆಯೇ ಕನ್ನಡದಲ್ಲಿಯೂ ಇಪ್ಪತ್ತನೇ ಶತಮಾನದ ಆರಂಭದಲ್ಲಿ ಉದಯವಾದ ಸಾಹಿತ್ಯವೂ ಭಾವಗೀತಾತ್ಮಕ ಅಭಿವ್ಯಕ್ತಿಯೇ ಆಗಿತ್ತು. ಆದ್ದರಿಂದಲೇ ಆ ಬಗೆಯ ಕನ್ನಡ ಸಾಹಿತ್ಯವನ್ನೂ ನವ್ಯರು ರೊಮ್ಯಾಂಟಿಕ್ ಕಾವ್ಯ ಎಂದು ಕರೆದದ್ದು. ಅಷ್ಟು ಮಾತ್ರವಲ್ಲ. ಆ ಕಾಲದ ಕನ್ನಡ ಕವಿಗಳು ಪ್ರಭಾವ ಪಡೆದಿದ್ದುದೂ ಪ್ರಮುಖ ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳಾದ ವರ್ಡ್ಸ್‌ವರ್ತ್, ಷೆಲ್ಲಿ, ಕೀಟ್ಸ್, ಕೋಲ್‌ರಿಜ್ ಮುಂತಾದ ಕವಿಗಳಿಂದಲೇ. ವಸ್ತುನಿಷ್ಠವಾಗಿ ನೋಡಿದರೆ ಈ ರೊಮ್ಯಾಂಟಿಕ್ ಮನೋವೃತ್ತಿ ಭಾರತೀಯರಿಗೆ ಹೊಸದೇನೂ ಅಲ್ಲ. ಆದರೆ ರೊಮ್ಯಾಂಟಿಕ್ ಕವಿಗಳಿಂದ ಕನ್ನಡ ಕವಿಗಳು "ರೂಪಾಂಶ"ದಲ್ಲಿ ಮಾತ್ರ ಗಾಢವಾಗಿ ಪ್ರಭಾವಿತರಾಗಿದ್ದರು.

ರೊಮ್ಯಾಂಟಿಕ್, ರೊಮಾನ್ಸ್ ಎಂಬ ಶಬ್ದಗಳಿಗೆ ಮೂಲದಲ್ಲಿ ವಿವಿಧ ಅರ್ಥಗಳಿವೆ. 'ಕಟ್ಟುಕತೆ', 'ಕಲ್ಪಿತ ವಿಷಯಗಳ ಕಂತೆ', 'ಯಕ್ಷಕಿನ್ನರರ ಕತೆಯಂತೆ ವಿಲಕ್ಷಣವಾದುದು', 'ಸುಳ್ಳುಹೇಳುವುದು' ಇತ್ಯಾದಿ ಅರ್ಥಗಳಿಂದ ಹಿಡಿದು 'ಉದಾರಪ್ರವೃತ್ತಿ', 'ಭಾವನಾಪ್ರಧಾನತೆ', 'ಒಂದು ಮನೋರೋಗ', 'ರಸನಿಷ್ಠೆ', 'ಆದರ್ಶಮಯತೆ' 'ನವುರಾದದ್ದು', 'ಕೋಮಲ' ಮುಂತಾದ ಹಲವಾರು ಅರ್ಥಗಳಿವೆ. ಹದಿನೆಂಟನೆಯ ಶತಮಾನದ ಹೊತ್ತಿಗೆ 'ರೊಮ್ಯಾಂಟಿಕ್' ಎಂಬ ಶಬ್ದ ನಿಸರ್ಗ ಪರಿಸರವನ್ನು ಸೂಚಿಸುವ ಪದವಾಗಿ ಬಳಕೆಯಾಗಿತ್ತು. ಹೀಗೆ ಈ ಶಬ್ದಕ್ಕೆ ಹಲವಾರು ಬಗೆಯ ಅರ್ಥಗಳಿದ್ದರೂ ಸಹ ಪ್ರೇಮ, ಏಕಾಂತತೆ, ನಿಸರ್ಗಪ್ರಿಯತೆ, ಅನುಭಾವಿಕತೆ, ಅಹಂ ನಿಷ್ಠತೆ, ಆದರ್ಶಪರತೆ ಈ ಬಗೆಯ ಅರ್ಥಗಳನ್ನು ಒಳಗೊಂಡು ಅದು ಒಂದು ಸಾಹಿತ್ಯ ಪಂಥವಾಯಿತು. ಈ ಹಿನ್ನೆಲೆಯಿಂದ ನೋಡಿದಾಗ ಕನ್ನಡದ ನವೋದಯ ಕವಿಗಳ ಕಾವ್ಯಧರ್ಮದಲ್ಲಿ ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳ ಮೂಲದ್ರವ್ಯವನ್ನು ಗುರುತಿಸಬಹುದಾಗಿದೆ. ಈ ದಿಸೆಯಲ್ಲಿ ನಮ್ಮ ನವೋದಯ ಕವಿಗಳು ಅಂಥ ಮನೋಧರ್ಮವನ್ನು ಪಾಶ್ಚಾತ್ಯದಿಂದ

ಕಲಿಯಬೇಕಾಗಲಿಲ್ಲ. ಯಾಕೆಂದರೆ ಆ ಮನೋಧರ್ಮ ನಮ್ಮ ಪರಂಪರೆಯಲ್ಲೇ ಇತ್ತು ಆದರೆ ಸಾಹಿತ್ಯದ ತಾಂತ್ರಿಕ ಪರಿಕರಗಳಲ್ಲಿ ಮಾತ್ರ ನಮ್ಮ ಕವಿಗಳು ಪಾಶ್ಚಾತ್ಯರಿಗೆ ಋಣಿ.

3.2.0 ಕನ್ನಡ ನವೋದಯ ಸಾಹಿತ್ಯದ ಪ್ರೇರಣೆಗಳು

"ಹೊಸಗನ್ನಡದಲ್ಲಿ ನವೋದಯ ಬಂದದ್ದು ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳ ಕಾವ್ಯರೂಪಗಳ ಪ್ರೇರಣೆಯಿಂದ" ಎಂದಿರುವ ಡಾ. ಜಿ.ಎಸ್. ಶಿವರುದ್ರಪ್ಪನವರು ಮತ್ತೊಂದು ಕಡೆ "ಈ ಹೊಸಗನ್ನಡ ಕಾವ್ಯ ಹಂತ ಹಂತಲ್ಲೂ ಪಾಶ್ಚಾತ್ಯ ಕಾವ್ಯ ಪ್ರೇರಣೆಯಿಂದಲೇ ಹೊಸ ರೂಪಗಳನ್ನು ಆವಿಷ್ಕಾರ ಮಾಡಿಕೊಂಡಂತೆ ತೋರುವುದಾದರೂ ಈ ಎಲ್ಲ ಪ್ರಯೋಗಗಳ ಹಿಂದೆ, ಇಡೀ ಕನ್ನಡ ಸಾಹಿತ್ಯದ ಪರಂಪರೆಯೆ ಒಂದು ರೀತಿಯಲ್ಲಿ ಪುನರಾವರ್ತನೆಯಾಗಿದೆ. ಈ ಎಲ್ಲಾ ಪ್ರಯೋಗಗಳ ಮೂಲ ಉದ್ದೇಶ ಪರಂಪರೆಯ ಸೆಳೆತದಿಂದ ತಪ್ಪಿಸಿಕೊಂಡು, ಹೊಸತೊಂದನ್ನು ನಿರ್ಮಾಣ ಮಾಡುವ ಪ್ರಯತ್ನವೇ ಆಗಿದ್ದರೂ, ಜ್ಞಾತವಾಗಿಯೋ ಅಜ್ಞಾತವಾಗಿಯೋ ಕನ್ನಡ ಕವಿಗಳು ತಮ್ಮ ಹಿಂದಿರುವ ಕಾವ್ಯ ಪರಂಪರೆಯಿಂದ ಅನೇಕ ಸೂಚನೆಗಳನ್ನೂ ನಿರ್ದೇಶನಗಳನ್ನು ಪಡೆದಿದ್ದಾರೆ. ನಾವು ಕೇವಲ ಪರಾನುಕರಣೆಯಿಂದಾಗಲೀ ಪರಾನುಸರಣೆಯಿಂದಾಗಲೀ ಕಾವ್ಯಕ್ಕೆ ಹೊಸತನವನ್ನು ತಂದು ಕೊಳ್ಳಲಿಲ್ಲ. ಈ ಪ್ರಯೋಗ ನವೀನ ಹಾಗೂ ಪ್ರಾಚೀನ ಪ್ರಜ್ಞೆಯ ಸಂಘರ್ಷ ಸಮನ್ವಯಗಳಿಂದ ಸ್ಫೂರ್ತಗೊಂಡಿದ್ದು ಎನ್ನುವುದನ್ನು ದೃಢಪಡಿಸುತ್ತದೆ" ಎಂದಿದ್ದಾರೆ. ಈ ಮಾತುಗಳು ಆಧುನಿಕ ಕನ್ನಡ ಸಾಹಿತ್ಯದ ಹಿನ್ನೆಲೆಯನ್ನು ಕುರಿತು ಆಲೋಚಿಸುವಾಗ ಅತ್ಯಂತ ಗಮನಾರ್ಹವಾದುದು.

ಹತ್ತರಿಂದ ಹದಿನೆಂಟನೇ ಶತಮಾನದವರೆಗೆ ಉಚ್ಛ್ರಾಯದಲ್ಲೇ ಹರಿದ ಕನ್ನಡ ಸಾಹಿತ್ಯ ಕೃಷಿ ಅನಂತರ ಕ್ಷೀಣವಾಗಲು ಹಲವಾರು ಕಾರಣಗಳಿದ್ದವು. ಬಹುಮುಖ್ಯ ಕಾರಣವೆಂದರೆ ಭಾರತದ ಆಡಳಿತ ಸೂತ್ರಗಳನ್ನೆಲ್ಲಾ ತನ್ನ ಕೈಗೆ ತೆಗೆದುಕೊಂಡಿದ್ದ ಇಂಗ್ಲಿಷ್ ಸಾಮ್ರಾಜ್ಯಶಾಹಿಯ ದಮನಕಾರಿ ನೀತಿ. ಇಂಥ ಪರಿಸ್ಥಿತಿಯಲ್ಲಿ ರಾಜಾಶ್ರಯವನ್ನೇ ನೆಚ್ಚಿಕೊಂಡು ಸಾಹಿತ್ಯರಚನೆ ಮಾಡುತ್ತಿದ್ದ ನಮ್ಮ ಕವಿಗಳ ಬಾಯಿ ಕಟ್ಟೇ ಹೋಗಿತ್ತು. ಅದಕ್ಕಿಂತ ಹೆಚ್ಚಾಗಿ ಎಲ್ಲ ಪ್ರಜ್ಞಾವಂತರಿಗೂ ರಾಷ್ಟ್ರದ ಬಿಡುಗಡೆಯೇ ಮುಖ್ಯವಾದುದಾಗಿ ಸಾಹಿತ್ಯ ಕೃಷಿಯಂಥ ಚಟುವಟಿಕೆಗಳಲ್ಲಿ ಅವರು ಆಸಕ್ತಿ ಕಳೆದುಕೊಂಡಿದ್ದರು. ಅದರ ಜೊತೆಗೆ ಇಲ್ಲಿನ ಸಣ್ಣಪುಟ್ಟಸಂಸ್ಥಾನಗಳಲ್ಲಿ ಆಗಾಗ ನಡೆಯುತ್ತಿದ್ದ ಕದನಗಳು, ಇವುಗಳಲ್ಲಿ ಹೊರಗಿನವರ ಪ್ರವೇಶ, ಯುದ್ಧದಲ್ಲಿ ಒಂದು ಪ್ರದೇಶವನ್ನು ಮತ್ತೊಬ್ಬರು ಆಕ್ರಮಿಸಿಕೊಂಡಾಗ ಆಗುತ್ತಿದ್ದ ಮತೀಯ, ಭಾಷಿಕ ಸಂಘರ್ಷಗಳು ಇನ್ನೂ ಹಲವಾರು ಅಂಶಗಳಿಂದಾಗಿ ಸಾಹಿತ್ಯ ಚಟುವಟಿಕೆ ಕ್ಷೀಣವಾಯಿತು.ಗಳಲ್ಲಿಅವರು ಆಸಕ್ತಿ ಕಳೆದುಕೊಂಡಿದ್ದರು. ಅದರ ಜೊತೆ ಇಲ್ಲಿನ ಸಣ್ಣ ಪುಟ್ಟಸಂಸ್ಥಾನಗಳಲ್ಲಿ ಆಗಾಗ ನಡೆಯುತ್ತಿದ್ದ ಕದನಗಳು, ಇವುಗಳಲ್ಲಿ ಹೊರಗಿನವರ ಪ್ರವೇಶ, ಯುದ್ಧದಲ್ಲಿ ಒಂದು ಪ್ದೇಶವನ್ನು ಮತ್ತೊಂಬ್ಬರು ಆಕ್ರವಿಸಿಕೊಂಡಾಗ ಆಗುತ್ತಿದ್ದ ಮತೀಯ, ಭಾಷಿಕ ಸಂಘರ್ಷಗಳು ಇನ್ನೂ ಹಲವಾರು ಅಂಶಗಳಿಂದಾಗಿ ಸಾಹಿತ್ಯ ಚಟುವಟಿಕೆ ಕ್ಷೀಮವಾಯಿತು.

ಇಂಗ್ಲಿಷರು ತಮ್ಮ ಆಡಳಿತ ತಂತ್ರದ ದೃಷ್ಟಿಯಿಂದ ರಾಜ್ಯಗಳನ್ನು ಬೇಕು ಬೇಕೆನಿಸಿದಂತೆ ಒಡೆಯುತ್ತಿದ್ದರು. ಅದರಂತೆ ಉತ್ತರ ಕರ್ನಾಟಕವನ್ನು ಮಹಾರಾಷ್ಟ್ರಕ್ಕೆ ಸೇರಿಸಿ ಬಿಟ್ಟಿದ್ದರು. ಇಂಥ ಕ್ರಮಗಳಿಂದಲೂ ಕನ್ನಡ ಸಾಹಿತ್ಯದ ಬೆಳವಣಿಗೆಗೆ ಘಾಸಿಯಾಗಿತ್ತು. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಮುಗಿದು ಭಾರತ ನೇರವಾಗಿ ಇಂಗ್ಲೆಂಡಿನ ಆಡಳಿತಕ್ಕೆ ಒಳಗಾಯಿತು. ಅದಕ್ಕೆ ಮೊದಲೇ ಬಂಗಾಳದ ರಾಜರಾಮ ಮೋಹನರಾಯ್ ಅವರಂಥವರು ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಪ್ರಭಾವಿತರಾಗಿ ಭಾರತೀಯರಿಗೂ ಅದು ದೊರೆಯಬೇಕೆಂದು ಪ್ರತಿಪಾದಿಸುತ್ತಿದ್ದರು. ಅದೇ ಸಂದರ್ಭದಲ್ಲಿ ಭಾರತೀಯ ಸಂಸ್ಕೃತಿಯ ಮೇರು ವ್ಯಕ್ತಿತ್ವಗಳೆನಿಸಿದ್ದ ದೇವೇಂದ್ರನಾಥ್ ಠಾಕೂರ್, ರಾಮಕೃಷ್ಣ ಪರಮಹಂಸ, ಈಶ್ವರಚಂದ್ರ ವಿದ್ಯಾಸಾಗರ, ದಯಾನಂದ ಸರಸ್ವತಿ, ತದನಂತರ ಸ್ವಾಮಿ ವಿವೇಕಾನಂದ ಇಂಥವರ ಪ್ರಭಾವವು ಭಾರತೀಯರ ಮೇಲೂ ಕೆಲವು

ಪಾಶ್ಚಾತ್ಯರ ಮೇಲೂ ಉಂಟಾಗಿ ಭಾರತೀಯ ಸಂಸ್ಕೃತಿ ಮತ್ತು ಭಾರತೀಯ ಭಾಷೆಗಳ ಕಡೆಗೆ ಅಭಿಮಾನ ಮೂಡಿತು. ಹಾಗಾಗಿ ವಿದೇಶೀಯರು ಭಾರತೀಯ ಭಾಷೆ ಸಂಸ್ಕೃತಿಗಳನ್ನು ಅಧ್ಯಯನ ಮಾಡುವುದು, ಹಾಗೆಯೇ ಭಾರತೀಯರು ಪಾಶ್ಚಾತ್ಯ ಭಾಷೆ ಸಂಸ್ಕೃತಿಗಳನ್ನು ಅಭ್ಯಾಸ ಮಾಡುವುದೂ ಆರಂಭವಾಗಿ ಒಂದು ಬಗೆಯ ಕೊಡುಕೊಳ್ಳುವುದು ಆರಂಭಗೊಂಡಿತು. ಈ ಕಾಲದಲ್ಲಿ ಭಾರತೀಯ ಭಾಷೆ ಸಂಸ್ಕೃತಿಗಳ ಅಧ್ಯಯನದಲ್ಲಿ ಪಾಶ್ಚಾತ್ಯರ ಸಾಧನೆ, ಪ್ರಕಟಣೆಗಳನ್ನು ಭಾರತೀಯರು ಇಂದೂ ಕೃತಜ್ಞತೆಯಿಂದ ಸ್ಮರಿಸಿಕೊಳ್ಳಬೇಕು. ಹಾಗೆಯೇ ಭಾರತೀಯರಿಗೂ ಇಂಗ್ಲಿಷ್ ಶಿಕ್ಷಣ ಲಭ್ಯವಾಗಿ ಐದು ಶತಮಾನಕ್ಕೂ ಹೆಚ್ಚು ಕಾಲದ ಇಂಗ್ಲಿಷ್ ಸಾಹಿತ್ಯವೆಲ್ಲ ಒಮ್ಮೆಲೆ ಅಧ್ಯಯನಕ್ಕೆ ಲಭ್ಯವಾಯಿತು. ಹಾಗಾಗಿ ಯೂರೋಪಿನ ಚಿಂತನೆ ಮತ್ತು ಸಾಹಿತ್ಯಗಳು ಭಾರತೀಯರನ್ನು ಹೊಸ ಬಗೆಯ ಚಿಂತನೆ ಮತ್ತು ಸಾಹಿತ್ಯ ರಚನೆಗೆ ಪ್ರಚೋದಿಸಿದವು. ಷೇಕ್ಸ್‌ಪಿಯರ್, ಮಿಲ್ಟನ್, ಬರ್ನ್ಸ್, ವರ್ಡ್ಸ್‌ವರ್ತ್, ಕೋಲ್‌ರಿಜ್, ಷೆಲ್ಲಿ, ಬೈರನ್, ಟೆನಿಸನ್, ಬ್ರೌನಿಂಗ್, ಮ್ಯಾಥ್ಯೂ ಅರ್ನಾಲ್ಡ್, ಜೇನ್ ಆಸ್ಟೀನ್, ಡಾ. ಜಾನ್‌ಸನ್, ವಾಲ್ಟರ್‌ಸ್ಕಾಟ್, ಡಿಕನ್ಸ್, ಲ್ಯಾಂಬ್, ಕಾರ್ಲೈಲ್, ರಸ್ಕಿನ್, ಗ್ರೀಕ್ ನಾಟಕಕಾರರಾದ ಈಸ್ಕಿಲಸ್, ಯೂರಿಪಿಡೀಸ್, ಸಾಫೋಕ್ಲಿಸ್ ಹಾಗೆಯೇ ಇಬ್ಸನ್, ಟಾಲ್‌ಸ್ಟಾಯ್ ಹೀಗೆ ಎಲ್ಲರ ಸಾಹಿತ್ಯ ಈ ಪೀಳಿಗೆಗೆ ದೊರೆತು ಕನ್ನಡದಲ್ಲಿ ಹೊಸ ಸಾಹಿತ್ಯ ರೂಪಗಳ ಕಡೆಗೆ ಲೇಖಕನ ಮನಸ್ಸು ಹೊರಳಿತು. ಅದರಲ್ಲೂ ನಮ್ಮ ಕವಿಗಳನ್ನು ವಿಶೇಷವಾಗಿ ಆಕರ್ಷಿಸಿದ್ದು ಇಂಗ್ಲಿಷಿನ ಭಾವಗೀತೆಯ ಪ್ರಕಾರ. ಕನ್ನಡದವರಿಗೆ ಈ ಪ್ರಕಾರ ತೀರಾ ಹೊಸದೇನೂ ಅಲ್ಲ. ದಾಸ ಸಾಹಿತ್ಯದಲ್ಲೇ ಈ ಅಂಶ ಪರಿಚಯವಾಗಿತ್ತು. ಆದರೆ ಇಂಗ್ಲಿಷ್ ಭಾಷೆಯ ವಿವಿಧ ಪ್ರಯೋಗಗಳು, ಹೊಸ ಹೊಸ ಬಗೆಯ ಛಂದೋರೂಪಗಳು ಕನ್ನಡ ಕವಿಗಳ ಕುತೂಹಲ ಕೆರಳಿಸಿದವು. (ಅದರ ಜೊತೆಗೇ ಏಕಾಂಕ ನಾಟಕ, ಕಾದಂಬರಿ, ಸಣ್ಣಕತೆ, ಪ್ರಬಂಧ, ಇಂಥ ಪ್ರಕಾರಗಳೂ ಕನ್ನಡ ಲೇಖಕರ ಕುತೂಹಲವನ್ನು ಕೆರಳಿದವು).

ಇಪ್ಪತ್ತನೇ ಶತಮಾನದ ಆರಂಭದ ಹೊತ್ತಿಗೇ ಚ. ವಾಸುದೇವಯ್ಯ ಶ್ರೀನಿವಾಸರಾವ್, ಎಸ್.ಡಿ. ನರಸಿಂಹಾಚಾರ್, ಪಂಜೆ ಮಂಗೇಶರಾವ್ ಮೊದಲಾದ ಕವಿಗಳು ಭಾವಗೀತೆ ರಚನೆಯಲ್ಲಿ ತೊಡಗಿದ್ದರು. ಆದರೆ ಈ ಪ್ರಕಾರಕ್ಕೆ ಒಂದು ಗಟ್ಟಿಯಾದ ತಳಪಾಯ ಹಾಕಿ ಹೊಸದೊಂದು ಹೆದ್ದಾರಿಯನ್ನು ತೆರೆದ ಕೀರ್ತಿ ಬಿ.ಎಂ. ಶ್ರೀಕಂಠಯ್ಯನವರಿಗೇ ಸಲ್ಲುತ್ತದೆ.

ಬಿ.ಎಂ.ಶ್ರೀಯವರಿಗೂ ಮೊದಲು ಕನ್ನಡದ ಹಲವಾರು ಲೇಖಕರು ಇಂಗ್ಲಿಷಿನ ನಾಟಕಗಳ ಭಾಷಾಂತರರೂಪಾಂತರಗಳೂ ತೊಡಗಿಕೊಂಡಿದ್ದರು. ಷೇಕ್ಸ್‌ಪಿಯರನ ಹಲವಾರು ನಾಟಕಗಳು ಆಗ ಕನ್ನಡಕ್ಕೆ ಭಾಷಾಂತರ ಇಲ್ಲವೆ ರೂಪಾಂತರಗೊಂಡವು. ಒಥೆಲೋ ನಾಟಕವನ್ನು ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರೀಯವರು "ಶೂರಸೇನ ಚರಿತ್ರೆ" (1885) ಎಂದೂ, ಕಿಂಗ್‌ಲಿಯರ್ ನಾಟಕವನ್ನು ಎಂ.ಎಸ್.ಪುಟ್ಟಣ್ಣ ಅವರು 'ಹೇಮಚಂದ್ರ ವಿಲಾಸ' (1899) ಎಂದೂ, 'ದಿ ಮರ್ಚೆಂಟ್ ಆಫ್ ವೆನಿಸ್' ನಾಟಕವನ್ನು ಎ. ಆನಂದರಾವ್‌ರು "ಪಾಂಚಾಲೀಪರಿಣಯ" (1890) ಎಂದೂ; 'ಮ್ಯಾಕ್ ಬೆತ್' ನಾಟಕವನ್ನು ಎಂ.ಎಲ್.ಶ್ರೀಕಂಠೇಶಗೌಡ ಅವರು ಅವರು "ಪ್ರತಾಪರುದ್ರದೇವ" (1895) ಎಂದೂ ರೂಪಾಂತರ ಮಾಡಿದ್ದರು. ಕೆಲವು ಇಂಗ್ಲೀಷ್ ಕವನಗಳನ್ನು ಕನ್ನಡ ಭಾಷೆಯ ಜಯಮಾನಕ್ಕೊಗ್ಗುವಂತೆ ಎಷ್ಟು ಚೆನ್ನಾಗಿ ಅನುವಾದ ಮಾಡಿದ್ದರೆಂದರೆ ಉದಾಹರಣೆಗೆ ಎಸ್.ಜಿ. ನರಸಿಂಹಾಚಾರ್ಯರು ಅನುವಾದ ಮಾಡಿದ ಇಂಗ್ಲಿಷಿನ ಶಿಶುಪ್ರಾಸ - Twinkle, Twinkle, little star - ಕವನವನ್ನು ನೋಡಬಹುದು.

ಇಂಗ್ಲಿಷ್ ಮೂಲ

Twinkle, twinkle little star
How I wonder what you are ?
Up above the world so high
like a diamond in the sky

ಕನ್ನಡ ಅನುವಾದ :

ಮಿರು ಮಿರುಗುವೆ, ಹಾ, ಕಿರುತಾರಗೆಯೆ

ಅರಿಯೆನು ನಾನೆಲೆ ನೀನಾರೊ

ಧರೆಗಿಳಿಯದೆ ನೀನಿರುತಿಹೆ ದೂರದಿ

ನೆರೆ ಹೊಳೆಯುವೆ ವಜ್ರದ ತೆರದಿ.

ಒಟ್ಟಿನಲ್ಲಿ ಹೊಸದೊಂದು ಸಾಹಿತ್ಯ ಚಳವಳಿಯ ಆರಂಭಕ್ಕೆ ಕನ್ನಡ ಕವಿಗಳು ಹಪಹಪಿಸುತ್ತಿದ್ದಾಗಲೇ ಇಂಗ್ಲೀಷ್ ಸಾಹಿತ್ಯದ ಸಂಪರ್ಕ ಕನ್ನಡ ನವೋದಯ ಸಾಹಿತ್ಯ ಚಳವಳಿಗೆ ತೀವ್ರವಾದ ಪ್ರೇರಣೆಯನ್ನು ನೀಡಿತು.

3.2.1 ನವೋದಯ ಸಾಹಿತ್ಯದ ಆರಂಭ ಮತ್ತು ಬೆಳವಣಿಗೆ

ನವೋದಯ ಸಾಹಿತ್ಯದ ಆರಂಭದಲ್ಲೇ ಅದರ ಸಾರಥ್ಯ ವಹಿಸಿದವರಿಗೆ ಹೊಸ ಸಾಹಿತ್ಯದ ಗತಿ, ಗುರಿ, ರೀತಿ ಲಕ್ಷಣಗಳ ಬಗ್ಗೆ ಒಂದು ಸ್ಪಷ್ಟವಾದ ಕಲ್ಪನೆ ಇತ್ತು. 1911ರಲ್ಲಿ ಶ್ರೀ ಅವರು ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ **"ಕನ್ನಡ ಮಾತು ತಲೆಯೆತ್ತುವ ಬಗೆ"** ಎಂಬ ವಿಷಯದ ಕುರಿತು ಮಾಡಿದ ಉಪನ್ಯಾಸದಲ್ಲಿ ಈ ಗೊತ್ತುಗುರಿಗಳು ಕಾಣಸಿಗುತ್ತವೆ. " ಹೇಗೆ ಆದಿಯಿಂದಲೂ ಸಂಸ್ಕೃತದ ಶಿಕ್ಷೆಯಲ್ಲೂ ಸಂಸ್ಕೃತದ ಪೋಷಣೆಯಲ್ಲೂ ಕಾವ್ಯಮಾಲೆಯನ್ನು ಬೆಳೆಸಿದೆವೋ ಹಾಗೇ ದೈವಯತ್ನದಿಂದ ಲಭಿಸಿರುವ ಇಂಗ್ಲೀಷಿನ ಶಿಕ್ಷೆಯಲ್ಲೂ ಇಂಗ್ಲೀಷಿನ ಪೋಷಣೆಯಲ್ಲೂ ಅದನ್ನು ಬೆಳೆಸಬೇಕು. ಇಂಗ್ಲೀಷರ ಕಾವ್ಯ ಮಾಲೆ ಪರಮೋತ್ಕೃಷ್ಟವಾದುದು. ಗ್ರೀಕ್, ಲ್ಯಾಟಿನ್,ಜರ್ಮನ್, ಫ್ರೆಂಚ್, ಸಂಸ್ಕೃತ ಮುಂತಾದ ಭಾಷೆಗಳಿಂದ ಸಾರವನ್ನು ಹೀರಿ ಪುಷ್ಟಿಯಾದದ್ದು. ಇದರ ಗುಣವನ್ನು ಕಲಿತು, ಇದರ ಐಶ್ವರ್ಯದಲ್ಲಿ ಭಾಗಗಳಾಗಬೇಕಾದ ರೀತಿಯಲ್ಲಿ ಭಾಷಾಂತರಗಳಿಂದ ಕನ್ನಡದ ಬೊಕ್ಕಸವನ್ನು ತುಂಬಿಬಿಡಬೇಕು" ಎಂದು ಶ್ರೀಯವರು ಆ ಉಪನ್ಯಾಸದಲ್ಲಿ ಹೇಳಿದರು. 1928ರಲ್ಲಿ ಕಲ್ಬುರ್ಗಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಮಾತನಾಡುತ್ತಾ " ಈ ಹೊಸ ಸಾಹಿತ್ಯವು ಹಳೆಯ ಸಾಹಿತ್ಯದ ಸಾರವನ್ನೂ ಸಹಾಯವನ್ನೂ ಸ್ವೀಕಾರ ಮಾಡಿದರೂ, ಮತ ಪ್ರಸಾರಣೆಗಾಗಲಿ, ಪೂರ್ವಕಥಾನುವಾದಕ್ಕಾಗಲಿ ಬರೆಯತಕ್ಕುದಲ್ಲ; ನೂತನ ಜ್ಞಾನ ಪ್ರಸಾರಣೆಗಾಗಿ, ಪೂರ್ಣ ಕಲಾನುಭವಕ್ಕಾಗಿ, ಉತ್ತಮ ಜೀವನ ಕಾರ್ಯಾರಂಭ ಪ್ರೇರಣೆಗಾಗಿ ಬರೆಯ ತಕ್ಕದ್ದು.... ಈ ಹೊಸ ಮಾರ್ಗದ ಗ್ರಂಥ ಕರ್ತನು ಸ್ವತಂತ್ರನು; ಪದ್ಯಕ್ಕಿಂತಲೂ ಹೆಚ್ಚಾಗಿ ಗದ್ಯದಲ್ಲಿ ಕೆಲಸ ಮಾಡುವನು; ವಿಷಯಕ್ಕೆ ತಕ್ಕ ಶೈಲಿಯನ್ನು ಹೊಂದಿಸಿ ಸರ್ವರೂ ಅರ್ಥಮಾಡಿಕೊಳ್ಳುವಂತೆ ಬರೆಯುವನು. ಪ್ರಪಂಚದ ಎಲ್ಲಾ ಸಾಹಿತ್ಯಗಳಿಂದಲೂ ಮಾದರಿಗಳನ್ನೂ ವಿಷಯಗಳನ್ನೂ ಸ್ವೀಕರಿಸಿ ಯಾವ ಯಾವುದರಿಂದ ಕನ್ನಡಿಗರಿಗೆ ಉಪಯೋಗವುಂಟೆಂದು ತಿಳಿಯುವುದೋ ಅದೆಲ್ಲವನ್ನೂ ಕನ್ನಡಕ್ಕೆ ತಿರುಗಿಸುವನು. ಮತಗಳ ವಾದ ಪ್ರತಿವಾದಗಳನ್ನು ಬಿಟ್ಟು, ಸರ್ವ ಸಮಾನವಾದ, ಉದಾರವಾದ ಧರ್ಮಸಾರವನ್ನು ಹರಡುವನು" ಎಂದು ಶ್ರೀಯವರೇ ಹೇಳಿದ್ದಾರೆ. ಈ ಮಾತುಗಳಲ್ಲಿ ಹೊಸ ಸಾಹಿತ್ಯದ ಆಶಯ, ಪ್ರಣಾಳಿಕೆಗಳು ನಿಚ್ಚಳವಾಗಿ ಪ್ರಕಟವಾಗಿದೆ.

ನವೋದಯದ ಆರಂಭವನ್ನು ವಿಧ್ಯುಕ್ತವಾಗಿ ಉದ್ಘಾಟಿಸಿದ ಕೃತಿಯೆಂದರೆ ಬಿ.ಎಂ. ಶ್ರೀಕಂಠಯ್ಯನವರು "ಇಂಗ್ಲೀಷ್ ಗೀತಗಳು", 1921 ರಲ್ಲಿ ಅದು ಪ್ರಕಟವಾದಾಗ ಅದರಲ್ಲಿ ಹನ್ನೆರಡು ಇಂಗ್ಲಿಷ್ ಅನುವಾದ ಕವನಗಳಿದ್ದವು. 1924ರಲ್ಲಿ 24ಕವನಗಳು ಸೇರ್ಪಡೆಗೊಂಡವು. 1926ರಲ್ಲಿ ಒಟ್ಟು 60 ಕವನಗಳಿರುವ "ಇಂಗ್ಲಿಷ್‌ಗೀತಗಳು"ಪ್ರಕಟವಾಯಿತು. ಇದರಲ್ಲಿ ಇಂಗ್ಲೀಷಿನ ರೊಮ್ಯಾಂಟಿಕ್ ಸಂಪ್ರದಾಯನದ ಕವಿಗಳಾದ ವರ್ಡ್ಸ್‌ವರ್ತ್, ಷೆಲ್ಲಿ, ಬರ್ನ್ಸ್, ಬ್ರೌನಿಂಗ್, ಟೆನಿಸನ್, ಸ್ಕಾಟ್, ಬೈರನ್, ಸದೆ, ಹಾಗೂ ಷೇಕ್ಸ್‌ಪಿಯರ್ ಮುಂತಾದವರ ಕವನಗಳು ಸೇರಿವೆ. ಇಂಗ್ಲೀಷಿನ ಎಲ್ಲ ಶ್ರೇಷ್ಠ ಕವಿಗಳೂ

ಇಲ್ಲಿಲ್ಲ. ಹಾಗೆಯೇ ಶ್ರೇಷ್ಠಕವಿತೆಗಳೂ ಇಲ್ಲಿಲ್ಲ. ತಮಗೆ ಪ್ರಿಯವಾದ ಮತ್ತು ಭಾಷಾಂತರಕ್ಕೆ ಎಟುಕುವಂಥ ಕವಿಗಳನ್ನು, ಪದ್ಯಗಳನ್ನು ಮಾತ್ರ ಆರಿಸಿಕೊಂಡಿರುವುದಾಗಿ ಅವರೇ ಕೃತಿಯ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. "ಇಂಗ್ಲೀಷ್ ಗೀತಗಳು"ಸಂಕಲನದ ಮೊದಲ ಪದ್ಯ "ಕಾಣಿಕ"ಶ್ರೀಯವರ ಸ್ವಂತ ರಚನೆ. ಆ ಪದ್ಯದಲ್ಲಿ ಶ್ರೀಯವರು ತಮ್ಮ ಅನುವಾದ ಕಾರ್ಯದ ಬಗ್ಗೆ ತುಂಬಾ ಸುಂದರವಾಗಿ ಹೇಳಿದ್ದಾರೆ.

ಕನ್ನಡ ನುಡಿ, ನಮ್ಮ ಹೆಣ್ಣು,
ನಮ್ಮ ತೋಟದಿನಿಯ ಹಣ್ಣು;
ಬಳಿಕ, ಬೇರೆ ಬೆಳೆದ ಹೆಣ್ಣು
ಬಳಿಗೆ ಸುಳಿದಳು;
ಪಡುವ ಕಡಲ ಹೊನ್ನ ಹೆಣ್ಣು,
ನನ್ನ ಜೀವದುಸಿರು ಕಣ್ಣು,
ನಲಿಸಿ, ಕಲಿಸಿ, ಮನವನೊಲಿಸಿ
ಕುಣಿಸುತಿರುವಳು;
ಒಮ್ಮೆ ಇವಳು, ಒಮ್ಮೆ ಅವಳು
ಕುಣಿಸುತಿರುವಳು
ಹೀಗೆ ನನಗೆ ಹಬ್ಬವಾಗಿ
ಇನಿಯರಿಬ್ಬರನ್ನು ತೂಗಿ,
ಇವಳ ಸೊಗನವಳು ತೊಟ್ಟು
ನೋಡಬಯಸಿದೆ;
ಅವಳ ತೊಡಿಗೆ ಇವಳಿಗಿಟ್ಟು
ಹಾಡ ಬಯಸಿದೆ.

ಇಂಗ್ಲೀಷ್ ಗೀತಗಳಲ್ಲಿ ಪ್ರಕಟವಾದ ಶ್ರೀಯವರ ಕವನಗಳು ಇಂಗ್ಲಿಷ್ ಮೂಲದ ನೇರ ಭಾಷಾಂತರಗಳಲ್ಲಿ. ಕನ್ನಡ ಭಾಷೆಯ ವಾತಾವರಣ, ಜಾಯಮಾನಕ್ಕೆ ಅನುಗುಣವಾಗಿ ರೂಪಾಂತರವಾದ ಕವಿತೆಗಳು ಅವು. ಉದಾಹರಣೆಗೆ ರಾಬರ್ಟ್ ಬರ್ನ್ಸ್‌ನ ಕವಿತೆಯ " O my love's like a red, red rose" ಎಂಬ ಸಾಲು ಶ್ರೀಯವರಲ್ಲಿ.

"ನನ್ನ ಪ್ರೇಮದ ಹುಡುಗಿ ತಾವರೆಯ ಹೊಸ ಕೆಂಪು ಎಂದು ಭಾಷಾಂತರಗೊಂಡಿದೆ. "ಇಂಗ್ಲೀಷ್ ಗೀತಗಳು" ಶ್ರೀಯವರ ಸ್ವತಂತ್ರ ರಚನೆಗಳೇ ಎನ್ನುವಂತೆ ಜನಪ್ರಿಯವಾದವು. ಇಲ್ಲಿಯ ಕವನಗಳಲ್ಲಿರುವ ಛಂದೋವೈವಿಧ್ಯ, ಚಿತ್ರಗಳು, ಪ್ರತಿಮೆಗಳು, ಶಬ್ದ ಸಂಪತ್ತು ಇವೆಲ್ಲವೂ ಹೊಸ ಕಾವ್ಯದ ರಚನೆಗೆ ನಿರ್ದೇಶಕವಾದವು. ಸರಿ, ಅದೇ ಸಮಯಕ್ಕೆ ಕನ್ನಡ ಸಾಹಿತ್ಯ ರಚನೆಗೆ ಒಂದು ಪ್ರತಿಭಾವಂತ ಕವಿಗಳ ಪಡೆಯೇ ಧುಮುಕಿತು. ಡಿ.ವಿಜಿ, ಕುವೆಂಪು, ಬೇಂದ್ರೆ, ಪುತಿನ, ಮಾಸ್ತಿ ವಿಸೀ, ರಾಜರತ್ನಂ, ತೀನಂಶ್ರೀ, ಕೆ.ಎಸ್.ನರಸಿಂಹಸ್ವಾಮಿ, ಗೋಪಾಲಕೃಷ್ಣ ಅಡಿಗ, ವಿ.ಕೃ.ಗೋಕಾಕ ಮುಂತಾದ ಹಲವಾರು ಕವಿಗಳು ಕಾವ್ಯ ಪ್ರಕಾರದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಿದ್ದರು. ಕುವೆಂಪು ಅವರಂತೂ ನವೋದಯ ಕಾವ್ಯದ ಎಲ್ಲ ಪ್ರಮುಖ ಅಂಶಗಳನ್ನೂ ಕರಗಿಸಿ "ಶ್ರೀರಾಮಾಯಣದರ್ಶನಂ" ಮಹಾಕಾವ್ಯವನ್ನೇ ಸೃಷ್ಟಿಸಿದರು. ಸರಳರಗಳೆಯನ್ನೇ ಸ್ವಲ್ಪ ಮಾರ್ಪಡಿಸಿ "ಮಹಾಛಂದಸ್ಸು" ಎಂಬ ಛಂದೋರೂಪದಲ್ಲಿ ರಾಮಾಯಣದರ್ಶನಂ ರಚಿತವಾಯಿತು. ಉತ್ತರ ಕರ್ನಾಟಕದ ಜಾನಪದ ಸತ್ವವನ್ನು ಸಂಪೂರ್ಣ ಅರಗಿಸಿಕೊಂಡ ಕವಿಬೇಂದ್ರೆ ಕಾವ್ಯ ಪ್ರಯೋಗದಲ್ಲಿ ವಿವಿಧ ಪ್ರಯೋಗಗಳನ್ನು ಮಾಡಿದರು. ಮಾತು ಮಾತನ್ನು ಮಥಿಸಿ ನಾದದ ನವನೀತ ತೆಗೆದು ಕನ್ನಡ ನವೋದಯ ಕಾವ್ಯಕ್ಕೆ ಮಾಂತ್ರಿಕ ಸ್ಪರ್ಶ ನೀಡಿದರು. ಹೀಗೆ ಒಬ್ಬೊಬ್ಬ ಕವಿಯೂ ಕಾವ್ಯಕ್ಕೆ ಹೊಸ ಹೊಸ ಛಂದಸ್ಸು, ಪ್ರತಿಮೆ, ಭಾಷೆ, ಲಯಸಾಧ್ಯತೆಗಳನ್ನು ನೀಡಿದರು. ಹೊಸ ಹೊಸ ಛಂದೋವಿನ್ಯಾಸಗಳನ್ನು ರೂಪಿಸಿಕೊಳ್ಳುವಾಗ ಕನ್ನಡ ಕಾವ್ಯ ಪರಂಪರೆಯಲ್ಲಿ ಹಿಂದಿನಿಂದಲೂ ಇದ್ದ ಚಂಪೂ, ವಚನ ರಗಳೆ, ಸಾಂಗತ್ಯ, ಷಟ್ಪದಿ, ತ್ರಿಪದಿ ಇತ್ಯಾದಿ ಛಂದೋಪ್ರಕಾರಗಳೇ

ಅವರಿಗೆ ಪ್ರೇರಣೆ, ಸ್ಫೂರ್ತಿಯಾಗಿಯೂ ಬಂದು ಅವುಗಳನ್ನೇ ಸ್ವಲ್ಪ ಮಾರ್ಪಡಿಸಿದ್ದುಂಟು ಅಥವಾ ಇಂಗ್ಲೀಷಿನ ಛಂದೋವಿನ್ಯಾಸಗಳಂತೆಯೇ ಕನ್ನಡದಲ್ಲಿಯೂ ಪ್ರಯೋಗಗಳನ್ನು ಮಾಡಿದುಂಟು. ಜೊತೆಗೆ ಜಾನಪದ ಸತ್ವ ಕೂಡ ಈ ಹಂತದಲ್ಲಿ ಕವಿಗಳ ಮೇಲೆ ವಿಶೇಷ ಪ್ರಭಾವ ಬೀರಿ ಆ ಸತ್ವವೂ ಸಾಹಿತ್ಯದಲ್ಲಿ ಬಳಕೆಯಾಯಿತು. ಕನ್ನಡ ನವೋದಯದಲ್ಲಿ ಕಾವ್ಯ ರಚನೆಯ ಪಾಲೇ ದೊಡ್ಡದಾದರೂ ಇತರ ಪ್ರಕಾರಗಳಲ್ಲಿಯೂ ಗಮನಾರ್ಹವಾದ ಕೃತಿಗಳು ರಚನೆಯಾದವು. ಇಂಗ್ಲೀಷ್ ಸಾಹಿತ್ಯದ ಪರಿಚಯದಿಂದಾಗಿ ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲೇ ಅನುವಾದ ಕಾದಂಬರಿಗಳು, ಪ್ರಕಟಗೊಂಡವು 1915ರಲ್ಲಿ ಪ್ರಕಟವಾದ ಎಂ.ಎಸ್.ಪುಟ್ಟಣ್ಣನವರ "ಮಾಡಿದ್ದುಣ್ಣೋ ಮಹಾರಾಯ"ಸಾಮಾಜಿಕ ಕಾದಂಬರಿಯ ಕಾದಂಬರೀ ಸಾಹಿತ್ಯ ರಚನೆಯಲ್ಲೊಂದು ಮಹತ್ವದ ಮೈಲಿಗಲ್ಲು, 1930ರ ನಂತರ ಕಾದಂಬರಿ ರಚನೆಯಲ್ಲಿ ಹೊಸ ಉಕ್ಕು ಬಂತು. ದೇವುಡು,ಮಾಸ್ತಿ, ಶಿವರಾಮಕಾರಂತ, ಕುವೆಂಪು, ಮಿರ್ಜಿ ಅಣ್ಣಾರಾಯ ಶ್ರೀರಂಗ, ಬೆಟಗೇರಿ ಕೃಷ್ಣಶರ್ಮ, ರಂ.ಶ್ರೀ. ಮುಗಳಿ, ರಾವಬಹದ್ದೂರ್, ಅ.ನ.ಕೃಷ್ಣರಾಯ ಮುಂತಾದವರು ಕಾದಂಬರಿಗಳ ರಚನೆಯಲ್ಲಿ ಮಹತ್ವದ ಸಾಧನೆ ಮಾಡಿದರು. ಶಿವರಾಮ ಕಾರಂತರ "ಚೋಮನದುಡಿ", "ಅಳಿದ ಮೇಲೆ", "ಮರಳಿ ಮಣ್ಣಿಗೆ", "ಬೆಟ್ಟದ ಜೀವ", "ಮೈಮನಗಳ ಸುಳಿಯಲ್ಲಿ", ಕುವೆಂಪುರವರ "ಕಾನೂರು ಸುಬ್ಬಮ್ಮ ಹೆಗ್ಗಡತಿ" ಮತ್ತು "ಮಲೆಗಳಲ್ಲಿ ಮದುಮಗಳು" ಎಂಬ ಎರಡು ಮಹಾಕಾದಂಬರಿಗಳು, ಮಾಸ್ತಿಯವರ "ಚೆನ್ನಬಸವನಾಯಕ"ಮತ್ತು "ಚಿಕವೀರ ರಾಜೇಂದ್ರ", ಬೆಟಗೇರಿಯವರ "ಸುದರ್ಶನ", ಮುಗಳಿಯವರ "ಬಾಳುರಿ", "ಅನ್ನ"ಜಡಭರತರ "ಧರ್ಮಸೆರೆ" ಶ್ರೀರಂಗರ "ವಿಶ್ವಾಮಿತ್ರಸೃಷ್ಟಿ", ಮಿರ್ಜಿ ಅಣ್ಣಾರಾಯರ "ನಿಸರ್ಗ", ರಾವ್ ಬಹುದ್ದೂರರು "ಗ್ರಾಮಾಯಣ", ಅನಕೃ ಅವರ "ಸಂಧ್ಯಾರಾಗ", "ನಟಸಾರ್ವಭೌಮ" ಮುಂತಾದ ಮಹತ್ವದ ಕಾದಂಬರಿಗಳು ಈ ಕಾಲದಲ್ಲಿ ರಚನೆಗೊಂಡವು.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ನಾಟಕಗಳ ರಚನೆ ಆರಂಭಗೊಂಡುದೂ ಅನುವಾದ ರೂಪಾಂತರ ನಾಟಕಗಳ ಮುಖಾಂತರವೇ. ನವೋದಯ ಕಾಲದಲ್ಲಿ ಹಲವಾರು ಗ್ರೀಕ್ ಟ್ರ್ಯಾಜೆಡಿಗಳೂ ಕನ್ನಡಕ್ಕೆ ರೂಪಾಂತರ ಹೊಂದಿ ಹೊಸ ಪ್ರಯೋಗದ ದಾರಿ ತೆರೆದವು. ಬಿ.ಎಂ.ಶ್ರೀಯವರ "ಗದಾಯುದ್ಧ", ಅಶ್ವತ್ಥಾಮನ್, "ಪಾರಸಿಕರು" -ಇವು ಅಂಥ ಗುಂಪಿಗೆ ಸೇರುವಂಥವು. ಕೈಲಾಸಂ ಸಾಮಾಜಿಕ ನಾಟಕಗಳ ಶಕೆಯನ್ನೇ ಆರಂಭಿಸಿ ಆ ಕಾಲದ ಅತ್ಯಂತ ಜನಪ್ರಿಯ ಲೇಖಕರಾದರು. "ಟೊಳ್ಳುಗಟ್ಟಿ" (1923)ಯಿಂದ ಆರಂಭಿಸಿ "ಹೋಂರೂಲು", "ಬಂಡ್ವಾಳ್ವಿಲ್ಲದ ಬಡಾಯಿ". "ಅಮ್ಮಾವ್ರಗಂಡ". "ಸಾತು ತೌರ್‍ಮನೆ", "ಪಾತು ತೌರ್‍ಮನೆ", "ಬಹಿಷ್ಕಾರ", "ಸೂಳೆ"ಮುಂತಾದ ಹಲವು ನಾಟಕಗಳು ಜನಪ್ರಿಯವಾದವು. ಅವರ ನಂತರ ಶ್ರೀರಂಗರೂ ಕೂಡಾ ಹಲವಾರು ಸಾಮಾಜಿಕ ಕಾಳಜಿಯ ನಾಟಕಗಳನ್ನು ಬರೆದರು. "ಹರಿಜನ್ವಾರ", "ಏನ ಬೇಡಲಿ ನಿನ್ನ ಬಳಿಗೆ ಬಂದು", "ಕೇಳು ಜನಮೇಜಯ", "ದಾರಿಯಾವುದಯ್ಯಾ ವೈಕುಂಠಕೆ"ಇವರ ಪ್ರಸಿದ್ಧ ನಾಟಕಗಳು. ಕುವೆಂಪು ಅವರೂ ಸಹ ಇದೇ ಕಾಲದಲ್ಲಿ "ಶೂದ್ರ ತಪಸ್ವಿ",ಜಲಗಾರಳಂತ ಕ್ರಾಂತಿಕಾರಕ ದೃಷ್ಟಿಯ ನಾಟಕಗಳಲ್ಲದೆ 'ಸ್ಮಶಾನ ಕುರುಕ್ಷೇತ್ರಂ", "ಬೆರಳ್‌ಗೆ ಕೊರಳ್", "ಶಿವರಾತ್ರಿ", ಮುಂತಾದ ನಾಟಕಗಳನ್ನು ಬರೆದರು. ಷೇಕ್ಸ್‌ಪಿಯರ್‌ನ "ಟೆಂಪೆಸ್ಟ್"ಮತ್ತು "ಹ್ಯಾಮ್ಲಟ್" ನಾಟಕಗಳನ್ನು ರೂಪಾಂತರ ಗೊಳಿಸಿ ಕ್ರಮವಾಗಿ "ಬಿರುಗಾಳಿ" ಮತ್ತು "ರಕ್ತಾಕ್ಷಿ" ನಾಟಕಗಳನ್ನು ಬರೆದರು. ಕಾವ್ಯದಲ್ಲೇ ಪ್ರಮುಖವಾಗಿ ಕೆಲಸ ಮಾಡಿದ ಬೇಂದ್ರೆಯವರೂ "ಸಾಯೋಆಟ", "ಜಾತ್ರೆ" ಎಂಬ ನಾಟಕಗಳನ್ನು ಬರೆದು ಖ್ಯಾತಿಗೊಳಿಸಿದರು. ಪು.ತಿ.ನ. ಅವರು ಪೌರಾಣಿಕ ವಸ್ತುಗಳನ್ನು ಆಯ್ದುಕೊಂಡು "ಅಹಲ್ಯೆ", "ಗೋಕುಲ ನಿರ್ಗಮನ", "ಹಂಸದಮಯಂತಿ"ಮುಂತಾದ ಒಳ್ಳೆಯ ನಾಟಕಗಳನ್ನು ಬರೆದರು. ಮಾಸ್ತಿಯವರು ಬರೆದ "ಕಾಕನಕೋಟೆ" ಸಹ ರಂಗಪ್ರಯೋಗದಲ್ಲಿ ಒಳ್ಳೆಯ ಹೆಸರಗಳಿಸಿತು. ಐತಿಹಾಸಿಕ ಸಂಗತಿಗಳನ್ನಾಧರಿಸಿ ನಾಟಕಗಳನ್ನು ಬರೆದ ಸ್ವಾಮಿವೆಂಕಟಾದ್ರಿ ಅಯ್ಯರ್ (ಸಂಸ) "ವಿಗಡ ವಿಕ್ರಮ ರಾಯ", "ಬಿರುದೆಂತೆ ಬರ ಗಂಡ" ಮುಂತಾದ ನಾಟಕಗಳನ್ನು ಬರೆದು ಐತಿಹಾಸಿಕ ನಾಟಕಗಳಿಗೆ ಹೊಸ ಜೀವಂತಿಕೆಯನ್ನು ತುಂಬಿದರು. ನಾಟಕ ಕ್ಷೇತ್ರದಲ್ಲಿ ಜಿ.ಬಿ.ಜೋಷಿ ಅವರ ಸಾಧನೆಯೂ ಮಹತ್ವದ್ದು. ಅವರ "ಕದಡಿದ ನೀರು", "ಮೂಕಬಲಿ", " ಆಊರು" ಮುಂತಾದುವು

ತುಂಬಾ ಗಮನಾರ್ಹ ಕೃತಿಗಳಾಗಿವೆ. ಕನ್ನಡ ನಾಟಕ ಪ್ರಕಾರದಲ್ಲಿ ಪ್ರತ್ಯೇಕವಾಗಿ ಹೆಸರಿಲೇ ಬೇಕಾದ ಮತ್ತೊಬ್ಬ ನಾಟಕಕಾರ ಆದ್ಯರಂಗಾಚಾರ್ಯ (ಶ್ರೀರಂಗ) ಅವರು. ಅವರು ಬರೆದ ಹಲವಾರು ನಾಟಕಗಳು ರಂಗಭೂಮಿಯ ಪ್ರಯೋಗ ಸಾಧ್ಯತೆಗಳನ್ನು ವಿಸ್ತರಿಸಿದವು. ಹಾಗೆಯೇ ಎಂ.ಆರ್. ಶ್ರೀನಿವಾಸಮೂರ್ತಿಯವರ "ಧರ್ಮದುರಂತ", "ನಾಗರಿಕ" ಶಿವರಾಮ ಕಾರಂತರ "ಗರ್ಭಗುಡಿ", ಇವೆಲ್ಲವೂ ಆ ಕಾಲದಲ್ಲಿ ಪ್ರಕಟವಾದ ಕೆಲವು ನಾಟಕ ಕೃತಿಗಳು.

ಇಂಗ್ಲೀಷ್ ಸಾಹಿತ್ಯದ ಪ್ರಭಾವದಿಂದಾಗಿ ಹಲವಾರು ಸಾಹಿತ್ಯ ಪ್ರಕಾರಗಳು ಕನ್ನಡಕ್ಕೆ ಬಂದವೆಂದು ಹಿಂದೆಯೇ ಹೇಳಿದೆ. ಅವುಗಳಲ್ಲಿ ಸಣ್ಣಕಥೆಯೂ ಒಂದು ಕನ್ನಡ ನವೋದಯ ಕಾಲದಲ್ಲಿ ಸಣ್ಣಕಥೆಗಳ ಪ್ರಕಾರದಲ್ಲಿಯೂ ಸಾಕಷ್ಟು ಕೃಷಿ ನಡೆದಿದೆ. ನವೋದಯ ಆರಂಭವಾಗುವ ಮೊದಲೇ ಪಂಜೆ ಮಂಗೇಶರಾಯರು ಕಮಲಾಪುರದ ಹೋಟ್ಲಿನಲ್ಲಿ, ನನ್ನ"ಚಿಕ್ಕತಾಯಿ", "ಭಾರತಶ್ರವಣ"ಮೊದಲಾದ ಸಣ್ಣಕಥೆಗಳನ್ನು ಬರೆದರೆ, ಕೆರೂರು ವಾಸುದೇವಾ ಚಾರ್ಯರು "ಪ್ರಕೃತಿ ಬಲ"," ಮಲ್ಲೇಶಿಯ ನಲ್ಲೆಯರು,"ತೊಳೆದ ಮುತ್ತು"ಮೊದಲಾದ ಕಥೆಗಳನ್ನು ಬರೆದಿದ್ದರು. ಆದರೆ ನವೋದಯ ಕಾಲದಲ್ಲಿ ಈ ಪ್ರಕಾರಕ್ಕೆ ಒಂದು ವಿಶಿಷ್ಟ ರೂಪ" ನೀಡಿ ಅದನ್ನು ಪರಿಣಾಮಕಾರಿಯಾಗಿ ಬೆಳೆಸಿದವರು ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಶ್ರೀನಿವಾಸ)ಅವರು. "ಸಣ್ಣ ಕತೆಗಳ ಜನಕ" ಎಂದೇ ಮಾಸ್ತಿಯವರು ಖ್ಯಾತರಾದರು. 1920ರಲ್ಲಿ ಪ್ರಕಟವಾದ ಅವರ "ಕೆಲವು ಸಣ್ಣ ಕಥೆಗಳು "ವಸ್ತು, ತಂತ್ರ, ಜೀವನದೃಷ್ಟಿ, ಸರಳ ತಿಳಿಹಾಸ್ಯದ ಶೈಲಿ, ಮುಂತಾದುವುಗಳಿಂದ ಬೆರಗುಗೊಳಿಸಿದ ಕೃತಿಯಾಗಿದೆ. ಅವರ 'ಮೊಸರಿನ ಮಂಗಮ್ಮ', 'ವೆಂಕಟಿಗನ ಹೆಂಡತಿ','ಆಚಾರ್ಯರ ಪತ್ನಿ', 'ಹೇಮಕೂಟದಿಂದ ಬಂದ ಮೇಲೆ', 'ವೆಂಕಟಶಾಮಿಯ' ಪ್ರಣಯ, 'ಕಲ್ಮಾಡಿಯ ಕೋಣ', 'ನಮ್ಮ ಮೇಷ್ಟರು', 'ಕಾಮನ ಹಬ್ಬದ ಒಂದು ಕಥೆ', 'ಜೋಗ್ಯೋರ ಅಂಜಪ್ಪನ ಕೋಳಿ ಕತೆ' ಇವೆಲ್ಲವೂ ಯಾವುದೇ ಭಾಷೆಯ ಅತ್ಯುತ್ತಮ ಕಥೆಗಳ ಸಾಲಿನಲ್ಲಿ ನಿಲ್ಲಬಲ್ಲಂಥವು.

ಈ ನಿಟ್ಟಿನಲ್ಲಿ ಅಜ್ಜಂಪುರ ಸೀತಾರಾಂ (ಆನಂದ), ಕೆ.ಅಶ್ವತ್ಥ ನಾರಾಯಣ ರಾವ್ (ಅಶ್ವತ್ಥ) ಎನ್. ವೆಂಕಟರಾವ್ (ಭಾರತೀಪ್ರಿಯ)ಸಿ.ಕೆ. ವೆಂಕಟ ರಾಮಯ್ಯ, ಎ.ಆರ್.ಕೃಷ್ಣಶಾಸ್ತ್ರಿ,ನವರತ್ನ ರಾಮರಾವ್, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮುಂತಾದವರು ಒಳ್ಳೆಯ ಕಥೆಗಳನ್ನು ಬರೆದಿದ್ದಾರೆ. ಕುವೆಂಪು ಅವರೂ ಕೂಡಾ "ಸನ್ಯಾಸಿ ಮತ್ತು ಇತರ ಕಥೆಗಳು" ಹಾಗೂ "ನನ್ನ ದೇವರು ಮತ್ತು ಇತರ ಕಥೆಗಳು" ಎಂಬ ಎರಡು ಸಂಕಲನಗಳನ್ನು ನೀಡಿದ್ದಾರೆ. ಬೇಂದ್ರೆಯವರೂ ಕೆಲವು ಸಣ್ಣ ಕಥೆಗಳನ್ನು ಬರೆದಿದ್ದಾರೆ.

ಆ ಕಾಲದ ಮಹಿಳೆಯರಲ್ಲಿ ಕೊಡಗಿನ ಗೌರಮ್ಮ ಉತ್ತಮ ಕಥೆಗಾರ್ತಿಯಾಗಿ ಗಮನ ಸೆಳೆದಿದ್ದಾರೆ. ಅವರು "ಕಂಬನಿ", "ಗೌರಮ್ಮ ಕಥೆಗಳು" ಮತ್ತು "ಚಿಗುರು" ಎಂಬ ಕಥಾ ಸಂಕಲನಗಳನ್ನು ನೀಡಿದ್ದಾರೆ. ಹೀಗೆಯೇ ಶಿವರಾಮ ಕಾರಂತ, ಎಂ.ವಿ.ಸೀತಾರಾಮಯ್ಯ, ಜಡಭರತ, ಬೆಟಗೇರಿ ಕೃಷ್ಣಶರ್ಮ, ಮುಗಳಿ ಮುಂತಾದವರು ಕಥೆಗಳನ್ನು ರಚಿಸಿದ್ದಾರೆ. ನವೋದಯದ ಕಾಲದಲ್ಲಿ ಒಳ್ಳೆಯ ಸಣ್ಣ ಕಥೆಗಳು ರಚನೆಯಾದವು ಎಂದು ಹೇಳಬಹುದಾದರೂ ಒಟ್ಟು ಕಥಾ ಸಾಹಿತ್ಯದಲ್ಲೇ ತುಂಬಾ ಹುಲುಸು ಬೆಳೆ ಬಂದದ್ದು ಪ್ರಗತಿ ಶೀಲರು ಬಂದ ಮೇಲೆ ಹಾಗೂ ಕನ್ನಡದಲ್ಲಿ ನಿಯತಕಾಲಿಕಗಳು ಆರಂಭಗೊಂಡ ಮೇಲೆ ಎನ್ನುವುದನ್ನು ಎಲ್ಲರೂ ಒಪ್ಪಬೇಕು.

ಮೇಲೆ ಹೇಳಿದ ಸಾಹಿತ್ಯ ಪ್ರಕಾರಗಳೇ ಅಲ್ಲದೆ ಈ ಕಾಲದಲ್ಲಿ ಲಲಿತ ಪ್ರಬಂಧ, ಜೀವನ ಚರಿತ್ರೆ, ಮಕ್ಕಳ ಸಾಹಿತ್ಯ, ವಿಮರ್ಶೆ,ಹಾಸ್ಯ ಮುಂತಾದ ಪ್ರಕಾರಗಳಲ್ಲೂ ಸಾಕಷ್ಟು ಕೃಷಿ ನಡೆಯಿತು. ಅಂದರೆ ಪದ್ಯ ಸಾಹಿತ್ಯ ಮಾತ್ರವಲ್ಲದೆ ಗದ್ಯಸಾಹಿತ್ಯದ ಹೊಸ ಸಾಧ್ಯತೆಗಳಿಗೂ ಕನ್ನಡ ನವೋದಯವು ಬಾಗಿಲನ್ನು ತೆರೆಯಿತು.

3.2.2 ಕನ್ನಡ ನವೋದಯ ಸಾಹಿತ್ಯದ ಧೋರಣೆ ಮತ್ತು ಲಕ್ಷಣಗಳು

ನವೋದಯ ಸಾಹಿತ್ಯದ ಬಹು ಮುಖ್ಯ ಧೋರಣೆಗಳೆಂದರೆ, ಆಶಾವಾದಿತನ, ಜೀವನೋತ್ಸಹ, ಪ್ರಕೃತಿ ಪ್ರೇಮ, ಆಧ್ಯಾತ್ಮಿಕತೆ, ಆದರ್ಶವಾದಿ ಮನೋವೃತ್ತಿ, ಮತ್ತು ಕನಸುಗಾರಿಕೆ. ಈ ಸಾಹಿತ್ಯ ಇಂದ್ರಿಯಾನುಭವಗಳಿಗೆ ಬೆಲೆ ಕೊಡುತ್ತಲೇ ಅತೀಂದ್ರಿಯಾನುಭವಗಳನ್ನೂ ನಂಬುತ್ತದೆ. ವಾಸ್ತವವನ್ನು ನೋಡುತ್ತಿರುವಂತೆಯೇ ಆದರ್ಶವನ್ನು ಹಂಬಲಿಸುತ್ತದೆ. ಮಾನವಾಂತಃಕರಣವನ್ನು ಅನುಭವಿಸುತ್ತಲೇ ಆಧ್ಯಾತ್ಮಿಕತೆಯ ಕಡೆಗೂ ಕೈಚಾಚುತ್ತದೆ. ಈ ಲಕ್ಷಣಗಳು ಆ ಕಾಲದ ಪದ್ಯ ಸಾಹಿತ್ಯದಲ್ಲಿ ಹೆಚ್ಚಾಗಿ ಕಾಣುತ್ತದೆ. ಆ ಧೋರಣೆ ಭಾರತೀಯ ಮನಸ್ಸುಗಳಿಗೆ ಸಹಜ ಎಂಬುದು ಒಂದು ಮುಖವಾದರೆ ಇಂಗ್ಲಿಷಿನ ರೊಮ್ಯಾಂಟಿಕ್ ಸಾಹಿತ್ಯದ ಪ್ರತಿಪಾದಕರ ಧೋರಣೆಯೂ ಇದೇ ಆಗಿತ್ತು ಎಂಬುದು ಇದರ ಮತ್ತೊಂದು ಮುಖ. ಒಟ್ಟಾರೆ "ಬಾಳು ಸ್ವೀಕಾರಾರ್ಹ" ಎಂಬುದು ಈ ಪಂಥದ ಕವಿಗಳ ಮೂಲ ಆಶಯ.

ಪ್ರಕೃತಿ ಪ್ರೇಮ ಈ ಕವಿಗಳ ಒಂದು ಬಹುಮುಖ್ಯ ಅಂಶ ಎಂದು ಮೇಲೆಯೇ ಹೇಳಿದೆ. ಅವರಿಗೆ ಪ್ರಕೃತಿ ಚೆಲುವಿನ ತಾಣ ಮಾತ್ರವಲ್ಲ,ಜಗತ್ತಿನ ಚೇತನ ಶಕ್ತಿಯ ಪ್ರಕಟ ರೂಪ. ಭಗವಂತನ ಸಾಕ್ಷಾತ್ಕಾರ, ಜೀವನವನ್ನು ಭಾವಕ್ಕೆ, ಭಾವದಿಂದ ಶಿವಕ್ಕೆ ತಲುಪಿಸುವ ಸಾಧನ. ಷೆಲ್ಲಿಯ "ಓಡ್ ಟದ ವೆಸ್ಟ್ ವಿಂಡ್" ಕೀಟ್ಸ್‌ನ "ಓಡ್‌ಟು ಆಟಮ್"ಮುಂತಾದ ಕವನಗಳು ಈ ಅಭಿಪ್ರಾಯವನ್ನೇ ಹೇಳುತವೆ. ಹಾಗೆಯೇ ವರ್ಡ್ಸ್‌ವರ್ತ್, ಬರ್ನ್ಸ್, ಬೈರನ್, ಷೇಕ್ಸ್‌ಪಿಯರ್, ಟೆನಿಸನ್ ಮುಂತಾದ ರೊಮ್ಯಾಂಟಿಕ್ ಕವಿಗಳ ಬಹುಪಾಲು ಕವನಗಳಲ್ಲಿ ಪ್ರಕೃತಿಪಾರಮ್ಯವೇ ವಸ್ತುವಾಗಿದೆ. ವರ್ಡ್‌ವರ್ತ್‌ನಿಸರ್ಗವನ್ನು ಕುರಿತು.

"The nurse, the guide

The guardian of my heart,

and sun of all my moral being"

ಅನ್ನುತ್ತಾನೆ. ಇಂಥ ಭಾವನೆಯನ್ನೇ ಹೇಳುವ ಹಲವಾರು ಪದ್ಯಗಳು ಕನ್ನಡ ನವೋದಯದ ಕವಿಗಳಲ್ಲಿ ದೊರೆಯುತ್ತವೆ.

ಕುವೆಂಪು ಅವರ
"ಆನಂದಮಯ ಈ ಜಗ ಹೃದಯ
ಏತಕೆ ಭಯ ಮಾಣೊ
ಸೂರ್ಯೋದಯ ಚಂದ್ರೋದಯ
ದೇವರ ದಯ ಕಾಣೋ"
"ಇಂತಹ ಸುಂದರ ಪ್ರಾತಃಕಾಲದಿ
ಜೀವಿಸುವುದಕಿಂತಲೂ ಜೀವಿಗೆ ಬೇರೆಯ ಗುರಿಯಿಲ್ಲ"
" ಶಿವ ಮಂದಿರ ಸಮ ವನಸುಂದರ ಸುಮ ಶೃಂಗಾರದ ಗಿರಿಶೃಂಗಕೆ ಬಾ
ಬಾ ಫಾಲ್ಗುಣ ರವಿ ದರ್ಶನಕೆ"

ಇಂತಹ ಹಲವಾರು ಪದ್ಯಗಳಲ್ಲಿ "ಪ್ರಕೃತಿಯೇ ಪರಮ" ಎಂಬ ಭಾವನೆ ಕೋಡಿವರಿದಿದೆ". ಹಾಗೆಂದ ಮಾತ್ರಕ್ಕೆ ನವೋದಯ ಸಾಹಿತ್ಯ ಬದುಕಿನ ಕಠೋರ ವಾಸ್ತವಗಳಿಗೆ, ಸಮಾಜದಲ್ಲಿ ನಡೆಯುವ ಶೋಷಣೆ ಅನ್ಯಾಯಗಳಿಗೆ ಕುರುಡಾಯಿತು ಎಂದು ಭಾವಿಸಬೇಕಾಗಿಲ್ಲ. ಅಂಥ ವಿಷಯಗಳನ್ನು ಕುರಿತು ಆಕ್ರೋಶ, ಟೀಕೆ, ವಿಡಂಬನೆ, ಪ್ರತಿಭಟನೆ ಇರುವಂಥ ಸಾಹಿತ್ಯವೂ ಸಾಕಷ್ಟು ಪ್ರಮಾಣವಲ್ಲೇ ಸೃಷ್ಟಿಯಾಗಿದೆ. ಕುವೆಂಪು ಅವರ ಗೊಬ್ಬರ, ಕಲ್ಕಿ, ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು? ಕೋಗಿಲೆ ಮತ್ತು ಸೋವಿಯಟ್ ರಷ್ಯಾ ಮುಂತಾದ ಕವನಗಳು ಬೇಂದ್ರೆಯವರ ಕುರುಡು ಕಾಂಚಾಣ, ನರಬಲಿ,

ಅನ್ನಾವತಾರ, ಮಕ್ಕಳಿವರೇನಮ್ಮ? ಮುಂತಾದ ಪದ್ಯಗಳು ಹಾಗೆಯೇ ಹಲವಾರು ಕವಿಗಳ ಹಲವಾರು ಪದ್ಯಗಳು ಸಮಾಜದ ಕಟುವಾಸ್ತವಗಳಿಗೆ ಪ್ರತಿಕ್ರಿಯಿಸಿದ ಪದ್ಯಗಳಾಗಿವೆ.

ನವೋದಯ ಕಾಲದ ಮತ್ತೊಂದು ಹೇಳಲೇ ಬೇಕಾದ ಅಂಶವೆಂದರೆ, ಈ ಸಾಹಿತ್ಯದ ಸಮೃದ್ಧಿಯ ಕಾಲದಲ್ಲಿ ಭಾರತ ಪಾರತಂತ್ರ್ಯದಲ್ಲಿತ್ತು. ಸ್ವಾತಂತ್ರ್ಯದ ಆಕಾಂಕ್ಷೆ ಆ ಕಾಲದ ಪ್ರಜ್ಞಾವಂತರೆಲ್ಲೆಲ್ಲ ಅತ್ಯಂತ ತೀವ್ರವಾಗಿತ್ತು. ಈ ಕಾಲದಲ್ಲೇ ಭಾರತೀಯರ ಸ್ವಾತಂತ್ರ್ಯದ ಹೋರಾಟಕ್ಕೆ ಗಾಂಧೀಜೀಯವರ ನಾಯಕತ್ವ ದೊರೆತು ಸ್ವಾತಂತ್ರ್ಯದ ಬಯಕೆ ಜನರಲ್ಲಿ ತೀವ್ರವಾಗಿತ್ತು. ಜೊತೆಗೆ ಗಾಂಧೀಜೀಯವರ ಸತ್ಯ ಅಹಿಂಸೆಯ ಪ್ರಯೋಗಗಳೂ ನಮ್ಮ ಸಾಹಿತ್ಯವನ್ನು ತೀವ್ರವಾಗಿ ಪ್ರಭಾವಿಸಿದ್ದವು. ಹಾಗಾಗಿ ಭಾರತೀಯರಲ್ಲಿ ಏಕತೆ, ಆತ್ಮಾಭಿಮಾನ, ಮತ್ತು ಆತ್ಮಪ್ರತ್ಯಯಗಳ ಭಾವನೆಯನ್ನು ಬಿತ್ತುವ ಜವಾಬ್ದಾರಿಯನ್ನೂ ಸಾಹಿತ್ಯ ಹೊತ್ತುಕೊಂಡಿತು. ಆದ್ದರಿಂದ ಆ ಕಾಲಕ್ಕೆ ಸಮಷ್ಟಿ ಮೌಲ್ಯಗಳಾಗಿದ್ದ ಸಂಗತಿಗಳನ್ನೇ ಪ್ರತಿಯೊಬ್ಬರೂ ಪ್ರತಿಪಾದಿಸುತ್ತಾ ಜನರನ್ನು ಒಗ್ಗೂಡಿಸುವ ಕೆಲಸ ಮಾಡತೊಡಗಿದರು. ಇದಕ್ಕೆ ಇಂಗ್ಲಿಷಿನ ರೊಮ್ಯಾಂಟಿಕ್ ಸಾಹಿತ್ಯ ಒದಗಿಸಿದ ಕನಸುಗಾರಿಕೆ, ಆಶಾವಾದಿತನ, ಆದರ್ಶವಾದಿತನ, ಆಧ್ಯಾತ್ಮಿಕತೆ, ಮುಂತಾದ ಎಲ್ಲ ವಿಷಯಗಳೂ ಪೋಷಕವಾಗಿಯೇ ಕಂಡವು. ಹಾಗಾಗಿ ನಮ್ಮದೆನ್ನುವುದೆಲ್ಲವನ್ನೂ ಗೌರವಿಸುವ, ಕೀರ್ತಿಸುವ ಪರಿಪಾಠವೂ ಬೆಳೆಯಿತು.

ಸಂವೇದನೆಗಳು ಬದಲಾದಂತೆ ಸಾಹಿತ್ಯದ ಭಾಷೆಯೂ ಬದಲಾವಣೆಯಾಗುವುದು ಅನಿವಾರ್ಯ. " A poet is a man speaking unto other man"ಎಂಬ ವರ್ಡ್ಸ್‌ವರ್ತನ ಮಾತಿನಂತೆ ಕವಿಯ ಭಾಷಾ ಶೈಲಿಯಲ್ಲಿ ಬದಲಾವಣೆಯಾಯಿತು. ಅಂತೆಯೆ ಇದು ಆ ಕಾಲದ ನಾಟಕ, ಸಣ್ಣಕಥೆ, ಕಾದಂಬರಿ, ಪ್ರಬಂಧ ಹೀಗೆ ಎಲ್ಲ ಪ್ರಕಾರಗಳಲ್ಲಿಯೂ ಕಾಣಿಸಿಕೊಂಡಿತು. ಹಾಗೆಂದ ಮಾತ್ರಕ್ಕೆ ಎಲ್ಲ ಕವಿಗಳೂ ಲೇಖಕರೂ ಒಂದೇ ಅಚ್ಚಿನಲ್ಲಿ ಎರಕ ಹೊಯ್ದವರಂತೆ ಬರೆಯುತ್ತಿದ್ದರೆಂಬುದೂ ಅರ್ಥವಲ್ಲ. ಮೇಲೆ ಹೇಳಿದ್ದು ನವೋದಯ ಸಾಹಿತ್ಯ ಲಕ್ಷಣದ ಪ್ರಧಾನಧಾರೆ ಅಷ್ಟೆ. ಆ ಕಾಲದಲ್ಲೇ ಎಷ್ಟೋ ಲೇಖಕರು ಕೆಲವು ವಿಷಯಗಳಲ್ಲಿ ತೀರಾ ಭಿನ್ನವೆನ್ನುವಂತೆ ಚಿಂತಿಸಿದ್ದು ಬರೆದದ್ದುಂಟು. ಉದಾಹರಣೆಗೆ ಶಿವರಾಮಕಾರಂತರಂಥ ಪ್ರಮುಖ ಬರೆಹಗಾರರೇ ಆಧ್ಯಾತ್ಮಿಕತೆ, ಧಾರ್ಮಿಕತೆ, ಕನಸುಗಾರಿಕೆಗಳಿಂದ ದೂರ ನಿಂತು ತಮ್ಮ ಕೃತಿಗಳಲ್ಲಿ ಬೇರೊಂದು ಬಗೆಯ ಚಿಂತನಾ ಕ್ರಮವನ್ನೇ ಸ್ಥಾಪಿಸಲು ಪ್ರಯತ್ನಿಸಿರುವುದು ತುಂಬ ಗಮನಾರ್ಹ. ಒಟ್ಟಿನಲ್ಲಿ ಈ ಮೇಲಿನ ಅಂಶಗಳಿಂದ ಅದರ ಪ್ರಧಾನ ಲಕ್ಷಣಗಳನ್ನು ನಾವು ಹೀಗೆ ಗಮನಿಸಬಹುದು.

- ಆಶಾವಾದ,ಪ್ರಕೃತಿ ಪ್ರೇಮ, ಆಧ್ಯಾತ್ಮಿಕತೆ, ಆದರ್ಶವಾದ ಮನೋವೃತ್ತಿ ಮತ್ತು ಕನಸುಗಾರಿಕೆ ಈ ಸಾಹಿತ್ಯದಲ್ಲಿ ಪ್ರಧಾನವಾಗಿ ಗುರುತಿಸಬಹುದು.
- ಮಹಾತ್ಮಗಾಂಧೀ, ರಾಮಕೃಷ್ಣ, ಸ್ವಾಮಿವಿವೇಕನಂದ ಮೊದಲಾದ ಪ್ರಮುಖರ ಚಿಂತನೆಯ ಬೆಳಕಿನಲ್ಲಿ ರೂಪಿಸಿಕೊಂಡ ತಾತ್ವಿಕ ಚಿಂತನೆಯನ್ನು ಅವರ ಸಾಹಿತ್ಯಗಳಲ್ಲಿ ಗಮನಿಸಬಹುದು.
- ಭಾವಗೀತೆ, ಕಾದಂಬರಿ, ಸಣ್ಣಕತೆ, ನಾಟಕ, ಪ್ರಬಂಧ ಮೊದಲಾದ ಹೊಸರೂಪಗಳ ಆವಿಷ್ಕಾರಕ್ಕೆ ಎಡೆ ನೀಡಿದ್ದು ನವೋದಯ ಸಾಹಿತ್ಯದ ಪ್ರಮುಖ ವೈಶಿಷ್ಟ್ಯವಾಗಿದೆ.
- ಸಾಮಾಜಿಕ ಕಳಕಳಿ, ರಾಜಕೀಯ ತಿಳುವಳಿಕೆಗಳು ಸಾಹಿತ್ಯ ಸೃಷ್ಟಿಗೆ ಅನುಸಂಘಿಕವೆಂಬ ನಿಲವು ಆ ಕಾಲದ ಕವಿಗಳಲ್ಲಿ ಕಂಡು ಬರುತ್ತದೆ.
- ವಸ್ತು ವಿವರಗಳಲ್ಲಿ ಪ್ರಾದೇಶಿಕತೆಗೆ ಬೆಲೆ ಕೊಟ್ಟರೂ ಒಟ್ಟು ಧೋರಣೆಯಲ್ಲಿ ರಾಷ್ಟ್ರೀಯವಾದದ ಪ್ರತಿಪಾದನೆಯ ಒಲವು ತೋರಿದ್ದು ಇದರ ಮತ್ತೊಂದು ಪ್ರಮುಖ ಲಕ್ಷಣವೆಂದು ಗುರುತಿಸಬಹುದು.

- ಮಾನವೀಯ ಅಂತಃಕರಣವನ್ನು ಅನುಭವಿಸುತ್ತಲೇ ಆಧ್ಯಾತ್ಮಿಕತೆಯ ಕಡೆಗೂ ಕೈಚಾಚುವ ಹಂಬಲ ಎದ್ದು ಕಾಣುವುದು
- ಇಂದ್ರಿಯಾನುಭವಗಳಿಗೆ ಬೆಲೆ ಕೊಡುತ್ತಲೆ ಅತೀಂದ್ರಿಯಾನುಭವಗಳನ್ನು ನಂಬುತ್ತದೆ. ಅಂತೆಯೆ ವಾಸ್ತವವನ್ನು ನೋಡುತ್ತಲೇ ಆದರ್ಶವನ್ನು ಹಂಬಲಿಸುತ್ತದೆ.
- ಭಾಷೆಯನ್ನು ಭಾವನೆ, ವಿಚಾರ, ವಿಜ್ಞಾನಗಳ ಸಹಿತವಾಗಿ ಬಳಸುವ ಪಡಿತ ಒಂದು ಕಡೆ ಇದ್ದರೆ, ಮತ್ತೊಂದು ಕಡೆಯು ಭಾಷೆಯ ಮೂಲಕ ಅನುಭವಗಳ ಪುನರ್ ನಿರ್ಮಾಣ ಮಾಡುವ ಆಸ್ಥೆಯು ಎದ್ದು ಕಂಡುಬರುವುದು.
- ರಾಷ್ಟ್ರೀಯತೆ ಮತ್ತು ಪ್ರಾದೇಶಿಕತೆಗಳ ನಡುವಿನ ದ್ವಂದ್ವದ ನಿರ್ವಹಣೆಯನ್ನು ಕಾಣುತ್ತೇವೆ. ಉದಾಹರಣೆಗೆ : "ಕನ್ನಡ ಕಂದಮ್ಮ", "ಭಾರತ ಜನನಿಯೆ ತನುಜಾತೆ" ಇನ್ನು ಮೊದಲಾದ ಪ್ರಮುಖ ಕವಿಗಳ ಕಾವ್ಯಗಳಿಂದ ನಾವು ತಿಳಿಯಬಹುದಾಗಿದೆ.
- ಸಾಹಿತ್ಯ ವಾಸ್ತವವಾಗಿ ಸಮಕಾಲೀನ ಬದುಕಿನ ಬಳಕೆಯಾಗಿ ನಿಲ್ಲುವುದನ್ನು ಅಥವಾ ನುಡಿಕೊಡುವುದನ್ನು ಒಂದು ಪ್ರಮುಖ ಲಕ್ಷಣವಾಗಿ ಗಮನಿಸುತ್ತೇವೆ.

ಒಟ್ಟಿನಲ್ಲಿ ಇನ್ನು ಮೊದಲಾದ ಪ್ರಮುಖ ಅಂಶಗಳನ್ನು ಲಕ್ಷಣಗಳನ್ನು ಒಳಗೊಳ್ಳುವ ಕನ್ನಡ ನವೋದಯ ಸಾಹಿತ್ಯವು ಆಧುನಿಕ ಕನ್ನಡ ಸಾಹಿತ್ಯದಲ್ಲಿ ತನ್ನದೇ ಆದಂತಹ ಒಂದು ಮಹತ್ವದ ಸ್ಥಾನವನ್ನು ಹೊಂದಿದೆಂಬುದನ್ನು ಗುರುತಿಸಬಹುದು.

3.2.3 ಸ್ವಪರೀಕ್ಷಾ ಪ್ರಶ್ನೆಗಳು

3.2.3.1 ಆಧುನಿಕ ಕನ್ನಡ ಸಾಹಿತ್ಯ ಸೃಷ್ಟಿಯ ಹಿಂದೆ ಇರುವ ಪ್ರಮುಖ ಅಂಶಗಳು ಯಾವುವು?

....

....

....

3.2.3.2 ಕನ್ನಡದಲ್ಲಿ ಆದಿ ಪ್ರಾಸವನ್ನು ಬಿಟ್ಟು ಬರೆದ ಮೊದಲು ಕವಿ ಯಾರು ? ಹೆಸರಿಸಿ.

....

....

....

3.2.3.3 ಆಧುನಿಕ ಕನ್ನಡ ಸಾಹಿತ್ಯದ ನಾಲ್ಕು ಪಂಥಗಳಾವುವು? ಹೆಸರಿಸಿ.

....

....

....

3.2.3.4 ಕನ್ನಡ ನವೋದಯ ಸಾಹಿತ್ಯ ಇಂಗ್ಲಿಷ್‌ನ ಯಾವ ಕಾವ್ಯ ಪಂಥದಿಂದ ಪ್ರಭಾವಿತವಾಯಿತು.

....

....

....

3.2.3.5 "ರೋಮ್ಯಾಂಟಿಕ್"ಶಬ್ದಕ್ಕಿದ್ದ ಅರ್ಥಗಳೇನು?

....

....

....

3.2.3.6 ಟಿ.ಎಂ. ಶ್ರೀಕಂಠಯ್ಯನವರಿಗಿಂತ ಮೊತ್ತ ಮೊದಲು ಭಾವಗೀತೆಗಳನ್ನು ರಚಿಸಿದ ಕೆಲವು ಕನ್ನಡ ಕವಿಗಳು ಯಾರು? ಹೆಸರಿಸಿ.

....

....

....

3.2.3.7 ಶ್ರೀಕಂಠೇಗೌಡರು ಶೇಕ್ಸ್‌ಪಿಯರ್‌ನ ಯಾವ ನಾಟಕವನ್ನು ರೂಪಾಂತರ ಮಾಡಿದರು? ಹೆಸರಿಸಿ.

....

....

....

3.2.3.8 1911ರಲ್ಲಿ ಬಿ.ಎಂ. ಶ್ರೀಕಂಠಯ್ಯನವರು ಧಾರವಾಡದಲ್ಲಿ ಮಾಡಿದ ಉಪನ್ಯಾಸದ ಶೀರ್ಷಿಕೆಯೇನು?

....

....

....

3.2.3.9 ಶ್ರೀಕಂಠಯ್ಯನವರ "ಇಂಗ್ಲೀಷ್ ಗೀತೆಗಳು" ಪೂರ್ಣ ಆವೃತ್ತಿ ಯಾವಾಗ ಪ್ರಕಟವಾಯಿತು? ಅದರಲ್ಲಿ ಎಷ್ಟು ಕವನಗಳಿವೆ?

....

....

....

3.2.3.10 ಕನ್ನಡದಲ್ಲಿ ಸಾಮಾಜಿಕ ನಾಟಕಗಳ ಶಕೆಯನ್ನು ಆರಂಭಿಸಿದವರು ಯಾರು?

....

....

....

3.2.3.11 ಕುವೆಂಪು ಅವರು "ಬಿರುಗಾಳಿ" ಮತ್ತು " ರಕ್ತಾಕ್ಷಿ"ಕೃತಿಗಳು ಯಾವ ನಾಟಕ ರೂಪಾಂತರ?

....

....

....

3.2.3.12 "ಸಣ್ಣಕಥೆಗಳ ಜನಕ" ಎಂದು ಯಾರನ್ನು ಕರೆಯುತ್ತಾರೆ?

....

....

....

3.2.3.13 ನವೋದಯ ಸಾಹಿತ್ಯದ ಬಹುಮುಖ್ಯ ಲಕ್ಷಣಗಳಾವುವು?

....

....

....

3.2.4 ಘಟಕದ ಸಾರಾಂಶ

ಹತ್ತನೆಯ ಶತಮಾನದಿಂದ ಉಚ್ಛ್ರಾಯದಲ್ಲೇ ನಡೆದು ಬಂದ ಕನ್ನಡ ಸಾಹಿತ್ಯ ವಾಹಿನಿ ಹದಿನೆಂಟನೆಯ ಶತಮಾನದ ಹೊತ್ತಿಗೆ ಕ್ಷೀಣಿಸುತ್ತಾ ಬಂದಿತು. ಬ್ರಿಟಿಷರು ಆಡಳಿತದ ದಮನಕಾರಿ ನೀತಿ ಹಾಗೂ ಭಾರತದ ಸಣ್ಣಪುಟ್ಟ ಸಂಸ್ಥಾನಗಳ ಮಧ್ಯೆ ಆಗಾಗ ನಡೆಯುತ್ತಿದ್ದ ಒಳಜಗಳಗಳು ಇವುಗಳಿಂದಾಗಿ ಭಾರತೀಯ ಬದುಕೇ ತುಂಬಾ ಪ್ರಕ್ಷುಬ್ಧವಾಗಿ ಸಾಹಿತ್ಯ ಕೃಷಿಗೆ ಪೂರಕವಾದ ವಾತಾರವಣ ದೊರೆಯಲಿಲ್ಲ. ಇದೇ ಸಮಯದಲ್ಲಿ ಭಾರತೀಯರಿಗೆ ಇಡೀ ಯುರೋಪಿನ ಸಾಹಿತ್ಯದ ಬೆಳಕಿನ ಕಿಂಡಿ ತೆರೆದಂತಾಯಿತು. ಒಟ್ಟು ಐದು ಶತಮಾನಗಳ ಇಂಗ್ಲಿಷ್ ಸಾಹಿತ್ಯ ಭಾರತೀಯರಿಗೆ ಒಟ್ಟಿಗೆ ಓದಲು ಲಭ್ಯವಾಯಿತು. ಇಂಗ್ಲಿಷ್‌ನಲ್ಲಿ ರೊಮ್ಯಾಂಟಿಕ್ ಸಾಹಿತ್ಯದ ದೃಷ್ಟಿಧೋರಣೆಗಳು ನಮ್ಮ ಕನ್ನಡದ ಸಾಹಿತಿಗಳಿಗೆ ಬಲು ಪ್ರಿಯವಾಯಿತು. ಇಂಗ್ಲಿಷ್ ರೋಮ್ಯಾಂಟಿಕ್ ಕವಿಗಳ ನಿಸರ್ಗ ಪ್ರೀತಿ, ಭಾವನಾಮಯತೆ, ಆಶಾವಾದಿತ್ವ, ಕನಸುಗಾರಿಕೆ, ಆದರ್ಶವಾದಿ ಮನೋವೃತ್ತಿ, ಆಧ್ಯಾತ್ಮಿಕತೆಯಂಥ ಭಾವನೆಗಳೇ ಕನ್ನಡ ಕವಿಗಳನ್ನು ಪ್ರಚೋದಿಸಿದವು.

ಆಧುನಿಕ ಕನ್ನಡ ನವೋದಯವನ್ನು ಉದ್ಘಾಟಿಸಿದ ಕೃತಿಯೆಂದರೆ 1921ರಲ್ಲಿ ಮೊದಲು ಪ್ರಕಟವಾದ ಬಿ.ಎಂ. ಶ್ರೀಯವರ "ಇಂಗ್ಲಿಷ್ ಗೀತೆಗಳು", ಇಂಗ್ಲಿಷ್‌ನ ರೊಮ್ಯಾಂಟಿಕ್ ಕವಿಗಳ ಹಲವಾರು ಕವನಗಳನ್ನು ಕನ್ನಡದಲ್ಲಿ ಕನ್ನಡ ಜಾಯಮಾನಕ್ಕೆ ಬಗ್ಗುವಂತೆ ಭಾಷಾಂತರಿಸಿದರು. ಆ ಪದ್ಯಗಳ ಛಂದೋವೈವಿಧ್ಯ, ಶಬ್ದ ಸಂಪತ್ತು, ಪ್ರತಿಮಾ ವಿಧಾನ, ಲಯ ಮಾಧುರ್ಯ ಇವೆಲ್ಲವೂ ಕನ್ನಡ ಕವಿಗಳನ್ನು

ಪ್ರಚೋದಿಸಿದವು. 1915ಮತ್ತು 1916ರಲ್ಲಿ ಕ್ರಮವಾಗಿ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳು ಸ್ಥಾಪನೆಗೊಂಡು ಸಾಹಿತ್ಯ ಸೃಷ್ಟಿಗೆ ಒಂದು ಕೇಂದ್ರ ದೊರೆಯುವಂತಾಯಿತು. ಆ ಸಂದರ್ಭದಲ್ಲಿ ಹಲವು ಪ್ರತಿಭಾವಂತರ ದಂಡೇ ಸಾಹಿತ್ಯ ರಚನೆಗೆ ಕೈಯಿಟ್ಟಿತು. ಕಾವ್ಯ ಮಾತ್ರವೇ ಅಲ್ಲದೆ ಕಾದಂಬರಿ ಸಣ್ಣಕಥೆ, ಪ್ರಬಂಧ, ನಾಟಕ, ಜೀವನ ಚರಿತ್ರೆ ಮುಂತಾದ ಎಲ್ಲ ಸಾಹಿತ್ಯ ಪ್ರಕಾರಗಳೂ ಗಮನಾರ್ಹವಾದ ಸಾಧನೆ ಆ ಕಾಲದಲ್ಲಾಯಿತೆಂದು ನಾವು ಈ ಘಟಕ ಓನ್ಲೆಯಲ್ಲಿ ಅರಿಯಬಹುದಾಗಿದೆ.

3.2.5 ಸ್ವಪರೀಕ್ಷಾ ಪ್ರಶ್ನೆಗಳಿಗೆ ಉತ್ತರ

3.2.5.1 ಆಂಗ್ಲವಿದ್ಯಾಭ್ಯಾಸ, ಮುದ್ರಣ ಯಂತ್ರದ ಕ್ರಾಂತಿ, ಶಿಕ್ಷಣದ ಹೊಸ ಪ್ರಯೋಗ, ಕ್ರೈಸ್ತಮಿಶನರಿಗೆ ಸಮಾಜಿಕ ಕಾರ್ಯ, ಒಮ್ಮೆಯೆ ಆಂಗ್ಲ ಸಾಹಿತ್ಯ ಕನ್ನಡಕ್ಕೆ ಹರಿದು ಬಂದದ್ದು, ವೈಚಾರಿಕ ಪ್ರಜ್ಞೆ, ವಿಜ್ಞಾನದ ಹೊಸ ಆವಿಷ್ಕಾರಗಳು, ಪಶ್ಚಿಮದ ಆಧುನಿಕತೆಯ ತೀವ್ರಗಾಳಿ, ಕೈಗಾರೀಕರಣ, ವಸಾಹತು ಕಾಹಿ ನೀತಿ, ರಾಜಕೀಯ ಮತ್ತು ಆಡಳಿತದ ಬದಲಾವಣೆ, ಆಧುನಿಕದ ಹೊಸಸಮಸ್ಯೆ ಮತ್ತು ಸವಾಲು ಇನ್ನು ಮೊದಲಾದ ಪ್ರಮುಖ ಒತ್ತಡದ ಪರಿಣಾಮದ ಫಲದಿಂದ ಆಧುನಿಕ ಕನ್ನಡ ಸಾಹಿತ್ಯದ ಸೃಷ್ಟಿಯ ಹಿಂದೆ ವಹಿಸಿದ ಪ್ರಮುಖ ಪಾತ್ರಗಳೆಂದು ಗುರುತಿಸಬಹುದಾಗಿದೆ.

3.2.5.2 ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ ಬಂಡಾಯ

3.2.5.3 ಪಂಜೆ ಮಂಗೇಶ್ವರ ರಾವ್, ಗೋವಿಂದ ಪೈ

3.2.5.4 ರೊಮ್ಯಾಂಟಿಕ್ ಕಾವ್ಯ

3.2.5.5 ರೊಮ್ಯಾಂಟಿಕ್ ಶಬ್ದಕ್ಕೆ ಕಟ್ಟುಕತೆ, ಕಲ್ಪಿತ ವಿಷಯಗಳ ಕಂತೆ, ಉದಾರ ಮನೋವೃತ್ತಿ, ಸುಳ್ಳು ಹೇಳುವುದು, ಭಾವನಾ ಪ್ರಧಾನತೆ, ರಸನಿಷ್ಠೆ ಆಧ್ಯಾತ್ಮಿಕತೆ ಮೊದಲಾದ ಪ್ರಮುಖ ಅರ್ಥಗಳುಂಟು.

3.2.5.6 ಚ.ವಾಸುದೇವಯ್ಯ, ಶ್ರೀನಿವಾಸರಾವ್, ಎಸ್.ಜಿ.ನರಸಿಂಹಾಚಾರ್ಯ, ಪಂಜೆ ಮಂಗೇಶರಾವ್ ಮುಂತಾದವರು ಪ್ರಮುಖರು ಗಮನಾರ್ಹರರಾಗಿದ್ದಾರೆ.

3.2.5.7 "ಮ್ಯಾಕ್‌ಬೆತ್"ನಾಟಕವು "ಪ್ರತಾಪ ರುದ್ರದೇವ" ಎಂಬ ಹೆಸರಿನಲ್ಲಿ ರೂಪಾಂತರಿಸಿದರು.

3.2.5.8 "ಕನ್ನಡ ಮಾತು ತಲೆಯೆತ್ತುವ ಬಗೆ"

3.2.5.9 ಮಹಾಛಂದಸ್ಸು

3.2.5.10 ಟಿ.ಪಿ.ಕೈಲಾಸಂ

3.2.5.11 ಶೇಕ್ಸ್‌ಪಿಯರ್‌ನ ಟೆಂಪೆಸ್ಟ್ ಮತ್ತು ಹ್ಯಾಮ್ಲೆಟ್ ನಾಟಕಗಳ ರೂಪಾಂತರ

3.2.5.12 ಮಾಸ್ತಿ ವೆಂಕಟೇಶ ಅಯ್ಯಂಗಾರ

3.2.5.13 ನಿಸರ್ಗ ಕ್ರಿಯತೆ, ಆಶಾವಾದಿತನ, ಜೀವನೋತ್ಸಾಹ, ಆದರ್ಶವಾದಿ ಮನೋವೃತ್ತಿ. ಕನಸುಗಾರಿಕೆ. ಇನ್ನು ಮುಂತಾದವು ನವೋದಯ ಸಾಹಿತ್ಯದ ಮುಖ್ಯಲಕ್ಷಣಗಳೆಂದು ಗುರುತಿಸಬಹುದು.

3.3 ಪ್ರಗತಿಶೀಲ ಸಾಹಿತ್ಯ

ಸರ್ವೋದಯ ಸಾಹಿತ್ಯದಂತೆ ಪ್ರಗತಿಶೀಲ ಸಾಹಿತ್ಯಕೂಡ ಪಶ್ಚಿಮ ಮತ್ತು ದೇಶಿಯ ತಾತ್ವಿಕ ಸಂವೇದನೆಯ ಹಿನ್ನೆಲೆಯಲ್ಲಿ ರೂಪಿತವಾದ ಒಂದು ಸಾಹಿತ್ಯ ಪಂಥವಾಗಿದ್ದು. ಮಾರ್ಕ್ಸ್‌ವಾದ, ಗಾಂಧೀವಾದ, ವಚನಕಾರರ ಸಮಾಜಿಕ ಬದ್ಧತೆ, ಕೀರ್ತನಕಾರರ ಸಾಮಾಜಿಕ ಕಳಕಳಿ, ಸರ್ವಜ್ಞನ ನಿಷ್ಠೂರದವಾಸ್ತವ ಪ್ರಜ್ಞೆ. ನವೋದಯ ಸಾಹಿತ್ಯದ ಮಾನವೀಯ ಅಂತಕರಣ, ವಾಸ್ತಾವ ಪ್ರಜ್ಞೆ ಮಾರ್ಕ್ಸ್‌ವಾದ ಇನ್ನು ಮೊದಲಾದ ತಾತ್ವಿಕ ಚಿಂತನೆಯ ಬೆಳಕಿನಲ್ಲಿ ಮೂಡಿದ ಒಂದು ಪ್ರಮುಖ ಎಡಪಂಥೀಯ ಸಾಹಿತ್ಯ ಚಳುವಳಿಯಾಗಿ ಗಮನಾರ್ಹತೆ ಪಡೆದುಕೊಂಡಿತು.

ಅಂತೆಯೆ ಈ ಹಿನ್ನೆಲೆಯಲ್ಲಿ ರೂಪಿತವಾದ ಈ ಸಾಹಿತ್ಯದ ಪರಿಕಲ್ಪನೆಯು 1943ರಂದು ಅ.ನ.ಕೃಷ್ಣರಾಯರ ಅಧ್ಯಕ್ಷತೆಯ ಹಿನ್ನೆಲೆಯಲ್ಲಿ ಸೇರಿದ ಸಂಘಟನೆಯ ಚರ್ಚೆಯ ಫಲದಿಂದ ಒಂದು ಸ್ಪಷ್ಟಚಾಲನೆಯನ್ನು ಪಡೆದುಗೊಂಡಿತು. ಹಾಗೆಯೆ ಇದೇ ಸಂದರ್ಭದಲ್ಲಿ ಪ್ರಗತಿಶೀಲದ ಲೇಖಕರ ಸಂಘವು ಕೂಡ ಹುಟ್ಟಿಕೊಂಡಿತು. ಈ ಹಿನ್ನೆಲೆಯಲ್ಲಿ ಅ.ನ.ಕೃ. ನಿರಂಜನ, ಬಸವರಾಜಕಟ್ಟಿಮನಿ, ತ.ರಾ.ಸು. ಎಂ. ಇನಾಂದಾರ್. ಕುಮಾರವೆಂಕಣ್ಣ, ಅರ್ಚಕ ವೆಂಕಟೇಶ, ಕೃಷ್ಣಕುಮಾರ ಕಲ್ಲೂರ, ಚದುರಂಗ, ಭಾರತೀಯ ಪ್ರಿಯ ಇನ್ನೂ ಮುಂತಾದ ಕಥೆ-ಕಾದಂಬರಿಕಾರರು, ಪ್ರಬಂಧಕಾರರು ತುಂಬ ಪ್ರಮುಖರಾಗಿದ್ದು ಗಮನಾರ್ಹತೆ ಪಡೆದುಕೊಂಡರು. ಆದರೆ ಈ ಅವಧಿಯಲ್ಲಿ ಕಾವ್ಯ ನಾಟಕ, ಪ್ರಬಂಧಗಳಂಥ ಜನಪ್ರಿಯ ಸಾಹಿತ್ಯ ಪ್ರಕಾರಗಳಿಗೆ ಬದಲು ಸಣ್ಣಕಥೆ ಎಂಬುದು ಒಂದು ಜನಪ್ರಿಯ ಪ್ರಕಾರವಾಗಿ ಹೆಚ್ಚು ಚಾಲ್ತಿಯನ್ನು ಪಡೆದುಕೊಂಡಿತು.

ಅವರು ಮಾರ್ಕ್ಸ್‌ವಾದವನ್ನು ತಮ್ಮ ಸೃಜನಶೀಲ ಸ್ತರದಲ್ಲಿ ಮಾನವೀಯತೆಯ ದೃಷ್ಟಿಯಿಂದ ಕಲಾತ್ಮಕವಾಗಿ ಕರಗಿಸಿ ಹೇಳುವ ಒಂದು ಪ್ರಮುಖ ಅನುಸಂಧಾನವನ್ನು ರೂಪಿಸಿಕೊಂಡರು. ಆ ಮೂಲಕ ಸಾಮಾಜಿಕ ಲಕ್ಷಣಗಳನ್ನು ನಾವು ಹೀಗೆ ಗಮನಿಸಬಹುದು.

- ಪ್ರಗತಿಶೀಲ ಸಾಹಿತ್ಯ ಕೂಡ ನವೋದಯ ಸಾಹಿತ್ಯದಂತೆ ಜೀವನ ಪ್ರೀತಿಯನ್ನು ಪ್ರತಿಪಾದಿಸುತ್ತದೆ.
- ಬಂಡವಾಳಶಾಹಿ ವ್ಯವಸ್ಥೆಯನ್ನು ಈ ಸಾಹಿತ್ಯ ವಿರೋಧಿಸುತ್ತದೆ.
- ದುರ್ಬಲರು, ಶೋಷಿತರು, ಶ್ರಮಜೀವಿಗಳು ಮತ್ತು ದಲಿತರ ಸಮಸ್ಯೆಗಳನ್ನು ಸಾಹಿತ್ಯದಲ್ಲಿ ಚಿತ್ರಿಸಲು ಬಯಸುತ್ತದೆ.
- ಕ್ರಾಂತಿಯಿಂದ ಮಾತ್ರವೇ ಶಾಂತಿ ಮೂಡುತ್ತದೆಂದು ಈ ಸಾಹಿತ್ಯ ನಂಬುತ್ತದೆ.
- ಸಮತಾವಾದವೇ ಸಮಾಜಕ್ಕೆ ಸ್ವೀಕಾರರಾರ್ಹ ಚಿಂತನೆಯೆಂದು ಪ್ರತಿಪಾದಿಸುತ್ತದೆ.
- ವ್ಯಕ್ತಿ ಮತ್ತು ರಾಷ್ಟ್ರದ ಸ್ವಾತಂತ್ರ್ಯವನ್ನು ಗೌರವಿಸುತ್ತದೆ. ಆ ಸ್ವಾತಂತ್ರ್ಯಗಳ ರಕ್ಷಣೆಗಾಗಿಯೇ ಲೇಖನಿಯನ್ನು ಝಳಪಿಸುತ್ತದೆ.
- ವಾಸ್ತವದ ಕಠೋರ ಮುಖಗಳನ್ನು ಬಯಲುಗೊಳಿಸಲು ಬಯಸುತ್ತದೆ.
- ಭಾಷೆಗಿರುವ ಮಡಿ ಮೈಲಿಗಳ ಭಾವನೆಯನ್ನು ಕಿತ್ತು ಹಾಕುತ್ತದೆ.
- ಬಂಡವಾಳಶಾಹಿ ಮಾತ್ರವಲ್ಲದೆ ಸಾಮ್ರಾಜ್ಯಶಾಹಿ, ಸರ್ವಾಧಿಕಾರತ್ವ, ಪ್ಯಾಸಿಸಂ, ನಾಜಿಸಂಗಳನ್ನು ಕೂಡಾ ತೀವ್ರವಾಗಿ ವಿರೋಧಿಸುತ್ತದೆ.
- ಸಂಪ್ರದಾಯದ ಮೌಲ್ಯಗಳನ್ನು ಇದು ವಿರೋಧಿಸುತ್ತದೆ.

ಹೀಗೆ ಈ ಸಾಹಿತ್ಯ ಇನ್ನು ಮೊದಲಾದ ಪ್ರಮುಖ ಲಕ್ಷಣಗಳನ್ನು ಹೊಂದಿದ್ದು. ಒಟ್ಟಿನಲ್ಲಿ ತನ್ನ ಹಿಂದಿನ ಸಾಹಿತ್ಯದೊಂದಿಗೆ ಸಾತತ್ಯ ಸಂಬಂಧ ಉಳಿಸಿಕೊಳ್ಳುವ ಜೊತೆಗೇ ಕನ್ನಡ ಸಾಹಿತ್ಯಕ್ಕೆ ಹೊಸ ಚಿಕಿತ್ಸೆಯನ್ನು ನೀಡುವ ಮೂಲಕ ಹೊಸ ರಕ್ತ ಸಂಚಾರ ಮಾಡಿಸಿದ್ದು ಪ್ರಗತಿಶೀಲ ಸಾಹಿತ್ಯದ್ದಾಗಿದೆ.

3.3.0 ಪ್ರಗತೀಶೀಲ ಸಾಹಿತ್ಯದ ಹಿನ್ನೆಲೆ ಮತ್ತು ಪ್ರೇರಣೆ

ಪ್ರಗತಿಶೀಲ ಸಾಹಿತ್ಯಕ್ಕೆ ಬಹುಮುಖ್ಯವಾದ ಪ್ರೇರಣೆಯೆಂದರೆ ಮಾರ್ಕ್ಸ್‌ವಾದ. ಲೆನಿನ್‌ನು " The real art in always linked with greet social ideas"ಎಂದು ಹೇಳಿ ನಿಜವಾದ ಕಲೆ ಸಾಮಾಜಿಕ ಚಿಂತನೆಗಳನ್ನು ಒಳಗೊಂಡಿರುತ್ತದೆಂದು ಸಾರಿದರು. 1936ರಲ್ಲಿ ಪಾಶ್ಚಾತ್ಯ ದೇಶಗಳ ಪ್ರಗತಿಶೀಲ ಲೇಖಕರ ಸಂಘ ಸ್ಥಾಪನೆಗೊಂಡಿತು. ಪ್ಯಾರಿಸ್‌ನಲ್ಲಿ ಅಸ್ತಿತ್ವಕ್ಕೆ ಬಂದ ಆ ಸಂಘಕ್ಕೆ ಇ.ಎಂ. ಫಾಸ್ಟರ್ ಅಧ್ಯಕ್ಷನಾಗಿದ್ದನು. ಆ ಸಂಘದ ಹೆಸರು Progressive Writer Association" ಭಾರತದಲ್ಲಿಯೂ ಮುಲ್ಕ್‌ರಾಜ್ ಆನಂದ, ರವೀಂದ್ರನಾಥಟಾಕೂರ್, ಸಜ್ಜಾದ್ ಜಹೀರ್ ಮುಂತಾದ ಲೇಖಕರು ಈ ಸಂಘದಿಂದ ಆಕರ್ಷಿತರಾದರು. ಭಾರತೀಯ ಸಾಹಿತಿಗಳಿಗೆ ಪ್ರೇರಣೆನೀಡಿದ ಪಾಶ್ಚಾತ್ಯ ಸಾಹಿತಿಗಳೆಂದರೆ ಫ್ರಾನ್ಸಿನ ಮೋಪಾಸಾ, ಅಪ್ಟ್‌ಸಿಂಕ್ಲೇರ್, ಎಮಿಲಿ ಜೋಲ, ನಾರ್ವೆಯ ಹೆನ್ರಿಕ್ ಇಬ್ಸನ್ ರಷ್ಯಾದ ಮ್ಯಾಕ್ಸಿಂಗಾರ್ಕಿ, ಮಯೋಕೋವಸ್ಕಿ ಮುಂತಾದವರು. ಈ ಲೇಖಕರೆ ಕನ್ನಡದ ಪ್ರಗತಿಶೀಲ ಬರಹಗಾರರ ಮೇಲೂ ಗಾಢವಾದ ಪ್ರಭಾವ ಬೀರಿದರು.

ಕ್ರಿ.ಶ. 1943ರ ಮೇ 22,23,24ರಂದು ಮುಂಬೈಯಲ್ಲಿ ಅಖಿಲ ಭಾರತ ಪ್ರಗತಿಶೀಲರ ನಾಲ್ಕನೆಯ ಸಮ್ಮೇಳನ ನಡೆಯಿತು. ಆದರಲ್ಲಿ ಕನ್ನಡ ಸಾಹಿತ್ಯಿಗಳಾದ ಪಿ.ಎಂ.ಇನಾಂದರ್, ಕೃಷ್ಣಕುಮಾರ್‌ಕಲ್ಲೂರ, ಕೆ.ವಿ.ಜಾಗೀರ್‌ದಾರ್ ಮುಂತಾದವರು ಭಾಗವಹಿಸಿದರು. ಆ ಹೊತ್ತಿಗೆ ಅ.ನ.ಕೃ. ಕನ್ನಡ ನಾಡಿನಲ್ಲಿ ಪ್ರಗತಿಪರಿತೆ, ಸಾಮಾಜಿಕ ನ್ಯಾಯ, ಸಮಾನತೆ, ಲಿಂಗಭೇದ, ಜಾತಿಭೇದ, ಸ್ತ್ರೀಶೋಷಣೆ, ಬದುಕಿನ ಕಟುವಾಸ್ತವತೆ, ಶ್ರೀಮಂತ-ಬಡವ, ಕಾರ್ಮಿಕರ ನಡುವಿನ ಬಿರುಕು, ಶೋಷಿತರ ನೋವು-ನಲಿವು, ಭವ್ಯವೆಂದು ಕರೆಯುತ್ತಿದ್ದ ಹಿಂದಿನ ಭಾರತೀಯ ಸಂಸ್ಕೃತಿಯ ಈ ಈರಾಳ ಮುಖ, ರಾಜಕೀಯ, ಕಾಮ-ಪ್ರೇಮ, ಕುಟುಂಬ-ಸಮಾಜ, ಮತಮಾನ್ಯಗಳ ಒಳಗೆ ನಡೆಯುವ ಶೋಷಣೆ, ಅನಾಚಾರಗಳಂಥ ಪ್ರಮುಖ ಸಮಸ್ಯೆಗಳ ಮೇಲೆ ಕನ್ನಡಿ ಹಿಡಿಯುವ ಸೃಜನಶೀಲ ಸಾಹಿತ್ಯ ರಚಿಸಿದರು. ಅಂತೆಯೆ ಅದನ್ನು ತಂತಮ್ಮ ಸೃಜನಶೀಲ ಸ್ತರದಲ್ಲಿ ಬಿಡಿಸಿ ಚಿತ್ರೀಸಿ ತೋರಿಸುವ, ಪ್ರಶ್ನಿಸುವ ದಿಟ್ಟ ಪ್ರಯತ್ನವನ್ನು ಈ ಪಂಥದ ಲೇಖಕರು ಮಾಡಿ ತೋರಿಸಿದರು.

3.3.1 ಪ್ರಗತಿಶೀಲ ಸಾಹಿತ್ಯ ಎಂದರೇನು?

1945ರ ಹೊತ್ತಿಗೆ ನವೋದಯ ಸಾಹಿತ್ಯದ ಧೋರಣೆಗಳು ಕನ್ನಡದ ಕೆಲವು ಸಾಹಿತಿಗಳ ಕಣ್ಣಿಗೆ ಅತ್ಯಂತ ದುರ್ಬಲವೆಂದು ಕಾಣತೊಡಗಿದವು. ನವೋದಯ ಲೇಖಕರು ಹೂ, ಮೊಗ್ಗು, ಚಿಗುರು, ಬಳ್ಳಿ, ಸುರ್ಯೋದಯ, ಸೂರ್ಯಾಸ್ತ, ಚಂದ್ರ, ತಾರೆ ಹೀಗೆ ಬದುಕಿನ ಸೊಗಸಿನ ಮುಖಗಳಿಗೆ ಮಾತ್ರ ತಮ್ಮನ್ನು ತೆರೆದುಕೊಂಡು ಮಧ್ಯಮ ವರ್ಗದವರಿಗೆ ಸುಖದ ಕನಸನ್ನುಣಿಸುಷ್ಟಕ್ಕೆ ತಮ್ಮನ್ನು ಸೀಮಿತಗೊಳಿಸಿಕೊಂಡಿದ್ದಾರೆ. ಅದಕ್ಕೆ ತಕ್ಕ ಹಾಗೆ ಭಾಷೆಯನ್ನು ಸುಕುಮಾರಗೊಳಿಸಿ ಮೃದುಗೊಳಿಸಿ ಬಿಟ್ಟಿದ್ದಾರೆ. ಅಲ್ಲದೆ ಸಮಾಜದಲ್ಲಿ ಸಜಿಯುವ ಕಠೋರ ವಾಸ್ತವಗಳನ್ನು ತೆರೆಯುವದಕ್ಕೂ ಮುಜುಗರ ಅನುಭವಿಸುತ್ತಿದ್ದಾರೆ ಎಂಬ ಅಭಿಪ್ರಾಯ ಆ ಸಾಹಿತಿಗಳ ಮನಸ್ಸಿಗೆ ಬಂತು. ಈ ಬಗೆಯ ರಾಜಸೇವಾಸಕ್ತರ ರಾಜಸೇವಾ ಪ್ರಸಕ್ತರ, ಜರಿ ರುಮಾಲಿನವರ ಸಾಹಿತ್ಯ ಸಾಕು ಎಂಬ ಪ್ರತಿಭಟನೆಯ ಕೂಗು ಆರಂಭವಾಯಿತು. ಇಂಥ ಅತೃಪ್ತಿ ಮೂಡಲು ಪೂರಕವಾದ ಭೂಮಿಕೆಯೂ ವಿಶ್ವ ಮಟ್ಟದಲ್ಲಿ ಸಿದ್ಧವಾಗಿತ್ತು. ಆ ಹೊತ್ತಿಗೆ ಮಾರ್ಕ್ಸ್ ಪ್ರತಿಪಾದಿಸುವ ಸಮತಾವಾದದ ತಳಹದಿಯ ಮೇಲೆ ಸಾಹಿತ್ಯ ರಚನೆ ಆಗಬೇಕೆಂದು ಬಯಸುವವರ ವೇದಿಕೆಯೂ ರೂಪುಗೊಂಡಿತ್ತು. ಸಮತಾವಾದದ ಉದ್ದೇಶ ಸಾಧನೆಗಾಗಿ ಹೋರಾಟ ಮಾಡುವುದನ್ನೇ " Progressive literature" ಎಂದು ಕರೆಯಲಾಗುವುದು.

ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯದ ಮುಂಚೂಣಿ ವಹಿಸಿದ್ದ ಅ.ನ.ಕೃಷ್ಣರಾಯ ಅವರು ಪ್ರಗತಿಶೀಲ ಸಾಹಿತ್ಯ ಕೃತಿಗೆ ಮುನ್ನುಡಿ ಬರೆಯುತ್ತಾ ಹೇಳಿರುವ ಮಾತುಗಳಲ್ಲಿ ಪ್ರಗತಿಶೀಲ ಸಾಹಿತ್ಯ ಎಂದರೇನೆಂಬುದನ್ನು ನಾವು ಹೀಗೆ ಗಮನಿಸಬಹುದು.

"ಮೈ ಬಣ್ಣದ ಹೆಸರಿನಲ್ಲಿ ಮನುಷ್ಯ ಮನುಷ್ಯನನ್ನು ತುಳಿಯುತ್ತಿದ್ದಾನೆ. ಭಾಷೆಯ ಹೆಸರಿನಲ್ಲಿ ಮನುಷ್ಯ ಮನುಷ್ಯನನ್ನು ಪೀಡಿಸುತ್ತಿದ್ದಾನೆ. ಈ ಅನ್ಯಾಯ ಈ ಅಸಮಾನತೆ, ದೌಬಲ್ಯ ಬುಡಮೂಲವಾಗಿ ಹೋಗಬೇಕೆಂದು ಜಗತ್ತಿನಲ್ಲಿ ಯಾವ ವಿಚಾರವಾದಿ ಬಯಸುವುದಿಲ್ಲ? ದೌರ್ಜನ್ಯ, ದಬ್ಬಳಿಕೆ, ದಲಿತರ ರಕ್ತ ಶೋಷಣೆಯನ್ನೆದುರಿಸಲಾರದ ಸಾಹಿತಿ ಶಿಖಂಡಿ ಹರಿಜನ, ಸ್ತ್ರೀಯರ ಸ್ಥಿತಿಗತಿಗಳನ್ನು, ವಸ್ತುನಿಷ್ಠವಾಗಿ ಆಲೋಚಿಸುವ ಸಾಹಿತ್ಯವಿದು ಭಾರತೀಯರಿಗೆ ಬೇಕಾದುದು ಒಂದೇ ಧರ್ಮ, ಭಾರತ ಧರ್ಮ. ಇದರ ಮುಂದೆ ಎಲ್ಲಧರ್ಮಗಳೂ ಮತಗಳೂ, ರಾಜಕೀಯ, ಸಾಮಾಜಿಕ, ಸಾಹಿತ್ಯ ಪಕ್ಷ ಉಪಪಕ್ಷಗಳೂ ಹೇಳಹೆಸರಿಲ್ಲದಾಗಬೇಕೆಂದು. ಅ.ನ.ಕೃ.ಅವರು ಅದುವರೆಗಿನ ವ್ಯವಸ್ಥೆಯ ಬಗ್ಗೆ ರೋಷ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅದರ ಪ್ರಗತಿಶೀಲ ಲೇಖಕರ ಸಂಘದ ಅಧ್ಯಕ್ಷರಾಗಿದ್ದರು. 1940ರಿಂದಲೂ ಅವರು ನಾಡಿನಲ್ಲೆಲ್ಲ ಸುತ್ತಾಡಿ ಭಾಷಣಗಳನ್ನು ಮಾಡಿದರು. ಪ್ರಗತಿಶೀಲ ಚಳವಳಿಯ ಪರವಾಗಿ ಹಲವಾರು ಲೇಖನಗಳನ್ನು ಪುಸ್ತಕಗಳನ್ನು ಬರೆದರು. ಹಲವು ಬಗೆಯ ವಾದ ವಿವಾದಗಳ ಕೇಂದ್ರವಾಗಿ ತಾವೂ ಆವಾದ ವಿವಾದಗಳಲ್ಲಿ ಭಾಗಿಯಾದರು. ವಾಸ್ತವಿಕತೆಯ ಹೆಸರಿನಲ್ಲಿ ಅಶ್ಲೀಲ ಸಾಹಿತ್ಯ ಸೃಷ್ಟಿಗೆ ಪ್ರಚೋದನೆ ನೀಡಿ ಸಾಹಿತ್ಯಕ ವಾತಾವರಣವನ್ನು ಹೊಲಸು ಮಾಡುತ್ತಿದ್ದಾರೆಂದು ಪ್ರಗತಿಶೀಲರ ಮೇಲೆ ಟೀಕೆಗಳು ಬಂದವು. ಅಂಥ ಟೀಕೆಗಳನ್ನು ಎದುರಿಸುವುದಕ್ಕೂ ಪ್ರಗತಿಶೀಲರು ಸಜ್ಜಾನರು. ಅ.ನ.ಕೃ. ಅವರೇ ಸ್ವತಃ "ಸಾಹಿತ್ಯ ಮತ್ತು ಕಾಮ ಪ್ರಚೋದನೆ "ಎಂಬ ಪುಸ್ತಕವನ್ನು ಬರೆದರು. ಇದು ಆ ಕಾಲಕ್ಕೆ ಬಹುಮಂದಿಯ ಗಮನ ಸೆಳೆಯಿತು.

3.3.2 ಪ್ರಗತಿಶೀಲ ಸಾಹಿತ್ಯದ ಆರಂಭ ಮತ್ತು ಬೆಳವಣಿಗೆ

ಪ್ರಗತಿಶೀಲ ಚಳವಳಿಯ ಮುಂದಾಳಾಗಿದ್ದ ಅ.ನ.ಕೃಷ್ಣ ರಾಯರು ಈ ಚಳವಳಿಯನ್ನು ಕುರಿತು 1946ನೇ ಅಕ್ಟೋಬರ್ 27ರಂದು ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಆಡಿದ ಮಾತುಗಳನ್ನು ಅಗತ್ಯವಾಗಿ ಗಮನಿಸಬೇಕು. ಈ ಮಾತುಗಳಲ್ಲಿ ಪ್ರಗತಿಶೀಲ ಚಳವಳಿಯ ಆರಂಭಕ್ಕೆ ಕಾರಣಗಳೇನು? ಪ್ರೇರಣೆಗಳೇನು ಅದರ ಗೊತ್ತುಗುರಿಗಳೇನು? ಎಂಬೆಲ್ಲ ಅಂಶಗಳೂ ಪ್ರಕಟವಾಗುತ್ತವೆ.

"ಜನತೆಯ ಮನೋವಿಕಾಸಕ್ಕೆ ಸಾಹಿತ್ಯ ಸಾಧನವೆಂಬ ಭಾವನೆ ಬೆಳೆಸಲು ಪ್ರಯತ್ನ ಸಾಕಷ್ಟು ಆಗಿಲ್ಲ. ಸಾಹಿತಿ ತನ್ನ ಸ್ವರ್ಣ ಮಂದಿರದಿಂದ ಹೊರಬೀಳಲ್ಲೊಲ್ಲ; ಸಾಮಾನ್ಯ ತನ್ನ ಹೊಟ್ಟೆಯ ಹೋರಾಟದಲ್ಲಿ ಸಾಹಿತ್ಯಕ್ಕೆ ಗಮನಕೊಡಲೊಲ್ಲ. ಸಾಹಿತ್ಯವೆಂಬ ಮಡಿಕೋಟೆಯನ್ನು ಕಟ್ಟಿಕೊಂಡು ಸುತ್ತ ಮುತ್ತಲಿನ ಜಗತ್ತಿನ ಹಾಹಾಕಾರದ ಮೇಲೆ ಅವಕುಂಠನ ಹಾಕಿ ತನ್ನ ಭಾವಪ್ರಪಂಚದಲ್ಲಿ ಮೈ ಮರೆಯುವ ಸಾಹಿತಿ ತನ್ನ ಅಥವಾ ದೇಶದ ಹಿತವನ್ನು ಸಾಧಿಸಲಾರ. ಮಾಸ್ತಿ ಮತ್ತು ಅವರನ್ನನುಸರಿಸಿದ ಸಾಹಿತಿಗಳು ಒಂದು ವರ್ಗಕ್ಕೆ ಸೇರಿದವರು. ಅವರ ಸಾಹಿತ್ಯ ಸೃಷ್ಟಿ ಆ ವರ್ಗವನ್ನು ಬಿಟ್ಟು ಹೊರಬರಲಿಲ್ಲ. ದಿನದಿನದ ಜೀವನಕ್ಕೆ ಬೇಕಾಗುವುದಕ್ಕಿಂತ ಸ್ವಲ್ಪ ಹೆಚ್ಚುಗಳಿಸುವವರನ್ನು "ಮಧ್ಯಮ ವರ್ಗ" ಎಂದು ಗಣಿಸುವುದಾದರೆ ಅವರ ಅಲ್ಪ ಆಸೆ, ತೃಪ್ತಿ, ಕೋಪತಾಪಗಳನ್ನೇ ಮಾಸ್ತಿ ಸಾಹಿತ್ಯ ಚಿತ್ರಿಸಿತು. ಈ ವರ್ಗದ ಬಂದನವನ್ನು ಮುರಿದು ಸಾಹಿತ್ಯದ ಅನಂತ ಗುಣಗಳ ಕಡೆಗೆ ಲಕ್ಷ್ಯವಿಟ್ಟು, ಜೀವನದ ಸಿಂಹಾಪೀಠದ ಮೇಲೆ ನಿಂತವರು ಕೆ.ವಿ. ಪುಟ್ಟಪ್ಪನವರು ಮತ್ತು ದ.ರಾ.ಬೇಂದ್ರೆಯವರು ತನಗೆ ಸಂಬಂದವಿಲ್ಲವೆಂದು ಸಾಹಿತಿ ಯಾವುದನ್ನೂ ಹೊರದೂಡುವುದಿಲ್ಲ ಜಗತ್ತಿನ ಪ್ರತಿಯೊಂದು ವಿಷಯವೂ ಅವನ ಕುಲುಮೆಗೆ ಸೇರಿದೆ. ವರ್ಗವೈಷಮ್ಯವನ್ನು ಸಾಹಿತಿ ಕೆರಳಿಸುವುದಿಲ್ಲ. ಆದರೆ ಆದರಿಂದ ಒಂದು ಪಕ್ಷಕ್ಕೆ ಅನ್ಯಾಯ ವಾಗುತ್ತಿದ್ದರೆ ಅವನು ಶಾಂತವಾಗಿರುವುದಿಲ್ಲ ಅನ್ಯಾಯ, ಕ್ರಾಯ್ಯ, ದಬ್ಬಾಳಿಕೆನಲ್ಲಿ ಕಂಡು ಬಂದರೂ ಅವನು ಸಿಡಿದೇಳುತ್ತಾನೆ. ಎಲ್ಲ ಸಾಹಿತ್ಯಕಲೆಗಳ ಉಗಮಕ್ಕೂ ಸಾಮಾನ್ಯ ಜನತೇಯೇ ಮೂಲ ಉತ್ತಮ

ಕಲೆಯ ತಾಯಿಬೇರು ಸಾಮಾನ್ಯ ಜೀವನದಲ್ಲಿ ಅಡಗಿದೆ. ನವೋದಯದ ಕಾಲದಲ್ಲಿ ಬಂದ ಕನ್ನಡದ ಸಾಹಿತ್ಯಿಗಳು ಜನಪದವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಿಲ್ಲ. ನವೋದಯ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಪದದೊಂದಿಗೆ ಪೂರ್ಣ ಬೆರೆಯುವ ಮನೋಭಾವನೆಯಿರಲಿಲ್ಲ. ಆದ್ದರಿಂದಲೇ ಅದರಿಂದ ತೃಪ್ತಿಹುಟ್ಟಿತ್ತು. ನವೋದಯದ ಕವಿಗಳು ನಿರ್ವಿತರಾಗಿ ಕುಳಿತಾಗ ಪ್ರಗತಿಶೀಲರು ಜನಕ್ಕೆ ಧೈರ್ಯ, ಸ್ಥೈರ್ಯಗಳನ್ನು ನೀಡಿದರು. ಕಥೆ, ಕವಿತೆ, ಕಾದಂಬರಿ, ಪ್ರಬಂಧ, ಭಾಷಣಗಳ ಮೂಲಕ ಜನತೆಗೆ ಅವರ ಅಮರತ್ವವನ್ನು ಕಣ್ಣುಬಿಟ್ಟು ನೋಡುವ ನಿಷ್ಠೆಯೂ ಎದುರಿಸುವ ಕೆಚ್ಚುಕಂಡು ಬಂದವು. ಹಳೆಯ ತತ್ವಗಳು ಪುನರ್ವಿಮರ್ಶೆಗೊಳಗಾದವು. ಪರಂಪರಾಗತವಾಗಿ ಮೌಢ್ಯವನ್ನು ರೂಢಿಸಿಕೊಂಡು ಬಂದಿದ್ದ ಸಾಹಿತ್ಯವನ್ನು ಪ್ರಗತಿಶೀಲರು ಖಂಡಿಸುತ್ತ ಬಂದರು..... ಶಾಂತಿ ದುರ್ಬಲತೆಯಿಂದ ದೂರೆಯುವುದಿಲ್ಲ.... ಕ್ರಾಂತಿಯಾದ ನಂತರವೇ ಶಾಂತಿ ಸಾಧ್ಯ. ಎಂದೋ ಆಗಿ ಹೋದ ಹರಿಶ್ಚಂದ್ರ ರಾಮರ ಸತ್ಯಪ್ರಿಯತೆಯನ್ನು ನೆನೆಯುತ್ತ ಕುಳಿತಲ್ಲಿ ಬಂದ ಲಾಭವೇನು? ಪ್ರಜಾಸ್ವಾಮ್ಯ, ಬಂಡವಾಳಸ್ವಾಮ್ಯಗಳೆಂಬ ಎರಡು ಪಕ್ಷಗಳು ಜಗತ್ತಿನಲ್ಲೆಲ್ಲಾ ಉದಯಿಸುತ್ತಿವೆ. ಇವೇ ಎರಡು ಜಾತಿಗಳು. ಇವುಗಳ ಮುಂದೆ ಉಳಿದವು ಗೌಣ. ಸಾಹಿತಿ ತಾನು ಯಾವ ಜಾತಿಯವನೆಂದು ನಿರ್ಧರಿಸಿಕೊಳ್ಳಬೇಕು.... ಸಾಹಿತ್ಯ ವಿಲಾಸದ ಸಾಧನವಲ್ಲ. ದೇಶೋದ್ಧಾರಕ್ಕೆ, ಆತ್ಮೋದ್ಧಾರಕ್ಕೆ ಸಾಧನವಾಗುವ ಗಾಯತ್ರಿಯದು. ಸಾಹಿತಿ ತನ್ನ ಸುಪ್ತ ಚೇತನದ ಅರಿವನ್ನುಂಟು ಮಾಡಿಕೊಂಡು, ಅದರ ಸಂಪೂರ್ಣ ಪ್ರಯೋಜನವನ್ನು ತನ್ನ ನಾಡವರಿಗೆ ಮಾಡಿಕೊಡಬೇಕು. ಅವನ ಕ್ರಾಂತಿ ಖಡ್ಗಕ್ಕೆ ಲೋಕದ ತಾಮಸ ಕಳೆಗಳು ನಡುಗಬೇಕು. ಅದು ದುರ್ಬಲರ, ದಲಿತರ, ಬಡವರ ರಕ್ಷಾಕವಚವಾಗಬೇಕು. ಆಗಲೇ ಸಾಹಿತ್ಯದ ಸಾರ್ಥಕ್ಯ, ಸಾಹಿತಿಯ ಜನ್ಮ ಸಾಫಲ್ಯ... ನಾವು ಕೋಲಾ, ಮಯಾಕೋವಸ್ಕಿ, ಗಾರ್ಕಿ, ಸಿಂಕ್ಲೇರ್ ಅವರ ಕೃತಿಗಳನ್ನು ಓದುವಂತೆ ಹೊರಗಿನವರು ನಮ್ಮ ಕೃತಿಗಳನ್ನು ಓದಬೇಡವೆ?"(ಉದ್ಧೃತ ಹೊಸಗನ್ನಡ ಸಾಹಿತ್ಯ ಎಲ್.ಎಸ್.ಶೇಷಗಿರಿರಾವ್‌ಪುಟ(73-75)

ಈ ಭಾಷಣವು ಪ್ರಗತಿಶೀಲ ಸಾಹಿತ್ಯದ ಗೊತ್ತುಗುರಿಗಳನ್ನು ಪ್ರಸ್ತಾಪಿಸುವ ಪ್ರಣಾಳಿಕೆಯಂತಿದೆ.ಸುಮಾರು 1940ರಿಂದ 1950ರವರೆಗೆ ಅ.ನ.ಕೃ, ತ.ರಾ.ಸು., ಬಸವರಾಜಕಟ್ಟೀಮನಿ, ನಿರಂಜನ, ಚದುರಂಗ, ಆರ್ಚಕ ವೆಂಕಟೇಶ, ಕುಮಾರ ವೆಂಕಣ, ಎಸ್. ಅನಂತನಾರಾಯಣ ಮುಂತಾದವರು ಪ್ರಗತಿಶೀಲ ಚಳವಳಿಯ ಧೋರಣೆಗಳನ್ನು ಎದುರಿಗಿಟ್ಟುಕೊಂಡು ಬರೆದರು. ಸಾಮಾಜಿಕ ಸಮಸ್ಯೆಗಳ ಬಗ್ಗೆ ತೀವ್ರವಾದ ಕಾಳಜಿ, ಶೋಷಣೆಯ ವಿರುದ್ಧ ಪ್ರತಿಭಟನೆ, ಕೆಳ ಮತ್ತು ದಲಿತ ವರ್ಗಗಳ ಬಗ್ಗೆ ಪ್ರೀತಿ, ಸಹಾನುಭೂತಿ ಇವುಗಳನ್ನು ಚಿಂತನೆಯ ಕೇಂದ್ರವಾಗಿಟ್ಟುಕೊಂಡು ಈ ಲೇಖಕರು ಬರೆದರು. ಅವರ ದೃಷ್ಟಿಯಲ್ಲಿ ಹಳೆಯ ಸಾಹಿತ್ಯವೆಲ್ಲ "ಬೂರ್ಜ್ವಾ"ಎನ್ನುವಂತೆ ಕಂಡಿತು. ವಸ್ತುವಿನ ಆಯ್ಕೆ ಸೀಮಿತವಾಯಿತು. ಬರವಣಿಗೆಯ ಧಾಟಿಯಲ್ಲೂ ಸಾಮಾಜಿಕ ಸಮಸ್ಯೆಯೊಂದನ್ನೆತ್ತಿಕೊಂಡು ಅದರ ವಿಶ್ಲೇಷಣೆ ಅದಕ್ಕೆ ಪರಿಹಾರಗಳ ಹುಡುಕಾಟ ಆರಂಭಗೊಂಡಿತು. ಆದರೆ ಒಂದು ಅಚ್ಚರಿಯ ಸಂಗತಿಯೆಂದರೆ ಪ್ರಗತಿಶೀಲರು ತಮ್ಮ ತತ್ವ ಪ್ರತಿಪಾದನೆ, ಪ್ರಚಾರಕ್ಕೆ ಕೇವಲ ಕಥಾ ಸಾಹಿತ್ಯಕ್ಕೆ (ಕಾದಂಬರಿ ಮತ್ತು ಸಣ್ಣಕತೆ)ಮಾತ್ರ ಗಂಟು ಬಿದ್ದಿದ್ದು, ಕಾವ್ಯ, ನಾಟಕ, ಪ್ರಬಂಧ ಮುಂತಾದ ಉಳಿದೆಲ್ಲಾ ಸಾಹಿತ್ಯ ಪ್ರಕಾರಗಳು ಪ್ರಗತಿಶೀಲರಿಗೆ ವರ್ಜ್ಯವಾಗಿದ್ದು. (ಅವರಲ್ಲಿ ಚದುರಂಗರು ಕೆಲವು ನಾಟಕಗಳನ್ನು ಬರೆದರು. ಹಾಗೂ ಎಸ್. ಅನಂತನಾರಾಯಣ ಕಾವ್ಯದಲ್ಲೂ ಕೈಯಾಡಿಸಿದರು ಎಂಬುದನ್ನು ಬಿಟ್ಟರೆ)ಪ್ರಗತಿಶೀಲರ ಧೋರಣೆಗಳನ್ನು ಹಲವಾರು ಹಿರಿಯ ತಲೆಮಾರಿನ ಲೇಖಕರು ಸಮರ್ಥಿಸಿದ್ದು ಒಂದು ವಿಶೇಷವೇ. ದ.ಕೃ. ಭಾರದ್ವಾಜ, ತಿರುಮಲೆ ತಾತಾಚಾರ್ಯಶರ್ಮ ಮೊದಲಾದವರು ಪ್ರಗತಿಶೀಲರನ್ನು ಸಮರ್ಥಿಸಿದರು. ಪ್ರೊ.ವಿ.ಕೆ. ಗೋಕಾಕ್ ಅವರು ಶಿವಮೊಗ್ಗೆಯ ಒಂದು ಸಭೆಯಲ್ಲಿ ಮಾತನಾಡುತ್ತ "ಇದು ಪ್ರಗತಿಶೀಲ ಸಾಹಿತ್ಯವಾದರೆ ಇದು ಸಮಗೆ ಬೇಕು. ಇದರಲ್ಲಿ ಲೇಖಕರು ತಮ್ಮದೇ ಆದ ವೈಯಕ್ತಿಕ ವೈಶಿಷ್ಟ್ಯ ತೋರಿದ್ದಾರೆ. ನಮ್ಮ ನಾಡಿನ ದಲಿತ ಜನತೆಯ ವೀಣೆಯಿದು." ಎಂದು ಹೇಳಿದರು.

ಪ್ರಗತಿಶೀಲ ಸಾಹಿತ್ಯದ ಬರವಣಿಗೆಯ ಬಹುಮುಖ್ಯ ಲಕ್ಷಣವೆಂದರೆ ರೋಷ, ಕೆಚ್ಚು, ಆವೇಶ ಅವರೆಗಿನ ಸಾಹಿತ್ಯದಲ್ಲಿ ಬರೆಯಲಾಗದ ಹಲವಾರು ವಿಷಯಗಳನ್ನು ಕುರಿತು ಪ್ರಗತಿಶೀಲರು ಸಿಭಿವತೆ ಇಲ್ಲದೆ ಬರೆದರು. ಲೈಂಗಿಕ ದೌರ್ಜನ್ಯ, ಶೋಷಣೆ, ಧಾರ್ಮಿಕ ಕೇಂದ್ರಗಳಲ್ಲಿ ನಡೆಯುವ ಮೋಸ,

ಭ್ರಷ್ಟಾಚಾರ, ಬೂಟಾಟಿಕೆ, ಮಠಗಳಲ್ಲಿ ನಡೆಯುವ ಅನೈತಿಕತೆ ಇಂಥದ್ದನೆಲ್ಲಾ ಪ್ರಗತಿಶೀಲರು ಢಾಣಾ ಡಂಗುರ ಮಾಡಿದರು. ಅ.ನ.ಕೃ ಅವರ "ನಗ್ನಸತ್ಯ", "ಶನಿಸಂತಾನ", "ಸಂಜೆಗತ್ತಲು", "ಕಬ್ಬಿಣದ ಕಾಗೆ", ತ.ರಾ.ಸು. ಅವರ "ಮುಂಜಾವಿನಿಂದ ಮುಂಜಾವು", "ಮಸಣದ ಹೂವು", ಕಟ್ಟೀಮನಿಯವರ "ಮೋಹದ ಬಲೆಯಲ್ಲಿ", "ಜರತಾರಿ ಜಗದ್ಗುರು", "ಜ್ವಾಲಾಮುಖಿಯ ಮೇಲೆ", ಇಂಥ ಕಾದಂಬರಿಗಳಲ್ಲಿ ಜೀವನದ ಅನೇಕ ನಗ್ನಸತ್ಯಗಳು ಬಯಲಿಗೆ ಬಿದ್ದವು. ಅನಕೃ, ಸಲಿಂಗರತಿಯನ್ನೂ ಕುರಿತು "ಮಧುರ ಸ್ವಪ್ನ" ಎಂಬ ಸಣ್ಣಕತೆಯೊಂದನ್ನು ಬರೆದರು.

ಪ್ರಗತಿಶೀಲ ಸಾಹಿತಿಗಳಿಗೆ ಕವನ ಕಲೆ ಅದ್ಭುತವಾಗಿ ಸಿದ್ಧಿಸಿತ್ತು. ಆದರೆ ಪ್ರಗತಿಶೀಲರ ಕಥೆ ಕಾದಂಬರಿಗಳಿಗೆ ಬಹುದೊಡ್ಡ ಓದುಗರ ಬಳಗವೇ ಸಿದ್ಧವಾಯಿತೆನ್ನುವುದು ಹೇಳಲೇಬೇಕಾದ ಸಂಗತಿ. ಹಾಗಾಗಿ ಪ್ರಗತಿಶೀಲ ಲೇಖಕರು ಅದರಲ್ಲೂ , ಅನಕೃ ಅಸಾಧಾರಣ ಜನಪ್ರಿಯತೆಯನ್ನು ಗಳಿಸಿದರು. ತರಾಸು ಅವರ ಬರವಣಿಗೆಯಲ್ಲಿ ಅನಕೃ ಅವರ ಹೆಜ್ಜೆ ಜಾಡಿನಲ್ಲೇ ಹೊರಟವರಾದರೂ ಕಥನ ತಂತ್ರದ ಬಗ್ಗೆ ವಿಶೇಷ ಆಸಕ್ತಿ ವಹಿಸಿದರು. ಅವರ " 0-0-೯ ಎಕ್ಸ್' ಮತ್ತು '0-0=0'ಎಂಬ ಕಥೆಗಳು ತಂತ್ರದ ದೃಷ್ಟಿಯಿಂದ ಗಮನಾರ್ಹ ಕೃತಿಗಳಾಗಿವೆ.

ನಿರಂಜನ ಅವರು ಈ ಪಂಥದ ಪರಿಣಾಮಕಾರಿ ಕಥೆಗಾರರಲ್ಲೊಬ್ಬರು. ಖಚಿತವಾದ ಸಾಮಾಜಿಕ ನಿಲುವುಗಳು, ವರ್ಗಸಂಘರ್ಷದ ಪ್ರಜ್ಞೆ. ನಿರಂಜನರ ಸಾಹಿತ್ಯದಲ್ಲಿ ಕಂಡು ಬರುತ್ತವೆ. ಅವರ "ಚಿರಸ್ಮರಣೆ"ಕ್ರಾಂತಿಕಾರಿ ಹೋರಾಟವೊಂದರ ಅನೇಕ ಮಜಲುಗಳನ್ನು ಕಲಾತ್ಮಕವಾಗಿ ಚಿತ್ರಿಸುವ ಕೃತಿ. ಬಂಡಾಯ ಸಾಹಿತ್ಯಕ್ಕೂ ಚಿರಸ್ಮರಣೆ ಒಳ್ಳೆಯ ಉದಾಹರಣೆಯಾಗಬಲ್ಲುದಾಗಿದೆ. "ದೂರದ ನಕ್ಷತ್ರ", "ರಂಗಮ್ಮನ ವಠಾರ", "ಅಭಯಾಶ್ರಮ" ಮುಂತಾದ ಕಾದಂಬರಿಗಳಲ್ಲದೆ ಅವರು "ರಕ್ತಸರೋವರ", "ಸಂಧಿಕಾಲ"ಎನ್ನುವ ಕಥಾ ಸಂಕಲನಗಳನ್ನೂ ಪ್ರಕಟಿಸಿದ್ದಾರೆ. ಇವರ ಕಥೆಗಳಲ್ಲಿ "ಕೊನೆಯಗಿರಾಕಿ" ಅತ್ಯುತ್ತಮವಾದ ಕಥೆಯೆಂದು ಗುರುತಿಸಲ್ಪಟ್ಟಿದೆ. ಬಸವರಾಜ ಕಟ್ಟೀಮನಿಯವರು "ಜೀವಂತ ಜ್ವಾಲಾಮುಖಿ"ಎನಿಸಿಕೊಂಡಿದ್ದವರು. ಅವರ "ಗಿರಿಜಾಕಂಡ ಸಿನಿಮಾ", "ಬೂಟ್ ಪಾಲಿಷ್" "ರಕ್ತಧ್ವಜ", "ನಾಗ ಪಂಚಮಿಗೆ ಬಂದದ್ದು" ಮುಂತಾದುವು ಒಳ್ಳೆಯ ಕಥೆಗಳಾಗಿವೆ.

ಚದುರಂಗರು ಬರೆದಿರುವ ಕಾದಂಬರಿಗಳು ನಾಲ್ಕು ಮಾತ್ರ' ಸರ್ವಮಂಗಳಾ','ಉಯ್ಯಾಲೆ','ವೈಶಾಖ' ಮತ್ತು' ಹೆಜ್ಜಾಲ'. ಕೊನೆಯೆರಡು ಕಾದಂಬರಿಗಳು ಇತ್ತೀಚೆಗೆ ಅಂದರೆ ಪ್ರಗತಿಶೀಲ ಚಳವಳಿಯ ಗುಂಗು ಸಂಪೂರ್ಣ ಆರಿ ಹೋದ ನಂತರ ಪ್ರಕಟವಾದಂಥವು. "ಚದುರಂಗರು ಪ್ರಗತಿಶೀಲ ಮಾರ್ಗದ ಬರಹಗಾರರಲ್ಲೆಲ್ಲಾ ಹೆಚ್ಚಿನ ಸ್ಪಷ್ಟತೆಯಲ್ಲಿ ಕಥೆಗಳನ್ನು ಬರೆಯುತ್ತಾರೆ. ಒಂದು ಸಾಮಾಜಿಕ ಸಂದರ್ಭದಲ್ಲಿ ಅನ್ಯಾಯಕ್ಕೆ ಈಡಾಗುವ ಮನುಷ್ಯಜೀವದ ಪಾಡಿನ ಬಗ್ಗೆ ಸಿಡಿದೇಳುವ, ಬುಸುಗುಡುವ ಅಬ್ಬರದ ಬರವಣಿಗೆ ಸಾಮಾನ್ಯವಾಗಿ ಇರುವುದರಿಂದ ಅನ್ಯಾಯಕ್ಕೆ ಈಡಾದ ವ್ಯಕ್ತಿ ಇಲ್ಲವೆ ವರ್ಗದ ಬಗೆಗಿನ ಅನುತಾಪದಲ್ಲಿ ರಾಜಸಾಂಶ ಹೆಚ್ಚಾಗಿ ಸೇರಿಕೊಳ್ಳುತ್ತದೆ" ಎಂದು ವಿಮರ್ಶಕ ಜಿ.ಎಚ್. ನಾಯಕರು ಅಭಿಪ್ರಾಯ ಪಟ್ಟಿದ್ದಾರೆ. (ಅನಿವಾರ್ಯ ಪುಟ -೫೪)

ಪ್ರಗತಿಶೀಲ ಲೇಖಕರು ಐತಿಹಾಸಿಕ ಕಥೆ ಕಾದಂಬರಿಗಳನ್ನು ಬರೆದರೆಂಬುದೂ ಒಂದು ಹೇಳಬಹುದಾದ ಮಾತು. ಐತಿಹಾಸಿಕ ವಸ್ತುಗಳು ಪ್ರಗತಿಶೀಲರನ್ನು ಆಕರ್ಷಿಸಲು ಇದ್ದ ಬಹುಮುಖ್ಯ ಅಂಶವೆಂದರೆ ಬಹುಶಃ ಪ್ರಗತಿಶೀಲರು ನವೋದಯದವರಂತೆ ರಾಷ್ಟ್ರದ ಇತಿಹಾಸ, ಪರಂಪರೆ, ಸಂಸ್ಕೃತಿಗಳಲ್ಲಿ ಗಾಢವಾದ ಆಸ್ಥೆಯುಳ್ಳವರು. ಆದರೆ ಪ್ರಗತಿಶೀಲರು ನವೋದಯದವರಿಗಿಂತ ತಾರಕ ಶ್ರುತಿಯಲ್ಲಿ ತಮ್ಮ ರಾಷ್ಟ್ರಪ್ರಜ್ಞೆಯನ್ನು ಇಂಥ ಕಥೆ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ತರಾಸು ಅವರ 'ಕಂಬನಿಯ ಕುಯಿಲು', 'ರಕ್ತ ತರ್ಪಣ', ' ತಿರುಗುಬಾಣ', 'ಸಿಡಿಲಮೊಗ್ಗು', ' ದುರ್ಗಾಸ್ತಮಾನ' ಇವೆಲ್ಲವೂ ಅತ್ಯಂತ ಜನಮನ್ನಣೆ ಪಡೆದ ಐತಿಹಾಸಿಕ ಕಾದಂಬರಿಗಳು.

ಪ್ರಗತಿಶೀಲ ಚಳವಳಿಯ ಸಂದರ್ಭದಲ್ಲಿ ಅನಕೃ ಅವರ ಬರವಣಿಗೆಯ ಬಾಹುಳ್ಯ ತುಂಬಾ ವಿಸ್ಮಯಕಾರಿಯಾದುದು. "ಸಂಧ್ಯಾರಾಗ", "ಉದಯರಾಗ", "ನಟಸಾರ್ವಭೌಮ" ಮುಂತಾದ ಕಾದಂಬರಿಗಳಲ್ಲದೆ ಹಲವಾರು ಸಣ್ಣಕಥೆಗಳನ್ನೂ, ಲೇಖನಗಳನ್ನೂ ಅನಕೃ ಧಂಡಿಯಾಗಿ ಬರೆದರು.

ಈ ಲೇಖಕರಲ್ಲದೆ ಇನ್ನೂ ಕಲವರು ಪ್ರಗತಿಶೀಲ ಅಂಶಗಳಿರುವ ಕಾದಂಬರಿ, ಕಥೆಗಳನ್ನು ಪ್ರಕಟಿಸಿದರು. ಅಶ್ವತ್ಥ, ಎಸ್. ಅನಂತನಾರಾಯಣ, ದ.ಬಾ. ಕುಲಕರ್ಣಿ,ರಾಮಚಂದ್ರ ಕೊಟ್ಟಲಗಿ, ವ್ಯಾಸರಾಯ ಬಲ್ಲಾಳ ಮುಂತಾದ ಹಲವು ಲೇಖಕರು ಈ ಬಗೆಯ ಕಥೆ ಕಾದಂಬರಿಗಳನ್ನು ಬರೆದರೂ ಆ ನಂತರ ಬೇರೆ ಮಾರ್ಗವನ್ನು ಹಿಡಿದರು.

ಕನ್ನಡ ಪ್ರಗತಿಶೀಲ ಸಾಹಿತ್ಯ ಚಳವಳಿಯು ಅತ್ಯಂತ ಜನಪ್ರಿಯತೆಯನ್ನು ಗಳಿಸಿದರೂ, ಗಟ್ಟಿಯಾದ ಬರಹಗಾರರಿದ್ದೂ ಅಲ್ಪಾಯುಷಿಯಾದ ಸಾಹಿತ್ಯಕ ಚಳವಳಿಯಾಯಿತು ಎನ್ನುವುದು ವಿಶೇಷವಾದ ಸಂಗತಿ. ಆವೇಶ, ಉದ್ವೇಗಗಳೇ ಸ್ಥಾಯಿಯಾಗಿರುವ ಯಾವ ಚಳವಳಿಯೂ ಬಹುಕಾಲ ನಿಲ್ಲಲಾರದೆನ್ನುವುದಕ್ಕೆ ಪ್ರಗತಿಶೀಲ ಚಳವಳಿ ಒಂದು ಒಳ್ಳೆಯ ಉದಾಹರಣೆ. ಹಾಗಾಗಿ ಪ್ರಗತಿಶೀಲರೆನಿಸಿದ್ದ ಲೇಖಕರೇ ಬರುಬರುತ್ತಾ ಬೇರೆ ಬೇರೆ ಮಾರ್ಗಗಳನ್ನು ಹಿಡಿಯಬೇಕಾಯಿತು. ಎಂಬ ಅಂಶ ಗಮನಾರ್ಹವಾದುದು. ಮತ್ತೂ ಹೇಳಬೇಕಾದ ಇನ್ನೊಂದು ಮಾತೆಂದರೆ ಪ್ರಗತಿಶೀಲ ಚಳವಳಿ ನವೋದಯ ಚಳವಳಿಗೆ ಪ್ರತಿಭಟನಾತ್ಮಕ ಪ್ರತಿಕ್ರಿಯೆಯಾಗಿ ಬಂದಿದ್ದರೂ ಪ್ರಗತಿಶೀಲರು ಬರೆಯುತ್ತಿದ್ದ ಕಾಲದಲ್ಲೇ ನವೋದಯ ಪಂಥದ ಹಲವಾರು ಲೇಖಕರು ತಮ್ಮ ಜಾಡಿನಲ್ಲೇ ಉತ್ತಮವಾದ ಸಾಹಿತ್ಯ ಕೃತಿಗಳನ್ನು ಸೃಷ್ಟಿಸಿದರು ಎಂಬುದು.

3.3.3 ಪ್ರಗತಿಶೀಲ ಸಾಹಿತ್ಯದ ಮಿತಿಗಳು

ಪ್ರಗತಿಶೀಲ ಪಂಥಕ್ಕೆ ಪ್ರತಿಭಾವಂತ ಬರಹಗಾರರಿದ್ದೂ ಬಹುಸಂಖ್ಯೆಯ ಓದುಗರಿದ್ದೂ ಅದು ಅಲ್ಪಾಯುಷಿಯಾಯಿತೆನ್ನುವುದರಿಂದ ಪ್ರಗತಿಶೀಲ ಸಾಹಿತ್ಯದ ಮಿತಗಳನ್ನು ಕುರಿತು ಚರ್ಚಿಸುವುದು ಅನಿವಾರ್ಯವಾಗಿದೆ. "ಪ್ರಗತಿಶೀಲರ ಗುಂಪಿನಿಂದ ರಚಿತವಾದ ಕಾದಂಬರಿಗಳಲ್ಲಿ ಪ್ರಗತಿಶೀಲತೆ ಘೋಷಿತ ಪ್ರಣಾಲಿಯಾಯಿತೇ ವಿನಃ ಅನುಭವ ಸಾಮಾಗ್ರಿಯಾಗಿ ಮೂಡಿ ಬರಲಿಲ್ಲ" ಎಂಬುದು ತ.ಸು. ಶಾಮರಾಯರ ಅಭಿಪ್ರಾಯ (ಕನ್ನಡ ಸಾಹಿತ್ಯ ಚರಿತ್ರೆ). ಅವರೇ ಚದುರಂಗರು ಒಂದು ಸಂದರ್ಶನದಲ್ಲಿ ಹೇಳಿದ ಮಾತುಗಳನ್ನೂ ಉಲ್ಲೇಖಿಸಿದ್ದಾರೆ. "ಪ್ರಗತಿಶೀಲರು ಸಂಕೀರ್ಣ ಬದುಕನ್ನು ಒಟ್ಟಾರೆಯಾಗಿ ಗ್ರಹಿಸದೆ ಹೋದರು. ಬಿಳುಪನ್ನು ಬಿಳುಪಾಗಿಯೂ, ಕಪ್ಪನು ಕಪ್ಪಾಗಿಯೂ ಚಿತ್ರಿಸುತ್ತ ನಡೆದರು. ಹೀಗಾಗಿ ಕೊಂಚಮಟ್ಟದ ಉತ್ತಮ ಸಾಹಿತ್ಯ ಹುಟ್ಟಿಕೊಂಡರೂ ಶ್ರೇಷ್ಠ ಸಾಹಿತ್ಯ ಮೂಡಲಿಲ್ಲ". ಎಂದಿರುವ ಚದುರಂಗರ ಮಾತುಗಳಲ್ಲಿ ಪ್ರಗತಿಶೀಲರ ದೌರ್ಬಲ್ಯಗಳ ಬಗೆಗಿನ ಆತ್ಮವಲೋಕನವಿದೆ. ಅನ್ನಿಸುತ್ತದೆ. ಎಲ್.ಎಸ್.ಶೇಷಗಿರಿರಾಯರ ಪ್ರಕಾರ "ಪ್ರಗತಿಶೀಲರ ಸಾಹಿತ್ಯದ ಸಾಧನೆಗೆ ಮಿತಿಯನ್ನು ಕಲ್ಪಿಸಿದ ಎರಡು ಅಂಶಗಳೆಂದರೆ ಕಲಾಸೃಷ್ಟಿಯ ಅಂತರದ ನಷ್ಟ ಮತ್ತು ಅನುಭವ ಸರಳೀಕರಣ" (ಹೊಸಗನ್ನಡ ಸಾಹಿತ್ಯ).

ಈ ಎಲ್ಲ ಅಭಿಪ್ರಾಯಗಳೂ ಪ್ರಗತಿಶೀಲ ಸಾಹಿತ್ಯದ ಮಿತಿಗಳ ಕಡೆಗೆ ಗಮನ ಸೆಳೆಯುವಂಥವು. ಹಾಗೆಂದ ಮಾತ್ರಕ್ಕೆ ಪ್ರಗತಿಶೀಲರು ಕನ್ನಡ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಕಡಿಮೆಯದಲ್ಲ. ಓದುಗರಿಗೆ ಹೊಚ್ಚ ಹೊಸದೆನಿಸುವಂಥ ಅನುಭವಗಳು ಸಾಹಿತ್ಯದೊಳಕ್ಕೆ ಪ್ರವೇಶ ಪಡೆದದ್ದು ಇವರ ಕಾಲದಲ್ಲೇ. ಜೊತೆಗೆ ಸಾಹಿತ್ಯದ ಭಾಷೆಗೆ ಒಂದು ಬಗೆಯ "ಬನಿ"ಕೂಡಾಬಂತು. ಶಿಷ್ಟವಾಗಿ, ನಯವಾಗಿ ಬಳಕೆಯಾಗಿ ಕಸುವನ್ನೇ ಕಳೆದುಕೊಳ್ಳುತ್ತಿದ್ದ ಭಾಷೆಗೆ ಸಾಣೆ ಹಿಡಿದು ಹರಿತ ಗೊಳಿಸಿದವರು ಪ್ರಗತಿಶೀಲರೇ. ಅಷ್ಟುಮಾತ್ರವೇ ಅಲ್ಲದೆ ವಿಶ್ವದ ಬೇರೆ ಬೇರೆ ದೇಶಗಳ ಲೇಖಕರ ವಿಚಾರಧಾರೆಗಳೂ ಪ್ರಗತಿಶೀಲರಿಂದಾಗಿ ಕನ್ನಡ ಭಾಷೆಯೊಳಗೆ ಹರಿದು ಬಂದವು. ಇದೆಲ್ಲವೂ ಸರಿ, ಆದರೆ ಹಾಗೆ ಬಂದ ವಿಚಾರಧಾರೆಯಾಗಲೀ, ಕನ್ನಡ ಲೇಖಕರ ಸ್ವಕೀಯ ಅನುಭವಗಳಾಗಲೀ, ಕಲೆಯ ಸೂಕ್ಷ್ಮತೆಯನ್ನು, ಕುಸುರಿಯನ್ನು ಪಡೆಯಲಾಗದೆ ಒರಟಾಗಿ, ಹಸಿಯಾಗಿ ಸಾಹಿತ್ಯದೊಳಗೆ ಕಾಣಿಸಿಕೊಂಡದ್ದು ಈ ಪಂಥೀಯರ ಕೃತಿಗಳ ಮಿತಿಯಾಗಿ ಹೋಯಿತು. ಅನುಭವಗಳು ಕಲಾತ್ಮಕವಾಗಬೇಕು ಎಂಬ ಎಚ್ಚರಕ್ಕಿಂತ ಅವು ಲಕ್ಷಣಕ್ಕೆ ಓದುಗರಲ್ಲಿ ಆವೇಶ, ಉದ್ರೇಕಗಳನ್ನು ಹುಟ್ಟಿಸಬೇಕು ಎನ್ನುವಂಥ ನಿರೀಕ್ಷೆಗಳುಸಾಹಿತ್ಯದಲ್ಲಿ ಕಾಣತೊಡಗಿದವು.

ಕಥೆ ಕಾದಂಬರಿಗಳ ಬರವಣಿಗೆಯಲ್ಲಿ ಲೇಖಕನಿಗೆ ತುಂಬಾ ತನ್ಮಯತೆ ಬಂದು ಪಾತ್ರಗಳ ಪರವಾಗಿ ಅಥವಾ ವಿರೋಧವಾಗಿ ಲೇಖಕ ವಕೀಲಿ ಮಾಡುತ್ತಿರುವಂತೆ ಸನ್ನಿವೇಶಗಳನ್ನು ಚಿತ್ರಿಸತೊಡಗಿದ, ಇದಕ್ಕೆ ಪೂರಕವಾಗಿ ಅಥವಾ ವಿರೋಧವಾಗಿ ಲೇಖಕ ವಕೀಲಿ ಮಾಡುತ್ತಿರುವಂತೆ ಸನ್ನಿವೇಶಗಳನ್ನು ಚಿತ್ರಿಸತೊಡಗಿದ, ಇದಕ್ಕೆ ಪೂರಕವಾಗಿ ಎಲ್.ಎಸ್.ಶೇಷಗಿರಿ ರಾಯರ ಈ ಅಭಿಪ್ರಾಯವನ್ನೂ ಗಮನಿಸಿ, "ಪಾತ್ರಗಳ ಪರವಾಗಿ ಅಥವಾ ವಿರೋಧವಾಗಿ ಕಾದಂಬರಿಕಾರ ಪೂರ್ವ ನಿರ್ಧಾರಗಳನ್ನು ಮಾಡಿ ಕೆಲವು ಪಾತ್ರಗಳಲ್ಲಿ ಲೀನವಾಗುವುದರಿಂದ ಭಾಷೆಯು ಬಳಕೆಯಲ್ಲೂ ತೂಕ ತಪ್ಪುತ್ತದೆ. ಸನ್ನಿವೇಶ ಪಾತ್ರಗಳ ಪರಸ್ಪರ ಸಂಬಂಧ ಸಮರ್ಥಿಸದ ಭಾಷೆಯ ಬಳಕೆಯಾಗುತ್ತದೆ. ಸಕ್ಕರೆಯ ಸಿಹಿ ಸಾಲಿಗೆಗೆ ಅಂಟಿಕೊಂಡಂತೆ ಭಾವಾತಿರೇಕ ನಿರೂಪಣೆಗೆ ಅಂಟಿಕೊಳ್ಳುತ್ತದೆ."

ಪ್ರಗತಿಶೀಲ ಸಾಹಿತ್ಯದ ಮತ್ತೊಂದು ಬಹುಮುಖ್ಯ ಮಿತಿಯೆಂದರೆ ಅನುಭವದ ಸರಳೀಕರಣ. ಒಂದು ಅನುಭವವನ್ನೋ, ಸಮಸ್ಯೆಯನ್ನೋ ಸಮಾಜದ ಒಟ್ಟು ಸಂದರ್ಭದಲ್ಲಿಟ್ಟು ಅರ್ಥೈಸಿಕೊಂಡಂತೆ ಬರೆಯಬೇಕಾದ್ದು ಸಾಹಿತ್ಯ ಕೃತಿಗಳಲ್ಲಿ ಅಪೇಕ್ಷಣೀಯ, ಆದರೆ ಪ್ರಗತಿಶೀಲರು ಅತಿಯಾದ ಸರಳೀಕರಣ ಮಾಡಿ ಅನುಭವದ ಕಲಾತ್ಮಕತೆ ಮತ್ತು ಸೂಕ್ಷ್ಮತೆಯನ್ನು ಕಳೆದುಕೊಂಡರು.

ಆದರೆ ಪ್ರಗತಿಶೀಲ ಸಾಹಿತ್ಯದ ಮಿತಿಗಳೂ, ಸೋಲುಗಳೂ ಒಟ್ಟು ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿಟ್ಟು ನೋಡಿದಾಗ ಬಹಳ ಅರ್ಥಪೂರ್ಣವಾಗಿಯೇ ಕಾಣಿಸುತ್ತದೆ. ಪ್ರಗತಿಶೀಲರಿಂದಾಗಿಯೇ ಸಾಹಿತ್ಯದಲ್ಲಿ ಸಾಮಾಜಿಕ ಸಮಸ್ಯೆಗಳು ಎತ್ತರದ ದನಿಯಲ್ಲಿ ಪ್ರಸ್ತಾಪಿತವಾದವು. ಸ್ವಾತಂತ್ರ್ಯದ ನಿಕಟ ಪೂರ್ವ ಮತ್ತು ನಂತರದಲ್ಲಿ ಅವರು ಬರೆಯುತ್ತಿದ್ದುದರಿಂದ ಸಮಾಜದ ಸಮಸ್ಯೆಗಳನ್ನು ನಿರ್ಭಯವಾಗಿ ಬರೆಯುವುದಕ್ಕೆ ಅವಕಾಶವಿರುವ ವಾತಾವರಣವನ್ನು ಅವರು ಸೃಷ್ಟಿಮಾಡಿದರೆಂಬುದೂ ಕೂಡಾ ಆಧುನಿಕ ಸಾಹಿತ್ಯ ಚರಿತ್ರೆಯಲ್ಲಿ ಗಮನಾರ್ಹ ಸಂಗತಿ.

3.3.4 ಸ್ವಪರೀಕ್ಷೆಯ ಪ್ರಶ್ನೆಗಳು

3.3.4.1 ಪ್ರಗತಿ ಚಳವಳಿಯು ಯಾವ ವಾದದ ಮೇಲೆ ರೂಪಗೊಂಡಿರುವಂಥದು?

....

....

....

3.3.4.2 ಪ್ರಗತಿಶೀಲರು ಯಾವ ವರ್ಗದ ಪರವಾಗಿ ಬರೆಯುತ್ತಾರೆ.?

....

....

....

3.3.4.3 Progressive Writers Associationನ ಅಧ್ಯಕ್ಷನಾಗಿದ್ದವನು ಯಾರು?

....

....

....

3.3.4.4 ಕನ್ನಡ ಪ್ರಗತಿಶೀಲ ಲೇಖಕರ ಮೇಲೆ ಪ್ರಭಾವ ಬೀರಿದ ವಿದೇಶೀ ಲೇಖಕರು ಯಾರು?

....

....

....

3.3.4.5 ಕನ್ನಡದಲ್ಲಿ ಪ್ರಗತಿಶೀಲ ಚಳವಳಿಯ ಮುಂದಾಳಾಗಿದ್ದವರು ಯಾರು ?

....

....

....

3.3.4.6 ಅಶ್ಲೀಲತೆಯ ಟೀಕೆಗೆ ಪ್ರತಿಕ್ರಿಯೆಯಾಗಿ ಅನಕೃ ಬರೆದ ಪುಸ್ತಕ ಯಾವುದು?

....

....

....

3.3.4.7 ಅನಕೃ ಅವರ ಪ್ರಕಾರ ಸಾಮಾಜಿಕ ಸಮಸ್ಯೆಗಳ ಕಡೆ ಲಕ್ಷ್ಯ ಕೊಟ್ಟ ನವೋದಯದ ಲೇಖಕರು ಯಾರು?

....

....

....

3.3.4.8 'ನಮ್ಮ ನಾಡಿನ ದಲಿತ ಜನತೆಯ ವೀಣೆಯಿದು' ಎಂದು ಪ್ರಗತಿಶೀಲ ಸಾಹಿತ್ಯವನ್ನು ವರ್ಣಿಸಿದ ಲೇಖಕರು ಯಾರು?

....

....

....

3.3.4.9 ಚದುರಂಗರು ಬರೆದ ನಾಲ್ಕು ಕಾದಂಬರಿಗಳು ಯಾವುವು?

....

....

....

3.3.4.10 ತರಾಸು ಅವರ ಐತಿಹಾಸಿಕ ಕಾದಂಬರಿಗಳು ಯಾವುವು?

....

....

....

3.3.4.11 ಪ್ರಗತಿ ಶೀಲರ ಕಾದಂಬರಿಗಳ ಬಗ್ಗೆ ತ.ಸು. ಶಾಮರಾಯರ ಅಭಿಪ್ರಾಯವೇನು?

....

....

....

3.3.5 ಸಾರಾಂಶ

ನವೋದಯ ಸಾಹಿತ್ಯವೂ ಸಮಾಜದ ಮಧ್ಯಮ ವರ್ಗದವರ ಅಪೇಕ್ಷೆಗಳಿಗೆ ಮಾತ್ರ ಸ್ಪಂದಿಸುವಂಥ ಸಪ್ಪೆ ಸಾಹಿತ್ಯವಾಯಿತೆಂಬ ಅತೃಪ್ತಿ ಕೆಲವು ಲೇಖಕರಲ್ಲಿ ಉಂಟಾದಾಗ ಪ್ರಗತಿಶೀಲ ಸಾಹಿತ್ಯಕ್ಕೆ ಪ್ರಚೋದನೆ ಒದಗಿಬಂತು. ನವೋದಯ ಸಾಹಿತ್ಯವೆಂದರೆ "ರಾಜಸೇವಾಸಕ್ತ ರಾಜ ಸೇವಾ ಪ್ರಸಕ್ತರ ಜರಿ ರುಮಾಲಿನವರ ಸಾಹಿತ್ಯ" ಎಂದವರು ಜರಿಯತೊಡಗಿದರು. ಆ ಹೊತ್ತಿಗೆ ಪಾಶ್ಚಾತ್ಯರಲ್ಲಿ ಸಮತಾವಾದದ ತಳಹದಿಯ ಮೇಲೆ ಸಾಹಿತ್ಯ ರಚನೆಯಾಗಬೇಕೆಂದು Progressive writers association' ಎಂಬ ಸಂಘ ಸ್ಥಾಪನೆಯಾಗಿತ್ತು. ನವೋದಯ ಪಂಥದಲ್ಲಿ ಆದ ಹಾಗೆಯೇ ಪ್ರಗತಿಶೀಲರೂ ಕೂಡಾ ಪಾಶ್ಚಾತ್ಯ ಲೇಖಕರ ಪ್ರಭಾವಕ್ಕೆ ಒಳಗಾಗಿ ಚಳವಳಿಯನ್ನು ಆರಂಭಿಸಿದರು. ಕನ್ನಡದಲ್ಲಿ ಅ.ನ.ಕೃಷ್ಣರಾಯರು ಪ್ರಗತಿಶೀಲ ಚಳವಳಿಯ ಮುಂದಾಳಾಗಿದ್ದರು. 1946ರಲ್ಲಿ ಅವರು ಧಾರವಾಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಆಡಿದ ಮಾತುಗಳಲ್ಲಿ ಪ್ರಗತಿಶೀಲ ಸಾಹಿತ್ಯದ ಸಮರ್ಥನೆ ಇದೆ. ಪ್ರಗತಿಶೀಲರು ಸಾಹಿತ್ಯ ರಚನೆಗೆ ಕಥೆ ಮತ್ತು ಕಾದಂಬರಿ ಪ್ರಕಾರಗಳನ್ನು ಮಾತ್ರ ಆಯ್ದು ಕೊಂಡದ್ದು ಒಂದು ವಿಶೇಷ ಕಥನ ಕಲೆಯಲ್ಲಿ ಸಿದ್ಧ ಹಸ್ತರಾಗಿದ್ದ ಪ್ರಗತಿಶೀಲರಿಗೆ ಓದುಗರ ದೊಡ್ಡ ಬಳಗವೇ ಬೆಳೆಯಿತು.

ಪ್ರಗತಿಶೀಲರ ಬರವಣಿಗೆಯನ್ನು ಮುಖ್ಯ ಲಕ್ಷಣವೆಂದರೆ ರೋಷ, ರೊಚ್ಚು ಮತ್ತು ಆವೇಶ. ಅವರೆಗೆ "ಗೌರವ"ಮುಸುಕು ಹಾಕಿಕೊಂಡಿದ್ದ ಹಲವಾರು ವಿಷಯಗಳನ್ನು ಕುರಿತು ಪ್ರಗತಿಶೀಲರು ಸಂಕೋಚವಿಲ್ಲದೆ ಬರೆದರು. ಪ್ರಗತಿಶೀಲ ಸಾಹಿತ್ಯದ ಮುಖ್ಯ ಬರಹಗಾರರುಗಳೆಂದರೆ ಅ.ನ.ಕೃಷ್ಣರಾಯ, ತ.ರಾ. ಸುಬ್ಬರಾವ್, ಬಸವರಾಜ ಕಟ್ಟೀಮನಿ, ನಿರಂಜನ, ಅರ್ಚಕ ವೆಂಕಟೇಶ, ಚದುರಂಗ, ಎಸ್. ಅನಂತನಾರಾಯಣ, ಕುಮಾರವೆಂಕಣ್ಣ ಮುಂತಾದವರು.

ಪ್ರಗತಿಶೀಲರು ನವೋದಯವರಂತೆಯೇ ರಾಷ್ಟ್ರದ ಪರಂಪರೆ, ಇತಿಹಾಸ, ಸಂಸ್ಕೃತಿಗಳಲ್ಲಿ ಆಸ್ಥೆಯುಳ್ಳವರಾದ್ದರಿಂದ ಐತಿಹಾಸಿಕ ಕಾದಂಬರಿಗಳನ್ನೂ ಬರೆದರು. ಎಷ್ಟೇಲ್ಲ ಅದ್ಭುತ ಪ್ರತಿಭಾವಂತರಿದ್ದರೂ, ಬಹುದೊಡ್ಡ ಓದುಗ ಬಳಗವಿದ್ದರೂ ಪ್ರಗತಿಶೀಲ ಚಳವಳಿ ಕನ್ನಡದ ಸಂದರ್ಭದಲ್ಲಿ ಅಲ್ಪಾಯುಷಿಯಾಯಿತು. ಇದಕ್ಕೆ ಪ್ರಗತಿಶೀಲ ಲೇಖಕರ ಬರವಣಿಗೆಯಲ್ಲಿದ್ದ ಹಲವಾರು ಮಿತಿಗಳೂ ಕಾರಣ. ಆದರೂ ಅವರು ಕನ್ನಡ ಭಾಷೆಗೆ ಒಂದು ಮೊನಚನ್ನು, ತೇಜಸ್ಸನ್ನು ತಂದುಕೊಟ್ಟರು ಎಂಬುದನ್ನು ಒಪ್ಪಿಕೊಳ್ಳಲೇ ಬೇಕು.

3.3.6 ಸ್ವಪರೀಕ್ಷಾ ಪ್ರಶ್ನೆಗಳಿಗೆ ಉತ್ತರಗಳು

3.3.6.1 ಮಾರ್ಕ್ಸ್ ಪ್ರತಿಪಾದಿಸಿದ ಸಮತಾವಾದದ ಮೇಲೆ ರೂಪುಗೊಂಡಿದೆ.

3.3.6.2 ಪ್ರಗತಿಶೀಲರು ದಲಿತರು, ಶೋಷಿತರು, ಅಸಹಾಯಕರು, ಮತ್ತು ಶ್ರಮ ಜೀವಿಗಳ ಪರವಾಗಿ ಬರೆಯುತ್ತಾರೆ.

3.3.6.3 ಇ.ಎಂ. ಫಾರ್ಸ್ಟರ್

3.3.6.4 ಪಾಶ್ಚಾತ್ಯ ಸಾಹಿತಿಗಳಾದ ಮೋಪಾಸಾ, ಸಿಂಕ್ಲೇರ್, ಎಮಿಲಿಜೋಲಾ, ವಾಲ್ಟೇರ್, ಹೆನ್ರಿಇಬ್ಸನ್, ಮ್ಯಾಕ್ಸಿಂಗಾರ್ಕಿ, ಮಲೋಕೋವಸ್ಕಿ ಮೊದಲಾದ ಲೇಖಕರು ಪ್ರಗತಿಶೀಲರ ಮೇಲೆ ಪ್ರಭಾವ ಬೀರಿದವರು.

3.3.6.5 ಅ.ನ.ಕೃಷ್ಣರಾಯ

3.3.6.6 ಸಾಹಿತ್ಯ ಮತ್ತು ಕಾಮ ಪ್ರಚೋದನೆ

3.3.6.7 ಕುವೆಂಪು ಮತ್ತು ಬೇಂದ್ರೆ

3.3.6.8 ವಿ.ಕೃ.ಗೋಕಾಕ್

3.3.6.9 ಸರ್ವಮಂಗಳ, ಉಯ್ಯಾಲೆ, ವೈಶಾಖ ಮತ್ತು ಹೆಪ್ಪಾಲ

3.3.6.10 'ಕಂಬನಿಯ ಕುಯಿಲು', 'ರಕ್ತರಾತ್ರಿ' 'ತಿರುಗುಬಾಣ'. 'ಸಿಡಿಲ ಮೊಗ್ಗು' 'ದುರ್ಗಾಸ್ತಮಾನ' ಮುಂತಾದವು.

3.3.6.11 ಪ್ರಗತಿಶೀಲರಿಂದ ರಚಿತವಾದ ಕಾದಂಬರಿಗಳಲ್ಲಿ ಪ್ರಗತಿಶೀಲತೆ ಘೋಷಿತ ಪ್ರಣಾಲಿಯಾಲಿತೇವಿನಃ ಅನುಭವ ಸಾಮಾಗ್ರಿಯಾಗಿ ಮೂಡಿ ಬರಲಿಲ್ಲ ಎಂದು ತ.ಸು. ಶಾಮರಾಯರು ಅಭಿಪ್ರಾಯ ಕಟ್ಟಿದ್ದಾರೆ.

3.3.7 ಅಭ್ಯಾಸಗಳು ಪ್ರಶ್ನೆಗಳು

3.3.7.1 ನವೋದಯ ಸಾಹಿತ್ಯ ಎಂದರೇನು ? ಅದರ ಪ್ರೇರಣೆಗಳಾವುವು? ತಿಳಿಸಿ.

3.3.7.2 ಇಂಗ್ಲಿಷ್ ಸಾಹಿತ್ಯದ ಸಂಪರ್ಕದಿಂದ ಕನ್ನಡಕ್ಕೆ ಬಂದ ಇನ್ನಿತರ ಸಾಹಿತ್ಯ ಪ್ರಕಾರಗಳ ಬೆಳವಣಿಗೆಯನ್ನು ವಿವರಿಸಿ.

3.3.7.3 ಪ್ರಗತಿಶೀಲ ಸಾಹಿತ್ಯದ ಹಿನ್ನೆಲೆ ಕನ್ನಡದಲ್ಲಿ ಅದು ಬೆಳೆದು ಬಗೆ ಮತ್ತು ಅದರ ಮಿತಿಗಳನ್ನು ಕುರಿತು ಬರೆಯಿರಿ.

3.3.8 ಹೆಚ್ಚಿನ ಓದಿಗೆ ಸಹಾಯಕ ಗ್ರಂಥಗಳು

3.3.8.1 ನವೋದಯ : ಡಾ. ಜಿ.ಎಸ್. ಶಿವರುದ್ರಪ್ಪ

3.3.8.2 ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಮಾಲಿಕೆಯಲ್ಲಿ ಹೊಸಗನ್ನಡ ಸಾಹಿತ್ಯ,(ಸಂ.ಲಿ.)ಬೆಂಗಳೂರು ವಿ.ವಿ.ನಿಲಯ : ಎಲ್.ಎಸ್. ಶೇಷಗಿರಿರಾವ್

3.3.8.3 ಸಾಹಿತ್ಯ ಸಂಗಮ : ಸ.ಸ. ಮಾಳವಾಡ

3.3.8.4 ಅನಿವಾರ್ಯ :ಪ್ರೊ. ಜಿ.ಎಚ್. ನಾಯಕ

3.3.8.5 ನಿಜದನಿ : ಪ್ರೊ. ಜಿ.ಎಚ್. ನಾಯಕ

3.3.8.6 ಯುಗಧರ್ಮ ಮತ್ತು ಸಾಹಿತ್ಯ ದರ್ಶನ : ಕೆ.ಡಿ.ಕುರ್ತಿಕೋಟಿ

3.3.8.7 ಕನ್ನಡ ಸಾಹಿತ್ಯ ಚರಿತ್ರೆ : ರಂ.ಶ್ರೀ. ಮುಗಳಿ.

ಟಿಪ್ಪಣಿಗಳು

ಸಂಚಿಕೆ - 4
ಕನ್ನಡ ಸಾಹಿತ್ಯ ಚರಿತ್ರೆ - ಆಧುನಿಕ ಕನ್ನಡ ಸಾಹಿತ್ಯ

ಘಟಕ - 4
ನವ್ಯ ಮತ್ತು ದಲಿತ ಬಂಡಾಯ ಸಾಹಿತ್ಯ

ಪರಿವಿಡಿ :

4.0 ಘಟಕದ ಉದ್ದೇಶ

- ಘಟಕದ ಸ್ವರೂಪ ಮತ್ತು ಮಹತ್ವವನ್ನು ಅರಿಯುವಿರಿ.
- ನವ್ಯ ಸಾಹಿತ್ಯದ ಸೃಷ್ಟಿಯ ಹಿಂದೆ ಇದ್ದ ಪ್ರೇರಣೆ ಪ್ರಭಾವಗಳನ್ನು ಕುರಿತು ತಿಳಿಯುವಿರಿ.
- ನವ್ಯ ಸಾಹಿತ್ಯದ ಆರಂಭ ಮತ್ತು ಬೆಳವಣಿಗೆಯ ಹಿನ್ನೆಲೆಯಲ್ಲಿ ಅದರ ಧೋರಣೆ - ನಿಲವುಗಳೇನೆಂಬುದನ್ನು ಅರಿಯುವಿರಿ.
- ನವ್ಯ ಸಾಹಿತ್ಯ ಇನ್ನಿತರ ಸಾಹಿತ್ಯ ಪಂಥಗಳಿಗಿಂತ ಎಷ್ಟು ಬಿನ್ನವೆಂಬುದನ್ನು ತಿಳಿಯುವಿರಿ.
- ನವ್ಯ ಸಾಹಿತ್ಯದ ಇತಿ-ಮಿತಿಗಳೇನೆಂಬುದನ್ನು ಅರಿಯುವಿರಿ.
- ದಲಿತ-ಬಂಡಾಯ ಸಾಹಿತ್ಯವೆಂದರೇನು? ಅದರ ಗೊತ್ತು -ಗುರಿಗಳೇನೆಂಬುದನ್ನು ಅರಿಯುವಿರಿ.
- ದಲಿತ ಬಂಡಾಯ ಸಾಹಿತ್ಯದ ಆರಂಭ ಮತ್ತು ಬೆಳವಣಿಗೆಯನ್ನು ಕುರಿತು ತಿಳಿಯುವಿರಿ.
- ಸ್ವಪರೀಕ್ಷಾ ಪ್ರಶ್ನೆಗಳನ್ನು ಗಮನಿಸುವಿರಿ.
- ಅಭ್ಯಾಸ ಪ್ರಶ್ನೆಗಳನ್ನು ಗಮನಿಸುವಿರಿ.
- ಸ್ವಪರೀಕ್ಷಾ ಪ್ರಶ್ನೆಗಳಿಗೆ ಉತ್ತರಗಳನ್ನು ತಿಳಿಯುವಿರಿ.
- ಘಟಕದ ಅಭ್ಯಾಸಕ್ಕೆ ಉಪಯುಕ್ತ ಗ್ರಂಥಗಳನ್ನು ಗಮನಿಸುವಿರಿ.

4.1 ಪೀಠಿಕೆ

ಈಗಾಗಲೇ ನೀವು ಹಿಂದಿನ ಘಟಕದಲ್ಲಿ ನವೋದಯ ಮತ್ತು ಪ್ರಗತಿಶೀಲ ಸಾಹಿತ್ಯ ಪಂಥಗಳನ್ನು ಕುರಿತು ಸವಿವರವಾಗಿ ಅಧ್ಯಯನ ಮಾಡಿದ್ದೀರಿ. ಇನ್ನು ಅವುಗಳಿಗೆಸಾತತ್ಯ ಸಂಬಂಧ ಹೊಂದಿರುವ ಮತ್ತು ಪ್ರತಿಭಟನೆಯಾಗಿ ನಿಂತಿಕೊಳ್ಳುವ ನವ್ಯ ಮತ್ತು ದಲಿತ ಬಂಡಾಯ ಸಾಹಿತ್ಯ ಪಂಥಗಳನ್ನು ಕುರಿತು ಪ್ರಸ್ತುತ ಘಟಕದಲ್ಲಿ ನೀವು ಸಮಗ್ರವಾಗಿ ಪರಿಚಯ ಮಾಡಿಕೊಳ್ಳುವಿ. ಅಂದರೆ "ಮಾನವನ ಬದುಕು ನಿಂತನೀರಲ್ಲ ; ಅದು ವಿಕಾಸಶೀಲವಾದುದು. ಬದುಕು ಬೆಳೆದಂತೆ, ಬದಲಿಸಿದಂತೆ, ಹೊಸತಾದಂತೆ ಅದರ ಅಭಿವ್ಯಕ್ತಿಯಾದ ಸಾಹಿತ್ಯವು ಅನಿವಾರ್ಯವಾಗಿ ಬೆಳೆಯುತ್ತದೆ, ಬದಲಾಗುತ್ತದೆ, ಹೊಸತನವನ್ನು ಅಳವಡಿಸಿಕೊಳ್ಳುತ್ತದೆ.... ಸಾಹಿತ್ಯವು ನಿರಂತರವಾದ ಕ್ರಾಂತಿ-ಚಳುವಳಿಗಳ, ಪ್ರಯೋಗಗಳ ಕತೆಯೇ ಆಗಿರುತ್ತದೆ.... ಸಂಪ್ರದಾಯ ನವ್ಯತೆಗಳ ಹೋರಾಟ. ಅಂತಿಮವಾಗಿ ನವ್ಯತೆಯ ವಿಜಯ ಇವು ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಕಾಲ ಕಾಲಕ್ಕೆ ಕಂಡು ಬರುವ ಪ್ರಕ್ರಿಯೆಗಳು. ಕನ್ನಡ ಸಾಹಿತ್ಯ ಉದ್ದಕ್ಕೂ ಪರಂಪರೆಯ ನೆಲೆಗಟ್ಟಿದ ಮೇಲೆ ನಿಂತೇ ಹೊಸತನವನ್ನು ಸ್ವಾಗತಿಸುತ್ತ, ಅರಗಿಸಿಕೊಳ್ಳುತ್ತ ಸಮನ್ವಯದ ಹಾದಿಯಲ್ಲಿ ಸಾಗಿ ಬಂದಿದೆ". ಈ ದೃಷ್ಟಿಯಿಂದ ಬಂದ ಸಾಹಿತ್ಯ ಪಂಥ ಅಥವಾ ಘಟ್ಟ ತನ್ನ ಸಾಧನೆಯ ಎತ್ತರವನ್ನು ತಲುಪಿದ ಮೇಲೆ ಇನ್ನೊಂದು ಪಂಥದ ಉದಯಕ್ಕೂ ಕಾರಣವಾಗುತ್ತದೆ. ಈ ಏರಿಳಿತಗಳ ಚಲನೆಗೆ ಸಮಾಜ ವ್ಯವಸ್ಥೆಯಲ್ಲಾಗುವ ಮಹತ್ವದ ಬದಲಾವಣೆಗೆ ಬಾಹ್ಯ ಪ್ರಭಾವಗಳೂ ಕಾರಣವಾಗುತ್ತವೆಂಬ ಮಾತನ್ನು ಬೇರೆ ಹೇಳಬೇಕಾಗಿಲ್ಲ. ಹೊಸಗನ್ನಡದ ಕಾಲ ಮತ್ತು ಆಧುನಿಕ ಕನ್ನಡದ ಆರಂಭದ ಕಾಲದಲ್ಲಿ ರಾಷ್ಟ್ರ ಪಾರತಂತ್ರ್ಯದಲ್ಲಿತ್ತು. ಇಂಗ್ಲಿಷರ ಆಳ್ವಿಕೆ ವ್ಯಕ್ತಿ ಸ್ವಾತಂತ್ರ್ಯದ

ಕುತ್ತಿಗೆ ಹಿಡಿದರೂ, ಅದೇ ಆಧುನಿಕ ಕನ್ನಡದ ಬೆಳವಣಿಗೂ ಕಾರಣವಾಯಿತು ಎನ್ನುವುದು ವಿಶೇಷವಾದ ಸಂಗತಿ. ಇಂಗ್ಲಿಷ್ ಭಾಷೆ, ಸಾಹಿತ್ಯಕ್ಕೆ ಹೊಸದಾಗಿ ತೆರೆದುಕೊಂಡ ಕನ್ನಡ ಲೇಖಕರು ಆರಂಭದಲ್ಲಿ ಅಲ್ಲಿನ ರೋಮ್ಯಾಂಟಿಕ್ ಮನೋಭಾವ ಮತ್ತು ಸಾಹಿತ್ಯಕ್ಕೆ ಮಾರು ಹೋದರು. ವಸಾಹತುಶಾಹಿಯ ಅಂಕೆಯಲ್ಲಿದ್ದ ನಮ್ಮವರಿಗೆ ಈ ಬಗೆಯ ಮನೋಭಾವ ಆಕರ್ಷಕವೆನ್ನಿಸಿದ್ದು ಸಹಜವೂ ಆಗಿತ್ತು. ಇಪ್ಪತ್ತನೆಯ ಶತಮಾನದ ಸಾಹಿತ್ಯವನ್ನು ಹೊಸ ಶತಮಾನದ ಬಾಗಿಲಲ್ಲಿ ನಿಂತು ನೋಡಿದಾಗ ಕೊನೆಯ ಎರಡು ದಶಕಗಳನ್ನು ಬಿಟ್ಟರೆ ಶತಮಾನ ದುದ್ದಕ್ಕೂ ಪಾಶ್ಚಾತ್ಯ ಸಾಹಿತ್ಯದ ಪ್ರಭಾವಕ್ಕೇ ನಮ್ಮ ಲೇಖಕರು ಒಳಗಾಗಿರುವುದು ಕಂಡು ಬರುತ್ತದೆ. ಕಳೆದೆರಡು ದಶಕಗಳಲ್ಲಿ ಮಾತ್ರ ಸ್ವಸಂಸ್ಕೃತಿ, ಇತಿಹಾಸದ ಮೂಲಗಳಿಗೆ, ಮರಳುವ ತುಡಿತ ನಮ್ಮ ಲೇಖಕರಲ್ಲಿ ಉಂಟಾಗಿರುವುದು ಗಮನಾರ್ಹ.

ಹೀಗೆ ಹಿಂದಿನ ಶತಮಾನದ ಆರಂಭದಲ್ಲಿ ಕನ್ನಡ ಸಾಹಿತಿಗಳು ಪಾಶ್ಚಿತ್ಯ ಪ್ರಭಾವಕ್ಕೆ ಒಳಗಾಗುವುದಕ್ಕ ವಸಾಹತುವಾದದ ಅನಿವಾರ್ಯ ಒತ್ತಡಗಳೂ ಕಾರಣವಾಗಿದ್ದಿರಬಹುದು. ಜೊತೆಗೆ ನಮ್ಮದೆನ್ನುವ ಸಾಹಿತ್ಯ ಪರಂಪರೆ ಒಂದು ನಿಲುಗಡೆಗೆ ಬಂದು ಬಿಟ್ಟಿದೆಯೆಂಬ ಭಾವನೆ ವ್ಯಾಪಕವಾಗಿದ್ದಾಗ ಪಾಶ್ಚಾತ್ಯ ಸಾಹಿತ್ಯದ ಪ್ರಚೋಧನೆಗೆ ನಮ್ಮ ಲೇಖಕರು ಒಳಗಾಗಿರಲೂಬಹುದು. ಆದರೆ ಮೊದಮೊದಲು ಅನಿವಾರ್ಯವೆನಿಸಿದ್ದ ಪಾಶ್ಚಾತ್ಯ ಸಾಹಿತ್ಯದ ಪ್ರಭಾವವು ಬರುಬರುತ್ತಾ ಇಚ್ಛಾಪೂರ್ವಕವಾದ ಆಯ್ಕೆಯೇ ಅಗತ್ಯವಾಯಿತೆನ್ನುವುದು ಗಮನಾರ್ಹ ಸಂಗತಿ. ಇದಕ್ಕೆ ಪ್ರಗತಿಶೀಲರು ಮತ್ತು ನವ್ಯರು ಪಾಶ್ಚಾತ್ಯ ಪ್ರಭಾವಗಳಿಗೆ ಒಳಗಾದದ್ದೇ ಸಾಕ್ಷಿ. ಆದರೆ ಈಚಿನ ಮುಕ್ತ ಆರ್ಥಿಕ ನೀತಿ ಮತ್ತು ಉದಾರವಾದಗಳ ಪರಿಣಾಮವಾಗಿ ನಾಗರಿಕ ಬದುಕು ಪಾಶ್ಚಾತ್ಯ ರೀತಿನೀತಿಗಳಿಗೆ ಶರಣಾಗಿ ಉಧೋ ಉಧೋ ಎನ್ನುತ್ತಿರುವಾಗ ನಮ್ಮ ಸಾಹಿತ್ಯ ಮತ್ತು ಚಿಂತನೆಗಳು ಸ್ವಸಂಸ್ಕೃತಿ ಮತ್ತು ಪರಂಪರೆಗಳ ಕಡೆಗೆ ಮುಖ ಮಾಡಿಕೊಂಡು ನಿಂತಿರುವುದು ಗಂಭೀರ ಚಿಂತನೆಯ ವಿಷಯ.

1947ರ ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯ ಬಂದದ್ದು ಇಪ್ಪತ್ತನೆಯ ಶತಮಾನದ ಬಹು ಮುಖ್ಯ ಘಟನೆ. ಸ್ವಾತಂತ್ರ್ಯ ಪೂರ್ವದಲ್ಲಿ ಅದಕ್ಕಾಗಿ ಹೋರಾಡುತ್ತಿದ್ದವರು, ಹಂಬಲಿಸುತ್ತಿದ್ದವರ ಮಾತುಗಳನ್ನು ಕೇಳಿದವರಿಗೆ, ಸ್ವಾತಂತ್ರ ಬಂದ ಕೂಡಲೇ ನಮ್ಮ ದೇಶದ ತುಂಬಾ ಚಿನ್ನದ ಹೊಗೆಯಾಡುತ್ತದೆ ಎಂಬ ಭಾವನೆ ತುಂಬಿಕೊಂಡಿತ್ತು. ಹಾಗಾಗಿ ಆ ಕಾಲದ ಆದರ್ಶದ ಮಾತುಗಳಿಗೆ, ಕನಸುಗಳಿಗೆ, ಭಾವನೆಗಳಿಗೆ ಜನ ರೋಮಾಂಚನಗೊಳ್ಳುತ್ತಿದ್ದರು. ಸ್ವಾತಂತ್ರ್ಯದ ಪ್ರತಿಪಾದಕರು, ಹೋರಾಟಗಾರೆಲ್ಲರೂ ದೈವಿಕತೆಯ ಅವತಾರದಂತೆ ಕಾಣುತ್ತಿದ್ದರು. ಆದರೆ ಈ ಭಾವನೆಗಳ ಬಲೂನಿಗೆ ಸ್ವಾತಂತ್ರ್ಯೋತ್ತರ ನಿಕಟ ಸಮಯದಲ್ಲೇ ನಿರಾಶೆಯ ಸೂಚಿ ತಾಕಿ ಬಿಟ್ಟಿತು. ಇಡೀ ನಾಡು ಆಳ್ವಿಕೆಗೆ ಗೊತ್ತಿಲ್ಲದ ಅಷ್ಟಕಸಬಿಗಳ ಕೈಗೆ "ಉರಿವ ಮನೆಯಲ್ಲಿ ಹಿರಿದದ್ದೇ ಲಾಭ"ಎನ್ನುವ ಸ್ವಾರ್ಥಸಾದಕರ ಕೈಗೆ ಸಿಕ್ಕಿಹಾಕಿಕೊಂಡು ಗೊತ್ತುಗುರಿಯಿಲ್ಲದೇ ನಡೆಯ ತೊಡಗಿದಂತೆ ಕಾಣತೊಡಗಿತು. ಆದರ್ಶ, ಆಶಾವಾದಿತನ, ಜೀವನ ಪ್ರೀತಿಗಳ ಜಾಗದಲ್ಲಿ ಸಿನಿಕತನ ನಿರಾಶೆ, ತಬ್ಬಲಿತನಗಳು ಕಾಣತೊಡಗಿದವು ಇಂಥ ಸಂದರ್ಭದಲ್ಲಿ ನವೋದಯದ ಆದರ್ಶ, ಜೀವನನಿಷ್ಠೆ, ರಾಷ್ಟ್ರೀಯತೆ, ಸೌಂದರ್ಯ ಪ್ರಜ್ಞೆ ಇವೆಲ್ಲವೂ ಕೇವಲ ಶಬ್ದಾಡಂಬರಗಳಾಗಿ ಕೆಲವು ಕವಿಗಳಿಗೆ ಕಾಣಿಸತೊಡಗಿದವು. ಅಂತೂ ಹೊಸಬಗೆಯ ಈ ಮನೋವೃತ್ತಿ ಹೊಸದೊಂದು ಸಾಹಿತ್ಯ ಪಂಥದ ಉದಯಕ್ಕೆ ಭೂಮಿಕೆಯನ್ನು ಸಿದ್ಧಮಾಡಿತ್ತು.

4.2 ನವ್ಯ ಸಾಹಿತ್ಯ

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ನವೋದಯ, ಪ್ರಗತಿಶೀಲ ಸಾಹಿತ್ಯ ಪಂಥಗಳ ಬಳಿಕ ನವ್ಯ ಸಾಹಿತ್ಯ ಪಂಥವು ಸೃಷ್ಟಿಯಾಯಿತು. ಸ್ವಾತಂತ್ರ್ಯೋತರ ಬದುಕಿನಲ್ಲುಂಟಾದ ಸಮಸ್ಯೆ - ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ಕಾಣಿಸಿಕೊಂಡ ಬದಲಾವಣೆಯ ಹೊಸ ಪರಿಕಲ್ಪನೆಗಳಲ್ಲಿ ಸಾಹಿತ್ಯರಚನೆಯೂ ಒಂದಾಗಿದ್ದು. ಇದು ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಆಯಾಮವನ್ನು ತಂದು ಕೊಟ್ಟಿತು. ಈ ಸಂವೇದನೆಯು ಬರಿ ಕನ್ನಡಕ್ಕೆ ಮಾತ್ರ ಸೀಮಿತವಲ್ಲ.ಅದು ಭಾರತದ್ಯಂತ ದೇಶಿಯ

ಎಲ್ಲಸಾಹಿತ್ಯ-ಸಂಸ್ಕೃತಿ ಸಂದರ್ಭದಲ್ಲೂ ಏಕಕಾಲಕ್ಕೆ ಉಂಟಾಯಿತ್ತೆಂಬುದು ಸಾಹಿತ್ಯ ಚರಿತ್ರೆಯಿಂದ ಗಮನಾರ್ಹ.

ಈ ನವ್ಯ ಸಾಹಿತ್ಯವು ಹಿಂದಿನ ನವೋದಯ, ಪ್ರಗತಿಶೀಲ ಸಾಹಿತ್ಯಗಳಂತೆ ಪಶ್ಚಿಮ ಮತ್ತು ದೇಶಿಯ ಸಂವೇದನೆಗಳ ಹಿನ್ನಲೆಯಲ್ಲಿ (ನಿಕಷಿತದಿಂದ) ರೂಪಿತವಾದ ಒಂದು ಬದ್ಧಸಾಹಿತ್ಯವಾಗಿದ್ದು, ಇದು ಜಗತ್ತಿನ ಎರಡು ಮಹಾಯುದ್ಧಗಳಿಂದ ಪ್ರಪಂಚದಾದ್ಯಂತ ಉಂಟಾದ ಭೀಕರ ಸಾವು - ನೋವು ಇದರ ಇನ್ನೂ ತೀವ್ರ ತರ ಪರಿಣಾಮದ ಫಲದಿಂದ ಅದುವರೆಗೂ ನಂಬಿಕೊಂಡು ಬಂದಿದ್ದು ಬದುಕಿನ ಮೌಲ್ಯಗಳಲ್ಲಿ ತೀವ್ರಕುಸಿತ ಕಾಣಿಸಿಕೊಂಡಿತು. ಅಷ್ಟೇ ಅಲ್ಲ, ಬೀಕರ ಬರಗಾಲ, ಹಸಿವು, ಬಡತನ, ನಿರುದ್ಯೋಗ, ಪವಿತ್ರಗ್ರಂಥಗಳ ಬಗೆಗೆ ಅನುಮಾನ ಮತ್ತು ಅಪನಂಬಿಕೆ, ಮನುಷ್ಯನಲ್ಲಿ ಏಕಾಂಗಿತನ, ದ್ವಂದ್ವ ಮನಸ್ಥಿತಿ, ಮಾನಸಿಕ ಉದ್ವಿಗ್ನತೆ, ಚಂಚಲತೆ, ಬದುಕಿನ ಅನಿಶ್ಚಿತತೆ, ಸಂದಿಗ್ದತೆ, ಹೊಯ್ದಾಟ, ಸಂದೇಶ, ಭಯ ಇನ್ನೂ ಮೊದಲಾದ ನೂರೆಂಟು ಸಮಸ್ಯೆ - ಸವಾಲುಗಳು ಎದುರಾದವು. ಈ ಕುರಿತು ಈ ನಿಟ್ಟಿನಲ್ಲಿ ಬಂದ ಟಿ.ಎಸ್. ಎಲಿಯೆಟ್, ಆ್ಯಡನ್, ಹ್ಯೂಮ್, ಐ.ಎ. ರಿಚರ್ಡ್ಸ್, ಲಾರೆನ್ಸ್, ಮ್ಯಾಥ್ಯು ಅರ್ನಾಲ್ಡ್, ಪ್ರಾಯ್ಡ್, ಸಾರ್ತ್ರೆ, ಕಾಮು, ಕಾಫ್ಕ, ಮಾರ್ಕ್ಸ್, ಬ್ರೆಕ್ಟ್ ಇನ್ನು ಶ್ರೇಷ್ಠ ಸೃಜನಶೀಲ ಬರೆಹಗಾರರು ಮತ್ತು ಚಿಂತಕರು ತಮ್ಮದೇ ಆದಂತ ಸೈದ್ಧಾಂತಿಕ ಸ್ತರದಲ್ಲಿ ಕಲಾತ್ಮಕವಾಗಿ ನುಡಿಕೊಟ್ಟರು. ಈ ದೃಷ್ಟಿಯಿಂದ ಸೃಷ್ಟಿಯಾದ ಸಾಹಿತ್ಯವು ಈ ಹಿಂದಿನ ಪರಂಪರೆಯ ಸಾಹಿತ್ಯ-ಸಾಂಸ್ಕೃತಿಕ ಪ್ರಜ್ಞೆಯನ್ನು ಸಾರಸಗಟು ಪ್ರಶ್ನಿಸುವ ಮೂಲಕ, ಸಾಹಿತ್ಯಿಕ ಮತ್ತು ಸಂಸ್ಕೃತಿಕವಾಗಿ ಮುಖಾಮುಖಿಯಾದರು. ಈ ಸಂವೇದನೆಯು ಜಗತ್ತಿನ ಎಲ್ಲ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲೂ ತೀವ್ರ ಎಚ್ಚರ ಮತ್ತು ಪರಿಣಾಮವನ್ನುಂಟು ಮಾಡಿತು.

ಈ ದಿಸೆಯಲ್ಲಿ ಭಾರತವು ಕೂಡಾ ಹೊರತಾಗಿ ನಿಲ್ಲದೆ, ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಾತಂತ್ರ್ಯ ಪಡೆಯುವ ತುಂಬು ಆಸ್ಥೆಯಿಂದ ಕಟ್ಟಿಕೊಂಡಿದ್ದ ಕನಸು, ಆದರ್ಶಪರತೆ, ನಂಬಿಕೆ, ಬದಲಾದಣೆ, ಧೈಯೆ, ಧೋರಣೆ -ನಿಲವು, ಭರವಸೆಗಳೆಲ್ಲವೂ ನುಚ್ಚುನೂರಾದವು. ಅದರ ಪರಿಣಾಮದ ಫಲದಿಂದ ಭ್ರಮೆ, ನಿರಾಸೆ, ಏಕಾಂಗಿತನ, ಕುಟುಂಬ ವಿಘಟನೆ ಮತ್ತು ಸಾಂಸ್ಕೃತಿಕ ಪಲ್ಲಟ, ರಾಜಕೀಯ ಬದಲಾವಣೆ, ಕೈಗಾರಿಕ ಕ್ರಾಂತಿ, ಬರ, ಯುದ್ಧದ ಭೀತಿ, ಆರ್ಥಿಕ ಕುಸಿತ ಮುಂತಾದ ಜಾಗತಿಕ ಬಿಕ್ಕಟ್ಟುಗಳು ಎದುರಾದವು. ಅಂತೆಯೆ ಈ ಸಂವೇದನೆಗಳ ಹಿನ್ನೆಲೆಯಲ್ಲಿ (೧೯೫೦ರ ಬಳಿಕ) ರೂಪಿತವಾದ ಸಾಹಿತ್ಯವನ್ನು "ನವ್ಯ ಸಾಹಿತ್ಯ ಪಂಥ" ವೆಂದು ಗುರುತಿಸಲಾಗುವುದು. ಈ ದಿಸೆಯಲ್ಲಿ ಕಾವ್ಯ, ನಾಟಕ, ಸಣ್ಣಕತೆ, ಕಾದಂಬರಿ ಸಾಹಿತ್ಯ ಪ್ರಮುಖ ಪ್ರಕಾರಣಗಳೆಲ್ಲವು ಗಟ್ಟಿಯಾಗಿ ನೆಲೆಯೂರಿದವು. ಹಾಗೆಯೆ ಈ ಹೊಚ್ಚ ಹೊಸ ಪರಂಪರೆಯನ್ನು ಸೃಷ್ಟಿಸಿದವರಲ್ಲಿ ವಿ.ಕೃ.ಗೋಕಾಕ್, ಅಡಿಗ, ರಾಮಚಂದ್ರಶರ್ಮ, ಯಶವಂತ ಚಿತ್ತಾಲ, ಯು.ಆರ್.ಅನಂತಮೂರ್ತಿ, ಪಿ.ಲಂಕೇಶ, ಪೂರ್ಣಚಂದ್ರತೇಜಸ್ವಿ, ಶ್ರೀಕೃಷ್ಣಆಲನಳ್ಳಿ, ಎಚ್.ಎಂ.ಚೆನ್ನಯ್ಯ, ಶಾಂತನಾಥದೇಸಾಯಿ, ಚಂದ್ರಶೇಖರ ಕಂಬಾರ, ಚಂದ್ರಶೇಖರ ಪಾಟೀಲ, ಗಿರೀಶ್‌ಕರ್ನಾಡ್, ನ.ರತ್ನ ಮೊದಲಾದ ಶ್ರೇಷ್ಠ ಸಾಹಿತಿಗಳು ತುಂಬ ಪ್ರಮುಖರಾಗಿದ್ದಾರೆ.

4.2.1 ನವ್ಯ ಸಾಹಿತ್ಯ ಎಂದರೇನು?

1947ರಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ "ಸ್ವಾತಂತ್ರ್ಯ" ಎಂಬ ಪರಿಕಲ್ಪನೆ ಕೇವಲ ರಾಜಕೀಯ ಸ್ವಾತಂತ್ರ್ಯ ಮಾತ್ರವಾಗಿರದೆ ನಿಧಾನವಾಗಿ ಬೇರೆಯ ಪದರಗಳಿಗೂ ವಿಸ್ತರಿಸತೊಡಗಿತು. ಸ್ವಾತಂತ್ರ್ಯ ಪೂರ್ವದ ನವೋದಯದ ಮನಸ್ಸುಗಳು ಒಂದು ಸಮಷ್ಟಿ ಮೌಲ್ಯಕ್ಕೆ ತಮ್ಮನ್ನು ತೆತ್ತಿಕೊಂಡಿದ್ದಂತೆ ಸ್ವಾತಂತ್ರ್ಯೋತ್ತರ ಮನಸ್ಸುಗಳಿಗೆ ಅನ್ನಿಸ ತೊಡಗಿತು. ಸ್ವಾತಂತ್ರ್ಯಕ್ಕೆ ಮೊದಲು ಜನರ ಮನಸ್ಸಿನಲ್ಲಿದ್ದ ರಾಷ್ಟ್ರೀಯತೆ, ದೇಶಸೇವೆ, ಆದರ್ಶವಾದ, ತ್ಯಾಗ, ನಿಷ್ಠೆ ಮುಂತಾದ ದೊಡ್ಡ ದೊಡ್ಡ ಶಬ್ದಗಳ ಗುಂಗು ಸ್ವಾತಂತ್ರ್ಯ ಬಂದ ಮೇಲೆ ಹರಿದು ಹೋಗಿ ಅಂಥ ಶಬ್ದಗಳು ಬರೀ ಕೃತಕವೆಂಬಂತೆ ಭಾಸವಾಗತೊಡಗಿತು. ಸ್ವಾತಂತ್ರ್ಯದ ಬಗ್ಗೆ ಇದ್ದ ಎಲ್ಲ ಕನಸುಗಳೂ ವಾಸ್ತವದ ಹಗಲು ಬೆಳಕಿನಲ್ಲಿ

ಅರ್ಥಕಳೆದುಕೊಂಡಂತೆ ಕಾಣುತ್ತಿದ್ದವು. ಅವರೆಗೆ ಸ್ಫೂರ್ತಿದಾಯಕವಾಗಿ ಕಾಣುತ್ತಿದ್ದ ಎಲ್ಲ ಮೌಲ್ಯಗಳೂ ಈಗ ಪರಿಹಾಸ್ಯಕ್ಕೆ ಗುರಿಯಾಗತೊಡಗಿದವು. ಈ ಸನ್ನಿವೇಶದಲ್ಲಿ ಸಿಕ್ಕ ಸ್ವಾತಂತ್ರ್ಯವನ್ನು ಆಲೋಚನೆಗಳಿಗೂ ವಿಸ್ತರಿಸಿಕೊಂಡು ಸಮಷ್ಟಿಯ ಎಲ್ಲ ಮೌಲ್ಯಗಳನ್ನು ವ್ಯಕ್ತಿ ತನ್ನ ಪ್ರಜ್ಞೆಯ ಸಂದರ್ಭದಲ್ಲಿ ಪ್ರಶ್ನಿಸುವ, ಚಿಂತಿಸುವ ಪುನರಾಲೋಚಿಸುವ ಕಡೆಗೆ ಕೆಲವು ಕವಿಗಳು ಗಮನಾರ್ಹತೆ ಪಡೆದುಕೊಂಡರು. ಈ ಸಂದರ್ಭಕ್ಕೆ ಸರಿಯಾಗಿ ಇಂಗ್ಲೀಷಿನ ಮಾಡರ್ನ್ ಪೋಯಿಟ್ರಿ ಮತ್ತು ಮಾಡರ್ನ್‌ಕ್ರಿಟಿಸಿಸಂನ ಓದು ಈ ಕವಿಗಳಿಗೆ ಲಭ್ಯವಾಗ ತೊಡಗಿ ಅಲ್ಲಿಯ ಧೋರಣೆಗಳು ಇವರನ್ನು ಆಕರ್ಷಿಸಿದವು. ಇದರ ಜೊತೆಗೆ ಕೆಲವು ಪಾಶ್ಚಾತ್ಯ ಸಾಹಿತ್ಯೇತರ ಕೃತಿಗಳ ಸಂಪರ್ಕವೂ ಈ ಕವಿಗಳಿಗೆ ಒದಗಿ ಹೊಸ ಬಗೆಯ ಆಲೋಚನೆಗೆ ಮತ್ತಷ್ಟು ಕುಮ್ಮಕ್ಕು ನೀಡಿದವೆಂದು ಗುರುತಿಸಬಹುದು.

ಈ ಕುರಿತು ಪ್ರೊ.ಜಿ.ಎಚ್.ನಾಯಕರ ಪ್ರಕಾರ : "ಒಟ್ಟು ಸಮಷ್ಟಿಯ ಸನ್ನಿವೇಶ ಉನ್ನತ ಸಂವೇದನ ಶೀಲನ ಮನಸ್ಸಿನಲ್ಲಿ ಹೇಗೆ ದಾಖಲಾಗುತ್ತದೆ ಅನ್ನುವುದನ್ನು ಗುರುತಿಸಿಕೊಳ್ಳುವ ನಿಷ್ಠುರವಾದ ಛಲ ನವ್ಯಸಾಹಿತ್ಯದಲ್ಲಿ ಕಾಣಿಸುತ್ತದೆ. ಒಬ್ಬ ಬ್ರಾಹ್ಮಣ, ಒಬ್ಬ ಶೂದ್ರ, ಒಬ್ಬ ದಲಿತ, ಯಾರೇ ಆಗಿದ್ದರೂ ತನ್ನ ವ್ಯಕ್ತಿ ವಿಶಿಷ್ಟತೆಯ ಸಂದರ್ಭದಲ್ಲಿಯೇ ಹೊರಗಿನ ಪರಿಸರಕ್ಕೆ ಸ್ಪಂಧಿಸುವವನಾಗಿರುತ್ತಾನೆ. ಆದುದ್ದರಿಂದ ವೈವಿಧ್ಯಪೂರ್ಣವಾದ ರೀತಿಯಲ್ಲಿ ಜೀವಾನುಭವಗಳು ಅಭಿವ್ಯಕ್ತಿ ಪಡೆಯಬಹುದಾದ ಸಾಧ್ಯತೆಗಳನ್ನು ನವ್ಯ ಸಾಹಿತ್ಯ ತೆರೆಯುತ್ತದೆ. ಹೀಗಾಗಿ ಸೃಜನಾತ್ಮ ಸಾಧ್ಯತೆಗೆ ಸಂಬಂಧಿಸಿದಂತೆ ನವ್ಯ ಸಾಹಿತ್ಯವು ಮತಧರ್ಮಪರವಾದ ದೃಷ್ಟಿ ಅಥವಾ ವಿಚಾರವಾದ ಇವುಗಳಿಗೆ ಸಿಮಿತವಾಗಿರುವಂಥ ಸಾಹಿತ್ಯಗಳಂತೆ ಬದ್ಧ ಸಾಹಿತ್ಯವಾಗಿಲ್ಲ".(ಅನಿವಾರ್ಯ ಪು. ೧೧) ಅಂದರೆ ಆವರೆಗಿನ ಸಾಹಿತ್ಯಗಳು ಸಮಷ್ಟಿಯ ಅಭಿಪ್ರಾಯ ಭಾವನೆಗಳಿಗೆ ತಮ್ಮನ್ನೇ ಶ್ರುತಿಗೊಳಿಸಿಕೊಂಡರೇ ಹೊರತು ಸಮಷ್ಟಿಯಲ್ಲಿ ರೂಪುಗೊಂಡಿರುವ ಅಭಿಪ್ರಾಯ, ಭಾವನೆಗಳು ತನ್ನದ್ದೊಂದು ವ್ಯಕ್ತಿತ್ವದ ನಿಜದಲ್ಲಿ ಹೇಗೆ ಸಾಕ್ಷಾತ್ ಆಗಿವೆಂಬುದರ ಕಡೆಗೆ ತಲೆಕೆಡಿಸಿಕೊಳ್ಳಲಿಲ್ಲ. ಪರತಂತ್ರ ರಾಷ್ಟ್ರದಲ್ಲಿ ಅದು ಸಾಧ್ಯವೂ ಇರಲಿಲ್ಲ. ಅಲ್ಲದೆ ಸ್ವಾತಂತ್ರ್ಯ ಹೋರಾಟ, ರಾಷ್ಟ್ರೀಯತೆ ಮುಂತಾದ ಕಡೆ ಇಡೀ ರಾಷ್ಟ್ರದ ಭಾವನೆ ಚಿಂತನೆಗಳು ಒಗ್ಗೂಡಿ ಹರಿಯ ಬೇಕಾಗಿದ್ದ ಸಂದರ್ಭದಲ್ಲಿ ಹಾಗೆ ತನ್ನಗೊಂದು ವ್ಯಕ್ತಿತ್ವ ಎಂದು ಪ್ರತ್ಯೇಕಿಸಿಕೊಳ್ಳುವುದು ಅಪೇಕ್ಷಣೀಯವೂ ಆಗಿರಲಿಲ್ಲ. ಆದರೆ ಸ್ವಾತಂತ್ರ ಪಡೆದ ರಾಷ್ಟ್ರದಲ್ಲಿ ಹಿಂದಿನ ಎಲ್ಲ ಅಭಿಪ್ರಾಯಗಳನ್ನು ಮೌಲ್ಯಗಳನ್ನು ಮತ್ತೆ ಶೋಧಿಸುವುದು ಸಾಧ್ಯವಾಯಿತು. ಇದನ್ನು ಇನ್ನೂ ವಿಸ್ತರಿಸಿ ಹೇಳಬೇಕೆಂದರೆ, ಹಿಂದಿನ ಕವಿಗಳು ತಮ್ಮ ಸಾಹಿತ್ಯವನ್ನು, ತಾವು ಬದುಕಿನ ಬೇರೆ ವಲಯಗಳಲ್ಲಿ ಒಪ್ಪಿಕೊಂಡಿರುವ ಮೌಲ್ಯಗಳಿಗೆ ವಾಹಕವಾಗಿಸಿಕೊಂಡಿದ್ದರು. ಅಂದರೆ ತನ್ನ ಪರಂಪರೆಯಿಂದಲೋ, ಹಿರಿಯರಿಂದಲೋ ಸ್ವೀಕರಿಸಿದ್ದ ಸಿದ್ಧಮೌಲ್ಯಗಳನ್ನು, ಹಾಗೇ ಸಿದ್ಧವಾಗಿದ್ದ ಭಾಷೆಯಲ್ಲಿಯೋ ಕಟ್ಟಿಕೊಡುತ್ತಿದ್ದರು. ಆದರೆ ಈಗ ಆ ಮೌಲ್ಯಗಳನ್ನು ತನ್ನ ವ್ಯಕ್ತಿತ್ವದ ಸಂದರ್ಭದಲ್ಲಿ ಪರಿಶೋಧಿಸಿ, ತಾನೇ ನಿರ್ಮಿಸಿದ ಭಾಷೆಯಲ್ಲಿ ಕಟ್ಟಲು ಕವಿ ತವಕಿಸುವಂತಾಯಿತು. ತನ್ನ ಭಾಷೆಯನ್ನು ತಾನೇ ನಿರ್ಮಿಸುವ ಅನಿವಾರ್ಯ ಏಕೆ? ಅಂದರೆ, ಭಾಷೆ ಕೂಡಾ ಒಂದು ಸಮುದಾಯದಲ್ಲಿ ಮತ್ತೆ ಮತ್ತೆ ಬಳಕೆಯಾದಾಗ ಆ ಸಮುದಾಯ ಒಪ್ಪಿಕೊಂಡ ಅರ್ಥದಲ್ಲಿ ಮಾತ್ರ ಚಲಾವಣೆಯಾಗುತ್ತದೆ. ಹಾಗಾದಾಗ ಭಾಷೆಯ ವ್ಯವಸ್ಥೆಯನ್ನು ತನಗೆ ಅಗತ್ಯವಾದಂತೆ ಮುರಿದು ನಿರ್ಮಿಸುವ ಕ್ರಿಯೆ ಸಾಹಿತಿಗೆ ಅನಿವಾರ್ಯವಾಗುತ್ತದೆ.

ಒಟ್ಟಿನಲ್ಲಿ ನವ್ಯಸಾಹಿತ್ಯದ ಲೇಖಕರು ಬದುಕನ್ನು ಸರಳಗೊಳಿಸಿದ ಸಿದ್ಧಚೌಕಟ್ಟಿನಲ್ಲಿ ನೋಡಲು ಪ್ರಯತ್ನಿಸುವುದಿಲ್ಲ. ಬದಲಾಗಿ ಆ ಬದುಕಿನ ಸಂಕೀರ್ಣತೆಗಳನ್ನು ತನ್ನ ವ್ಯಕ್ತಿತ್ವಕ್ಕೆ ಹೇಗೆ ಕಾಣುತ್ತದೋ ಹಾಗೆ ನೋಡಲು ಬಯಸುತ್ತಾನೆ. ಅಂತೆಯೆ ಅದನ್ನು ತನ್ನದೇ ಆದ ಭಾಷೆಯ ಮೂಲಕ ಪುನರ್‌ಸೃಷ್ಟಿಸಲು ಪ್ರಯತ್ನಿಸುವನು. ಆದುದ್ದರಿಂದ ನವ್ಯಸಾಹಿತ್ಯದಲ್ಲಿ ಸಮಷ್ಟಿಗಿಂತ ವ್ಯಕ್ತಿಪ್ರಜ್ಞೆ ಮುಖ್ಯ. ಆ ಪ್ರಜ್ಞೆ ತನ್ನಲ್ಲಿ ದಾಖಲಿಸಿಕೊಂಡದ್ದೇನು? ಅನ್ನುವುದು ತುಂಬ ಮಹತ್ವದೆಂದು ಭಾವಿಸುತ್ತದೆ.

4.2.2 ಕನ್ನಡ ನವ್ಯ ಸಾಹಿತ್ಯದ ಪ್ರೇರಣೆಗಳು - ಪ್ರಭಾವಗಳು

ಸುಮಾರು 1950ರಲ್ಲಿ ಕನ್ನಡ ಸಾಹಿತ್ಯದಲ್ಲಿ ನವ್ಯ ಸಾಹಿತ್ಯ ಆರಂಭಗೊಂಡಿತು. ನವ್ಯ ಸಾಹಿತ್ಯ ಕನ್ನಡದಲ್ಲಿ ಆರಂಭಗೊಳ್ಳಲು ಪೂರಕವಾದ ವಾತಾವರಣದ ಬಗ್ಗೆ ಈ ಹಿಂದೆಯೇ ಹೇಳಿದೆ. ದೇಶಕ್ಕೆ ಸ್ವಾತಂತ್ರ್ಯ ಬರುವವರೆಗೆ ಇದ್ದ ಒತ್ತಡ ಒತ್ತಾಯಗಳು ಸ್ವಾತಂತ್ರ್ಯ ಬಂದ ನಂತರ ಕವಿಯೊಬ್ಬನಿಗೆ ಇಲ್ಲವಾಗಿ ರಾಜಕೀಯ ಸ್ವಾತಂತ್ರ್ಯವನ್ನು ಆಲೋಚನೆಯ ಸ್ವಾತಂತ್ರ್ಯಕ್ಕೆ ವಿಸ್ತರಿಸಿಕೊಂಡದ್ದೇ ನವ್ಯ ಸಾಹಿತ್ಯದ ಉಗಮಕ್ಕೆ ಪೂರಕವಾದ ಸನ್ನಿವೇಶ.

ನವೋದಯ ಮತ್ತು ಪ್ರಗತಿಶೀಲ ಸಾಹಿತ್ಯಗಳಂತೆಯೇ ನವ್ಯ ಸಾಹಿತ್ಯವೂ ಪ್ರೇರಣೆ ಪಡೆದದ್ದು ಪಾಶ್ಚಾತ್ಯ ಸಾಹಿತ್ಯದಿಂದಲೇ, ನವ್ಯಕಾವ್ಯ ಎಂಬುದು ಇಂಗ್ಲಿಷಿನ Modern Poetryಎಂಬುದಕ್ಕೆ ಸಂವಾದಿಯಾದ ಪದ. Modern ಎಂದರೆ ಹೊಸದು ಎಂದಷ್ಟೇ ಅರ್ಥ. 'ನವೋದಯ'ಶಬ್ದಕ್ಕೂ 'ಹೊಸದರ ಉದಯ' ಎಂದೇ ಅರ್ಥ. ನವೋದಯ, ನವ್ಯ ಎಂಬ ಎರಡು ಶಬ್ದಗಳೂ ಶಬ್ದಕೋಶದ ಅರ್ಥದಲ್ಲಿ ಒಂದೇ ಆದರೂ 'ನವ್ಯ' ಎಂಬುದನ್ನು ಇಂಗ್ಲಿಷಿನ 'Modern'ಎಂಬ ಶಬ್ದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಬಳಸಲಾಗುತ್ತಿದೆ. ಇದಕ್ಕೆ 'ನವ್ಯಕಾವ್ಯ'ಎಂದು ಹೆಸರನ್ನು ಕೊಟ್ಟವರು ವಿ.ಕೃ.ಗೋಕಾಕ್ ಅವರು. ಗೋಕಾಕರು ಹೀಗೆ ಹೇಳಿದ್ದಾರೆ. 'ನವ್ಯ' ಎಂಬ ಶಬ್ದವನ್ನು ಇಲ್ಲಿಯವರೆಗೆ ಬರಿ ಸಾಮಾನ್ಯಾರ್ಥವಲ್ಲಿ ಉಪಯೋಗಿಸಿದ್ದೇನೆ. ಆದರೆ ' ನವ್ಯ ಕಾವ್ಯ'ಎಂದರೆ ಆಧುನಿಕ ಕಾವ್ಯಕ್ಕಿಂತ ಬೇರೆಯಾದ ಕಾವ್ಯ. ವಿಶೇಷ ತಂತ್ರ - ವಿಧಾನಗಳನ್ನು ಪಡೆದ ಕಾವ್ಯವೆಂಬರ್ಥದಲ್ಲಿ ಆ ಶಬ್ದವನ್ನು ಉಪಯೋಗಿಸುತ್ತೇನೆ".

ಇಪ್ಪತ್ತನೆಯ ಶತಮಾನದ ಹೊತ್ತಿಗೆ ಇಂಗ್ಲೆಂಡಿನಲ್ಲಿ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯಲ್ಲಿ ತೀವ್ರತರದ ಬದಲಾವಣೆಗಳಾಗಿದ್ದವು. ಆದರಿಂದಾಗಿ ಕಾವ್ಯಕ್ಷೇತ್ರದಲ್ಲೂ ಬದಲಾವಣೆಗಳು ಕಾಣಿಸಿಕೊಂಡಿದ್ದವು. ರೊಮ್ಯಾಂಟಿಕ್ ಸಾಹಿತ್ಯ ಚಲಾವಣೆ ಕಳೆದುಕೊಂಡಿತ್ತು. ಆಗ ಟಿ.ಇ.ಹ್ಯೂಮ್, ಎಜ್ರಾಪೌಂಡ್ ಮುಂತಾದ ಕಾವ್ಯದ ಅಭಿವ್ಯಕ್ತಿ, ತಂತ್ರ ಮತ್ತು ಧೋರಣೆಗೆ ಸಂಬಂಧಿಸಿದಂತೆ ಬೇರೆಯೇ ಆದ ಪ್ರತಿಮಾನಿಷ್ಠಗಳನ್ನು ಆರಂಭಿಸಿದ್ದರು. ಅನಂತರ ಟಿ.ಎಸ್.ಎಲಿಯಟ್ ಪ್ರತಿಮಾನಿಷ್ಠ ಕಾವ್ಯ ರೀತಿಯೊಂದಿಗೆ ಅನುಭಾವ ಪಂಥ ಮತ್ತು ಫ್ರೆಂಚ್ ಸಂಕೇತ ನಿಷ್ಠ ಕಾವ್ಯಗಳ ಉತ್ತಮಾಂಶಗಳನ್ನು ಸಮನ್ವಯಗೊಳಿಸಿ ಹೆಚ್ಚು ಸಂಕೀರ್ಣವೂ ಸಮಗ್ರವೂ ಆದ ಕಾವ್ಯ ರೀತಿಯನ್ನೂ, ವಿಮರ್ಶನ ವಿಧಾನವನ್ನೂ ಬೆಳೆಸಿದ ಹಾಪ್‌ಕಿನ್ಸ್‌ನ ಕವನಗಳ ಸಂಗ್ರಹವನ್ನು ರಾಬರ್ಟ್‌ಬ್ರಿಡ್ಜಸ್ ಎಂಬುವವನು ಮರಣೋತ್ತರವಾಗಿ ಪ್ರಕಟಿಸಿದಾಗ ಅವುಗಳಲ್ಲಿ ಹಾಪ್‌ಕಿನ್ಸ್ ಕಾವ್ಯದ ಭಾಷೆ ಮತ್ತು ಛಂದಸ್ಸಿಗೆ ಸಂಬಂಧಿಸಿದಂತೆ ಆವರೆಗೆ ಚಾಲ್ತಿಯಲ್ಲಿದ್ದ ವಿಧಾನಗಳಿಗಿಂತ ಬೇರೆ ರೀತಿಯ ಪ್ರಯೋಗಗಳನ್ನು ನಡೆಸಿದ್ದ. ಆದಾದ ನಾಲ್ಕು ವರ್ಷಗಳಲ್ಲಿ ಎಲಿಯಟ್ 'ವೇಸ್ಟ್ ಲ್ಯಾಂಡ್'ಕವನವನ್ನು ಪ್ರಕಟಿಸಿದ. ಹಾಪ್‌ಕಿನ್ಸ್ ಮತ್ತು ಎಲಿಯಟ್ ಇಬ್ಬರೂ ಮುಂದಿನ ತರುಣ ಪೀಳಿಗೆಯ ಕವಿಗಳಾದ ಆ್ಯಡೆನ್, ಸಿ.ಡಿ.ಲೂಯಿ, ಸ್ಟೀಫನ್ ಸ್ಪೆಂಡರ್, ಡಿಲಾನ್ ಥಾಮಸ್ ಮುಂತಾದವರ ಬರವಣಿಗೆಯ ಮೇಲೆ ತೀವ್ರ ಪ್ರಭಾವ ಬೀರಿದರು. ಆಗ ಡಬ್ಲ್ಯೂ, ಬಿ.ಯೇಟ್ಸ್ (ರವೀಂದ್ರನಾಥ ಠಾಕೂರರ 'ಗೀತಾಂಜಲಿ' ಕಾವ್ಯಕ್ಕೆ ಮುನ್ನುಡಿ ಬರೆದಿದ್ದ ಕವಿ) ಕೂಡಾ ಎಲಿಯಟ್‌ನ ಕಾವ್ಯ ಪದ್ಧತಿಯನ್ನೇ ಸ್ವೀಕರಿಸಿದ. ಕಮಿಂಗ್ಸ್ ಮುಂತಾದ ಅಮೇರಿಕನ್ ಕವಿಗಳೂ ಅದೇ ಕಾವ್ಯ ಪದ್ಧತಿಯನ್ನು ಸ್ವೀಕರಿಸಿದರು. ಹಾಗಾಗಿ ಅಂದಿಗೆ ಇಂಗ್ಲಿಷ್ ಕಾವ್ಯದಲ್ಲಿ Modernistಕಾವ್ಯ ಪದ್ಧತಿಯೇ ಒಂದು ಪ್ರಧಾನ ಅಭಿವ್ಯಕ್ತಿ ಮಾರ್ಗವಾಗಿತ್ತು.

ಈ ಇಡೀ ಕಾವ್ಯ ಪದ್ಧತಿಯ ಮನೋಧರ್ಮ ಮತ್ತು ವಿಧಾನಗಳನ್ನು ಇಂಗ್ಲಿಷ್ ಸಾಹಿತ್ಯದ ಅಧ್ಯಾಪಕರಾಗಿ, ಸೃಜನಶೀಲಕವಿಗಳಾಗಿ ವಿವರವಾಗಿ ಅಧ್ಯಯನ ಮಾಡಿದ್ದ ವಿ.ಕೆ. ಗೋಕಾಕ್ ಮತ್ತು ಗೋಪಾಲಕೃಷ್ಣ ಅಡಿಗ ಅವರು ಇಲ್ಲಿಯೂ ಈ ಕಾವ್ಯ ಮಾರ್ಗವನ್ನು ರೂಢಿಸಿ ಬೆಳೆಸಲು ಸಿದ್ಧರಾದರು. ಹಿಂದೆಯೇ ಹೇಳಿದಂತೆ ಸ್ವಾತಂತ್ರ್ಯಾನಂತರದ ತೀವ್ರತರವಾದ ಸಾಮಾಜಿಕ ಏರುಪೇರು ಜನಸಮಷ್ಟಿಯ

ಭ್ರಮನಿರಸನ, ಹತಾಶೆ-ಇವುಗಳೂ ಇಂಥ ಕಾವ್ಯ ಮಾರ್ಗದ ಬೆಳವಣಿಗೆಗೆ ಪೋಷಕಾಂಶಗಳಾದವು. ಈ 'ನವ್ಯಕಾವ್ಯ'ದ ಅಗತ್ಯದ ಬಗ್ಗೆ ಮೊದಲು ಪ್ರಸ್ತಾಪಿಸಿದವರು ವಿ.ಕೆ. ಗೋಕಾಕ್ ಅವರು. ಅವರು 1950ನೇ ಡಿಸೆಂಬರ್ ತಿಂಗಳಲ್ಲಿ 26ರಲ್ಲಿ ಮುಂಬಯಿಯಲ್ಲಿ ನಡೆದ ಮೂವತ್ತನಾಲ್ಕನೇ ಸಾಹಿತ್ಯ ಸಮ್ಮೇಳನದ ಲೇಖಕಗೋಷ್ಠಿಯ ಅಧ್ಯಕ್ಷ ಭಾಷಣ ಮಾಡುತ್ತಾ ಈ ವಿಷಯವನ್ನು ದೀರ್ಘವಾಗಿ ವಿವರಿಸಿದರು. ಆ ಭಾಷಣವೂ 'ಸಾಹಿತ್ಯ ಹಾಗೂ ನವ್ಯತೆ' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಯಿತು. ಅವರು ಹೇಳಿದ ಕೆಲವು ಮಾತುಗಳನ್ನು ಜಿ.ಹೆಚ್.ನಾಯಕರು ಹೀಗೆ ಸಂಗ್ರಸಿದ್ದಾರೆ:

"ನವ್ಯಕಾವ್ಯವೆಂದರೆ ಆಧುನಿಕ ಕಾವ್ಯಕ್ಕಿಂತ ಬೇರೆಯಾದ ಕಾವ್ಯ. ವಿಶೇಷ ತಂತು ವಿಧಾನಗಳನ್ನು ಪಡೆದ ಕಾವ್ಯ. ಮುದ್ದಣನ ಕಾವ್ಯದಿಂದ ಬೆಳೆದು ಬಂದ ಆಧುನಿಕ ಕಾವ್ಯವು ಆಧುನಿಕ ಕಾವ್ಯ ಪ್ರಕಾರಗಳನ್ನು, ಕಾವ್ಯ ವಸ್ತುಗಳನ್ನು ಕನ್ನಡಕ್ಕೆ ತಂದಿತು. ಈ ಕಾವ್ಯ ಪ್ರಕಾರ ವಸ್ತುಗಳಿಗೆ ಉಚಿತವಾದ ಶೈಲಿಯ ಛಂದಸ್ಸುಗಳನ್ನು ನಿರ್ಮಾಣ ಮಾಡಿತು. ವ್ಯಕ್ತಿತ್ವ ನಿರೂಪಣೆಯನ್ನು ಸಾಧಿಸಿತು. ಈಗ ಆಧುನಿಕ ಕಾವ್ಯದ ಪರಂಪರೆಯೊಂದು ನಿರ್ಮಿತವಾಗಿದೆ. ಒಂದು ಪರಂಪರೆ ಪೂರ್ಣವಾದಾಗ ಇನ್ನೊಂದು ಹೊಳಹನ್ನು ಹಾಕದೆ ಉಕ್ತಿಗೆ ಸಮಗ್ರತೆಯೂ ಕಾಂತಿಯೂ ಬರುವುದು ಕಠಿಣ. ಅಂತೇ ಇಂದು ನವ್ಯಕಾವ್ಯದ ಆವಶ್ಯಕತೆಯೂ ಉಂಟಾಗಿದೆ; ಒಂದು ಪರಂಪರೆ ತನ್ನ ಸಿದ್ಧಿಯನ್ನು ಮುಟ್ಟಿದಾಗ ಇನ್ನೊಂದು ಸಿದ್ಧತೆಯು ತನ್ನ ಸಿದ್ಧಿಯ ದಾರಿಯನ್ನು ಹುಡುಕುತ್ತಿರುತ್ತದೆ. ಇಂಥ ಆಂತರಿಕ ಆವಶ್ಯಕತೆಯಿಂದ ಪ್ರಚೋದನೆಗೊಂಡ ಬಂಗಾಲಿ ಹಾಗೂ ಮರಾಠಿ ಕಾವ್ಯಗಳೂ ನವ್ಯಕಾವ್ಯದ ದಾರಿಯನ್ನು ನೇರವಾಗಿ ತುಳಿಯ ಹತ್ತಿವೆ. ಆಧುನಿಕ ಕನ್ನಡ ಕಾವ್ಯವೂ ತನ್ನ ಪರಂಪರೆಯ ಸಿದ್ಧಿಯನ್ನು ಮುಟ್ಟಿದಾಗ ಮುಂದೇನೆಂಬ ಪ್ರಶ್ನೆ ಏಳುತ್ತದೆ. ಈ ಪ್ರಶ್ನೆಗೆ ಉತ್ತರ ನವ್ಯಕಾವ್ಯ, ಚಂಪೂ, ಷಟ್ಪದಿ, ವಚನ, ಸಾಂಗತ್ಯ, ತ್ರಿಪದಿ - ಹೀಗೆ ಅನೇಕ ರೂಪಗಳನ್ನು ತಾಳಿದ ಕನ್ನಡ ಕಾವ್ಯ ಇಲ್ಲಿಯವರೆಗೆ ಆಧುನಿಕವಾಗಿ ಬೆಳೆಯಿತು. ಅದು ನವ್ಯವಾಗುವುದೂ ಒಂದು ಬಗೆಯ ಚಂದ. ಜಾಗತಿಕ ವಿದ್ಯಮಾನಗಳಲ್ಲಿ ಮೂರನೆಯ ಮಹಾಯುದ್ಧದ ಚಿಹ್ನೆಗಳು ಕಾಣಿಸಿಕೊಂಡಿವೆ. ಭಾರತದಲ್ಲಿ ಸಹ ಪರಿಸ್ಥಿತಿ ಮಾರ್ಪಟ್ಟಿದೆ. ವ್ಯಕ್ತಿ -ಸಮಾಜಗಳ ಸಮನ್ವಯವನ್ನು ಕಂಡುಕೊಂಡು ಜಗತ್ತಿಗೇ ನಾವು ತೋರಿಸಿಕೊಡಬೇಕಾಗುತ್ತದೆ. ಈ ನವೀನ ಪರಿಸ್ಥಿತಿಯೂ ಒಂದು ಪರಂಪರೆಯ ಕೃತಕೃತ್ಯತೆಯೂ ನವ್ಯಕಾವ್ಯದ ಆಗತ್ಯವನ್ನು ಸೂಚಿಸುತ್ತದೆ" (ಅನಿವಾರ್ಯ ಪು.೨೮-೨೯)

ನವ್ಯ ಕಾವ್ಯದ ಆಗತ್ಯವನ್ನು ಪ್ರಸ್ತಾಪಿಸಿದ ಗೋಕಾಕರು ಕನ್ನಡದಲ್ಲಿ ತಾವೇ ಕೆಲವು ಪ್ರಯೋಗಗಳನ್ನು ಮಾಡಿದರು, ನವ್ಯ ಕಾವ್ಯದ ಲಕ್ಷಣಗಳುಳ್ಳ ಕನ್ನಡ ಕವಿತೆಗಳನ್ನು 'ನವ್ಯ ಧ್ವನಿ' ಎಂಬ ಹೆಸರಿನಲ್ಲಿ ಚೆನ್ನವೀರಕಣವಿಯವರೊಂದಿಗೆ ಸಂಪಾದಿಸಿ ಪ್ರಕಟಿಸಿದರು. ಆದರೆ 'ನವ್ಯಕಾವ್ಯ'ಎಂಬ ಹೆಸರಿನಲ್ಲಿ ಗೋಕಾಕರು ಬದಲಾಯಿಸಿದ್ದು ಅವರೆಗಿನ ಕಾವ್ಯದ ಹೊರರೂಪವನ್ನು ಮಾತ್ರ. ಆದರೆ ಕಾವ್ಯಧೋರಣೆಗೆ ಸಂಬಂಧಿಸಿದಂತೆ ಗೋಕಾಕರು ನವೋದಯದವರಿಗಿಂತ ತೀರಾ ಭಿನ್ನವಾಗೇನೂ ನಿಲ್ಲಲಿಲ್ಲ.

4.2.3 ನವ್ಯ ಸಾಹಿತ್ಯದ ಆರಂಭ ಮತ್ತು ಬೆಳವಣಿಗೆ

ಕನ್ನಡದಲ್ಲಿ ನವ್ಯಕಾವ್ಯವನ್ನು ಅದರ ಇಡಿಯಾದ ಸ್ವರೂಪದಲ್ಲಿ ಆರಂಭಿಸಿ 'ಕನ್ನಡ ನವ್ಯ ಸಾಹಿತ್ಯದ ಹರಿಕಾರ' ಎಂದು ಹೆಸರು ಪಡೆದವರು ಕವಿ. ಎಂ.ಗೋಪಾಲಕೃಷ್ಣ ಅಡಿಗ 1952ರಲ್ಲಿ ಪ್ರಕಟವಾದ ತಮ್ಮ 'ನಡೆದು ಬಂದ ದಾರಿ' ಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ ನವ್ಯಕಾವ್ಯದ ಅನಿವಾರ್ಯತೆಯನ್ನು ಕುರಿತು ಬಹಳ ಖಚಿತವಾದ ಮಾತುಗಳನ್ನು ಬರೆದರು. ಆ ಮಾತುಗಳನ್ನು ದೀರ್ಘವಾಗಿಯೇ ಉಲ್ಲೇಖಿಸುವುದು ಉಚಿತವಾಗಿ ಕಾಣುತ್ತದೆ.

"ಆಧುನಿಕ ಕನ್ನಡ ಕಾವ್ಯದಲ್ಲಿ ಒಂದು ಘಟ್ಟ ಕಳೆದು ಈಗ ಇನ್ನೊಂದು ಘಟ್ಟ ಮೊದಲಾಗುತ್ತಿದೆ. ಕಾವ್ಯರೂಪದಲ್ಲಿ ಬದಲಾವಣೆ ಆಗಲೇಬೇಕಾದ ಕಾಲ ಆಗಲೇ ಬಂದು ಬಿಟ್ಟಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ

ಬರುವ ತನಕ ಇದ್ದ ವಾತಾವರಣ ಈಗ ಸಮೂಲ ಪರಿವರ್ತನೆಗೊಂಡಿದೆ. ಸ್ವಾತಂತ್ರ್ಯ ಸಂಗ್ರಾಮದ ಉತ್ಸಾಹ, ಉದ್ವೇಗ, ಆದರ್ಶಪರವಶತೆಯ ಹಾರಾಟ ಮುಗಿದು ಈಗ ನಮ್ಮ ಮನಸ್ಸು ಮತ್ತೇ ನೆಲಕ್ಕಿಳಿದಿದೆ. ಮೋಡವಾಗಿ ಮೇಲೇರಿದ ಮನಸ್ಸು ಮಳೆಯಾಗಿ ಬಿದ್ದು ಮತ್ತೆ ಹಳ್ಳಕೊಳ್ಳಗಳಲ್ಲಿ ತುಂಬಿಕೊಂಡಿದೆ. ತಳದಲ್ಲಿ ಕೂತಿದ್ದ ಕೊಳೆ ಕಸರಾಡಿಯೆಲ್ಲ ಈಗ ಮೇಲೆದ್ದು ಬಂದು ಕನ್ನಡಿಯಂಥ ನೀರು ಕಲಕಿದೆ. ಹೊಸ ಆದರ್ಶಕ್ಕಾಗಿ ಹೊಸ ಕನಸಿಗಾಗಿ ದೇಶದ ಮನಸ್ಸು ಹಸಿದು ಕಾಯುತ್ತದೆ. ಇಂಥ ವಾತಾವರಣ ಸುತ್ತುಮುತ್ತಲೂ ಇರುವಾಗ, ಜೀವನಾಡಿಯಾದ ಕಾವ್ಯವು ಪರಿವರ್ತನೆಗೊಳ್ಳುವುದು ಸಹಜ. ಗಾಂದೀಯುಗದಲ್ಲಿ ಬರೆದ ರೀತಿಯಲ್ಲೇ ಇನ್ನೂ ಬರೆದರೆ ಬಹುಶಃ ಅದು ಕಾವ್ಯಾಭಾಸವಾಗುತ್ತದೆ. ಇಲ್ಲವೇ ಸತ್ಯಹೀನ ಕಾರ್ಯವಾಗುತ್ತದೆ. ಚರ್ವಿತಚರ್ವಣವಾಗುತ್ತದೆ. ಆದ ಕಾರಣ ಈಗ ಕಾಣುತ್ತಿರುವ ಹೊಸಮನೋಧರ್ಮವನ್ನು ವ್ಯಕ್ತಪಡಿಸಲು ಹೊಸನಾರಿಗೆ, ಹೊಸ ನುಡಿಕಟ್ಟು, ರೂಪುಗೊಳ್ಳಬೇಕಾಗಿದೆ. ಈಗ ಬರೆಯುತ್ತಿರುವ ಕವಿಗಳೆಲ್ಲ ಈ ಕುರಿತು ಯೋತನೆ ಮಾಡಬೇಕಾದುದು ಅನಿವಾರ್ಯ, ಹೊಸ ಹೊಸತಾಗಿ ಬರೆಯುತ್ತಿರುವ ತರುಣ ಕವಿಗಳಂತೂ ಈ ಸಮಸ್ಯೆಯನ್ನು ಎದುರಿಸದೆ ಗತ್ಯಂತರವಿಲ್ಲ. ನಮ್ಮಹಿರಿಯ ಕವಿಗಳ ದಾರಿಯಲ್ಲಿ ನಡೆಯುವುದರಿಂದಲೂ ಅಷ್ಟು ಕವಿತೆ ಬಂದಿತ್ತು. ಆದರೆ ಅದಕ್ಕ ಜೀವಕೊಡುವ ಸತ್ಯವಾಗಲೀ, ಹೊಸ ಸಮಾಜದ ವಾಣಿಯಾಗುವ ಸಾಮರ್ಥ್ಯವಾಗಲೀ ಖಂಡಿತ ಬರಲಾರದು. ನಮ್ಮ ಹಿರಿಯ ಕವಿಗಳು ಆಧುನಿಕ ಕಾವ್ಯಕ್ಕೆ ತಕ್ಕ ಬಾಷೆಯನ್ನು ಸಿದ್ಧಗೊಳಿಸಿ ಅದರಲ್ಲಿ ಅಮೋಘವಾದ ಕೆಲಸವನ್ನು ಮಾಡಿದ್ದಾರೆ. ಆದರೆ ಅದೇ ರೀತಿ ಅಮೋಘವಾದ ಕೆಲಸವನ್ನು ಹೊಸ ತಲೆಮಾರಿನವರು ಮಾಡಿತೋರಿಸಬೇಕಾಗಿದೆ".

"ಗತಕಾಲದ ಭಾಷೆ ಭಾವವನ್ನು ಕೊಲ್ಲುತ್ತದೆ. ಮನಸ್ಸನ್ನು ಮಂಕಾಗಿಸುತ್ತದೆ. ಅರ್ಥಕ್ಕಿಂತ ಶಬ್ದಗಳ ಹಾರಾಟವೇ ಹೆಚ್ಚು ಅರ್ಥ ಮರೆಯಾಗುತ್ತದೆ. ಸಂಕೇತ ಮೂಲರೂಪವನ್ನು ಮರೆಸುತ್ತದೆ. ಉತ್ಸವಮೂರ್ತಿ ತಾನೇ ಮೂಲವಿಗ್ರಹವೆಂದು ವಿಜೃಂಭಿಸುತ್ತದೆ. ಆದಕಾರಣವೇ ಹೊಸ ಜೀವನ ಭಾವನೆಗಳಿಗೆ ತಕ್ಕ ರೀತಿ ರೂಪುಗೊಳ್ಳಬೇಕಾದ ಕಾಲ ಈಗ ಸಾಹಿತಿಗಳನ್ನು ಎದುರಿಸಿ ನಿಂತಿದೆ. ಹತ್ತೊಂಬತ್ತನೆಯ ಶತಮಾನದ ಆಂಗ್ಲಕವಿಗಳಾದ ವರ್ಡ್ಸ್‌ವರ್ತ್, ಷೆಲ್ಲಿ, ಕೀಟ್ಸ್ ಮುಂತಾದ ರೊಮ್ಯಾಂಟಿಕ್ ಕವಿಗಳಿಂದ ಪ್ರೇರಿತವಾದ ನಮ್ಮ ಆಧುನಿಕ ಕನ್ನಡ ಕಾವ್ಯ ಆ ಸಂಪ್ರದಾಯದಲ್ಲಿ ತಾನು ಮಾಡಬಹುದಾದಷ್ಟು ಕೆಲಸವನ್ನು ಮಾಡಿ ಮುಗಿಸಿದೆ. ಆ ಸಂಪ್ರದಾಯದ ಸತ್ಯ ಈಗ ತೀರಿದೆ. ಅದಕ್ಕೆ ಅವನತಿ ಬಂದಿದೆ. ಅದರ ದೋಷಗಳೆಲ್ಲ ಈಗ ಎದ್ದು ಕಾಣಿಸುತ್ತದೆ. ನೆಲದ ಮೇಲೆ ಕಾಲೂರಿ ನಿಂತೇ ನಕ್ಷತ್ರವನ್ನು ತುಡುಕುತ್ತಿದ್ದುದು ಈಗ ನೆಲಬಿಟ್ಟು ಮೇಲೇರಿ ವೇದಾಂತದ ಮಂಜಿನಲ್ಲಿ ಮರೆಯಾಗಿ ಹೋಗುತ್ತಿದೆ. ಶಬ್ದಗಳು ಅರ್ಥದ ಸ್ಥಾನವನ್ನು ಆಕ್ರಮಿಸುತ್ತಿವೆ. ಪ್ರತಿಯೊಂದು ಭಾವವೂ, ಅನುಭವವೂ ಅತಿ ಸರಳವಾಗಿ ಸತ್ಯದಿಂದ ದೂರದೂರ ಹೋಗುತ್ತಿದೆ."

"ಇಂಥ ಕಾಲದಲ್ಲಿ ಕಾರ್ಯಕ್ಕೆ ಮತ್ತೆ ವಾಸ್ತವದ ರಕ್ತದಾನ ನಡೆಯಬೇಕು. ಕಾರ್ಯದಲ್ಲಿ ಮತ್ತೆ ಮಣ್ಣಿನ ವಾಸನೆ ಹೊಡೆಯಬೇಕು. ಈ ಜಗತ್ತನ್ನು ಬಿಟ್ಟು ಕಾವ್ಯ ಬದುಕಲಾರದು ಎಂಬುದನ್ನು ಮತ್ತೇ ಕವಿಗಳು ಅರಿಯಬೇಕಾಗುತ್ತದೆ. ನಿಜವಾದ ಕವಿ ಈ ಮಾತನ್ನು ಎಂದೂ ಮರೆಯುವುದಿಲ್ಲ. ಮರೆಯಲಾರ. ಆದರೆ ಕೇವಲ ವಾಸವ ಇಂದ್ರಿಯಗಮ್ಯವಾದದ್ದು ಮಾತ್ರವೇ ಕಾವ್ಯದ ವಸ್ತವಾಗಿರಲಾರದು. ಈ ಜಗತ್ತಿನಲ್ಲಿ ನಮ್ಮ ಸುತ್ತ ಕಾಣುವ ವಸ್ತುಗಳು ಎಷ್ಟು ನಿಜವೋ ಆ ವಸ್ತುಗಳ ವಿಷಯದಲ್ಲಿ ನಮ್ಮ ಮನಸ್ಸಿನಲ್ಲಿ ಹುಟ್ಟುವ ಭಾವಗಳೂ ಅಷ್ಟೇ ನಿಜ. ಪಂಚ ಬೌತಿಕವಾದುದು ಕಾವ್ಯಕ್ಕೆ ಎಷ್ಟು ಅಗತ್ಯವೋ ಅಷ್ಟೇ ನಮ್ಮ ಆದರ್ಶವೂ, ಕಲ್ಪನೆಯೂ, ಕನಸೂ ಅಗತ್ಯ. ಈ ಎರಡು ಸೇರಿ ಆದ ಪಾಕವೇ ಕಾವ್ಯ. ವಿದ್ಯಮಾನಗಳ ಅನುಭವಗಳ ಆದರ್ಶಸ್ವರೂಪದ ಕನಸಿನ ಒಂದಂಶ ಸೇರದೇ ಇದ್ದದ್ದು ಕಾವ್ಯವಾಗಲೀ ಸಾಹಿತ್ಯವಾಗಲೀ ಆಗಲಾರದು. ಈ ದೃಷ್ಟಿಯಿಂದ ಆಧುನಿಕ ಇಂಗ್ಲಿಷ್ ಕಾವ್ಯದ ಪ್ರಸಿದ್ಧ ಕವಿಗಳಾದ ಎಲಿಯಟ್, ಆಡೆನ್, ಮುಂತಾದವರಿಂದ ನಾವು ಇನ್ನು ಮುಂದೆ ಸ್ಫೂರ್ತಿ ಪಡೆಯಬೇಕಾದುದು ಅತ್ಯಗತ್ಯ. ಆದರೆ ನಮ್ಮ ಹೊಸ ಕವಿತೆ ಇಂಗ್ಲಿಷ್ ಕವಿಗಳ ಕಾವ್ಯದಂತೆಯೇ ರೂಪುಗೊಳ್ಳಲಾರದು. ಆ ಕವಿಗಳ ಅಂಧಾನುಕರಣೆಯಿಂದ ಹೊಸತನ ಬಂದೀತು. ಆದರೆ ಅದು ಕಾವ್ಯವಾಗಲಾರದು. ನಮ್ಮ ಹೊಸಕಾವ್ಯ

ನಮ್ಮ ನಾಡಿನ ಹೊಸ ವಾತಾವರಣಕ್ಕೂ ನಮ್ಮ ಜೀವನಕ್ಕೂ ನಮ್ಮ ಹೊಸ ಭಾಷೆಯ ಪರಿಪಾಕದ ಪರಿಮಿತಿಗೂ ಒಳಪಟ್ಟಿದೆ ಎಂಬುದನ್ನು ನಾವು ಮರೆತಕ್ಕದ್ದಲ್ಲ."

ಅಡಿಗರ ಈ ಮಾತುಗಳನ್ನು ಇಷ್ಟು ದೀರ್ಘವಾಗಿ ಉಲ್ಲೇಖಿಸಿದ್ದೇಕೆಂದರೆ, ಈ ಮಾತುಗಳಲ್ಲೇ ನವ್ಯ ಸಾಹಿತ್ಯದ ದಿಕ್ಕು ಧೋರಣೆಗಳು ಸ್ಪಷ್ಟವಾಗಿ ನಿರೂಪಿತವಾಗಿದೆ. ಅದುವರೆಗೆ ಅಡಿಗರು 'ನವೋದಯ' ಕಾವ್ಯ ವಿಧಾನದಲ್ಲೇ "ಭಾವ ತರಂಗ" ಮತ್ತು "ಕಟ್ಟುವೆವು ನಾವು" ಎಂಬ ಎರಡು ಒಳ್ಳೆಯ ಕವನ ಸಂಗ್ರಹವನ್ನು ಪ್ರಕಟಿಸಿ ಆ ವಿಧಾನದ ಸತ್ವಶಾಲಿ ಕವಿಗಳಲ್ಲೊಬ್ಬರಾಗಿ ಹೆಸರು ಗಳಿಸಿದ್ದರು. ಆದರೆ ಆ ದಿನಗಳಲ್ಲೇ ಅಡಿಗರಿಗೆ

"ಅನ್ಯರೊರೆದುದನೆ, ಬರೆದುದನೆ ನಾ ಬರೆಬರೆದೆ
ಬಿನ್ನವಾಗಿದೆ ಮನವು;ಬಗೆಯೊಳಗನೇ ತೆರೆದು
ನನ್ನ ನುಡಿಯೊಳೆ ಬಣ್ಣ ಬಣ್ಣದಲಿ ಬಣ್ಣಿಸುವ
ಪನ್ನತಿಕೆ ಬರುವತನ ನನ್ನ ಬಾಳಿದು ನರಕ"
(ನನ್ನ ನುಡಿ) ಎಂಬ ಕೊರಗು ಇದ್ದೇ ಇತ್ತು.

1952ರ ಆಗಸ್ಟ್ ತಿಂಗಳಲ್ಲಿ ಅಡಿಗರ "ಕೃಷ್ಣನ ಕೊಳಲು" ಮತ್ತು ಸೆಪ್ಟೆಂಬರ್ ತಿಂಗಳಲ್ಲಿ "ಹಿಮಗಿರಿಯ ಕಂದರ" ಪ್ರಕಟವಾದವು. ಸತ್ಯ ಸಾಹಿತ್ಯ ಸ್ಪಷ್ಟವಾಗಿ ಪ್ರಕಟವಾದುದು ಅವುಗಳಲ್ಲೇ. ಆದಾದ ನಂತರ ಅವರ 'ಚಂಡ ಮದ್ದಳೆ', 'ಭೂಮಿಗೀತ', 'ವರ್ಧಮಾನ', 'ಇದನ್ನು ಬಯಸಿರಲಿಲ್ಲ' ಮುಂತಾದ ಕವನ ಸಂಕಲನಗಳು ಪ್ರಕಟಗೊಂಡವು. ಅಡಿಗರು ಆಗ ತಮ್ಮ ಓರಗೆಯ ಮತ್ತು ಅನೇಕ ಕಿರಿಯ ಕವಿಗಳ ಮೇಲೆ ತುಂಬಾ ಪ್ರಭಾವ ಬೀರಿದರು. ಲಂಕೇಶ್ ಅವರು ಅಡಿಗರನ್ನು 'ಒಂದು ಜನಾಂಗದ ಕಣ್ಣು ತೆರೆಸಿದ ಕವಿ' ಎಂದು ಕರೆದರು. ಅನಂತರ ನವ್ಯಕಾವ್ಯದ ಹುಲುಸು ಬೆಳೆ ಆರಂಭಗೊಂಡಿತು.

ನವ್ಯಕಾವ್ಯದ ಆರಂಭದಲ್ಲಿ ಅಡಿಗರೊಂದಿಗೇ ಕೇಳಿಬಂದ ಮತ್ತೊಂದು ಹೆಸರು ಬಿ.ಸಿ.ರಾಮಚಂದ್ರಶರ್ಮ ಅವರದು. 'ಏಳು ಸುತ್ತಿನ ಕೋಟೆ', ' ಬುವಿನೀಡಿದ ಸ್ಫೂರ್ತಿ 'ಹೇಸರಗತ್ತೆ'ಮೊದಲಾದ ನವ್ಯಕಾವ್ಯ ಸಂಕಲನಗಳನ್ನು ಪ್ರಕಟಿಸಿದರು, ಲೈಂಗಿಕ ವಿಷಯಗಳನ್ನು ಕಾವ್ಯ ವಸ್ತುವನ್ನಾಗಿ ಪ್ರಯೋಗಿಸಿದ ವೈಶಿಷ್ಟ್ಯಶರ್ಮರದು. ಹೆಚ್.ಎಂ. ಚನ್ನಯ್ಯ ಅವರ 'ಕಾಮಿ' ಮತ್ತು 'ಆಮೆ'ಕವನ ಸಂಕಲನಗಳಲ್ಲೂ ಲೈಂಗಿಕ ವಿಷಯಗಳೇ ವಸ್ತುವಾಗಿರುವ ಹಲವು ಕವನಗಳಿವೆ. ಗೋಕಾಕರ ಪ್ರಭಾವಕ್ಕೆ ಒಳಗಾಗಿಯೂ ತಮ್ಮದೇ ಸ್ವಂತ ದನಿಯನ್ನು ರೂಢಿಸಿಕೊಂಡ ಕವಿಗಳಲ್ಲಿ ಗಂಗಾಧರ ಚಿತ್ತಾಲ, ಶಂಕರ ಮೊಕಾಶಿಪುಣೇಕರ, ಸು.ರಂ.ಎಕ್ಕುಂಡಿ, ಅಕಬರ ಅಲಿ ಮುಂತಾದವರಿದ್ದಾರೆ. ಗಂಗಾಧರ ಚಿತ್ತಾಲರ ಮೊದಲನೇ ಕವನ ಸಂಕಲನ 'ಕಾಲದ ಕತೆ'ಯಲ್ಲಿ ಎರಡನೇ ಮಹಾಯುದ್ಧದಿಂದಾಗಿ ಮಾನವ ಅನುಭವಿಸಿದ ಹತಾಶೆ, ನೋವು, ಸಂಕಟ - ಈ ಭಾವನೆಗಳ ವಾಸ್ತವ ಚಿತ್ರಣವಿದೆ. 'ಮನುಕುಲದ ಹಾಡು', 'ಹರಿವ ನೀರಿದು' ಸಂಕಲನಗಳಲ್ಲಿ ಮನುಷ್ಯನ ಬದುಕು ಮತ್ತು ಸಾವಿನ ಸಂಬಂಧದ ಬಗೆಗಿನ ಚಿಂತನೆಯಿರುವ ಪ್ರತಿಮೆಗಳಿವೆ.

ನವ್ಯಪಂಥದ ಧೋರಣೆಗಳ ಜೊತೆಗೆ ಭಾವಗೀತೆಗಳ ಲಯವನ್ನು ಇಟ್ಟುಕೊಂಡು ಕಾವ್ಯ ಬರೆದವರು ಸು.ರಂ. ಎಕ್ಕುಂಡಿ ಅವರು ಕಥನ ಕವನಗಳ ರಚನೆಯಲ್ಲಿ ಅವರದು ವಿಶೇಷವಾದ ಸಾಧನೆ. 'ಹಾವಾಡಿಗರ ಹುಡುಗ', 'ಮತ್ಸ್ಯಗಂಧಿ', 'ಬಕುಳದ ಹೂವುಗಳು' ಮೊದಲಾದ ಕವನ ಸಂಕಲನಗಳನ್ನು ಅವರು ಪ್ರಕಟಿಸಿದ್ದಾರೆ. ವಿ.ಜಿ.ಭಟ್ಟ ಮತ್ತು ಪೇಜಾವರ ಸದಾಶಿವರಾಯ ಅವರೂ ಸಹ ನವ್ಯ ಕವಿತೆಗಳ ರಚನೆಯಲ್ಲಿ ವಿಶೇಷ ಸಾಧನೆ ಮಾಡಿದರು. ನವ್ಯ ಮಾರ್ಗದ ಗದ್ಯದಲ್ಲಿ ಹೆಸರು ಮಾಡಿರುವ ಪಿ.ಲಂಕೇಶ್, ಯು.ಆರ್.ಅನಂತಮೂರ್ತಿ, ಕೆ.ಪಿ.ಪೂರ್ಣಚಂದ್ರತೇಜಸ್ವಿ ಅವರುಗಳು ಒಳ್ಳೆಯ ಕವನಗಳನ್ನು ಬರೆದಿದ್ದಾರೆ. ಯು.ಆರ್.ಅನಂತಮೂರ್ತಿ ಅವರ ಭಿಕ್ಷುಕರು, ಸಿಳ್ಳೇಕ್ಯಾತರ ಹುಡುಗಿ, ರಾಜನ ಹೊಸವರ್ಷದ ಬೇಡಿಕೆ, ಒಳ್ಳೆಯ ರಚನೆಗಳು. ಪಿ.ಲಂಕೇಶ್ ಅವರು 'ಬಿಚ್ಚು' 'ತಲೆಮಾರು' ಮುಂತಾದ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ 'ಅವ್ವ'ಕನ್ನಡದ ಅತ್ಯುತ್ತಮ ಕವಿತೆಗಳಲ್ಲೊಂದು ಎಂದು

ಹೆಸರುಗಳಿಸಿದೆ. ತೇಜಸ್ವಿ 'ಬೃಹನ್ನಳೆ ಸೋಮುನಿನ ಸ್ವಗತ ಲಹರಿ' ಸಂಕಲನವನ್ನು ಪ್ರಕಟಿಸಿದ ನಂತರ ಗದ್ಯಬರವಣಿಗೆಯ ಕಡೆಗೆ ಹೆಚ್ಚು ತೊಡಗಿಸಿಗೊಂಡರು.

ಸಮಕಾಲೀನತೆ, ವಿಡಂಬನೆಯ ಮಾತುಗಾರಿಕೆ, ಶಬ್ದಗಳೊಡನೆ ಆಟವಾಡುವ ವಿಶಿಷ್ಟ ಚಮತ್ಕಾರ, ವ್ಯಂಗದ ಛಾಟುಗಳಿರುವ ಪದ್ಯಗಳನ್ನು ಬರೆಯುವುದರಲ್ಲಿ ಚಂದ್ರಶೇಖರ ಪಾಟೀಲರು ಹೆಸರು ಗಳಿಸಿದರು. ಅವರು 'ಬಾನುಲಿ' 'ಮಧ್ಯಬಿಂದು' 'ಗಾಂಧೀಸ್ಮರಣೆ' 'ಓ ಎನ್ನ ದೇಶ ಬಾಂಧವರೇ' ಮುಂತಾದ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ.

4.2.4 ನವ್ಯ ಸಾಹಿತ್ಯದ ಪ್ರಮುಖ ಲಕ್ಷಣಗಳು

ನವ್ಯಸಾಹಿತ್ಯವು ಸಮಾಜಿಕವಾಗಿ ನಡೆಸಿದ ಯಾವುದೇ ತಾತ್ತ್ವಿಕ ಕ್ರಾಂತಿಯಲ್ಲ. ಅದು ಒಂದು ವಿನೂತನ ತಾಂತ್ರಿಕ ವಿಧಾನವೆಂದು ಹೇಳಬಹುದಾಗಿದೆ. ಅಂತೆಯೆ ಅದು ಆಧ್ಯಾತ್ಮಿಕವಾದದ ಇಲ್ಲವೇ ಸಮತಾವಾದದ ವಿರುದ್ಧ ಎಬ್ಬಿಸಿದ ಬಂಡಾಯ ಕೂಡ ಅಲ್ಲವೆಂಬುದಾಗಿ ಗುರುತಿಸಬಹುದು. ಆದರೆ ಅದು ಪಕ್ಕಾ ಅನುಭವಕ್ಕೆ ಭಾಷೆಯಲ್ಲಿ ಅದರ ಶೋಧನೆಗೆ ಸಾಕ್ಷಾತ್ಕಾರಕ್ಕೆ ಅದು ನೀಡಿದ ಮಹತ್ವ ಗಮನಾರ್ಹ. ಬಾವುಕತೆಯ ಭಾಗದಲ್ಲಿ ಭೌದ್ಧಿಕತೆಯನ್ನು, ಪ್ರಜ್ಞೆಯ ಆಳ ಪಾತಾಳಗಳನ್ನು ಬೆದಕಲು ಉದ್ದೇಶಿಸಿ, ತನ್ನನ್ನು ತಾನು ವಿಶ್ಲೇಷಣೆ ವಿಮರ್ಶೆ ಗೊಳಪಡಿಸುವ, ಎಲ್ಲವನ್ನು ಮಡಿಮೈಲಿಗೆಯಿಲ್ಲದೆ ಪ್ರಶ್ನಿಸುವ ಆರೋಗ್ಯಪೂರ್ಣ ಜೀವನದೃಷ್ಟಿ ಬೆಳೆಸಿದುದ್ದಾಗಿದೆ. ಆದರೆ ಅದು ಭಾಷೆ ಮತ್ತು ಛಂದೋರೂಪಗಳಲ್ಲಿ ಬಗೆಬಗೆಯ ಪ್ರಯೋಗ ಮಾಡಿದ್ದು ಕಂಡುಬರುತ್ತದೆ. ಆ ಛಂದೋರೂಪಗಳನ್ನು ಮುಕ್ತ ಛಂದಸ್ಸು ಎಂದು ಕರೆದಿದ್ದಾರೆ. ತಂತ್ರದಲ್ಲಿ ಪ್ರತಿಮಾನಿಷ್ಠತೆ, ಸಾಂಕೇತಿಕತೆಗಳನ್ನು ಅಳವಡಿಸಿಕೊಳ್ಳುವ ಬಗೆಯಲ್ಲಿಯೂ ಹೊಸತನ ಕಾಣಿಸುತ್ತದೆ. ಹಾಗಾಗಿ ಈ ಕುರಿತು ವಿ.ಕೃ.ಗೋಕಾಕರು ಹೇಳುವ ಪ್ರಕಾರ 'ನವ್ಯಸಾಹಿತ್ಯ ಮಾರ್ಗ ಒಂದು ತಂತ್ರದ ವಿಶಿಷ್ಟತೆಯಲ್ಲಿದೆಯೆ ಹೊರತು ಯಾವುದೊಂದು ವಿಶಿಷ್ಟ ಜೀವನದೃಷ್ಟಿಯಲ್ಲಿಲ್ಲ' ಎಂದು ಹೇಳಿರುವುದು ತುಂಬ ಅರ್ಥಪೂರ್ಣ. ಅದು ವ್ಯಕ್ತಿಯ ಪ್ರಜ್ಞಾಕೇಂದ್ರದಿಂದ ಅನುಭವಗಳಿಗೆ ಮೌಲ್ಯಧಾರಣೆ ಮಾಡಿಸುವ ಪ್ರಕ್ರಿಯೆ ನವ್ಯಕೃತಿಗಳಲ್ಲಿ ಗಮನಾರ್ಹ. ಅದರ ಪ್ರಮುಖ ಲಕ್ಷಣಗಳನ್ನು ನಾವು ಹೀಗೆ ಗಮನಿಸಬಹುದು.

- ಭಾವಾನಾತ್ಮಕ ಒತ್ತಡ, ಬೌದ್ಧಿಕ ಅರಿವು, ಬದುಕಿನ ನಿಷ್ಠುರ ವಾಸ್ತವನ್ನು ಮೀರುವ ಕನಸುಗಾರಿಕೆ.
- ವ್ಯಕ್ತಿನಿಷ್ಠ ಪ್ರಧಾನತೆಯಿಂದ ಕೊಂಡಿದ್ದು, ಆ ಮೂಲಕ ಸಮಾಜದ ಧೋರಣೆ ಮತ್ತು ನಿಲುವು ಏನೆಂಬುದನ್ನು ಮೌಲ್ಯಕರಿಸುವುದು.
- ಭಾಷೆಯೆ ಸಾಹಿತ್ಯ ಎಂಬಷ್ಟರ ಮಟ್ಟಿಗೆ ಅದರ ಅತಿರೇಖದ ಮನೋಧರ್ಮವಿದ್ದು, ಅನುಭವವನ್ನು ಭಾಷೆಯ ಸೂಕ್ಷ್ಮಲಯಗಳಲ್ಲಿ ಸಂಕೀರ್ಣ ಗೊಳಿಸಿ ತೋರಿಸುವ, ವಿಶ್ಲೇಷಿಸುವ ಪ್ರಯತ್ನವಿದೆ.
- ಪ್ರತಿಮಾ, ಸಾಂಕೇತಿಕತೆಯ ನೆಲೆಯಲ್ಲಿ ಅನುಭವವನ್ನು ರೂಪಿಸಿ ಮೌಲ್ಯೀಕರಿಸುವ ಆಸ್ಥೆ ಎದ್ದು ಕಂಡುಬರುವುದು.
- ಮನುಷ್ಯನ ಅನನ್ಯತೆಯನ್ನು ಗೌರವಿಸವುದಾದರೂ ಮನುಷ್ಯ ಚೈತನ್ಯದ ಅಸೀಮತೆ ಅಮೇಯತೆಗಳನ್ನು ನಂಬುವುದಿಲ್ಲ.
- ಏಕಾಂಗಿತನ, ಆತ್ಮನಿಷ್ಠತೆ, ದ್ವಂದ್ವತೆ, ನಿರಾಶೆ, ಮಾನಸಿಕ ಸಂಘರ್ಷ, ಭಯ ಮೊದಲಾದ ವಾಸ್ತವದ ಸಂಕೀರ್ಣ ಭಾವನೆಗಳನ್ನು ದುಡಿಸಿಕೊಳ್ಳುವುದುನ್ನು ತೋರಿಸುತ್ತದೆ.
- ವಾಸ್ತವದ ತೀವ್ರ ಹಂಬಲದ ಹಿನ್ನೆಲೆಯಲ್ಲಿ ನಾಸ್ತಿಕತೆಯನ್ನು ಬಿತ್ತುವ ಕಾಳಜಿಯನ್ನು ಕಾಣುತ್ತೇವೆ.

- ನೈತಿಕತೆಯನ್ನು ಕುಟುಂಬಗ ಒಳ ಮತ್ತು ಹೊರ ಆವರಣಗಳೆರಡಲ್ಲೂ ಮೌಲ್ಯೀಕರಿಸುವ ಪ್ರಯತ್ನ ಮಾಡಲಾಗುತ್ತದೆ.
- ಮನೋವೈಜ್ಞಾನಿಕತೆ, ಅಸ್ತಿತ್ವವಾದ ನಾಸ್ತಿಕವಾದ, ಮೊದಲಾದ ನೆಲೆಗಳಲ್ಲಿ ಬದುಕನ್ನು ಪ್ರಯೋಗಶೀಲತೆಯಿಂದ ಗುರುತಿಸುವ ಮತ್ತು ಮೌಲ್ಯೀಕರಿಸುವುದನ್ನು ಮಾಡುತ್ತದೆ.

ಹೀಗೆ ಅದರ ಇನ್ನು ಮೊದಲಾದ ಪ್ರಮುಖ ಲಕ್ಷಣಗಳನ್ನು ಹೊಂದಿದೆ. ಆದರೆ ತೇಜಸ್ವಿ, ಪಾಟೀಲ ಮತ್ತು ಲಂಕೇಶರು ನವ್ಯಮಾರ್ಗದ ಮಿತಿಗಳನ್ನು ಕಂಡುಕೊಂಡು ಆ ಚೌಕಟ್ಟಿನಿಂದಾಚೆಗೆ ಹೊರಬರುವ ನಿರ್ಧಾರಮಾಡಿದರೂ ಕೂಡಾ ಒಂದು ಗಮರ್ನಾಹ ಬೆಳವಣಿಗೆ ಪಡೆದುಕೊಂಡಿತು.

ನವ್ಯ ಕವಿಗಳಲ್ಲಿ ಚಂದ್ರಶೇಖರ ಕಂಬಾರರದು ವಿಶಿಷ್ಟವಾದ ಪ್ರತಿಭೆ. ಜನಪದ ಭಾಷೆಯನ್ನು ಅತ್ಯಂತ ಸಹಜವಾಗಿ ನವ್ಯದ ಚೌಕಟ್ಟಿನ ಪದ್ಯಗಳಿಗೆ ದುಡಿಸಿಕೊಳ್ಳುವ ಇವರ ಪ್ರತಿಭೆ ಗಣ್ಯವಾದುದು. ಬೇಂದ್ರೆಯವರನ್ನು ಬಿಟ್ಟರೆ ಹೀಗೆ ಜನಪದ ಭಾಷೆ, ನುಡಿಗಟ್ಟು, ಆಶಯಗಳನ್ನು ಇಷ್ಟು ಸಮರ್ಥವಾಗಿ ಕಾವ್ಯದ ತೆಕ್ಕೆಗೆ ಎಳೆದುಕೊಂಡವರು ಇತರ ಭಾಷೆಗಳಲ್ಲಿಯೂ ಬಹಳ ಮಂದಿ ಇರಲಿಕ್ಕಿಲ್ಲ. 'ಹೇಳತೇನ ಕೇಳ', ತಕರಾರಿನವರು', 'ಹೇಳುತೇನ ಕೇಳ' , 'ಅಕ್ಕಕ್ಕು ಹಾಡುಗಳೇ' ಮೊದಲಾದವು ತುಂಬ ಪ್ರಮುಖವಾಗಿವೆ.

ಪದ್ಯ ಕಟ್ಟುವ ಕೌಶಲ್ಯದಲ್ಲಿ ಮನಸೆಳೆಯುವ ಮತ್ತೊಬ್ಬ ಕವಿ ಕೆ.ಎಸ್.ನಿಸಾರ್‌ಅಹಮದ್. ಅವರು 'ಮನಸ್ಸು ಗಾಂಧೀಬಜಾರ್' 'ನೆನೆದವರ ಮನದಲ್ಲಿ' 'ಸಂಜೆ ಐದರ ಮಳೆ' 'ಸುಮುಹೂರ್ತ' 'ನಾನೆಂಬ ಪರಕೀಯ' 'ಸ್ವಯಂ ಸೇವೆಯ ಗಳಿಗಳು' ಮೊದಲಾದ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಹಾಗೆಯೇ 'ಕಪ್ಪು ದೇವತೆ' ' ಕವನದಿಂದ ಖ್ಯಾತರಾದ ಸುಮತೀಂದ್ರ ನಾಡಿಗರು 'ನಿಮ್ಮ ಪ್ರೇಮ ಕುಮಾರಿಯ ಜಾತಕ' 'ಲೀಲಾ ರಾವ್ ಕವನಗಳು' ಎಂಬ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಹಾಗಯೇ ಕೆ.ವಿ.ತಿರಮಲೇಶ್, ಎಚ್.ಎಸ್.ಬಿಳಿಗಿರಿ. ಜಿ.ಎಸ್. ಸಿದ್ದಲಿಂಗಯ್ಯ, ಕ.ವೆಂ.ರಾಜಗೋಪಾಲ, ಶ್ರೀಕೃಷ್ಣ ಆಲನಹಳ್ಳಿ, ಅರವಿಂದ ನಾಡಕರ್ಣಿ, ಜಯಂತ ಕಾಯ್ಕಿಣಿ, ಸಿದ್ದಲಿಂಗ ಪಟ್ಟಣಶೆಟ್ಟಿ, ಗಿರಡ್ಡಿ ಗೋವಿಂದ ರಾಜ, ಚಂದ್ರಕಾಂತ ಕುಸನೂರ. ಎಚ್.ಎಸ್.ವೆಂಕಟೇಶ ಮೂರ್ತಿ ಮುಂತಾದವರು ನವ್ಯ ಕಾವ್ಯ ಸಂಕಲನಗಳನ್ನು ಪ್ರಗಟಿಸಿದ್ದಾರೆ. ಬಿ.ಆರ್.ಲಕ್ಷ್ಮಣರಾವ್ ಕಾವ್ಯದ ಗಾಂಭೀರ್ಯಕ್ಕೆ ತುಂಟುತನದಲೇಪ ಕೊಟ್ಟರೆ, ಎನ್.ಎಸ್.ಲಕ್ಷ್ಮೀನಾರಾಯಣಭಟ್ಟ ಅವರು ನವೋದಯದ ಲಯವನ್ನಿಟ್ಟು ಕೊಂಡು ಪದ್ಯ ಬರೆದಿದ್ದಾರೆ. ನವ್ಯಕವಿಗಳಲ್ಲಿ ವಿಶೇಷವಾಗಿ ಹೆಸರಿಸಬೇಕಾದ ಇನ್ನೊಬ್ಬರು ಎ.ಕೆ. ರಾಮಾನುಜನ್ 'ಹೊಕ್ಕುಳಲ್ಲಿ ಹೂವಿಲ್ಲ'ಸಂಕಲನದಿಂದ ಹೆಸರಾದ ಈ ಕವಿ ನಿರಲಂಕಾರಿಕ ಆಡುಮಾತಿನಲ್ಲಿ, ಗದ್ಯದಷ್ಟು ಸರಳವಾದ ಲಯವಿಲ್ಲದ ಭಾಷೆಯಲ್ಲಿ ಕಾವ್ಯದ ಸಾಧ್ಯತೆಗಳನ್ನು ತೋರಿಸಿಕೊಟ್ಟರು.

ನವೋದಯದ ಪ್ರಮುಖ ಕವಿಯೇ ಆಗಿದ್ದು ನವ್ಯದ ಕಡೆಗೆ ಹೊರಳಿದ ಮತ್ತೊಬ್ಬ ಕವಿ ಕೆ.ಎಸ್.ನರಸಿಂಹಸ್ವಾಮಿ ಅವರು. ಅವರಿಗೆ ಕೀರ್ತಿ, ಜನಪ್ರಿಯತೆಗಳನ್ನು ತಂದುಕೊಟ್ಟ ಸಂಕಲನ 'ಮೈಸೂರು ಮಲ್ಲಿಗೆ', 'ಉಂಗುರ, ಇರುವಂತಿಗೆ'. ಇವು ಅವರ 'ಶಿಲಾಲತೆ' ಯಿಂದಾಚೆಗಿನ ಸಂಕಲನಗಳ ಧಾಟಿ ನವ್ಯದ್ದು. ಅವರೇ ಮತ್ತೆ ಭಾವಗೀತಾತ್ಮಕ ಕವನಗಳನ್ನು ಬರೆದರು. ಜಿಎಸ್.ಶಿವರುದ್ರಪ್ಪ ಮತ್ತು ಚೆನ್ನವೀರಕಣವಿ ಅವರುಗಳ ಹೆಸರನ್ನು ಪ್ರತ್ಯೇಕವಾಗಿಯೇ ಹೆಸರಿಸಬೇಕು. ಅವರಿಬ್ಬರನ್ನೂ ನವೋದಯ ಮತ್ತು ನವ್ಯ ಎರಡೂ ಮಾರ್ಗಗಳನ್ನು ಅರಗಿಸಿಕೊಂಡಿರುವ ಸಮನ್ವಯ ಕವಿಗಳೆಂದೂ ಕೆಲವರು ಕರೆದರು. ಇಂಥದೇ ಧೋರಣೆಯ ಮತ್ತಿಬ್ಬರು ಕವಿಗಳೆಂದರೆ "ನಾಣ್ಯಯಾತ್ರೆ", "ಬರಿಕುಂಡಗಳೇ" "ಸಾಕು ಒಂದೇ ಸೂರಡಿ"ಯ ಸಂಕಲನಗಳ ಸುಜನಾ ಮತ್ತು "ತಾರಾಸಖ ಪ್ರಕೃತಿ", "ವರ್ತಮಾನ", "ಬೊಗಸೆ" ಸಂಕಲನಗಳನ್ನು ಪ್ರಗಟಿಸಿರುವ ಪಿ.ಪಿ.ಕೆ. ನವ್ಯ ಕಾವ್ಯದಲ್ಲಿ ಹೆಸರಿಸಬೇಕಾದ ಇನ್ನೂ ಹಲವಾರು ಹೆಸರುಗಳಿವೆ. ಹೀಗೆ ಹೆಸರಿದ್ದೇಕೆಂದರೆ ನವ್ಯ ಕಾವ್ಯದ ಮುಕ್ತ ಛಂದಸ್ಸು ಮತ್ತು ಧೋರಣೆಗಳು ಹಲವಾರು ಕವಿಗಳನ್ನು ಆಕರ್ಷಿಸಿದ್ದನ್ನು ಹೇಳುವುದಾಕ್ಕಾಗಿ.

ಪಿ.ಲಂಕೇಶ್ ಅವರು ಪ್ರಕಟಿಸಿದ ನವ್ಯಕವನಗಳ ಸಂಕಲನ 'ಅಕ್ಷರ ಹೊಸ ಕಾವ್ಯ'ದಲ್ಲಿ ನಳಿನಿ ದೇಶಪಾಂಡೆ ಎಂಬ ಕವಯಿತ್ರಿಯ ಎರಡು ಒಳ್ಳೆಯ ಕವನಗಳಿವೆ. 'ಸೀರೆಯಂಗಡಿಯಲ್ಲಿ ಮಾದರಿಗೆ ನಿಲ್ಲಿಸಿರುವ ಪ್ರತಿಮೆಗೆ'ಲ್ಯಾಂಬ್ರಟಾ-ವೆಸ್ಪಾ' ಇವುಗಳನ್ನು ಬರೆದವರು ಯಾರೆಂಬುದು ಇನ್ನೂ ಊಹೆಗಳಲ್ಲೇ ಉಳಿದಿವೆ.

4.2.5 ನವ್ಯ ಸಾಹಿತ್ಯದ ಇತರ ಪ್ರಕಾರಗಳು

ನವ್ಯ ಸಾಹಿತ್ಯದಲ್ಲಿ ಕಾವ್ಯವನ್ನು ಬಿಟ್ಟರೆ ಉಳಿದಂತೆ ಕೃಷಿ ನಡೆದುದ್ದು ನಾಟಕ, ಕಲೆ, ಕಾದಂಬರಿ ಮತ್ತು ವಿಮರ್ಶೆಯ ಕ್ಷೇತ್ರದಲ್ಲಿ.

ನಗರದ ಸುಶಿಕ್ಷಿತರೇ ಸೇರಿ ಕಟ್ಟಿಕೊಂಡ ಹವ್ಯಾಸಿ ನಾಟಕ ತಂಡಗಳು ನವ್ಯರ ನಾಟಕ ಬರವಣಿಗೆಗೆ ಪ್ರೋತ್ಸಾಹಕವಾದವು. ನವ್ಯ ನಾಟಕಕಾರರು ಜಗತ್ತಿನ ಬೇರೆಬೇರೆ ಭಾಗಗಳಲ್ಲಿ ಪ್ರಯೋಗಗೊಳ್ಳುವ ಬೇರೆ ಬೇರೆ ಬಗೆಯ ನಾಟಕಗಳನ್ನೂ ಕನ್ನಡದಲ್ಲಿ ಬರೆಯತೊಡಗಿದರು. (ಉದಾ. ಅಸಂಗತ ನಾಟಕಗಳು, ಎಪಿಕ್ ಥಿಯೇಟರ್ ಮುಂತಾದವು) ಪಿ.ಲಂಕೇಶ್, ಪೂರ್ಣಚಂದ್ರತೇಜಸ್ವಿ, ನ.ರತ್ನ, ಚಂದ್ರಶೇಖರ ಪಾಟೀಲ, ರಾಮಚಂದ್ರಶರ್ಮ, ಚಂದ್ರಶೇಖರ ಕಂಬಾರ, ಶ್ರೀರಂಗ, ಗಿರೀಶ್‌ಕರ್ನಾಡ್, ಎಚ್.ಎಸ್.ಶಿವಪ್ರಕಾಶ್ ಮೊದಲಾದವರು ಒಳ್ಳೆಯ ನಾಟಕಗಳನ್ನೂ ಬರೆದರು.

ಪಿ.ಲಂಕೇಶ್‌ರ 'ಸಂಕ್ರಾಂತಿ' 'ಹನ್ನೆರಡನೆಯ ಶತಮಾನದ ವೀರಶೈವ ಕ್ರಾಂತಿಯ ಬಗ್ಗೆ ಹಲವು ಒಳನೋಟಗಳನ್ನುಳ್ಳ ನಾಟಕ, 'ಟಿ. ಪ್ರಸನ್ನನ ಗೃಹಸ್ಥಾಶ್ರಮ' 'ನನ್ನ ತಂಗಿಗೊಂದು ಗಂಡು ಕೊಡಿ' 'ತೆರೆಗಳು' 'ಕ್ರಾಂತಿ ಬಂತು ಕ್ರಾಂತಿ' 'ಗಿಳಿಯು ಪಂಜರದೊಳಿಲ್ಲ' 'ಗುಣಮುಖ' ಮೊದಲಾದ ಪ್ರಮುಖ ನಾಟಕಗಳನ್ನು ಬರೆದಿದ್ದಾರೆ.

ಚಂದ್ರಶೇಖರ ಕಂಬಾರರ 'ಜೋಕುಮಾರಸ್ವಾಮಿ' ಜಾನಪದ ರಂಗಭೂಮಿಯ ಸತ್ವ, ತಂತ್ರಗಳನ್ನು ಮೈಗೂಡಿಸಿಕೊಂಡು ಎಪಿಕ್ ಮಾದರಿಯಲ್ಲಿ ರಚಿತವಾಗಿರುವ ಮಹತ್ವದ ನಾಟಕ. ಕಂಬಾರರ 'ಋಷ್ಯಶೃಂಗ' 'ಜೈಸಿದನಾಯ್ಕ' 'ಸಿರಿಸಂಪಿಗೆ'ಇವೆಲ್ಲವೂ ಹಲವಾರು ಪ್ರದರ್ಶನಗಳನ್ನು ಕಂಡ ನಾಟಕಗಳು, ಅವರೇ 'ನಾರ್ಸಿಸ್' ಮತ್ತು 'ಚಾಳೇಶ' ಎಂಬ ಎರಡು ಅಸಂಗತ ನಾಟಕಗಳನ್ನೂ ಕೂಡಾ ಬರೆದಿದ್ದಾರೆ. ಗಿರೀಶ್ ಕಾರ್ನಾಡ್ ನವ್ಯ ನಾಟಕ ಕ್ಷೇತ್ರದ ಮತ್ತೊಂದು ದೊಡ್ಡ ಹೆಸರು. ಪುರಾಣದ ಅಥವಾ ಇತಿಹಾಸದ ವಸ್ತುವನ್ನು ಆಯ್ದುಕೊಂಡು ಅದನ್ನು ಸಮಕಾಲೀನ ಸಂದರ್ಭದಲ್ಲಿ ಪುನರ್‌ಶೋಧಿಸುವ ಕೆಲಸವನ್ನು ಅವರು ನಾಟಕಗಳಲ್ಲಿ ಮಾಡುತ್ತಾರೆ. 'ಯಯಾತಿ' , 'ಹಿಟ್ಟಿನ ಹುಂಜ','ಹಯವದನ', 'ತುಘಲಕ್','ತಲೆದಂಡ', 'ನಾಗಮಂಡಲ', 'ಅಂಜು ಮಲ್ಲಿಗೆ' -ಇವುಗಳೆಲ್ಲವೂ ಕಾರ್ನಾಡರ ಮಹತ್ವದ ನಾಟಕಗಳು.

ಚಂದ್ರಶೇಖರ ಪಾಟೀಲರೂ ಕೂಡ ಹಲವಾರು ಅಸಂಗತ ನಾಟಕಗಳನ್ನು ಬರೆದಿದ್ದಾರೆ. 'ಅಪ್ಪ', 'ಕೊಡೆಗಳು', 'ಕುಂಟಾ ಕುಂಟಾ ಕುರವತ್ತಿ', 'ಗುರ್ತಿನವರು' 'ಟಿಂಗರ ಬುಡ್ಡಣ್ಣ','ಗೋಕರ್ಣದ ಗೌಡಶಾನಿ' ಮುಂತಾದವು ಪಾಟೀಲರ ನಾಟಕ ರಚನೆಗಳು. ನ.ರತ್ನ ಅವರು 'ಎಲ್ಲಿಗೆ?' 'ಗೋಡೆ ಬೇಕೆ ಗೋಡೆ', 'ಬೊಂತೆ' ಮುಂತಾದ ಅಸಂಗತ ನಾಟಕಗಳನ್ನು ಬರೆದಿದ್ದಾರೆ. ಎಚ್.ಎಸ್.ಶಿವಪ್ರಕಾಶ್‌ರ 'ಮಹಾಚೈತ್ರ' ವಿವಾದವೆಬ್ಬಿಸಿದ ಒಂದು ಮಹತ್ವದ ನಾಟಕ ಇದಲ್ಲದೆ ಅವರು 'ಮಂಟೇಸ್ವಾಮಿ ಪ್ರಸಂಗ' 'ಮಾದಾರಿ ಮಾದಯ್ಯ' ಮುಂತಾದ ನಾಟಕಗಳನ್ನು ಬರೆದಿದ್ದಾರೆ. ಹಾಗೆಯೇ ಪ್ರಸನ್ನ ತದ್ರೂಪಿ', 'ದಂಗೆಯ ಮುಂಚಿನ ದಿನಗಳು' ಪೂಚಂದ್ರತೇಜಸ್ವಿ ಯಮಳ ಪ್ರಶ್ನೆ', ಟಿ.ಎನ್.ಸೀತಾರಾಂ 'ಆಸ್ಫೋಟ', 'ನಮ್ಮೊಲಗೊಬ್ಬ ನಾಜೂಕಯ್ಯ' ಕೀ.ರಂ.ನಾಗರಾಜ 'ಸೀಗಿಕೊಂಡ ಸಂಸ', 'ಕಾಲಜ್ಞಾನಿ ಕನಕ' ಒಳ್ಳೆಯ ನಾಟಕಗಳನ್ನು ಬರೆದಿದ್ದಾರೆ. ಎಚ್.ಎಂ. ಚನ್ನಯ್ಯನವರ 'ಎಲ್ಲರಂಥವನಲ್ಲ ನನಗಂಡ' ಮತ್ತು 'ಹುಯ್ಯಲವೂ ಡಂಗುರವ' ಪ್ರಯೋಗದಲ್ಲೂ ಯಶಸ್ವಿಯಾದ ಮಹತ್ವದ ನಾಟಕ. ಇವಲ್ಲದೆ ಬೇರೆ ಭಾಷೆಯ ಹಲವಾರು ಒಳ್ಳೆಯ

ನಾಟಕಗಳನ್ನು ನವ್ಯರು ಕನ್ನಡೀಕರಿಸಿ ಪ್ರಯೋಗಕ್ಕೆ ತಂದಿದ್ದಾರೆ. ಜೊತೆಗೆ ಕನ್ನಡದಲ್ಲೇ ಗಮನಾರ್ಹವಾದ ಕೆಲವು ಕಥೆಗಳನ್ನೂ, ಕಾದಂಬರಿಗಳನ್ನೂ ನಾಟಕ ರೂಪಕ್ಕೆ ಅಳವಡಿಸಿ ಪ್ರಯೋಗಿಸಿದವರೂ ನವ್ಯರೇ.

ಸಣ್ಣ ಕತೆಗಳ ಪ್ರಕಾರದಲ್ಲೂ ನವ್ಯ ಚಳವಳಿಯ ಸಂದರ್ಭದಲ್ಲಿ ಗಮನಾರ್ಹ ಕೃಷಿ ನಡೆಯಿತು. ನವ್ಯ ಕತೆಗಳಲ್ಲಿ 'ಕಥನ'ಕ್ಕಿಂತ ಹೆಚ್ಚಾಗಿ ಮನುಷ್ಯ ಮನಸ್ಸಿನ ಪದರ ಪದರಗಳನ್ನು ಬಿಡಿಸುವ ಕಡೆಗೆ ಆಸಕ್ತಿ ಹೆಚ್ಚಾಯಿತು. ಧ್ವನಿ, ಪ್ರತಿಮೆ, ಸಂಕೇತಗಳನ್ನು ಬಳಸಿಕೊಂಡು ಅನುಭವಕ್ಕೆ ಒಗ್ಗುವ ಭಾಷೆಯನ್ನು ಪುನರ್ ರೂಪಿಸಿಕೊಂಡು ಸಣ್ಣ ಕತೆಯೂ ಕಾವ್ಯದ ರೀತಿ ವಿಧಾನಗಳಿಗೆ ಹತ್ತಿರವಾಯಿತು. ಗಿರಡ್ಡಿ ಗೋವಿಂದ ರಾಜರ ಪ್ರಕಾರ ನವ್ಯ ಕಥೆಯ ಮುಖ್ಯ ಲಕ್ಷಣ ತಾತ್ವಿಕವಾಗಿ ಅಂತರ್ಮುಖತೆ', ನವ್ಯದ ಕತೆಗಳಲ್ಲಿ ಅಸ್ತಿತ್ವವಾದ, ಮನಶಾಸ್ತ್ರ, ಮಾನವಶಾಸ್ತ್ರ, ಮಾರ್ಕ್ಸ್‌ವಾದ ಮೊದಲಾದವುಗಳ ಅಧ್ಯಯನದ ಪರಿಣಾಮವೂ ಕಾಣಿಸುತ್ತದೆ. ಹಾಗೆಯೇ ಲಾರೆನ್ಸ್, ಸಾರ್ತ್ರ್, ಕಾಫ್ಕ, ಕಮೂ, ಫ್ರಾಯ್ಡ್ ಮುಂತಾದ ಪಾಶ್ಚಾತ್ಯ ಲೇಖಕರ ಪ್ರಭಾವಕ್ಕೆ ಒಳಗಾಗಿಯೂ ಹಲವರು ಕಥೆಗಳನ್ನು ಬರೆದರು. ಯು.ಆರ್.ಅನಂತಮೂರ್ತಿ, ಪಿ.ಲಂಕೇಶ್, ರಾಮಚಂದ್ರಶರ್ಮ, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಪೂರ್ಣಚಂದ್ರ ತೇಜಸ್ವಿ, ಕೆ.ಸದಾಶಿವ, ಟಿ.ಜಿ.ರಾಘವ, ಕಾಮರೂಪಿ, ಗಿರಡ್ಡಿ ಗೋವಿಂದ ರಾಜ, ರಾಘವೇಂದ್ರ ಖಾಸನೀಸ, ಈಶ್ವರ ಚಂದ್ರ ಜಯಂತ ಕಾಯ್ಕಿಣಿ, ಬಿ.ವಿ. ವೈಕುಂಠರಾಜು, ಶ್ರೀಕೃಷ್ಣ ಆಲನಹಳ್ಳಿ ಸುಮತೀಂದ್ರ ನಾಡಿಗ, ಕ.ವೆಂ.ರಾಜಗೋಪಾಲ, ರಾಜಶೇಖರ ನೀರಮಾನ್ವಿ ಹಾಗೆಯೇ ಮಹಿಳೆಯರಲ್ಲಿ ರಾಜಲಕ್ಷ್ಮಿ ಎನ್.ರಾವ್, ವೀಣಾ ಶಾಂತೇಶ್ವರ, ಮುಂತಾದವರು ಒಳ್ಳೆಯ ಕಥೆಗಳನ್ನು ಬರೆದರು.

ಪರಂಪರಾಗತವಾಗಿ ಬಂದ ಸಂಪ್ರದಾಯ, ಮೌಲ್ಯಗಳು ವರ್ತಮಾನದ ಸಂಕೀರ್ಣ ಸಂದರ್ಭಗಳಲ್ಲಿ ಪರೀಕ್ಷೆಗೊಳಪಡಿಸುವ ವಿಧಾನ ಸಾಮಾನ್ಯವಾಗಿ ಅನಂತ ಮೂರ್ತಿಯವರ ಕಥೆಗಳಲ್ಲಿ ಕಂಡು ಬರುತ್ತದೆ. 'ಪ್ರಶ್ನೆ', 'ಘಟಶ್ರಾದ್ಧ', 'ಆಕಾಶ ಮತ್ತು ಬೆಕ್ಕು', 'ಕಾರ್ತಿಕ', 'ಕ್ಲಿಪ್‌ಜಾಯಿಂಟ್', 'ಪ್ರಸ್ತ', 'ಮೌನಿ', 'ಸೂರ್ಯನ ಕುದುರೆ' ಮುಂತಾದುವು ಅವರ ಪ್ರಸಿದ್ಧ ಕತೆಗಳನ್ನು ಬರೆದಿದ್ದಾರೆ. ಕಥನಾಂಶವನ್ನು ಬಿಟ್ಟುಕೊಡದೆ ವರ್ತಮಾನದ ವಿವಿಧ ಸಮಸ್ಯೆಗಳನ್ನು ಶೋಧಿಸುವ ಕ್ರಮ ಲಂಕೇಶರ ಸಣ್ಣ ಕಥೆಗಳಲ್ಲಿ ಕಂಡು ಬರುತ್ತದೆ. 'ರೊಟ್ಟಿ', 'ನಾನಲ್ಲ', 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ', 'ಉಮಾಪತಿಯ ಸ್ಕಾಲರ್ ಷಿಪ್ ಯಾತ್ರೆ', 'ಕುರುಡು ಕಾಂಚಾಣ' ಮುಂತಾದ ಒಳ್ಳೆಯ ಕತೆಗಳನ್ನು ಲಂಕೇಶರು ಬರೆದಿದ್ದಾರೆ. 'ರೊಟ್ಟಿ'ಕನ್ನಡದ ಅತ್ಯುತ್ತಮ ಕಥೆಗಳಲ್ಲೊಂದಾಗಿದ್ದು, ಇದು 'ಲಂಕೇಶರ ಕಲೆಗಾರಿಕೆಯಲ್ಲಿ ಒಂದು ಹೊಸ ಮೈಲಿಗಲ್ಲು' ಎಂದು ಗೋಪಾಲಕೃಷ್ಣ ಅಡಿಗರು ಬರೆದಿದ್ದಾರೆ. ಗಂಡು ಹೆಣ್ಣಿನ ಸಂಬಂಧಗಳ ಸೂಕ್ಷ್ಮಗಳನ್ನು ಶೋಧಿಸುವುದು ಪ್ರಧಾನ ಆಸಕ್ತಿಯಾಗಿರುವ ಶಾಂತಿನಾಥ ದೇಸಾಯಿ ಕೂಡಾ 'ಮಂಜುಗಡ್ಡೆ' 'ಕ್ಷಿತಿಜ', 'ದಂಡೆ', 'ರಾಕ್ಷಸ', 'ಪರಿವರ್ತನೆ', 'ಕೂರ್ಮಾವತಾರ' ಮುಂತಾದ ಹಲವಾರು ಕತೆಗಳನ್ನು ಬರೆದಿದ್ದಾರೆ. 'ಕ್ಷಿತಿಜ' ನವ್ಯ ಮನೋಧರ್ಮದ, ನಿರೂಪಣೆಯನ್ನು ಪ್ರತಿನಿಧಿಸುವ ಅತ್ಯುತ್ತಮ ಪ್ರತಿನಿಧಿಯೆನಿಸಿದ ಕಥೆಯಾಗಿದೆ.

ಬದುಕಿನ ಅಸಂಗತತೆ, ಹಿಂಸೆ ಮತ್ತು ಸಾವುಗಳ ಕ್ರೌರ್ಯ ಇವನ್ನೆಲ್ಲಾ ಎದುರಿಸುವ ಮನುಷ್ಯನ ಛಲ, ಅಸಹಾಯಕತೆ ಸೋಲು ಇವುಗಳನ್ನೆಲ್ಲಾ ವಿಶ್ಲೇಷಿಸುವುದರಲ್ಲಿ ಆಸಕ್ತಿಯಿರುವ ಯಶವಂತ ಚಿತ್ತಾಲರು ನವ್ಯ ಚಳವಳಿಯ ಮುಖ್ಯ ಲೇಖಕರಲ್ಲೊಬ್ಬರು. 'ಅಬೋಲಿನ', 'ಆಟ', 'ಬೇನ್ಯಾ', 'ಕತೆಯಾದಳು ಹುಡುಗಿ' ಮುಂತಾದವು ಅವರ ಕವನ ಸಂಕಲನಗಳು. ನವ್ಯದ ಕಲಾತ್ಮಕತೆ, ಸಂಕೀರ್ಣತೆಗಳ ಜೊತೆಗೆ ಮನೋವಿಜ್ಞಾನ, ಮಾನವ ಶಾಸ್ತ್ರ, ಮಾರ್ಕ್ಸ್‌ವಾದ, ವಿಕಾಸವಾದ ಮುಂತಾದ ಜ್ಞಾನ ಶಾಖೆಗಳ ಪ್ರಭಾವವೂ ಇವರ ಕತೆಗಳಲ್ಲಿ ಕಂಡು ಬರುತ್ತದೆ. 'ನಲ್ಲಿಯಲ್ಲಿ ನೀರು ಬಂತು', 'ರಾಮನ ಸವಾರಿ ಸಂತೆಗೆ ಹೋದದ್ದು', 'ಹಾವು', 'ಅಗೆದರೆ ಸಿಕ್ಕುವುದು ಮಣ್ಣಲ್ಲ', 'ಹೆಳವನ ಮೇಲೆ ಕುರುಡ ಕೂತಿದ್ದಾನೆ'. ಇನ್ನು ಮುಂತಾದ ಕತೆಗಳಿಂದ ಪ್ರಸಿದ್ಧರಾಗಿರುವ ಕೆ. ಸದಾಶಿವ ನವ್ಯ ಸಂಪ್ರದಾಯರ ಮತ್ತೊಬ್ಬ

ಒಳ್ಳೆಯ ಕತೆಗಾರರು, ಸಂಕೇತ, ಪ್ರತಿಮೆಗಳನ್ನು ಯಶಸ್ವಿಯಾಗಿ ತಮ್ಮ ಕತೆಗಳಲ್ಲಿ ಬಳಸಿಕೊಳ್ಳುವ ಸದಾಶಿವರು ಒಳ್ಳೆಯ ಕಥೆಗಳನ್ನು ಬರೆದಿದ್ದಾರೆ.

ನವ ವಿಧಾನದಲ್ಲೇ ಕತೆಗಳನ್ನು ಬರೆಯಲು ಆರಂಭಿಸಿದ ಪೂರ್ಣಚಂದ್ರ ತೇಜಸ್ವಿಯವರು ಅನಂತರ ತಂತ್ರ ಪ್ರಾಧಾನ್ಯದ ಕತೆಗಳನ್ನು ಬಿಟ್ಟು ಸರಳ ನೇರ ನಿರೂಪಣೆಯ ಕತೆಗಳನ್ನು ಬರೆದರು. 'ಕುಬಿ ಮತ್ತು ಇಯಾಲ', 'ಅಬಚೂರಿನ ಪೋಸ್ಟಾಫೀಸು', 'ತಬರನಕತೆ', 'ಹುಲಿಯೂರಿ ಸರಹದ್ದು' 'ಕಿರಗೂರಿನ ಗಯ್ಯಾಳಿಗಳು' ಮೊದಲಾದವು ಅವರ ಉತ್ತಮ ಕತೆಗಳು.

'ಮುಳ್ಳುಗಲು' , ' ಕೊನೆಯ ದಾರಿ' ಮುಂತಾದ ಕಥಾ ಸಂಗ್ರಹಗಳನ್ನು ಪ್ರಕಟಿಸಿರುವ ವೀಣಾ ಶಾಂತೇಶ್ವರ (ವೀಣಾ ಎಬಲುರ್ಗಿ) ಅವರು ತಮ್ಮ ಕತೆಗಳಲ್ಲಿ ಮಹಿಳಾ ಪ್ರಜ್ಞೆಯ ವಿವಿಧ ಸ್ತರಗಳನ್ನು ಶೋಧಿಸುವ ಪ್ರಯತ್ನ ಮಾಡಿದ್ದಾರೆ. ಹಾಗೆಯೇ ಹೆಣ್ತನದ ವಿಶಿಷ್ಟ ಅನುಭವಗಳನ್ನು ಸೂಕ್ಷ್ಮವಾಗಿ ಸೆರೆ ಹಿಡಿಯಬಲ್ಲ ವೈದೇಹಿ, ಮುಸ್ಲಿರ ಸಮಾಜದ ಆಂತರಿಕ ವಲಯದ ಅನುಭವಗಳನ್ನು ಕಲಾತ್ಮಕವಾಗಿ ನಿರೂಪಿಸುವ ಸಾರಾ ಅಬುಬಕರ್, ಬಾನು ಮುಷ್ತಕ್ ಅವರುಗಳೂ ಒಳ್ಳೆಯ ಕತೆಗಳನ್ನು ಬರೆದಿದ್ದಾರೆ. ಇವರಲ್ಲದೆ ಹೇಮಾಪಟ್ಟಣಶೆಟ್ಟಿ, ನೇಮಿಚಂದ್ರ ಮುಂತಾದವರು ಕಥಾ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ.

ನವ್ಯ ಕಥೆ ಮತ್ತು ಕವನಗಳ ಪ್ರಕಟಣೆಗೆ ಪ್ರೋತ್ಸಾಹದಾಯಕವಾದುವೆಂದರೆ ನಿಯತಕಾಲಿಕಗಳು, ಸಾಕ್ಷಿ, ಸಂಕ್ರಮಣದಂಥ ಸಾಹಿತ್ಯಕ ಪತ್ರಿಕೆಗಳ ಜೊತೆಗೆ ಇತರ ವಾರಪತ್ರಿಕೆ, ಮಾಸಪತ್ರಿಕೆಗಳೂ ನವ್ಯಕತೆ, ಕವನಗಳ ಪ್ರಕಟಣೆಗೆ ಅವಕಾಶ ಮಾಡಿಕೊಟ್ಟವು ಎಂಬುದನ್ನಿಲ್ಲಿ ಉಲ್ಲೇಖಿಸಬಹುದು.

ಕಾವ್ಯ, ಸಣ್ಣಕಥೆಗಳಲ್ಲದೆ ನವ್ಯ ಮನೋಧರ್ಮವು ಕಾದಂಬರಿಗಲ್ಲೂ ಪ್ರಕಟವಾಯಿತು. ಬಹುಪಾಲು ಕಾದಂಬರಿಗಳಲ್ಲಿ ಅಂತರ್ಮುಖಿಯಾದ ನಾಯಕ, ತನ್ನ ಸುತ್ತಲಿನ ಜಗತ್ತಿನಲ್ಲಿ ನಡೆಯುವ ಘಟನೆಗಳನ್ನು ಶೋಧಿಸುವ, ವಿಶ್ಲೇಷಿಸುವ ರೀತಿ ಕಥೆಗಳು ನಿರೂಪಿತವಾದವು. ಮೂರು ಪಂಥಗಳ ಕಾದಂಬರಿಗಳ ಬಗ್ಗೆ ಎಲ್.ಎಸ್.ಶೇಷಗಿರಿರಾವ್ ಅವರು ಹೇಳುವ ಮಾತುಗಳು ಗಮನಾರ್ಹವಾಗಿದೆ. 'ನವೋದಯ ಕಾದಂಬರಿಯ ಸಮಸ್ಯೆಗಳು ಬಹುಮಟ್ಟಿಗೆ ಕೌಟುಂಬಿಕ, ಪ್ರಗತಿಶೀಲ ಕಾದಂಬರಿಯ ಸಮಸ್ಯೆಗಳು ಸಾಮಾಜಿಕ, ನವ್ಯ ಕಾದಂಬರಿಯ ಸಮಸ್ಯೆಗಳು ವ್ಯಯಕ್ತಿಕ.'

ನವ್ಯ ಕಾದಂಬರಿಗಳ ಅತಿ ಮುಖ್ಯ ಲಕ್ಷಣಗಳೆಂದರೆ ಪರಕೀಯ ಪ್ರಜ್ಞೆ, ಏಕಾಂಗಿತನ, ನಿರರ್ಥಕತೆ ಎಂದು ತ.ಸು. ಶಾಮರಾಯರು ಹೇಳಿದ್ದಾರೆ. ಬದುಕು ಅರ್ಥಪೂರ್ಣ ಎನ್ನುವ ಹಿಂದಿನ ಸಾಹಿತಿಗಳ ದೃಷ್ಟಿಯನ್ನೇ ಅನುಮಾನದಿಂದ ನೋಡಲು ಆರಂಭಿಸಿದ ನವ್ಯರು ಪರಂಪರಾಗತ ನಂಬಿಕೆ ಮೌಲ್ಯಗಳೆನ್ನೆಲ್ಲಾ ಪ್ರಶ್ನಿಸುತ್ತಾ, ಅವುಗಳ ಟೊಳ್ಳುತನವನ್ನು ಬಯಲು ಮಾಡಿ ಪಣತೊಟ್ಟುವರಂತೆ ಬರೆಯತೊಡಗಿದರು. ವಿವಿಧ ಒತ್ತಡಗಳಿಂದ ವರ್ತಮಾನದಲ್ಲಿ ಬದುಕುತ್ತಿರುವ ವ್ಯಕ್ತಿಯ ಅಸ್ವಸ್ಥತೆ ಮತ್ತು ತುಮುಲಗಳನ್ನು ಚಿತ್ರಿಸಲು ನವ್ಯರು ಕಾದಂಬರಿಗಳಲ್ಲಿ ಪ್ರಯತ್ನಿಸಿದರು.

ಯು.ಆರ್.ಅನಂತಮೂರ್ತಿಯವರ 'ಸಂಸ್ಕಾರ' ಆ ಕಾಲಕ್ಕೆ ಬಹಳವಾಗಿ ಚರ್ಚಿತವಾದ ಕಾದಂಬರಿ. ಅವರು ಭಾರತೀಪುರ, 'ಅವಸ್ಥೆ', 'ಭವ' ಮುಂತಾದ ಕಾದಂಬರಿಗಳನ್ನೂ ಬರೆದಿದ್ದಾರೆ. ಲಂಕೇಶ್ ಅವರ 'ಬಿರುಕು' ತೇಜಸ್ವಿಯವರ 'ಸ್ವರೂಪ', ಗಿರಿಯವರ 'ಗತಿ-ಸ್ಥಿತಿ' ಯಶವಂತ ಚಿತ್ತಾಲರ 'ಮೂರು ದಾರಿಗಳು' 'ಶಿಕಾರಿ' 'ಛೇದ', ಎ.ಕೆ. ರಾಮಾನುಜನ್ ಅವರ 'ಹಳದಿ ಮೀನು' ಶಾಂತಿನಾಥ ದೇಸಾಯಿಯವರ 'ಮುಕ್ತಿ' ಶ್ರೀಕೃಷ್ಣ ಆಲನಹಳ್ಳಿಯವರ ಕಾಡು, 'ಪರಸಂಗದ ಗೆಂಡೆತಿಮ್ಮ' ಬಿ.ವಿ.ವೈಕುಂಠರಾಜುರ 'ಅಂತ್ಯ' 'ಆಕ್ರಮಣ' ಮೊದಲಾದ ಪ್ರಮುಖ ಕಾದಂಬರಿಗಳು ಪ್ರಕಟವಾದವು.

ನವ್ಯ ಸಾಹಿತ್ಯದಲ್ಲಿ ಪ್ರಕಟವಾದ ಕಾದಂಬರಿಗಳು ಸಂಖ್ಯೆಯ ದೃಷ್ಟಿಯಿಂದ ಬಹಳ ಹೆಚ್ಚೇನೂ ಅಲ್ಲ. ಬಹುಶಃ ನವ್ಯ ಮನೋಧರ್ಮದ ಕಾದಂಬರಿಯ ವಿಶಾಲ ಚೌಕಟ್ಟಿನಲ್ಲಿ ಹರಿಯುವುದು

ಕಷ್ಟವೆನಿಸಿರಬೇಕು. ಶಾಂತಿನಾಥ ದೇಸಾಯಿಯವರು ತಮ್ಮ 'ನವ್ಯಸಾಹಿತ್ಯ ದರ್ಶನಕ್ಕೆ' ಬರೆದ ಮುನ್ನುಡಿಯಲ್ಲಿ ನವ್ಯ ಕಾದಂಬರಿಯ ಸೀಮಿತ ಯಶಸ್ಸಿನ ಬಗ್ಗೆ ಬರೆಯುತ್ತಾರೆ: 'ನವ್ಯ ಕಾದಂಬರಿ ಸಾಕಷ್ಟು ಮಹತ್ವಾಕಾಂಕ್ಷೆಯನ್ನು ಹೊತ್ತುಕೊಂಡೇ ಪ್ರಾರಂಭವಾಯಿತು. ಆದರೆ ನವ್ಯ ಮನೋಧರ್ಮದಲ್ಲಿ ಕಾದಂಬರಿ ಸೃಷ್ಟಿಗೆ ಬೇಕಾದ 'ವಿಶಾಲ'ದೃಷ್ಟಿ ಇಲ್ಲವೇನೋ.... ನವ್ಯತೆಯ ಅಂತರ್ಯದಲ್ಲಿಯೇ ಚುಟುಕು ದರ್ಶನಗಳಿಗೆ ಸೀಮಿತವಾದ ತೀವ್ರತೆ ಇದೆಯೇನೋ' ನವ್ಯರು ಪ್ರಕಟಿಸಿದ ಎಷ್ಟೋ ಕಾದಂಬರಿಗಳು ಕೂಡ ಚಿಕ್ಕಗಾತ್ರದಲ್ಲೇ (ಉದಾ. ಸಂಸ್ಕಾರ, ಸ್ವರೂಪ, ಕಾಡು) ಆಗಿರುವುದನ್ನು ನೆನೆದರೆ ದೇಸಾಯಿಯವರ ಮಾತುಗಳು ಗಮನಾರ್ಹ ಅನಿಸುತ್ತದೆ.

ನವ್ಯ ಕಾದಂಬರಿಗಳು ಪ್ರಕಟಗೊಳ್ಳುತ್ತಿದ್ದ ಕಾಲಕ್ಕಾಗಲೇ ಆ ಹಿಂದಿನ ಲೇಖಕರು (ಮುಖ್ಯವಾಗಿ ಪ್ರಗತಿಶೀಲರು) ಕಾದಂಬರಿಯನ್ನು ಅತ್ಯಂತ ಜನಪ್ರಿಯಾ ಸಾಹಿತ್ಯ ಪ್ರಕಾರವಾಗಿಸಿದ್ದರು. ಆ ಪ್ರಕಾರವನ್ನು ನವ್ಯರು ಬಳಸಿದ್ದು, ಬೆಳೆಸಿದ್ದು ಹೇಳಿಕೊಳ್ಳುವಂಥ ಪ್ರಮಾಣದಲ್ಲಲ್ಲ, ಆ ಸಮಯದಲ್ಲಿ ನವ್ಯದ ಮಾರ್ಗದಾಚೆಗೆ ಹೇರಳವಾಗಿ ಕಾದಂಬರಿಗಳು ರಚನೆಗೊಂಡವು. ಸಂಖ್ಯೆಯಲ್ಲಿ ಮಾತ್ರವಲ್ಲದೆ ಗುಣಮಟ್ಟದಲ್ಲೂ ಮಹತ್ವದವೆನಿಸುವ ಕಾದಂಬರಿಗಳು ಪ್ರಕಟವಾದವು. ಶಿವರಾಮ ಕಾರಂತರಂಥ ದೊಡ್ಡ ಲೇಖಕರು ನವ್ಯದ ತಂತ್ರದೋರಣೆಗಳ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದೆ ಕಾದಂಬರಿಗಳನ್ನು ಬರೆಯುತ್ತಲೇ ಇದ್ದರು. ಕುವೆಂಪು ಅವರ ಮಹಾಕಾದಂಬರಿ 'ಮಲೆಗಳಲ್ಲಿಮದುಮಗಳು' ಕೂಡಾ ಅದೇ ಕಾಲದಲ್ಲಿ ಪ್ರಕಟವಾಯಿತು (1967). ನವ್ಯ ಮಾರ್ಗದಿಂದ ಆಚೆ ನಿಂತ ಕಾದಂಬರಿ ರಚಿಸಿದವರಲ್ಲಿ ಅಸಾಧಾರಣ ಜನಪ್ರಿಯತೆಗಳಿಸಿದ ಮತ್ತೊಬ್ಬ ಲೇಖಕರೆಂದರೆ ಡಾ.ಎಸ್.ಎಲ್.ಭೈರಪ್ಪ ಅವರು. 'ಧರ್ಮಶ್ರೀ', 'ಮತದಾನ', 'ಜಲಪಾತ', 'ದೂರಸರಿದರು', 'ವಂಶವೃಕ್ಷ', 'ತಬ್ಬಲಿಯು ನೀನಾದೆ ಮಗನೆ', 'ನಾಯಿನೆರಳು', 'ಗೃಹಭಂಗ', 'ದಾಟು', 'ನೆಲೆ', 'ತಂತು', 'ಅಂಚು' ಮುಂತಾದುವು ಅವರ ಪ್ರಸಿದ್ಧ ಕಾದಂಬರಿಗಳು ಅವರ 'ಪರ್ವ' ಎಂಬ ಮಹತ್ವಾಕಾಂಕ್ಷೆಯ ಕಾದಂಬರಿ ಮಹಾಭಾರತದ ವಸ್ತುವನ್ನು ಸಮಕಾಲೀನ ವಾತಾವರಣದಲ್ಲಿ ಪುನರ್ ಸೃಷ್ಟಿಸುವ ಒಂದು ಗಂಭೀರ ಪ್ರಯತ್ನ.

ನವ್ಯ ಸಾಹಿತ್ಯ ಚಳವಳಿ ಉತ್ಕರ್ಷದಲ್ಲಿದ್ದಾಗಲೇ, ಮಹಿಳೆಯರು ನವ್ಯ ಮಾರ್ಗದ ಹೊರಗೆ ನಿಂತು ಅಗಾಧ ಸಂಖ್ಯೆಲ್ಲಿ ಕಾದಂಬರಿಗಳನ್ನು ಸೃಷ್ಟಿಸಿದ್ದು ಈ ಕಾಲದ ಬಹುಮುಖ್ಯವಾದ ಬೆಳವಣಿಗೆ, ಒಂದು ರೀತಿಯಲ್ಲಿ ಹೇಳುವುದಾದರೆ ಪ್ರಗತಿಶೀಲರು, ತಮ್ಮ ಕಾದಂಬರಿಗಳಿಗೆ ಸೃಷ್ಟಿಸಿಕೊಂಡ ಬಹುದೊಡ್ಡ, ಓದುಗ ಬಳಗವನ್ನು ಮಹಿಳಾ ಕಾದಂಬರಿ ಕಾರ್ತಿಯರ ಕೈಗಿತ್ತರು. ವಾಣಿ, ತ್ರಿವೇಣಿ, ಅನುಪಮಾ ನಿರಂಜನ, ಉಷಾನವರತ್ನಂ, ಈಚನೂರು ರಾಜಲಕ್ಷ್ಮಿ ಮುಂತಾದ ಹಲವು ಲೇಖಕಿಯರು ಬಹುದೊಡ್ಡ ಸಂಖ್ಯೆಯ ಕಾದಂಬರಿಗಳನ್ನು ಪ್ರಕಟಿಸಿದರು. ಅಕಾಲ ಮರಣಕ್ಕೆ ಸಂದ ತ್ರಿವೇಣಿಯವರು ಮನಶಾಸ್ತ್ರಿಯ ವಸ್ತುಗಳನ್ನಾಧರಿಸಿ ರಚಿಸಿದ ಕಾದಂಬರಿಗಳು ಕನ್ನಡ ವಾಚಕ ಲೋಕಕ್ಕೆ ಅತ್ಯಂತ ಕುತೂಹಲಕಾರಿಯಾಗಿದ್ದವು.

ನವ್ಯ ಸಾಹಿತ್ಯ ಆಂದೋಲನ ಕನ್ನಡ ಸಾಹಿತ್ಯ ಪರಂಪರೆಗೆ ನೀಡಿದ ಮತ್ತೊಂದು ಕೊಡುಗೆಯೆಂದರೆ ವಿಮರ್ಶೆ. ಹಾಗೆಂದರೆ ಆ ಹಿಂದೆ ವಿಮರ್ಶೆ ಇರಲಿಲ್ಲವೆಂದಲ್ಲ, ಆದರೆ ವಿಮರ್ಶೆಯನ್ನೂ, ಸಾಹಿತ್ಯದ ಒಂದು ಬಹುಮುಖ್ಯ ಶಿಸ್ತು ಎನ್ನುವಂತೆ ಭಾವಿಸಿ ಆ ಪ್ರಕಾರವನ್ನು ಬೆಳೆಸಿದ್ದು ನವ್ಯರೇ. ಸಾಹಿತ್ಯ ಹೇಗೆ ಪಾಶ್ಚಾತ್ಯ ಪ್ರಭಾವದಿಂದ ಕನ್ನಡಕ್ಕೆ ಬಂತೋ ಹಾಗೆಯೇ ನವ್ಯ ವಿಮರ್ಶೆಯೂ, ಪಾಶ್ಚಾತ್ಯ ಪ್ರಭಾವದಿಂದಲೇ ಕನ್ನಡಕ್ಕೆ ಬಂದದ್ದು. ಮುಖ್ಯವಾಗಿ ಇದು 'ನ್ಯೂಕ್ರಿಟಿಸಿಸಂ'ಎಂದು ಪ್ರಸಿದ್ಧವಾದ ವಿಮರ್ಶಾ ಪರಂಪರೆಯಿಂದ ಪ್ರಭಾವಿತವಾಗಿದೆ. ಪಾಶ್ಚಾತ್ಯ ವಿಮರ್ಶಕರಾದ ಡಿ.ಎಚ್.ಲಾರೆನ್ಸ್, ಎಫ್.ಆರ್.ಲೀವಿಸ್, ಕ್ಲಿಯಾಂತ್ ಬ್ರೂಕ್ಸ್, ಐ.ಎ.ರಿಚರ್ಡ್ಸ್. ಮರ್ರೆ ಕ್ರೀಗರ್ ಮೊದಲಾದವರು ಕೃತಿ ವಿಮರ್ಶೆಯಲ್ಲಿ ಬೆಳೆಸಿದ ಪರಿಭಾಷೆಗಳನ್ನೇ ಕನ್ನಡ ನವ್ಯ ವಿಮರ್ಶಕರು ಉಪಯೋಗಿಸಲು ಆರಂಭಿಸಿದರು. ಸಾಹಿತ್ಯ ಕೃತಿಯ ಸಾವಯುವ ಸ್ವರೂಪ, ಭಾಷೆಯ ಪ್ರಾಧಾನ್ಯ, ಖಚಿತವಾದ ಅರ್ಥಕೊಡುವ ಶಬ್ದಗಳ ಬಳಕೆ ಇವು ಆ ವಿಮರ್ಶಾನ ಮಾರ್ಗದ ಮುಖ್ಯ ಲಕ್ಷಣಗಳು.

ಎಲ್.ಎಲ್.ಶೇಷಗಿರಿರಾಯರು ಹೇಳುವಂತೆ' ನವ್ಯ ವಿಮರ್ಶೆಯು ದೊಡ್ಡ ಸಾಧನೆಗಳು ಇವು: ಕೃತಿಯ ಮೇಲೆ ವಿಮರ್ಶೆಯ ಗಮನ ಕೇಂದ್ರಿಕರಿಸುವಂತೆ ಮಾಡಿದ್ದು, ವಿಮರ್ಶೆ ಖಚಿತವಾಗುವಂತೆ ಮಾಡಿದ್ದು, ಪಾರಿಭಾಷಿಕ ಶಬ್ದಗಳನ್ನು ಬೆಳೆಸಿದ್ದು. ನವೋದಯದ ಶ್ರೇಷ್ಠ ವಿಮರ್ಶಕರೂ ಕೃತಿಯುತ್ತ ಗಮನಹರಿಸುತ್ತಿದ್ದರು. ಆದರೆ ಕೃತಿಯ ವಸ್ತುವಿಗೇ ಹೆಚ್ಚು ಪ್ರಾಧಾನ್ಯ ದೊರೆಯುತ್ತಿತ್ತು. 'ಶ್ರೇಷ್ಠಕೃತಿ', 'ಅದ್ಭುತವಾಗಿದೆ', 'ಸುಂದರವಾಗಿದೆ'ಹೀಗೆ ಕೃತಿಯ ವಿಮರ್ಶೆ ಮುಗಿಸುವುದು ಬಹುಮಂದಿ ವಿಮರ್ಶಕರ ಪರಿಪಾಠವಾಗಿತ್ತು. ಪ್ರಗತಿಶೀಲ ವಿಮರ್ಶೆಯಂತೂ ಕೃತಿಯ ವಸ್ತುವಿಗೇ ಪ್ರಾಧಾನ್ಯ ನೀಡಿತು. ನವ್ಯ ವಿಮರ್ಶೆ, ವಿಮರ್ಶಕನ ಪ್ರತಿ ಅಭಿಪ್ರಾಯವನ್ನೂ ವ್ಯಾಖ್ಯಾನವನ್ನೂ ಕೃತಿಯಿಂದ ಸಮರ್ಥಿಸುವುದನ್ನು ಅನಿವಾರ್ಯ ಮಾಡಿತು.

ಕನ್ನಡ ವಿಮರ್ಶೆಯು ಹೊರಳು ದಾರಿಯಲ್ಲಿ ಬಂದ ಒಂದು ಮಹತ್ವದ ವಿಮರ್ಶಾಕೃತಿಯೆಂದರೆ 1962 ರಲ್ಲಿ ಪ್ರಕಟವಾದ ಕೀರ್ತಿನಾಥ ಕುರ್ತುಕೋಟಿಯವರ 'ಯುಗಧರ್ಮ ಹಾಗೂ ಸಾಹಿತ್ಯ ದರ್ಶನ', ಆಕೃತಿಯಲ್ಲಿ ಆಧುನಿಕ ಕನ್ನಡ ಸಾಹಿತ್ಯ ಆವರೆಗಿನ ಸುಮಾರು 35-40ವರ್ಷಗಳ ನಡೆಯಲ್ಲಿ ಕಂಡ ಮಹತ್ವದ ಕೃತಿಗಳನ್ನು ವಿಮರ್ಶಿಸಲಾಗಿತ್ತು. ನವ್ಯ ವಿಮರ್ಶೆಯ ಪ್ರಾರಂಭ ಗೋಪಾಲಕೃಷ್ಣ ಅಡಿಗರು 'ನಡೆದು ಬಂದ ದಾರಿ' ಸಂಗ್ರಹಕ್ಕೆ ಬರೆದ ಮುನ್ನುಡಿಯಿಂದ ಒಂದು ಆಕಾರ ಕಂಡು ಕೊಂಡಿತು ಎನ್ನಬಹುದು. ಅವರು 1966ರಲ್ಲಿ ಪ್ರಕಟಿಸಿದ 'ಮಣ್ಣಿನ ವಾಸನೆ' ವಿಮರ್ಶಾಕೃತಿಯೂ ನವ್ಯ ವಿಮರ್ಶೆಗೆ ಅಡಿಪಾಯ ಹಾಕಿದ ಕೃತಿಗಳನ್ನು ಅದರ ಜೊತೆಗೆ ಆ ಕಾಲದ ಹಲವಾರು ಸಾಹಿತ್ಯಕ ನಿಯತಕಾಲಿಕಗಳು ಗಮನಾರ್ಹ. ಅವುಗಳಲ್ಲಿ ಸಾಕ್ಷಿ, ಸಂಕ್ರಮಣ, ಮನ್ವಂತರ ಮೊದಲಾದವು ನವ್ಯ ವಿಮರ್ಶೆಯ ಬೆಳವಣಿಗೆ ಪ್ರೋತ್ಸಾಹಕವಾಗಿ ನಿಂತವು. 'ಸಾಕ್ಷಿಯ' ಮೊದಲ ಸಂಚಿಕೆಗೆ ಬರೆದ ಮುನ್ನುಡಿಯಲ್ಲಿ ಅಡಿಗರು ನವ್ಯ ವಿಮರ್ಶೆಯ ಸ್ವರೂಪವನ್ನು ಹೀಗೆ ಅರ್ಥೈಸಿದ್ದಾರೆ.

"ವಿಮರ್ಶಕನ ಮೊದಲನೆಯ ಕೆಲಸ ಕೃತಿಯ ಆಮೂಲಾಗ್ರವಾದ ಅಭ್ಯಾಸ ; ಈ ಅಭ್ಯಾಸಕ್ಕೆ ತಕ್ಕ ಊಹಾಶಕ್ತಿ, ಭಾಷಾಜ್ಞಾನ, ವಿನಯ ಮತ್ತು ತಾಳ್ಮೆ ಅತ್ಯಗತ್ಯ.... ಈವರೆಗಿನ ನಮ್ಮ ವಿಮರ್ಶೆ ಸ್ನೇಹಿತರ ಬಗ್ಗೆ ದಾಕ್ಷಿಣ್ಯ, ದೊಡ್ಡವರ ಬಗ್ಗೆ ಭಯ, ಮೂರನೆಯವರ ಬಗ್ಗೆ ಔದಾಸೀನ್ಯ ಅಥವಾ ನಿಷ್ಕಾರಣ ವಿರೋಧ - ಇವುಗಳಿಂದ ಸಾಮಾನ್ಯವಾಗಿ ಮಲಿನವಾಗಿದೆ. ಎಂದರೆ ವಿಮರ್ಶನ ಕಾರ್ಯವು ವ್ಯಕ್ತಿ ನಿಷ್ಠವಾಗಿತ್ತೇ ಹೊರತು ಕೃತಿನಿಷ್ಠವಾಗಿರಲಿಲ್ಲ... ವಸ್ತು ನಿಷ್ಠ ಯೋಚನೆ ವ್ಯವಹಾರಗಳಿಲ್ಲದೆ, ಕೃತಿನಿಷ್ಠ ವಾಚನ ವಿಮರ್ಶನಗಳಿಲ್ಲದೆ ಬುದ್ಧಿ ಜೀವನ ವಿಕಾಸವಾಗುವುದಿಲ್ಲ. ಹೃದಯ ಶುದ್ಧವಾಗುವುದಿಲ್ಲ;ಬದಲಾಗಿ ಬುದ್ಧಿದಾರಿದ್ರ್ಯ, ಹೃದಯ ಕಾರ್ಪಣ್ಯ ಇವು ಹಬ್ಬುತ್ತವೆ.'

ಕೃತಿನಿಷ್ಠ ವಿಮರ್ಶನ ಪರಂಪರೆಯನ್ನು ಬೆಳೆಸಿದವರಲ್ಲಿ ದಿವಂಗತ ಎಂ.ಜಿ.ಕೃಷ್ಣಮೂರ್ತಿಯವರೂ ಒಬ್ಬರು. ಅವರ ಪ್ರಕಾರ 'ಸಾಹಿತ್ಯ ವಿಮರ್ಶೆಯೆಂದರೆ ಪ್ರಮುಖವಾಗಿ ಅದರ ಅಂಗಗಳೂ ಅದರ ತಂತ್ರದ ಪರೀಕ್ಷೆ, ಕೃತಿಯಲ್ಲಿ ರಚನೆ, ಶಿಲ್ಪ, ಪ್ರತಿಮೆ, ಭಾಷೆ ಇವು ಮುಖ್ಯ. ಇವುಗಳ ಹೊರತಾಗಿ ಕೃತಿಯ ಅಸ್ತಿತ್ವವಿಲ್ಲವೆನ್ನುವುದೇ ನವ್ಯ ವಿಮರ್ಶೆಯ ಕೇಂದ್ರ ಸೂತ್ರ'.

ನವ್ಯ ಸಾಹಿತ್ಯ ಮಾರ್ಗದ ಕೆಲವು ಬಹುಮುಖ್ಯ ವಿಮರ್ಶಕರಲ್ಲಿ ಆ ಮಾರ್ಗದ ಕವಿಗಳೂ, ನಾಟಕಕಾರರೂ, ಕತೆಗಾರರೂ ಆಗಿದ್ದವರೂ ಇದ್ದರು. ಈ ಮಾರ್ಗದ ಬಹುಮುಖ್ಯ ವಿಮರ್ಶಕರೆಂದರೆ, ಕೀರ್ತಿನಾಥ ಕುರ್ತುಕೋಟಿ, ಯು.ಆರ್.ಅನಂತಮೂರ್ತಿ, ಎಂ.ಜಿ.ಕೃಷ್ಣಮೂರ್ತಿ, ಜಿ.ಎಚ್. ನಾಯಕ, ಶಂಕರ ಮೊಕಾಶಿ ಪುಣೇಕರ, ರಾಜೀವ ತಾರಾನಾಥ, ಪೋಲಂಕಿ ರಾಮಮೂರ್ತಿ, ಗಿರಡ್ಡಿ ಗೋವಿಂದರಾಜ, ಪಿ.ಲಂಕೇಶ್, ಹೆಚ್.ಎಂ. ಚನ್ನಯ್ಯ, ಎಸ್.ಎಸ್.ಲಕ್ಷ್ಮೀನಾರಾಯಣ ಭಟ್ಟ, ಕೆ.ವಿ.ನಾರಾಯಣ, ಕಿ.ರಂ. ನಾಗರಾಜು, ರಾಜೇಂದ್ರ ಚೆನ್ನಿ, ಜಿ.ಎಸ್. ಆಮೂರ, ಸುಮತೀಂದ್ರನಾಡಿಗ, ಡಿ.ಆರ್.ನಾಗರಾಜ, ಶಾಂತಿನಾಥ ದೇಸಾಯಿ, ಟಿ.ಪಿ.ಅಶೋಕ, ಎಚ್.ಎಸ್.ರಾಘವೇಂದ್ರರಾವ್, ನರಹಳ್ಳಿ ಬಾಲಸುಬ್ರಹ್ಮಣ್ಯ, ಓ.ಎಲ್. ನಾಗಭೂಷಣಸ್ವಾಮಿ, ಬಿ. ದಾಮೋಧರರಾವ್, ಅರವಿಂದ ನಾಡಕರ್ಣಿ ಮುಂತಾದವರು.

ಈ ಮಾರ್ಗದ ಮತ್ತೊಂದು ವಿಶೇಷವೆಂದರೆ , ವಿಮರ್ಶೆಯೆನ್ನುವುದು ಇತರ ಸೃಜನ ಶೀಲ ಪ್ರಕಾರಗಳಷ್ಟೇ ಮುಖ್ಯವಾದ ಒಂದು ಶಿಸ್ತಾಗಿ ಬೆಳೆದದ್ದು. ಹಾಗಾಗಿ ಜಿ.ಎಸ್.ಅಮೂರ, ಜಿ.ಎಚ್.ನಾಯಕ, ಓ.ಎಲ್.ನಾಗಭೂಷಣಸ್ವಾಮಿ, ಟಿ.ಪಿ.ಅಶೋಕ, ನರಹಳ್ಳಿ ಬಾಲಸುಬ್ರಹ್ಮಣ್ಯ, ಡಿ.ಆರ್.ನಾಗರಾಜ, ಪೋಲಂಕಿ ರಾಮಮೂರ್ತಿ ಮುಂತಾದ ಹಲವರು ವಿಮರ್ಶೆಯ ಕ್ಷೇತ್ರದಲ್ಲಿ ಮಾತ್ರ ವ್ಯವಸಾಯ ಮಾಡಿದರು. ನವ್ಯ ಸಾಹಿತ್ಯ ಸಾಮಾನ್ಯ ಓದುಗರಿಗೆ ದೂರವಾದ ಕಾರಣದಿಂದಲೂ ಕವಿ ಮತ್ತು ಓದುಗನ ಮಧ್ಯೆ ಒಬ್ಬ ವಿಮರ್ಶಕ ಅಗತ್ಯ ಎಂಬ ಪರಿಸ್ಥಿತಿ ಬಂದದ್ದರಿಂದಲೂ 'ವಿಮರ್ಶಕ'ಇಲ್ಲಿ ಬಹುಮುಖ್ಯನಾದ ಎಂಬ ಮಾತೂ ಇದೆ. ಅದು ಸ್ವಲ್ಪ ಚರ್ಚಾಸ್ಪದವಾದ ಮಾತು.

4.2.6 ನವ್ಯ ಸಾಹಿತ್ಯದ ಶಕ್ತಿ ಮತ್ತು ಮಿತಿಗಳು

ಕನ್ನಡ ನವೋದಯ ಮತ್ತು ಪ್ರಗತಿಶೀಲ ಪಂಥಗಳಿಗೆ ಪ್ರತಿಭಟನೆ ಎನ್ನುವಂತೆ ಹುಟ್ಟಿ ಬೆಳೆದ ನವ್ಯ ಪಂಥ ಆ ಎರಡೂ ಪಂಥಗಳಲ್ಲಿದ್ದ ಕೊರತೆಯನ್ನು ತಾನು ತುಂಬಿಕೊಡಲು ಪ್ರಯತ್ನಿಸಿತ್ತು. ನವ್ಯ ಸಾಹಿತಿಗೆ ಮುಖ್ಯವಾದದ್ದು ಸೌಂದರ್ಯಾನುಭೂತಿ, ಆನಂಧಾನುಭೂತಿಗಳನ್ನು ತನ್ನ ಕೃತಿಯ ಮುಖಾಂತರ ಉಂಟುಮಾಡುವುದಲ್ಲ, ಬದಲಾಗಿ ತನ್ನ ಆತ್ಮಶೋಧನೆ ಮತ್ತು ಅನುಭವ ಶೋಧನೆ, ಈ ಶೋಧನೆಯ ಪ್ರಕ್ರಿಯೆಯನ್ನೇ ಭಾಷೆಯಲ್ಲಿ ಪುನಃಸೃಷ್ಟಿಸಿ ಅವನು ಓದುಗನಿಗೆ ಒಪ್ಪಿಸಿಬಿಡುತ್ತಾನೆ. ಹಾಗಾಗಿ ನವ್ಯ ಬರಹಗಾರನಿಗೆ ಸಂವಹನಕ್ಕಿಂತ ಶೋಧನೆಯೇ ಮುಖ್ಯ.

ಸಾಹಿತ್ಯದಲ್ಲಿ ಭಾಷೆಯ ಬಳಕೆಯನ್ನು ಅತ್ಯಂತ ಪ್ರಜ್ಞಾಪೂರ್ವಕ ಎನ್ನುವಂತೆ ಮಾಡಿದ್ದು ನವ್ಯಸಾಹಿತಿಗಳೇ. ಬೇರೆಯವರ ಮೇಲೆ ಪರಿಣಾಮ ಬೀರುವ ಉದ್ದೇಶದಿಂದಲೇ ಬಳಸುವ 'ರೆಟರಿಕ್' ಭಾಷೆಯನ್ನು ನವ್ಯರು ಬಳಸುವುದಿಲ್ಲ. ಹಾಗಾಗಿ ಇವರು ಭಾಷೆ ಮತ್ತು ಅರ್ಥಕ್ಕೆ ತುಂಬಾ ಮಹತ್ವ ಕೊಟ್ಟವರು.

ಸುಮಾರು ಕಾಲು ಶತಮಾನ ನವ್ಯ ಸಾಹಿತ್ಯ ತುಂಬಾ ಚಲಾವಣೆಯಲ್ಲಿತ್ತು. ತನ್ನಲ್ಲಿಯೇ ಸತ್ವವಿಲ್ಲದಿದ್ದರೆ ಈ ಸಾಹಿತ್ಯ ಇಷ್ಟು ಬಾಳಿಕೆ ಬರುವುದು ಸಾಧ್ಯವಾಗುತ್ತಿರಲಿಲ್ಲ ಎಂಬುದನನ್ನು ಯಾರಾದರೂ ಒಪ್ಪಬೇಕು. ನವೋದಯದ ಶಿಖರ ಪ್ರತಿಭೆಗಳಲ್ಲೊಬ್ಬರಾ ಬೇಂದ್ರೆಯವರೂ ಈ ಪಂಥದ ಪ್ರಭಾವಕ್ಕೆ ಒಳಗಾದರು, ನವೋದಯದ ಮತ್ತೊಬ್ಬರು ಪ್ರಸಿದ್ಧ ಕವಿ ಕೆ.ಎಸ್.ನರಸಿಂಹಸ್ವಾಮಿ ಅವರಿಗೆ ನವ್ಯ ವಿಧಾನವೇ ಪ್ರಿಯವಾಯಿತು. ನವೋದಯ ಮಾರ್ಗದಲ್ಲೇ ಸಾಹಿತ್ಯ ರಚನೆಯನ್ನು ಆರಂಭಿಸಿದ ಜಿ.ಎಸ್.ಶಿವರುದ್ರಪ್ಪ, ಚನ್ನವೀರಕಣವಿ, ಲಕ್ಷ್ಮೀನಾರಾಯಣ ಭಟ್ಟ ಮುಂತಾದವರು ನವ್ಯದ ಉತ್ತಮಾಂಶಗಳನ್ನೂ ಹೀರಿಕೊಂಡು ಕಾವ್ಯ ರಚನೆಗೆ ತೊಡಗಿದರು.

ನವ್ಯರು ವ್ಯಕ್ತಿಯ ಮನಸ್ಸಿನ ಸೂಕ್ಷ್ಮ ಪದರುಗಳನ್ನು, ಒಳತೋಟಿಗಳನ್ನು ಅನಾವರಣ ಮಾಡಲು ಪ್ರಯತ್ನಿಸಿದರು. ಸಾಮಾಜಿಕವಾದ ಏರುಪೇರುಗಳನ್ನು, ಅವು ವ್ಯಕ್ತಿಯ ಸಂವೇಧನೆಯ ಮೇಲೆ ಉಂಟುಮಾಡುವ ಪರಿಣಾಮಗಳ ಮೂಲಕ ಅರ್ಥ ಮಾಡಿಕೊಳ್ಳುವುದು ಅವರ ಉದ್ದೇಶವಾಯಿತು. ಸಾಹಿತ್ಯ ಬಗೆಗಿನ ಇವರ ಅಪೇಕ್ಷೆಯೇ ಸೂಕ್ಷ್ಮವೂ, ಸಂಕೀರ್ಣವೂ ಆದುದರಿಂದ ಇವರ ಬರವಣಿಗೆಯೂ ಸಂಕೀರ್ಣತೆಯ ಕಡೆಗೆ ನಡೆದು ಹಲವೊಮ್ಮೆ 'ಕ್ಲಿಷ್ಟ'ಎನಿಸಿಕೊಂಡಿತು. ನವ್ಯ ಸಾಹಿತ್ಯವೆನ್ನುವುದು ಬರಿಯ ಬೌದ್ಧಿಕ ಕಸರತ್ತಾಗಿ ಅದರಲ್ಲಿ ಬದುಕಿನ ಸ್ಪರ್ಶವೇ ಇಲ್ಲ. ಹಾಗೂ ಇದು ಬರೀ ಸುಶಿಕ್ಷಿತ ಮಧ್ಯಮವರ್ಗದ ಸ್ವತ್ತಾಗಿ ಹೋಗಿದೆ ಎಂಬ ಅಭಿಪ್ರಾಯಗಳು ತಲೆದೋರಿದವು. ಹಾಗಾಗಿ ನವ್ಯಸಾಹಿತ್ಯ ಬದಲಾಗುತ್ತಿರುವ ಪರಿಸರದ ಹೊಸ ಜವಾಬ್ದಾರಿಗಳನ್ನು ಹೊರಲಾರದೆಂದು ಹೇಳುವ ತೇಜಸ್ವಿಯವರು ಅದಕ್ಕೆ ಕಾರಣವಾಗಿ ಈ ಮೂರು ಅಂಶಗಳನ್ನು ಗುರುತಿಸುತ್ತಾರೆ. ಅವು, **'ಅದರ ಸಾಂಕೇತಿಕ ಶೈಲಿ ತಂತ್ರಗಳು, ಕೇವಲ ಉಪಾಧ್ಯಾಯರೇ ಹೆಚ್ಚಾಗಿರುವ ಅದರ ಸಾಹಿತಿ ಅವರ ಕ್ರಾಂತಿಕಾರತನ'**. ನವ್ಯ ಸಾಹಿತ್ಯ ಕನ್ನಡ ಸಾಹಿತ್ಯದಲ್ಲಿ ಸಾಹಿತಿಗೂ ಓದುಗನಿಗೂ ಮಧ್ಯೆ ಒಂದು ಕಂದಕವನ್ನು ನಿರ್ಮಿಸಿತು ಎನ್ನುವ ಆರೋಪ

ಆಗಾಗ ಕೇಳಿಬರುತ್ತಲೇ ಇರುತ್ತದೆ. ನವ್ಯರು ಅರ್ಥವಾಗುವಂತೆ ಬರೆಯುವುದಿಲ್ಲ ಎಂಬ ಅಭಿಪ್ರಾಯ ವ್ಯಾಪಕವಾದಾಗ ಗೋಪಾಲ ಕೃಷ್ಣ ಅಡಿಗರೇ ಅದಕ್ಕೆ ತಮ್ಮೊಂದು ಪದ್ಯದಲ್ಲಿ ತೀವ್ರವಾಗಿ ಪ್ರತಿಕ್ರಿಯಿಸಿದರು ('ಅರ್ಥವಾಗುವ ಹಾಗೆ ಬರೆಯಬೇಕು) "ಅರ್ಥವಾಗುವ ಹಾಗೆ ಬರೆಯ ಬೇಕೆಂದ ಹಿರಿಯರು 'ತಮಗೆ' ಎಂದು ಮಾತು ಸೇರಿಸಿದ್ದಕ್ಕೆ ಶಾಬಾಸೆನ್ನಲೇ ಬೇಕು. ಆದರೂ ಅರ್ಥ ಇರುವಹಾಗೆ ಎಂದಿದ್ದರೆ ಅರ್ಥಪೂರ್ಣವಾಗುತ್ತಿತ್ತು ಮಾತು".

ನವ್ಯರ ಪದ್ಯಗಳು ಅರ್ಥವಾಗುವುದಿಲ್ಲ ಎನ್ನುವುದಾದರೆ ಕುವೆಂಪು ಬೇಂದ್ರೆಯವರ ಪದ್ಯಗಳೆಲ್ಲವನ್ನೂ ಓದುಗರ ಅರ್ಥಮಾಡಿಕೊಂಡು ಬಿಟ್ಟಿದ್ದರೇ ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಈ ಪ್ರಶ್ನೆಗೆ ಪದ - ವಿರೋಧದ ಉತ್ತರ ದೊರೆಯಲೂ ಬಹುದು. ಆದರೂ ಒಂದು ಮಾತು ಒಪ್ಪತಕ್ಕುದು ನವ್ಯ ಸಾಹಿತ್ಯ ನವೋದಯ-ಪ್ರಗತಿ ಶೀಲ ಸಾಹಿತ್ಯಗಳಂಥ ವಿಶಾಲ ಓದುಗ ವೃತ್ತವನ್ನು ಪಡೆಯಲಿಲ್ಲ. ನವ್ಯ ಸಾಹಿತ್ಯದ ಬಗ್ಗೆ ಆ ಮಾರ್ಗದ ಪ್ರಮುಖ ಲೇಖಕರೇ ಆದ ಯು.ಆರ್. ಅನಂತಮೂರ್ತಿಯವರ ಹೇಳುವ ಮಾತುಗಳು ಮಾತುಗಳಿಂದ ನಾವು ಹೀಗೆ ಗಮನಿಸಬಹುದು.

"ನವೋದಯದ ಕಾಲದ ಲೇಖಕರಲ್ಲಿ ಕೆಲವರು ತಮಗೊಂದು ವಿಶಿಷ್ಟ ವ್ಯಕ್ತಿತ್ವವಿಲ್ಲದಿದ್ದರೂ ಇದೆಯೆಂದು ತಮ್ಮ ಆವರಣ ಮೌಲ್ಯ ನಿಜವೆಂದು ಅನ್ನಿಸದಿದ್ದರೂ ಅನಿಸಿದೆಯೆಂದು ಭ್ರಮಿಸಿ ಬರೆಯುತ್ತಿದ್ದರು. ಈಗಿನವರಲ್ಲಿ (ನವ್ಯರಲ್ಲಿ) ನೋಡಿದರೆ ಯಾವ ಮೌಲ್ಯವೂ ನಿಜವಲ್ಲವೆಂದೂ, ತಮಗೆ ವ್ಯಕ್ತಿತ್ವವೇ ಇಲ್ಲವೆಂದೂ ಆತ್ಮಾವಹೇಳನೆಯಲ್ಲಿ ತಾನೊಂದು ಹುಳುವಿದ್ದಂತೆ ಎಂದು ಹಿಗ್ಗುತ್ತ ಬರೆಯುವವರೇ ಹೆಚ್ಚಾಗಿದ್ದಾರೆ. .... ತಾವೇ ಪಾಪಿಗಳಿರಬಹುದೆಂದು ಎದೆಗುಂದಿ ತಬ್ಬಲಿಗಳಾಗಿದ್ದ, ಇಡೀ ಜನಾಂಗದ ಅನುಭವದಲ್ಲಿ ಬೇರು ಬಿಟ್ಟ ಸಾಹಿತ್ಯದ ಕೃತಿಗಳು - ಪಿಂಟರ್ - ಕಾಫ್ಕ, ಕಮೂ ಅವರ ಕೃತಿಗಳು - ನಮ್ಮವರಿಗೆ ಫಾರ್ಮುಲಾ ಆಗಿಬಿಟ್ಟರೆ ಹೇಗೆ?

ಎಲ್.ಎಸ್.ಶೇಷಗಿರಿರಾಯರ ಇನ್ನೊಂದು ಹೇಳಿಕೆಯೂ ಇಲ್ಲಿ ಅತ್ಯಂತ ಚಿಂತನಾರ್ಹವಾದು ದೆನಿಸುತ್ತದೆ.

"ಪ್ರಾಯಶಃ ನವ್ಯ ಸಾಹಿತ್ಯದ ಘೋಷಿತ ತತ್ವಗಳ ದೃಷ್ಟಿಯಿಂದಲೂ, ಸಾಹಿತ್ಯದಾಚೆಯ ಜೀವನದ ದೃಷ್ಟಿಯಿಂದಲೂ, ಈ ಸಾಹಿತ್ಯವನ್ನು ಕುರಿತು ಮಾಡಬಹುದಾದ ಮತ್ತೊಂದು ಆಕ್ಷೇಪಣೆ ಇದೆ. ನವೋದಯ ಸಾಹಿತ್ಯ ಸಮಗ್ರವಾಗಿ ಮಾನವ ಸ್ವಭಾವವನ್ನು ಚಿತ್ರಿಸಲಿಲ್ಲ ಎಂಬುದು ನವ್ಯದ ಆಕ್ಷೇಪಣೆ, ಆದರೆ ನವ್ಯ ಸಾಹಿತ್ಯವನ್ನೆಲ್ಲ ಓದಿದರೂ ಮಾನವ ಕೋಟಿಯಲ್ಲಿ ಯೇಸು, ವಿವೇಕಾನಂದ, ಸಾಕ್ರೆಟೀಸ್, ಬುದ್ಧ, ಧೊಂಡೋಕೇಶವ ಕರ್ವೆ, ಭಗತ್‌ಸಿಂಗ್, ಅಶ್ಫಾಕ್, ಉಲ್ಲಾಖಾನ್, ಅಂಬೇಡ್ಕರ್, ಗಾಂಧೀಜೀ, ಸರ್ದಾರ್‌ಪಟೇಲ್, ಮದರ ಥೇರೇಸ ಇಂತಹ ವ್ಯಕ್ತಿಗಳಿರುವುದು ಸಾಧ್ಯ ಎಂಬ ಕಲ್ಪನೆ ಬರುವುದಿಲ್ಲ. ಫ್ರಾಯ್ಡ್‌ನ ಸಿದ್ಧಾಂತಗಳೇನೇ ಇರಲಿ, ಈ ಮಾನವ ಹಿರಿಯ ಶಿಖರಗಳು ಕಡೆಗಣಿಸಲಾಗದ ವಾಸ್ತವಿಕತೆಗಳು ಇಂತಹವರು ಇರುವುದು ಸಾಧ್ಯ ಎಂಬ ಕಲ್ಪನೆಯೂ ಬಾರದಂತೆ ಮನಸ್ಸನ್ನು ವಿಶ್ಲೇಷಿಸುವ, ಮನಸ್ಸಿನ ಪದರಪದರಗಳಲ್ಲಿ ಸುಡುವ ಕಾಮದ ಕಂಡವನ್ನೆ ತೋರಿಸುವ, ಮಾನವ ದೌರ್ಬಲ್ಯದ ಮೇಲೆಯೇ ಒತ್ತನ್ನು ಹಾಕುವ ಸಾಹಿತ್ಯ ವಾಸ್ತವಿಕತೆಯನ್ನು ಕಡೆಗಣಿಸಿದೆ. ಮಾನವ ಸ್ವಭಾವವನ್ನು ಸಮಗ್ರವಾಗಿ ಚಿತ್ರಿಸಲಿಲ್ಲ ಎಂಬುದು ಸ್ಪಷ್ಟ. ಸ್ವಾತಂತ್ರ್ಯ ಬಂದ ನಂತರ ರಾಷ್ಟ್ರವನ್ನು ಕಟ್ಟುವ ಈ ಕಾಲದಲ್ಲಿ ಈ ಮನೋಭಾವ ಸಾಹಿತ್ಯದಲ್ಲಿ ಪ್ರತಿಷ್ಠಿತವಾದದ್ದು ದುರದೃಷ್ಟ ಮಾನವನಲ್ಲಿ ಸಹಜವಾಗಿ ಮನೆ ಮಾಡಿರುವ ದೌರ್ಬಲ್ಯಗಳನ್ನು ಮರೆಯಬೇಕಾಗಿಲ್ಲ. ಆದರೆ ದೇಶಭಕ್ತ ಸೂಳೇ ಮಕ್ಕಳಷ್ಟೆ, ಸತ್ಯ, ಮಾನವ ದೌರ್ಬಲ್ಯಗಳ ಗೂಡು ಎಂಬುದಷ್ಟೇ ಚಿತ್ರತವಾದದ್ದು ನಾಡಿನ ದೌರ್ಭಾಗ್ಯ ವಿಡಂಬನೆ ಟೀಕೆ ಸುಲಭವಾಗಿ ಜನಪ್ರಿಯತೆ ಗಳಿಸುತ್ತದೆ. ಆದರೆ ಸಮಾಜದ ಆರೋಗ್ಯದ ದೃಷ್ಟಿಯಿಂದ ವಿಡಂಬನೆಯಷ್ಟೆ ಸಾಲದು ಅತಿ ಭಾವುಕತೆಗೆ ಹೆದರಿ ಭಾವನೆಯನ್ನು ಕೈ ಬಿಡುವುದೂ ಜಾಣತನವಲ್ಲ ನವೋದಯ ಮಧ್ಯಮ ವರ್ಗದ ಸಾಹಿತ್ಯವಾದರೆ ನವ್ಯ ಸಾಹಿತ್ಯ ಬಹುಮಟ್ಟಿಗೆ ನಗರದ ಜಾಣರ, ಫ್ರಾಯ್ಡ್, ಯೂಂಗ್,

ಮೆಕ್‌ಡೊವೆಲ್, ಡಾರ್ವಿನ್, ಗ್ರೀಕ್ ಗಂಭೀರ ನಾಟಕಗಳು, ಕಾಫ್ಕ, ಕಮೂ, ಬೆಕೆಟ್‌ರನ್ನು ಓದಿದ 'ಸೊಫಿಸ್ಟಿಕೇಟೆಡ್' ವರ್ಗದ ಸಾಹಿತ್ಯವಾಯಿತು ಎನ್ನಬೇಕು. 'ಮುಕ್ತಿ' 'ವಿಕ್ಷೇಪ', 'ಬಿರುಕು', 'ಸಂಸ್ಕಾರ', 'ಹಳದಿಮೀನು', 'ಗತಿಸ್ಥಿತಿ'- ಇವುಗಳಲ್ಲಿ ಎಷ್ಟು ಗ್ರಾಮ ಜೀವನದಲ್ಲಿ ಬೇರು ಬಿಟ್ಟಿವೆ? ಸ್ವಲ್ಪ ಮಟ್ಟಿಗೆ 'ಭಾರತೀಪುರ' ಈ ಆಕ್ಷೇಪಣೆಗೆ ಹೊರತಾದದ್ದು ಎನ್ನಬೇಕು. ಆದರೆ ಅದರ ನಾಯಕ ಥೇಮ್ಸ್ ನದಿಯ ನೀರು ಕುಡಿದು ಮಾರ್ಗರೇಟಳನ್ನು ತಲೆಯಲ್ಲಿ ಹೊತ್ತು. ತಾನು ಸ್ವತಃ ಷರಾಯಿಯ ಶುಭ್ರತೆ ಆಕಾರಗಳಿಗೆ ಒಂದಿಷ್ಟು ಲೋಪ ಬಾರದಂತೆ ಬಾಳುವ ಕ್ರಾಂತಿಕಾರಿ.

ಒಟ್ಟಾರೆಯಾಗಿ ತನ್ನೆಲ್ಲಾ ಮತಿಯ ದೌರ್ಬಲ್ಯಗಳ ನಡುವೆಯೂ ನವ್ಯ ಸಾಹಿತ್ಯ ಸಾಹಿತ್ಯದ ಹಲವಾರು ಹೊಸ ಸಾಧ್ಯತೆಗಳನ್ನು ತೆರೆದು ತೋರಿಸಿತು. ಭಾಷೆಯ 'ಅರ್ಥವಂತಿಕೆ'ಯನ್ನು ವಿಸ್ತರಿಸಿತು. ಕನ್ನಡ ಸಾಹಿತ್ಯದ ಬಹು ದೊಡ್ಡ ಕೊರತೆಯನ್ನು ತುಂಬಿಕೊಟ್ಟಿತು ಎನ್ನುವುದನ್ನು ಯಾರು ಅಲ್ಲಗಳೆಯುವಂತಿಲ್ಲ.

4.2.7 ಸ್ವಪರೀಕ್ಷೆಯ ಪ್ರಶ್ನೆಗಳು

4.2.7.1 ನವ್ಯ ಕಾವ್ಯಕ್ಕೆ ಸಂವಾದಿಯಾದ ಇಂಗ್ಲಿಷ್ ಪದ ಯಾವುದು?

....

....

....

4.2.7.2 ಹಾಪ್‌ಕಿನ್ಸ್‌ನ ಕವನಗಳನ್ನು ಪ್ರಕಟಿಸಿದವರು ಯಾರು ?

....

....

....

4.2.7.3 'ನವ್ಯ'ಮಾರ್ಗವನ್ನು ಕನ್ನಡದಲ್ಲಿ ಮೊದಲು ಪ್ರಸ್ತಾಪಿಸಿದವರು ಯಾರು?

....

....

....

4.2.7.4 'ನವ್ಯ ಸಾಹಿತ್ಯದ ಹರಿಹಾರ' ಎಂದು ಯಾರನ್ನು ಕರೆಯುತ್ತಾರೆ?

....

....

....

4.2.7.5 'ಏಳುಸುತ್ತಿನ ಕೋಟೆ' 'ಬುವಿನೀಡಿದ ಸ್ಫೂರ್ತಿ' ಯಾರ ಕೃತಿಗಳು?

....

....

....

4.2.7.6 ಅಡಿಗರು ಸರ್ವೋದಯ ಮಾರ್ಗದಲ್ಲಿ ಬರೆದ ಕವನಸಂಗ್ರಹಗಳು ಯಾವುವು?

....

....

....

4.2.7.7 ಕರ್ತೃ ಯಾರೆಂಬುದು ಗೊತ್ತಿಲ್ಲದ, ಎರಡು ಕಾವ್ಯ ಕವನಗಳು ಯಾವ ಹೆಸರಿನಲ್ಲಿ ಪ್ರಕವಾಗಿವೆ?

....

....

....

4.2.7.8 ಜಾನಪದ ರಂಗಭೂಮಿಯ ಸತ್ವವನ್ನು ಮೈಗೂಡಿಸಿಕೊಂಡಿರುವ ಕಂಬಾರರ ನಾಟಕ ಯಾವುದು?

....

....

....

4.2.7.9 ಚಂಪಾ ಅವರ ಅಸಂಗತ ನಾಟಕಗಳು ಯಾವುವು?

....

....

....

4.2.7.10 'ನಲ್ಲಿಯಲ್ಲಿ ನೀರು ಬಂತು' ಯಾರು ಬರೆದ ಕತೆ?

....

....

....

4.2.7.11 'ಮಣ್ಣಿನ ವಾಸನೆ'ಯಾರ ಕೃತಿ?

....

....

....

4.2.7.12 ನವ್ಯ ಸಾಹಿತ್ಯದ ಕೆಲವು ಮುಖ್ಯವಾದ ವಿಮರ್ಶಕರ ಹೆಸರು ಹೇಳಿ.

....

....

....

4.2.8 ಘಟಕದ ಸಾರಾಂಶ

ನವೋದಯ ಮತ್ತು ಪ್ರಗತಿಶೀಲ ಪಂಥಗಳಂತೆಯೇ ನವ್ಯಪಂಥವೂ ಪಾಶ್ಚಾತ್ಯ ಸಾಹಿತ್ಯದಿಂದ ಪ್ರೇರಣೆ ಪಡೆದದ್ದು. ಇಂಗ್ಲಿಷ್‌ದ "Modern peotry"ಎಂಬುದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ನವ್ಯಕಾವ್ಯ' ಪದವನ್ನು ಮೊದಲು ಬಳಸಿದವರು ವಿ.ಕೃ.ಗೋಕಾಕ್ ಅವರು. ಒಟ್ಟು ಸಮಷ್ಟಿಯ ಸನ್ನಿವೇಶ ಉನ್ನತ ಸಂವೇದದಶೀಲನ ಮನಸ್ಸಿನಲ್ಲಿ ಹೇಗೆ ದಾಖಲಾಗುತ್ತದೆ ಅನುವುದನ್ನು ಗುರುತಿಸಿಕೊಳ್ಳುವ ನಿಷ್ಠುರವಾದ ಛಲ ನವ್ಯಸಾಹಿತ್ಯದಲ್ಲಿ ಕಾಣಿಸುತ್ತದೆ. ಕನ್ನಡದಲ್ಲಿ ನವ್ಯ ಸಾಹಿತ್ಯವನ್ನು ಅದರ ಖಚಿತವಾದ ಸ್ವರೂಪದಲ್ಲಿ ಬಳಕೆಗೆ ತಂದವರು ಕವಿ ಗೋಪಾಲಕೃಷ್ಣ ಅಡಿಗ ಅವರಿಗೆ ಸಲ್ಲುತ್ತದೆ. ಅವರ ಕೃಷ್ಣನ ಕೊಳಲು ಮತ್ತು ಹಿಮಗಿರಿಯ ಕಂದರ ನವ್ಯಮಾರ್ಗದಲ್ಲಿ ಪ್ರಕಟವಾದ ಮೊದಲ ಪದ್ಯಗಳು. ನವ್ಯ ಮಾರ್ಗದ ಮುಖ್ಯವಾದ ಪ್ರಕಾರಗಳೆಂದರೆ ಕಾವ್ಯ, ನಾಟಕ, ಸಣ್ಣಕತೆ, ಕಾದಂಬರಿ ಮತ್ತು ವಿಮರ್ಶೆ, ಕಾದಂಬರಿಯು ಇಪ್ಪತ್ತನೆಯ ಶತಮಾನದ ಅತ್ಯಂತ ಜನಪ್ರಿಯ ಸಾಹಿತ್ಯ ಪ್ರಕಾರವಾದರೂ ನವ್ಯರಿಗೆ ಕಾದಂಬರಿ ಅಷ್ಟಾಗಿ ಬಗ್ಗಲಿಲ್ಲ. ಆದರೆ ನಾಟಕದಲ್ಲಿ ಮಹತ್ವದ ರಚನೆಗಳು ಬೆಳಕು ಕಂಡವು. ನವ್ಯರ ಕಾಲದಲ್ಲಿ ಮಾತ್ರವೇ ಬಹಳ ಹುಲುಸಾಗಿ ಬೆಳೆದ ಕ್ಷೇತ್ರ ವೆಂದರೆ ವಿಮರ್ಶೆ.

ನವ್ಯ ಸಾಹಿತ್ಯ ಸುಮಾರು ಕಾಲು ಶತಮಾನಗಳ ಕಾಲ ಚಲಾವಣೆಯಲ್ಲಿತ್ತು ಆದರೆ ನವ್ಯ ಸಾಹಿತ್ಯವೆನ್ನುವುದು ಬರಿಯ ಬೌದ್ಧಿಕ ಕಸರತ್ತಾಗಿ ಬದುಕಿನ ಸ್ಪರ್ಶವನ್ನೇ ಪಡೆಯಲಿಲ್ಲ ಎನ್ನುವುದು ಆ ಪಂಥದ ಮೇಲಿರುವ ಒಂದು ಆರೋಪ ಮತ್ತೊಂದು ನವ್ಯ ಸಾಹಿತ್ಯ ಅರ್ಥವಾಗುದಿಲ್ಲ ಎನ್ನುವುದು. ಈ ಎರಡೂ ಮಾತುಗಳಲ್ಲಿ ಸತ್ಯವಿದೆಯಾದರೂ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಬಂದಿದ್ದ ಅವರೆಗಿನ ಕೊರತೆಯನ್ನು ನವ್ಯ ತುಂಬಿಕೊಟ್ಟಿತೆನ್ನುವುದು ಒಪ್ಪತಕ್ಕ ಮಾತು.

4.2.9 ಸ್ವಪರೀಕ್ಷೆಯ ಪ್ರಶ್ನೆಗಳಿಗೆ ಉತ್ತರಗಳು

4.2.9.1 Modern poetry (ಮಾಡರ್ನ್ ಪೊಯೆಟ್ರಿ)

4.2.9.2 ರಾಬರ್ಟ್ ಬ್ರಿಡ್ಜ್‌ಸ್

4.2.9.3 ವಿ.ಕೃ. ಗೋಕಾಕ್

4.2.9.4 ಎಂ. ಗೋಪಾಲಕೃಷ್ಣ ಅಡಿಗ

4.2.9.5 ಬಿ.ಸಿ.ರಾಮಚಂದ್ರ

4.2.9.6 ಭಾವತರಂಗ ಮತ್ತು ಕಟ್ಟುವೆವು ನಾವು

4.2.9.7 ನಳಿನೀ ದೇಶಪಾಂಡೆ

4.2.9.8 ಜೋ ಕುಮಾರ ಸ್ವಾಮಿ

4.2.9.9 ಅಪ್ಪ, ಕೊಡೆಗಳು, ಕುಂಟಾ ಕುಂಟಾ ಕುರವತ್ತಿ, ಟಂಗರಬುಡ್ಡಣ್ಣ, ಚಾಳೇಶ, ಗೋಕರ್ಣದ ಗೌಡಶಾನಿ ಮೊದಲಾದವು ಗಮನಾರ್ಹ.

4.2.9.10 ಕೆ. ಸದಾಶಿವ

4.2.9.11 ಎಂ. ಗೋಪಾಲಕೃಷ್ಣ ಅಡಿಗ

4.2.9.12 ಕೀರ್ತಿನಾಥ ಕುರ್ತಕೋಟಿ, ಯು.ಆರ್.ಅನಂತಮೂರ್ತಿ, ಎಂ.ಜಿ.ಕೃಷ್ಣಮೂರ್ತಿ, ಜಿ.ಎಚ್.ನಾಯಕ, ಶಂಕರ ಮೋಕಾಶಿ ಪುಣೇಕರ, ಗಿರಡ್ಡಿ ಗೋವಿಂದರಾಜು, ಪಿ.ಲಂಕೇಶ, ಹೆಚ್.ಎಂ.ಚನ್ನಯ್ಯ, ಕಿ.ರಂ.ನಾಗರಾಜು, ಜಿ.ಎಸ್.ಆಮೂರ, ಡಿ.ಆರ್.ನಾಗರಾಜ, ಟಿ.ಪಿ.ಅಶೋಕ, ಎಚ್.ಎಸ್.ರಾಘವೇಂದ್ರರಾವ್, ಓ.ಎಲ್.ನಾಗಭೂಷಣಸ್ವಾಮಿ, ರಾಜೀವ ತಾರನಾಥ, ನರಹಳ್ಳಿಬಾಲಸುಬ್ರಮಣ್ಯ ಮೊದಲಾದವರು ಗಮನಾರ್ಹರರು.

4.2.10 ಅಭ್ಯಾಸ ಪ್ರಶ್ನೆಗಳು

4.2.10.1 ನವ್ಯ ಸಾಹಿತ್ಯ ಎಂದರೇನು ? ಅದರ ಹುಟ್ಟು, ಬೆಳವಣಿಗೆ ಯನ್ನು ಕುರಿತು ಬರೆಯಿರಿ.

4.2.10.2 ನವ್ಯ ಸಾಹಿತ್ಯದ ಪ್ರೇರಣೆ -ಪ್ರಭಾವಗಳಾವುವು? ಆ ಹಿನ್ನೆಲೆಯಲ್ಲಿ ಒಟ್ಟು ಸಾಹಿತ್ಯ ಸ್ವರೂಪ ಕುರಿತು ಬರೆಯಿರಿ.

4.3 ದಲಿತ - ಬಂಡಾಯ ಸಾಹಿತ್ಯ

ನವೋದಯ, ಪ್ರಗತಿಶೀಲ, ನವ್ಯ ಸಾಹಿತ್ಯ ಪಂಥಗಳ ಬಳಿಕ ೧೯೭೦ ರಂದು ಅಧಿಕೃತವಾಗಿ ದಲಿತ. ಬಂಡಾಯ ಸಾಹಿತ್ಯ ಪಂಥ ಉದಯವಾಯಿತು. ಆದರೆ ಈ ಸಂವೇದನೆಯು ಏಕಾಏಕಿ ಇದೇ ಅವಧಿಯಲ್ಲಿ ಮೂಡಿತೆಂದು ಹೇಳಲು ಸಾಧ್ಯವಿಲ್ಲ. ಅದು ಸುಮಾರು ಆರೇಳು ಶತಮಾನಗಳಿಂದಲೂ ನಿರಂತರವಾಗಿ ಬಂದ ಒಂದು ಉಪದನಿಯಾಗಿದ್ದು, ಕಾಲ ಕ್ರಮೇಣ ಅದೊಂದು ಪ್ರಧಾನದನಿಯಾಗಿ ಆವಿರ್ಭಸಿದ್ದು ೨೦ನೆಯ ಶತಮಾನದಲ್ಲಿಯೆ ಎಂಬುದು ಗಮನಾರ್ಹ.

ಅಂದರೆ ಅದು, ಹಿಂದಿನ ಹನ್ನೆರಡನೆಯ ಶತಮಾನದ ವಚನ ಸಾಹಿತ್ಯ ಚಳುವಳಿಯ ಹಿನ್ನೆಲೆಯಲ್ಲಿ ಬಸವಣ್ಣನ ಭಕ್ತಿಯ ಅವಿಭಾಜ್ಯದ ಅಂಗವಾಗಿ ದನಿ ಪಡೆದುಕೊಳ್ಳಲು ಹಣಿಸಿತು. ಆದರೆ ಅದು, ಅಂದಿನ ಪಟ್ಟಭದ್ರ ಹಿತಾಸಕ್ತಿಯ ತೀವ್ರ ವಿರೋಧ ಮತ್ತು ಪ್ರತಿಭಟನೆಯ ಪರಿಣಾಮದಿಂದ ತನ್ನ ಸ್ಪಷ್ಟ ಸ್ವರೂಪವನ್ನು ಮೈಪಡೆದುಕೊಳ್ಳುವ ಹೊತ್ತಿನಲ್ಲಿ ನಿಷ್ಫಲವಾಯಿತು. ಆದರೆ ಆ ಸೋಲಿನ ದನಿಯನ್ನು ಅಂದಿನ ಶೋಷಿತ ಪರ ವಚನಕಾರರು ಸೋಲೆಂದು ಭಾವಿಸದೆ ಮುಂದಿನ ಗೆಲುವಿನ ಹಿನ್ನೆಲೆಗೆ ಇದು ಶುಭ ಸೂಚ್ಯವಾಯಿತೆಂದು ಅರಿತರು. ಆದರೆ ಮುಂದಿನ ಶತಮಾನಗಳಲ್ಲಿ ಅದು ಹರಿಹರನ ರಗಳೆಗಳಲ್ಲಿ, ದಾಸರ ಕೀರ್ತನೆ, ಕಾವ್ಯಗಳಲ್ಲಿ, ಸರ್ವಜ್ಞನ ತ್ರಿಪದಿಗಳಲ್ಲಿ, ಜನಪದ (ಕಂಠಸ್ಥ) ಸಾಹಿತ್ಯದಲ್ಲಿ ನಿರಂತರ ಪ್ರತಿವಿರೋಧಗಳ ನಡುವೆಯೂ ಗುಪ್ತಗಾಮಿಯಾಗಿ ಹರಿಯಿತು. ಆದರೆ ಈ ಸಂವೇದನೆಯು, ಬದುಕಿನ ಮುಖಿಯಾದ ಸಾಹಿತ್ಯದಲ್ಲಿ ಸ್ಪಷ್ಟವಾಗಿ ಮೂಡಲು ಒಂದು ಸುವರ್ಣ ಅವಕಾಶಕ್ಕಾಗಿ ಕಾದು ಕುಳಿತಿತ್ತು. ಅಂದರೆ ಆ ಹೊತ್ತಿಗೆ ಹತ್ತೊಂಬತ್ತನೆಯ ಶತಮಾನದ ಪಶ್ಚಿಮದ'ಆಧುನಿಕತೆ'ಯ ಗಾಳಿ ಬೀಸಲು ಶುರುಮಾಡಿದ ಅಂದಿನಿಂದಲೇ ಅದಕ್ಕೊಂದು ಮಹತ್ವದ ಸ್ಥಾನ ಬಂದು, ಒಂದು ಸ್ಪಷ್ಟ ರೂಪ ರೇಖೆ ದೊರಕಿತು. ಇದರಿಂದ ಪ್ರತಿಯೊಂದು ವರ್ಗವೂ ಸಮಾಜ, ಸಾಹಿತ್ಯ, ಸಾಂಸ್ಕೃತಿಕ ಸಂದರ್ಭಗಳಲ್ಲಿ ಎಲ್ಲಿಲ್ಲದ ಸ್ವಾತಂತ್ರ್ಯ, ಸಮಾನತೆ, ಗೌರವ ಭಾವನೆಗಳು ದೊರಕಿದವು. ಅಂತೆಯೆ ಈ ಸ್ಥಿತ್ಯಂತರ ಪರಿಸ್ಥಿತಿಯಿಂದ ಮಾತಿಲ್ಲದವನಿಗೆ ಮಾತು ಬಂದು, ಬರೆಯುವ, ಪ್ರತಿಭಟಿಸುವ, ವಂಚಿತವಾಗಿದ್ದ ಸಕಲ ಸವಲತ್ತುಗಳನ್ನು ಪಡೆದುಕೊಳ್ಳುವತ್ತ ಬಂದನು. ಅಂತೆಯೆ ಇವರ ಹಿಂಬಾಗಿ ಅಂದು ಪ್ರಮುಖ ಚಿಂತಕರು ಕೂಡಾ ಹುಟ್ಟಿಕೊಂಡರು. ಇವರ ಪ್ರಬಲ ತಾತ್ವಿಕ ಚಿಂತನೆಯ ಬೆಳಕಿನಲ್ಲಿ ದಲಿತ-ಬಂಡಾಯ ಧ್ವನಿಯು ಮೆಲ್ಲಗೆ ಒಂದು ಪ್ರಧಾನ ಧನಿಯಾಗಿ ರೂಪಿತವಾಯಿತೆಂಬುದನ್ನು ನಾವಿಂದು ಸಾಹಿತ್ಯೇತಿಹಾಸದಿಂದ ಗಮನಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಪೂರ್ವ-ಪಶ್ಚಿಮದ ಪ್ರಮುಖ ಚಿಂತಕರಾದ ಮಾರ್ಕ್ಸ್, ಡಾರ್ವಿನ್, ಲೋಹಿಯಾ, ಫ್ರಾಯ್ಡ್, ಸಾರ್ತ್ರೆ, ಮಾರ್ಟಿನ್‌ಲೂಥರ್, ನೆಲ್ಸನ್‌ಮಂಡೇಲ, ಗಾಂಧೀಜಿ, ಅಂಬೇಡ್ಕರ್, ಫುಲೇ, ಪೆರಿಯಾರ್ ಮೊದಲಾದ ಪ್ರಮುಖರು ಇಲ್ಲಿ ತುಂಬ ಗಮನಾರ್ಹರರು.

ಹೀಗೆ ಸಾಹಿತ್ಯದ ಪಂಥಗಳು ನಿರ್ಮಾಣಗೊಳ್ಳುವುದಕ್ಕೆ ಮತ್ತು ಚಾಲನೆಗೊಳ್ಳುವುದಕ್ಕೆ ಆಯಾ ಕಾಲದ ಸಾಮಾಜಿಕ ಪರಿಸ್ಥಿತಿಯೂ ಕಾರಣ. ನವೋದಯ ಸಾಹಿತ್ಯ ಚಲಾವಣೆಯಲ್ಲಿದ್ದಾಗ ನಮ್ಮ ದೇಶ ಪಾರತಂತ್ರದಲ್ಲಿತ್ತು. ಹಾಗಾಗಿ ದೇಶಕ್ಕೆ ಸ್ವಾತಂತ್ರ್ಯವಿಲ್ಲದಿದ್ದಾಗ ವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಆಲೋಚಿಸುವುದು ಯಾವ ಸಾಹಿತಿಗೂ ಸಾಧ್ಯವೇ ಇರದ ಮಾತಾಗಿತ್ತು. ಪ್ರಗತಿಶೀಲ ಚಳವಳಿಯ ಕಾಲಕ್ಕೆ ದೇಶದಲ್ಲಿದ್ದ ಶೋಷಣೆ, ಸಾಮಾಜಿಕ ತಾರತಮ್ಯ, ಆರ್ಥಿಕ ಅಸಮಾನತೆ ಇಂಥವುಗಳ ಸಾಹಿತಿಗಳ ತಲೆಕೆಡಿಸತೊಡಗಿದ್ದವು. ಹಾಗೆ ತಲೆಕೆಡಿಸಿಕೊಂಡವರಿಗೆ ಸಹಜವಾದ ಅಬ್ಬರ, ಆವೇಶಗಳು ನೇರವಾಗಿ ಸಾಹಿತ್ಯವನ್ನು ಪ್ರವೇಶಿಸಿದವು. ಆದರೆ ನವ್ಯ ಸಾಹಿತ್ಯ ಚಳವಳಿ ಆರಂಭವಾಗುವ ಕಾಲಕ್ಕೆ ದೇಶಕ್ಕೆ ಸ್ವಾತಂತ್ರ್ಯ ಬಂದಿತ್ತು. ಶತಮಾನಗಳ ದಾಸ್ಯದ ನೊಗವನ್ನು ಕಳಚಿಕೊಂಡಿದ್ದ ದೇಶದ ಜನ ಹೊಸ ಬಗೆಯ ಬದುಕನ್ನು ಕಾಣುವ ಸಂಭ್ರಮದಲ್ಲಿದ್ದರು, ಮಾತ್ರವಲ್ಲದೆ ಸಾಹಿತ್ಯದ ರಚಿಯನ್ನು ಅನುಭವಿಸ ಹತ್ತಿದ್ದರು. ಆ ಸ್ವಾತಂತ್ರ್ಯ ಸಾಹಿತ್ಯ ಪ್ರಪಂಚಕ್ಕೂ ಪ್ರವೇಶ ಪಡೆಯಿತು. ಹಾಗಾಗಿ ಅನುಭವಗಳನ್ನು ಸ್ವತಂತ್ರ ವ್ಯಕ್ತಿಯ ವೈಯುಕ್ತಿಕ ನಿಜದಲ್ಲಿ ಪರಿಶೀಲಿಸುವ ಪರಿಶೋಧಿಸುವ ಹಂಬಲ ಆಗ ಸಾಹಿತಿಗಿತ್ತು.

ಯಾವುದೇ ಸಾಹಿತ್ಯ ಪಂಥವೂ ತನಗಿರುವ ಎಲ್ಲ ಸಾಧ್ಯತೆಗಳನ್ನು ಮುಗಿಸಿಕೊಂಡ ಮೇಲೆ ತನ್ನ ಪ್ರಭಾವವನ್ನು ಕಳೆದುಕೊಳ್ಳುತ್ತಾ ಹೋಗುತ್ತದೆ. ಅಂಥ ಸಂದರ್ಭದಲ್ಲಿ ಆ ಸಾಹಿತ್ಯ ಪಂಥದ ಆರಂಭಕಾಲದಲ್ಲಿ ಕಂಡ ಅದರ ಒಳ್ಳೆಯ ಗುಣಗಳೇ ದೌರ್ಬಲ್ಯಗಳಾಗಿ ಕಾಣಲು ಆರಂಭವಾಗುತ್ತದೆ. ಎಲ್ಲವೂ ಒಂದು ಅತಿಗೆ ಸಂದು ತಾತ್ಸಾರ, ಟೀಕೆ, ಪ್ರತಿಭಟನೆಗಳು ಆರಂಭವಾಗುತ್ತವೆ. ಇಂಥ ಹೊತ್ತಿನಲ್ಲೇ ಒಂದು ಹೊಸ ಕಾವ್ಯ ಮಾರ್ಗದ ಹುಡುಕಾಟ ತೀವ್ರವಾಗುತ್ತದೆ. ಕನ್ನಡ ನವ್ಯ ಸಾಹಿತ್ಯಕ್ಕೆ ಎದುರಾದದ್ದು ಇದೇ ಪರಿಸ್ಥಿತಿ. ನವ್ಯ ಸಾಹಿತ್ಯದ ದೌರ್ಬಲ್ಯ ಮತ್ತು ಮಿತಿಗಳನ್ನು ಕುರಿತು ಆವರೆಗೆ ಆ ಪಂಥದಲ್ಲೇ ಗುರುತಿಸಿಕೊಂಡಿದ್ದ ಪೂರ್ಣಚಂದ್ರ ತೇಜಸ್ವಿಯವರು ತಮ್ಮ ಅಬಚೂರಿನ ಪೋಸ್ಟಾಫೀಸು ಕಥಾಸಂಕಲನದ ಮುನ್ನುಡಿಯಲ್ಲಿ ಬರೆದ ಮಾತುಗಳು ನವ್ಯ ಸಾಹಿತ್ಯದ ಮಿತಿ ಮತ್ತು ದೌರ್ಬಲ್ಯಗಳನ್ನು ಸಮರ್ಥವಾಗಿ ಹಿಡಿದಿಟ್ಟಿವೆ. ಈ ಬಗೆಯ ಅತೃಪ್ತಿಯೇ ನವ್ಯೋತ್ತರ ಸಾಹಿತ್ಯದ ಆರಂಭಕ್ಕೆ ಪ್ರೇರಣೆಯಾದ್ದರಿಂದ ತೇಜಸ್ವಿಯವರ ಮಾತುಗಳನ್ನು ನಾವಿಲ್ಲಿ ಉಲ್ಲೇಖಿಸಬಹುದು.

ನವ್ಯ ಸಾಹಿತ್ಯ ಸಂಪೂರ್ಣ ನಿಸ್ತೇಜಗೊಂಡಿದೆ. ಬದಲಾಗುತ್ತಿರುವ ಪರಿಸರದ ಹೊಸ ಜವಾಬ್ದಾರಿಗಳನ್ನು ಅದು ಹೊರಲಾರದುದೇಕೆಂದರೆ ಮೊದಲನೆಯದಾಗಿ ಯಾಂತ್ರಿಕವಾಗಿರುವ ಅದರ ಸಾಂಕೇತಿಕ ಶೈಲಿ, ತಂತ್ರಗಳು. ಕೇವಲ ಉಪಾಧ್ಯಾಯರೇ ಹೆಚ್ಚಾಗಿರುವ ಅದರ ಸಾಹಿತಿವರ್ಗ ಮತ್ತು ಕೇವಲ ಸಾಹಿತ್ಯದ ಮಟ್ಟಿಗೇ ಸೀಮಿತಗೊಂಡ ಅದರ ಕ್ರಾಂತಿಕಾರಕತನ. ಈ ಮೂರು ಕಾರಣಗಳನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸಬಯಸುತ್ತೇವೆ. ನವ್ಯ ಮಾರ್ಗದ ಸಾಂಕೇತಿಕ ಶೈಲಿ ಮತ್ತು ತಂತ್ರಗಳು ಮೊದಲನೆಯದಾಗಿ ಸಾಹಿತ್ಯದ ಅನೇಕ ಸಾಮಾಜಿಕ ಜವಾಬ್ದಾರಿಗಳ ಬಗ್ಗೆ ಸಾಹಿತಿಗಳಿಗಿರುವ ತಿರಸ್ಕಾರವನ್ನು ತೋರಿಸುತ್ತವೆ. ಇನ್ನು ರಾಷ್ಟ್ರೀಯ ಉತ್ಪಾದನೆಯ ಬಹುಪಾಲನ್ನು ಉಚ್ಚವರ್ಗ ಮತ್ತು ಜಾತಿಗಳೂ, ಮಿಕ್ಕುದನ್ನು ಮಧ್ಯಂತರ ವರ್ಗ ಮತ್ತು ಜಾತಿಗಳೂ ತಿಂದು ಹಾಕುತ್ತಿರುವುದರಿಂದ ಸಾಕ್ಷರತೆ ನಿರೀಕ್ಷಿತ ಗತಿಯಲ್ಲಿ ವೃದ್ಧಿಸಿಯೇ ಇಲ್ಲ. ಈ ಕಾರಣದಿಂದಲೇ ಭಾರತದ ಗ್ರಾಮಗಳಲ್ಲಿ ಕೇವಲ ಹೆಬ್ಬೆಟ್ಟೊತ್ತುವ ಪಶು ಸದೃಶ ಶೂದ್ರ ಸಮುದಾಯವೊಂದನ್ನು ನಿರ್ಮಾಣ ಮಾಡುತ್ತಿದ್ದೇವೆ. ಸಾಹಿತ್ಯಾಭಿರುಚಿಯನ್ನು ಮೇಲು ಜಾತಿ ಮತ್ತು ವರ್ಗದವರ ಸೊತ್ತಾಗಿಯೇ ಉಳಿಸುವ ಯತ್ನ, ನಮ್ಮ ವಿದ್ಯಾಭ್ಯಾಸದ ಯೋಜನೆಗಳು ಮತ್ತು ವಿದ್ಯಾಭ್ಯಾಸದ ಕ್ರಮ. ಭಾಷೆಯು ಹೇಗೆ ಉಳ್ಳವರ ಸೊತ್ತು ಮಾತ್ರವೇ ಆಗ ತೊಡಗಿದೆಯೆಂದರೆ ಈಗ ಭಾಷೆಯಲ್ಲಿ ಆಲೋಚನೆ ಮತ್ತು ಅನುಭವಗಳ ಅಭಿವ್ಯಕ್ತಿ ಬಯಸುವುದೇ ಮೋಸಗಾರಿಕೆಯಾಗುವ ಹೊತ್ತು ಬರುತ್ತಿವೆ. ಅಂಥದ್ದರಲ್ಲಿ ಸಾಹಿತ್ಯದಲ್ಲೂ ನಾವು ಯಾಂತ್ರಿಕ ಸಾಂಕೇತಿಕತೆಯೊಂದನ್ನು ಸಂಪ್ರದಾಯ ಮಾಡಿಕೊಂಡು ಸಹೃದಯ ಸ್ತೋಮವನ್ನು ಸೀಮಿತಗೊಳಿಸಿಕೊಳ್ಳುವುದೇ ಸಾಹಿತ್ಯ ರಚನೆಯ ಉದ್ದೇಶಗಳಲ್ಲಿ ಒಂದನ್ನಾಗಿ ಮಾಡಿಕೊಂಡರೆ ಅದು ರೋಗಗ್ರಸ್ಥ ನಾಗರೀಕತೆಯ ಪರಾಕಾಷ್ಠೆ ಎಂದಷ್ಟೆ ಹೇಳಬಹುದು.

4.3.1 ದಲಿತ ಬಂಡಾಯ ಸಾಹಿತ್ಯ ಎಂದರೇನು? ಅದರ ಸ್ವರೂಪ

ನವ್ಯ ಸಾಹಿತ್ಯದ ನಂತರ ಬಂದ ಸುಮಾರು ಎರಡೂವರೆ ದಶಕಗಳಿಂದ ಪ್ರಚಲಿತವಿರುವ ದಲಿತಬಂಡಾಯ ಸಾಹಿತ್ಯವನ್ನು ನಾವು ನವ್ಯೋತ್ತರ ಸಾಹಿತ್ಯವೆಂದು ಕರೆಯುತ್ತೇವೆ. ದಲಿತ ಬಂಡಾಯ ಸಾಹಿತ್ಯವು ಒಂದು ಚಳವಳಿಯೆಂಬಂತೆ ಆರಂಭಗೊಂಡಿದ್ದು 1970ನೇ ದಶಕದ ಉತ್ತರಾರ್ಧದಲ್ಲಿ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಈ ಬಗೆಯ ಧೋರಣೆ ಹಿಂದೇ ಇರಲಿಲ್ಲವೆಂದಲ್ಲ. ನಮ್ಮ ಹಲವಾರು ಪ್ರಾಚೀನ ಕಾವ್ಯಗಳಲ್ಲಿ, ಅಲ್ಲಲ್ಲಿ ಈ ಧೋರಣೆ ವ್ಯಕ್ತವಾಗಿರುವುದು ಕಾಣಸಿಗುತ್ತದೆ. ವಚನಕಾರರಲ್ಲಿಯಂತೂ ಈ ದಲಿತ ಬಂಡಾಯ ಧೋರಣೆ ಅತ್ಯಂತ ನಿಚ್ಚಳವಾಗಿ ಕಾಣುತ್ತದೆ. ದಾಸ ಸಾಹಿತ್ಯದಲ್ಲೂ ಕೂಡಾ ಮನುಷ್ಯನ ಬೂಟಾಟಿಕೆಯನ್ನು ಲೇವಡಿ ಮಾಡುವಲ್ಲಿ ಮೇಲು ಕೀಳುಗಳ ತರತಮ ಭಾವನೆಯನ್ನು ಧಿಕ್ಕರಿಸುವಲ್ಲಿ ಜಾತಿ ಕುಲಗಳನ್ನು ಖಂಡಿಸುವಲ್ಲಿ, ಹೀಗೆ ಮುಂತಾದ ಕಡೆ ಇದೇ ಬಗೆಯ ಧೋರಣೆ ಕಂಡು ಬರುತ್ತದೆ. ಸರ್ವಜ್ಞನಂತವರು ಕೆಲವು ಪದ್ಯಗಳಲ್ಲಿ ಬಂಡಾಯಗಾರನಂತೆಯೇ ಕಾಣುತ್ತಾರೆ. ಆದರೆ ದಲಿತ ಬಂಡಾಯ ಎಂಬೊಂದು ಹಣೆಪಟ್ಟಿ ತಾತ್ವಿಕ ಚೌಕಟ್ಟಿನೊಂದಿಗೆ ಒಂದು ಸಾಹಿತ್ಯದ ಪಂಥ ಆರಂಭವಾದುದು ಮಾತ್ರ ಇತ್ತೀಚೆಗೆ. ಈ ಸಾಹಿತ್ಯ ಚಳವಳಿ ಆರಂಭವಾಗಿ ಇಷ್ಟು ವರ್ಷಗಳು ಕಳೆದ ಮೇಲೂ ಇದನ್ನು ದಲಿತ ಮತ್ತು ಬಂಡಾಯ ಸಾಹಿತ್ಯವೆಂದು ಕರೆಯಬೇಕೋ, ಇಲ್ಲಿ ದಲಿತ ಸಾಹಿತ್ಯ, ಬಂಡಾಯ ಸಾಹಿತ್ಯಗಳು ಒಂದೆಯೋ ಬೇರೆಬೇರೆಯೋ ದಲಿತ ಸಾಹಿತ್ಯದ ಪರಿಕಲ್ಪನೆಯೊಳಗೇ ಬಂಡಾಯವೂ ಇದೆಯೋ ಅಥವಾ ಬಂಡಾಯದೊಳಗೇ ದಲಿತ ಸಾಹಿತ್ಯವೂ ಸೇರಿಬಿಡುತ್ತದೆಯೋ ಈ ಪ್ರಶ್ನೆಗಳ ಚರ್ಚೆ ಒಂದು ಮುಕ್ತಾಯಕ್ಕೆ ಬಂದಿರುವಂತೆ ತೋರುವುದಿಲ್ಲ.

4.3.2 ದಲಿತ ಸಾಹಿತ್ಯ ಎಂದರೇನು?

ದಲಿತ ಸಾಹಿತ್ಯದ ಬಗ್ಗೆ ವಿಚಾರ ಮಾಡುವ ಮೊದಲು ದಲಿತ ಎಂದರೆ ಯಾರು? ಎಂದು ಚರ್ಚಿಸುವುದು ಅಗತ್ಯ. ಇದಕ್ಕೆ ಅರವಿಂದ ಮಾಲಗತ್ತಿ ಅವರ ವಿವರಣೆಯನ್ನು ಗಮನಿಸಿದರೆ ಸಾಕು. 'ದಲ' ಎಂಬುದು ಸಂಸ್ಕೃತ ಪದ. 'ದಲ' ಎಂದರೆ ಚೂರು, ತುಂಡು ಭಾಗ, ಸೈನ್ಯ ಎಂಬ ಅರ್ಥಗಳಿವೆ. ಆದ್ದರಿಂದ ಇಲ್ಲಿ ಸೈನ್ಯದ ಹರಿತವಾದ ಶಸ್ತ್ರ ಎನ್ನುವ ಅರ್ಥ ಸಮಂಜಸವೆಂದು ಕೆಲವರು ವಾದಿಸಿದರೆ ದಲಿತರು ದಮನಕ್ಕೆ ಒಳಗಾದವರು ಎಂದರ್ಥ ಶತಮಾನಗಳಿಂದ ತುಳಿತಕ್ಕೆ ಒಳಗಾದವರು ಅಸ್ಪಶ್ಯರೇ ಆಗಿದ್ದಾರೆ. ಹೀಗಾಗಿ ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಶಕ್ತಿಗಳ ಜೊತೆಗೆ ಅಸ್ಪೃಶ್ಯತೆಯನ್ನು ಸೂಕ್ಷ್ಮ ಸಂಬಂಧದ ಎಳೆ ಇರುವುದರಿಂದ ದಲಿತ ಎಂದರೆ ಕೇವಲ ಅಸ್ಪೃಶ್ಯನಲ್ಲ ಎನ್ನುವುದನ್ನು ಈ ಪದ ವಿವರಿಸುತ್ತದೆ.

"ದಲಿತರನ್ನು ಅಸ್ಪೃಶ್ಯರು, ಅಂತ್ಯಜರು, ಅಂತ್ಯವಸಾಯಿದಸ್ಯು, ಅದಮ ಜನಾಂಗ, ತಿರುಕುಲತ್ತರ್, ಪಂಚಮರು, ಬರಿಷ್ಕೃತರು, ಆದಿ ಕರ್ನಾಟಕ, ಆದಿದ್ರಾವಿಡ, ಅನುಸೂಚಿತ, ಪರಿಶಿಷ್ಟ ಜಾತಿ, ಹರಿಜನ ಎಂದು ಮುಂತಾಗಿ ಕರೆಯುತ್ತಿದ್ದ ಬಗ್ಗೆ ಇತಿಹಾಸದ ಸಾಕ್ಷಿ ಇದೆ. ಇದರಲ್ಲಿ ಕೆಲವು ಪದಗಳು ವೃತ್ತಿ ಹಾಗು ಇರುವಿಕೆಯನ್ನು ಸೂಚಿಸಿದರೆ ಕೆಲವು ಜಾತಿವಾಚಕವಾಗಿ ಜನಾಂಗವಾಚಕವಾಗಿ ಬಳಕೆಯಾಗಿವೆ. 'ಹರಿಜನ' ಎನ್ನುವ ಪದವನ್ನು ಮಹಾತ್ಮ ಗಾಂಧೀಜಿಯವರು ಬಳಕೆಗೆ ತಂದರು ಎಂದು ಹೇಳಲಾಗುತ್ತದೆ. ಆದರೆ ವಾಸ್ತವವಾಗಿ ೧೭ನೇ ಶತಮಾನದಲ್ಲೇ ಹರಿದಾಸರು ಅಸ್ಪೃಶ್ಯರನ್ನು ಹರಿಜನ ಎಂದು ಕರೆದರು. ಇತಿಹಾಸದಲ್ಲಿ ಹುದುಗಿಹೋಗಿದ್ದ ಈ ಪದವನ್ನು ಮಹಾತ್ಮ ಗಾಂಧೀಜಿಯವರು ಮತ್ತೆ ಬಳಕೆಗೆ ತಂದರು.

ದಲಿತ ಸಾಹಿತ್ಯ ಚಳವಳಿಯ ಸಂದರ್ಭದಲ್ಲಿ ಪ್ರಧಾನವಾಗಿ ಚರ್ಚೆಯಾದ ಮತ್ತೊಂದು ವಿಷಯವೆಂದರೆ ದಲಿತ ಎಂದರೆ ಯಾರು? ಎಂಬುದು ಈ ಪ್ರಶ್ನೆಗೆ ಕಾಲಕಾಲಕ್ಕೆ ಬೇರೆ ಬೇರೆಯ ವ್ಯಾಖ್ಯಾನಗಳು ನಡೆದಿವೆ. ಈ ವ್ಯಾಖ್ಯಾನಗಳನ್ನು ಅರವಿಂದ ಮಾಲಗತ್ತಿ ಅವರು ಮೂರು ಬಗೆಯಲ್ಲಿ ಸ್ಪಷ್ಟಪಡಿಸುತ್ತಾರೆ.

ಅ. ಶೋಷಣೆ ಎಂಬ ಪದಕ್ಕೆ ಜಾತಿ ಬೇಧವಿಲ್ಲ, ಆರ್ಥಿಕ ಸಾಮಾಜಿಕ ರಾಜಕೀಯ ರಂಗದಲ್ಲೆಲ್ಲ ಶೋಷಣೆಗೆ ಒಳಗಾದ ಎಲ್ಲ ಜನರೂ ದಲಿತರು.

ಆ. ಪಂಚಮರು ಅಥವಾ ಬಹಿಷ್ಕೃತರು ಎಂದು ಕರೆಯಿಸಿಕೊಳ್ಳುವ ಅಸ್ಪೃಶ್ಯರೆಲ್ಲೂರು ದಲಿತರು.

ಇ. ಅಸ್ಪೃಶ್ಯರೂ ಸೇರಿದಂತೆ ಆ ವ್ಯಾಖ್ಯಾನದ ಅಸ್ಪೃಶ್ಯತೆಯ ನೋವನ್ನು ಅನುಭವಿಸದಿದ್ದರೂ ಅಸ್ಪೃಶ್ಯರ ಹಾಗೆ ಆರ್ಥಿಕ ಸಾಮಾಜಿಕ ರಾಜಕೀಯ ರಂಗದಲ್ಲಿ ಶೋಷಣೆಗೆ ಒಳಗಾದ ಬಡವರೂ ದಲಿತರೆಂದು ಕರೆಯಿಸಿಕೊಳ್ಳುತ್ತಾರೆ.

ವಿವಿಧ ವ್ಯಕ್ತಿಗಳ ವೇದಿಕೆಗಳ ಈ ವ್ಯಾಖ್ಯಾನಗಳನ್ನು ಹೀಗೆ ಸ್ಪಷ್ಟಪಡಿಸುವ ಶ್ರೀಮಾಲಗತ್ತಿ ಅವರು ದಲಿತ ಸಾಹಿತ್ಯದ ನಡೆಯನ್ನು ಗಮನಿಸಿ ತಾವೂ ಒಂದು ವ್ಯಾಖ್ಯಾನವನ್ನು ನೀಡಿದ್ದಾರೆ.

ಶತಮಾನಗಳಿಂದ ಜನಸಮುದಾಯದಲ್ಲಿ ಆರ್ಥಿಕ ಸಾಮಾಜಿಕ ರಾಜಕೀಯ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು ಒಟ್ಟು ಮನುಷ್ಯ ಸಮಾಜದೊಂದಿಗೆ ಬದುಕಲಾಗದೆ ಊರ ಹೊರಗೆ ವಾಸಿಸಿ ಕೀಳು ವೃತ್ತಿಗೆ ಅವಲಂಬಿತವಾಗಿ ಹೆಸರು ಹೇಳಿಕೊಳ್ಳಲೂ ನಾಚಿಕೆಪಡುವ ಅಸ್ಪೃಶ್ಯರು ಅಥವಾ ಬಹಿಷ್ಕೃತರೆಲ್ಲರೂ ದಲಿತರೆನಿಸಿಕೊಳ್ಳುತ್ತಾರೆ. ಅಸ್ಪೃಶ್ಯರು ಎಂದು ಹೇಳಿ ಅವರೇ ಮುಂದುವರಿದು ವಿವರಿಸುತ್ತಾರೆ.

ಈ ವ್ಯಾಖ್ಯಾನ ಸರಕಾರ ನಿರ್ಧರಿಸಿದ ಅಸ್ಪೃಶ್ಯರ ಪಟ್ಟಿಯನ್ನು ನಿರಾಕರಿಸುತ್ತದೆ. ಅಸ್ಪೃಶ್ಯರಲ್ಲದವರು ಸರಕಾರದ ಪಟ್ಟಿಯಲ್ಲಿದ್ದಾರೆ. ಎಷ್ಟೂ ಜನ ಅಸ್ಪೃಶ್ಯರು ಸರಕಾರದ ಪಟ್ಟಿಯ ಹೊರಗೂ ಇದ್ದಾರೆ ಎನ್ನುವುದನ್ನು ಅನುಲಕ್ಷಿಸಿತ ರೂಪ ಪಡೆದುಕೊಂಡಿದೆ.

ಇನ್ನೊಂದು ಮುಖ್ಯ ಪ್ರಶ್ನೆ ಎಂದರೆ ದಲಿತ ಸಾಹಿತ್ಯ ಅಂದರೆ ಯಾವುದು ಎನ್ನುವುದು ದಲಿತ ಬದುಕನ್ನು ಕುರಿತು ದಲಿತರೇ ಬರೆದದ್ದು ಮಾತ್ರ ದಲಿತ ಸಾಹಿತ್ಯ ಎನ್ನುವ ವಾದ ಒಂದು ಮಗ್ಗುಲಿನದಾದರೆ ದಲಿತರ ಬದುಕನ್ನು ಕುರಿತು ಬೇರಾರೇ ಬರೆದರೂ ಅದು ದಲಿತ ಸಾಹಿತ್ಯವಾಗುತ್ತದೆ ಎಂಬ ವಾದ ಮತ್ತೊಂದು ಮಗ್ಗುಲಲ್ಲಿದೆ. ಈ ವಿಷಯದಲ್ಲಿ ಸಾಕಷ್ಟು ವಿಸ್ತಾರವಾದ ಚರ್ಚೆಯೂ ನಡೆದಿದೆ. ದಲಿತರು ಬರೆದದ್ದೆಲ್ಲಾ ದಲಿತ ಸಾಹಿತ್ಯವಾಗುವುದಾದರೆ ದಲಿತನೊಬ್ಬ ಬರೆದ ರಾಘವೇಂದ್ರ ಸ್ವಾಮಿ ಭಕ್ತಿ ಗೀತೆಗಳು. ಅಯ್ಯಪ್ಪ ಸ್ವಾಮಿ ಸ್ತೋತ್ರ ಮಾಲೆ, ಸಾಯಿಬಾಬಾ ವ್ರತ ಮಹಾತ್ಮ ಇಂಥವೆಲ್ಲವೂ ದಲಿತ ಸಾಹಿತ್ಯವಾಗುತ್ತದೆಯೆ? ದಲಿತರ ಬರಹದಲ್ಲೂ ಸಾಕ್ಷಾತ್ತಾಗಿ ನೋಡಿರುವ ಅನುಭವಿಸಿರುವ ದಲಿತರೇ ಬರೆಯ ಬೇಕೆನ್ನುವುದಾದರೆ ವೇಶ್ಯೆಯರ ಬದುಕನ್ನು ಕುರಿತು ವೇಶ್ಯೆಯೇ ಬರೆದದ್ದು ಮಾತ್ರ ಅನುಭವದ ಪ್ರಾಮಾಣಿಕ ಅಭಿವ್ಯಕ್ತಿಯಾಗುತ್ತದೆಯೆ? ಬೇರೆಯವರು ಬರೆಯಕೂಡದೇ? ಹಾಗೆಯೇ ಹಲವಾರು ಲೇಖಕರು ದಲಿತ ಬದುಕನ್ನು ತಮ್ಮ ಕೃತಿಗಳಲ್ಲಿ ತುಂಬಾ ಕಾಳಜಿಯಿಂದ, ಪ್ರಾಮಾಣಿಕತೆಯಿಂದ ಚಿತ್ರಿಸಿದ್ದಾರಲ್ಲ ಅದನ್ನು ದಲಿತ ಸಾಹಿತ್ಯವೆನ್ನಕೂಡದೇ ಎಂಬಿತ್ಯಾದಿಯಾಗಿ ಹಲವು ಬಗೆಯ ಚರ್ಚೆಗಳು ನಡೆದಿರುವುದನ್ನು ಗಮನಿಸಬಹುದಾಗಿದೆ. ದಲಿತರು ಬರೆದದ್ದೇ ದಲಿತ ಸಾಹಿತ್ಯವಾಗುತ್ತದೆ ಎನ್ನುವುದು ಸಾಹಿತ್ಯದ ಒಳಗೇ ಮತ್ತೊಂದು ಅಸ್ಪೃಶ್ಯಕೇರಿಯನ್ನು ನಿರ್ಮಿಸಿತೇನೋ ಅನಿಸುತ್ತದೆ. ಅರವಿಂದ ಮಾಲಗತ್ತಿಯವರೇ ಅಭಿಪ್ರಾಯಪಟ್ಟಿದ್ದಾರೆ. ಜೈನರು ಬರೆದದ್ದು ಜೈನಸಾಹಿತ್ಯ ವೀರಶೈವರು ಬರೆದದ್ದು ವೀರಶೈವ ಸಾಹಿತ್ಯ. ಬ್ರಾಹ್ಮಣರು ಬರೆದದ್ದು ಬ್ರಾಹ್ಮಣ ಸಾಹಿತ್ಯ ಎಂದು ಸಾಹಿತ್ಯಚರಿತ್ರೆಯಲ್ಲಿ ವ್ಯಾಖ್ಯಾನಿಸಿರುವ ಹಾಗೆಯೇ ದಲಿತರು ಬರೆದದ್ದು ದಲಿತ ಸಾಹಿತ್ಯ ಎಂದು ಕರೆಯಬಾರದೇಕು? ಎಂದು ಕೆಲವು ಲೇಖಕರು ಪ್ರಶ್ನಿಸಿದ್ದಾರೆ. ಮರಾಠಿ ಸಾಹಿತಿ ಡಾ. ಬಾಬೂರಾವ್ ಗಾಯಕವಾಡ್ ಅವರು ದಲಿತ

ಸಾಹಿತ್ಯವನ್ನು ಹೀಗೆ ವ್ಯಾಖ್ಯಾನಿಸುತ್ತಾರೆ. ದಲಿತ ಸಾಹಿತ್ಯ ಅನ್ನುವುದು ಮನುಷ್ಯನ್ನು ಕೇಂದ್ರ ಬಿಂದುವನ್ನಾಗಿ ಮಾಡುತ್ತದೆ. ಇದು ಮನುಷ್ಯ ಮನುಷ್ಯರ ನಡುವೆ ಪ್ರೇಮವನ್ನು ಪ್ರಸರಿಸಲು ಪ್ರಯತ್ನಿಸುತ್ತದೆ. ದಲಿತ ಸಾಹಿತ್ಯ ಪ್ರತೀಕಾರ ಸಾಹಿತ್ಯವಲ್ಲ. ಮನುಷ್ಯನನ್ನು ರಕ್ಷಿಸುವ ಮನುಷ್ಯನನ್ನು ಸಂಕಟದಿಂದ ಬಿಡುಗಡೆಗೊಳಿಸುವ ಕಡೆ ಅದು ತುಡಿಯುತ್ತದೆ.

ಇಲ್ಲಿಯೇ ಮತ್ತೊಂದು ವಿಷಯವನ್ನು ಪ್ರಸ್ತಾಪಿಸಿಬಿಡುವುದು ಉಚಿತವೆಂದು ತೋರುತ್ತದೆ. ದಲಿತ ಮತ್ತು ಬಂಡಾಯ ಸಾಹಿತ್ಯ ಎನ್ನುವಾಗ ಈ ಎರಡೂ ಸಾಹಿತ್ಯಗಳೂ ಭಿನ್ನಭಿನ್ನವಾದುವೋ ಪರಸ್ಪರ ಪೂರಕವಾದವೋ ಅಥವಾ ಯಾವುದಾದರೊಂದರಲ್ಲಿ ಮತ್ತೊಂದು ಸೇರಿಕೊಳ್ಳುವುದೋ ಸಾಧ್ಯವೋ ಎಂದು ಕೂಡಾ ಚರ್ಚೆಗಳು ನಡೆದಿವೆ. ದಲಿತ ಸಾಹಿತ್ಯವೆಲ್ಲವೂ ಬಂಡಾಯ ಸಾಹಿತ್ಯವೇ ಎಂದು ಕೆಲವು ಲೇಖಕರು ಹೇಳುತ್ತಾರಾದರೆ ದಲಿತ ಸಾಹಿತ್ಯದ ಒಳಗೇ ಸೇರಿ ಹೋಗುತ್ತದೆ. ಮತ್ತು ಹಾಗೆ ಸೇರಬಾರದೇಕೆ ಎಂದು ಮತ್ತೆ ಕೆಲವು ಲೇಖಕರು ವಾದಿಸುತ್ತಾರೆ. ಈ ದೆಸೆಯಲ್ಲಿ ರಹಮತ್ ತರೀಕೆರೆ ಮತ್ತು ಬರಗೂರು ರಾಮಚಂದ್ರಪ್ಪ ಅವರು ಬೇರೆಬೇರೆ ಕಡೆಗಳಲ್ಲಿ ಹೇಳಿರುವ ಮಾತುಗಳನ್ನು ಇಲ್ಲಿ ಗಮನಿಸಬಹುದು. ರಹಮತ್ ಹೀಗೆ ಹೇಳುತ್ತಾರೆ.

"ದಲಿತರ ಬಗೆಗೆ ಇತರರು ಬರೆದುದು ಅಥವಾ ದಲಿತರೇ ಸಾರ್ವಜನಿಕ ವಿಷಯುಗಳ ಬಗ್ಗೆ ಬರೆದುದು ದಲಿತ ಸಾಹಿತ್ಯ ಅಲ್ಲ. ದಲಿತರಾದವರು ತಮ್ಮ ರಕ್ತ ಮಾಂಸಗಳ ಜೀವಂತ ಅನುಭವ ಅನಿಸಿಕೆಗಳನ್ನು ಹಿಡಿದಿಟ್ಟಿರುವುದು ಮಾತ್ರ ದಲಿತ ಸಾಹಿತ್ಯ. ಸಹಜವಾಗಿ ಇದರ ದೋರಣೆ ಪ್ರತಿಭಟನೆಯದು. ಸಮಾಜದ ಎಲ್ಲ ವರ್ಗದ ಜನರು ತಾವು ಅನುಭವಿಸುತ್ತಿರುವ ನೋವು ಅಪಮಾನ ಅನ್ಯಾಯಗಳ ವಿರುದ್ಧ ಬಂಡೆದ್ದು ಬರೆದದ್ದು ಬಂಡಾಯ ಸಾಹಿತ್ಯ".

ದಲಿತ ಬಂಡಾಯ ಚಳವಳಿಯ ಆರಂಭಕಾಲದಲ್ಲೇ ಬರಗೂರು ರಾಮಚಂದ್ರಪ್ಪ ಅವರು ಬರೆದ ಮಾತುಗಳಿವು.

"ಸಾಹಿತ್ಯದ ಮಟ್ಟಿಗೆ ಕೃತಿಯೊಂದರ ಅನುಭವ ಪ್ರಾಮಾಣ್ಯದ ಆಧಾರದಿಂದ ಹುಟ್ಟಿನಿಂದ ದಲಿತರಾದವರು ಸೃಷ್ಟಿಸಿದ ಪ್ರಗತಿಪರ ಸಾಹಿತ್ಯವೆಂದು ಪರಿಗಣಿಸಬಹುದು. ಇದರರ್ಥ ಬೇರೆಯವರು ದಲಿತರ ಬಗ್ಗೆ ಬರೆದದ್ದು ಅಪ್ರಮಾಣಿಕ ಆಶಯಗಳಿಂದ ಕೂಡಿದೆ ಎಂದೇನೂ ಅಲ್ಲ. ಹುಟ್ಟಿನಿಂದಲೇ ದಲಿತನಾದವನ ಅಪ್ಪಟ ಅನುಭವ ಉಳಿದವರ ಅನುಭವಕ್ಕಿಂತ ಹೆಚ್ಚು ತೀವ್ರವಾದದ್ದು. ರಕ್ತ ಮಾಂಸಗಳೊಂದಿಗೆ ಬೆರೆತ ಸಾಚಾ ಸ್ವರೂಪದ್ದು ಎಂದಿಷ್ಟೇ ಇದರ ಅರ್ಥ. ಈ ನೆಲೆಯಲ್ಲಿ ಪ್ರಗತಿ ಪರ ಆಶಯಗಳು ಅಚ್ಚೊತ್ತಿದ ದಲಿತ ಸಾಹಿತ್ಯದ ಭಾಗವೇ ಆಗುತ್ತದೆ. ಏಕೆಂದರೆ ಪ್ರಗತಿಪರ ಆಶಯಗಳನ್ನು ಸ್ಫೋಟಿಸುವ ಯಾರೇ ಆದರೂ ಬಂಡಾಯ ಸಾಹಿತಿಗಳೆನಿಸುತ್ತಾರೆ. ಬಂಡಾಯ ಸಾಹಿತ್ಯ ಚಳವಳಿಯ ಹುಟ್ಟಿನಿಂದ ದಲಿತರು ಮತ್ತು ಅಲ್ಲದವರನ್ನೆಲ್ಲ ಒಳಗೊಂಡ ಒಂದು ವಿಶಾಲವ್ಯಾಪ್ತಿಯ ವೇದಿಕೆ ದಲಿತರು ಮತ್ತು ದಲಿತೇತರರು ಹೊಸ ಸಂಸ್ಕೃತಿಯ ಹೋರಾಟಕ್ಕಾಗಿ ಒಗ್ಗೂಡಿದ ವೇದಿಕೆ. 'ಬಂಡಾಯ' ಎಂಬ ಪದ ಸಾಮೂಹಿಕ ಆಶಯವನ್ನು ಕುರಿತದ್ದೇ ಹೊರತು ವ್ಯಕ್ತಿಯ ಹುಟ್ಟನ್ನಲ್ಲ. ಈ ಕಾರಣದಿಂದಲೇ ಹುಟ್ಟಿನಿಂದ ದಲಿತನಾಗಿದ್ದು, ಪ್ರತಿಗಾಮಿ ಆಶಯಗಳನ್ನು ಅಭಿವ್ಯಕ್ತಿಸಿದ ಸಾಹಿತಿ ಬಂಡಾಯ ಸಾಹಿತ್ಯದ ಪಟ್ಟಿಗೆ ಸೇರುವುದಿಲ್ಲ. ಮತ್ತೊಮ್ಮೆ ಸ್ಪಷ್ಟ ಪಡಿಸಬೇಕೆಂದರೆ ಪ್ರಗತಿಗಾಮಿ ದಲಿತ ಸಾಹಿತಿಗಳೆಲ್ಲ ಬಂಡಾಯ ಸಾಹಿತಿಗಳು. ಬಂಡಾಯ ಸಾಹಿತಿಗಳೆಲ್ಲರೂ ದಲಿತ ಸಾಹಿತಿಗಳಲ್ಲ".

ಹಿಂದೆ ಉಲ್ಲೇಖಿಸಿರುವ ಎಲ್ಲ ಅಭಿಪ್ರಾಯಗಳನ್ನೂ ಗಮನಿಸಿದಾಗ ದಲಿತ ಸಾಹಿತ್ಯದ ವ್ಯಾಖ್ಯಾನ ಮತ್ತು ವ್ಯಾಪ್ತಿಗಳ ಚರ್ಚೆ ನಡೆದೇ ಇದೆ ಎನ್ನವುದು ತಿಳಿಯುತ್ತದೆ. ವಿಶೇಷವೆಂದರೆ ಈ ಸಾಹಿತ್ಯ ಚಳವಳಿ ಆರಂಭವಾಗಿ ಇಪ್ಪತ್ತು ವರ್ಷಗಳಾದರೂ ಈ ಚರ್ಚೆ ಇನ್ನೂ ಜೀವಂತವಾಗಿರುವುದು.

4.3.3 ಬಂಡಾಯ ಸಾಹಿತ್ಯ ಎಂದರೇನು?

ಬಂಡಾಯ ಸಾಹಿತ್ಯ ಅಂದರೇನು ಎಂಬ ಪ್ರಶ್ನೆಗೆ ದಲಿತ ಸಾಹಿತ್ಯವನ್ನು ಕುರಿತಂತೆ ಇರುವಷ್ಟು ಭಿನ್ನ ವಿಭಿನ್ನ ಅಭಿಪ್ರಾಯಗಳಿಲ್ಲ. ಈ ವಿಚಾರದಲ್ಲಿ ಬಹುಮಟ್ಟಿಗೆ ಒಂದೇ ಎನ್ನಬಹುದಾದ ಅಭಿಪ್ರಾಯಗಳು ವ್ಯಕ್ತವಾಗಿವೆ. ಈ ಅಭಿಪ್ರಾಯಗಳಿಗೆ ಬಂಡಾಯ ಸಾಹಿತ್ಯ ಸಂಘಟನೆ ಪ್ರಕಟಿಸಿದ ಪ್ರಣಾಳಿಕೆಯೇ ಮೂಲನೆಲೆಯಾಗಿದೆ. ಅಲ್ಲಿ ಹೇಗೆ ಹೇಳಲಾಗಿದೆ.

"ನಮ್ಮ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅನೇಕ ವರ್ಷಗಳಿಂದ ಕಂಡುಬರುತ್ತಿರುವ ಪ್ರಗತಿಪರ ಧೋರಣೆಗಳು, ತೆಗೆದುಕೊಂಡ ತಿರುವುಗಳು, ಎದುರಿಸಿದ ಸಮಸ್ಯೆಗಳು ಮತ್ತು ತಲುಪಿದ ನೆಲೆಗಳನ್ನು ಗಮನಿಸಿದಾಗ ಅವುಗಳಿಂದ ಪಾಠಕಲಿತ ವ್ಯಾಪಕ ಸ್ವರೂಪದ ಸಂಘಟನೆಯ ಅಗತ್ಯ ಗೊತ್ತಾಗುತ್ತದೆ. ಒಕ್ಕೂಟ ಪ್ರಗತಿಪಂಥಗಳ ಸಾಫಲ್ಯ ವೈಫಲ್ಯಗಳ ದಾಖಲೆ ನಮಗೊಂದು ಎಚ್ಚರದ ಸಂಗತಿಯೂ ಆಗಿದೆ. ನಮ್ಮ ದೇಶದ ಚಾರಿತ್ರಿಕ, ರಾಜಕೀಯ ಬೆಳವಣಿಗೆಗಳ ಸ್ವರೂಪದಿಂದಾಗಿ ಉದ್ಭವಿಸಿದ ಇಂದಿನ ವಿಶಿಷ್ಟ ಸಂದರ್ಭದ ಹಿನ್ನೆಲೆಯಲ್ಲಿ ನಮ್ಮ ಹೋರಾಟದ ನೆಲೆಯನ್ನು ಕಂಡುಕೊಳ್ಳಬೇಕಾಗಿದೆ. ಜನ ವಿರೋಧಿ ನಿಲುವುಗಳು ವಿವಿಧ ಮುಖವಾಡಗಳ ಮರೆಯಲ್ಲಿ ಒಂದಾಗಿ ವಿಜೃಂಭಿಸುತ್ತಿರುವ ಈ ಸಂದರ್ಭ ಪ್ರಗತಿಪರ ಧೋರಣೆಯ ಎಲ್ಲರಿಗೂ ಒಂದು ಸವಾಲು. ಈ ಸವಾಲಿಗೆ ನಮ್ಮ ಉತ್ತರ ಎಲ್ಲ ವಾಮಪಂಥೀಯರ ಸಂಘಟನೆ ಮತ್ತೂ ಸ್ಪಷ್ಟಪಡಿಸುವುದಾದರೆ ಸಮಕಾಲೀನ ಚರಿತ್ರೆಯ ಬೆಳವಣಿಗೆಯ ಸ್ವರೂಪದಿಂದಾಗಿ ಎಲ್ಲ ವಾಮಪಂಥೀಯರ ಸಾಂಸ್ಕೃತಿಕ ಒಗ್ಗಟ್ಟು ಈಗ ಅತ್ಯಂತ ಮುಖ್ಯವಾದದ್ದು. ಈ ದಿಕ್ಕಿನಲ್ಲಿ ಬಂಡಾಯ ಸಾಹಿತ್ಯ ಚಳವಳಿಯು ಕನ್ನಡ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅತ್ಯಂತ ವ್ಯಾಪಕವಾಗಿ ಹಬ್ಬುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಶೋಷಿತ ಜನರ ಪರವಾದ ನಿಲುವುಗಳನ್ನು ಸಾಂಸ್ಕೃತಿಕ ಕ್ಷೇತ್ರದಲ್ಲಿ ಭದ್ರವಾಗಿ ನೆಲೆಗೊಳಿಸುವುದು ನಮ್ಮ ಮುಖ್ಯ ಗುರಿಗಳಲ್ಲೊಂದಾಗಬೇಕು. ನಮ್ಮ ಹೋರಾಟ ಪ್ರಧಾನವಾಗಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಿಸಿದ್ದು. ದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಸಂದರ್ಭಗಳು ಪರಸ್ಪರ ಸಂಬಂಧವುಳ್ಳವು ಎಂಬ ನಿಲುವಿನಿಂದ ಹೊರಟದ್ದು. ಸಾಹಿತಿಗೆ ಸಾಮಾಜಿಕ, ರಾಜಕೀಯ ಪ್ರಜ್ಞೆಇರಬೇಕೆಂಬ ಆಶಯ ಇಲ್ಲಿ ಮುಖ್ಯವಾದದ್ದು. ಅಸ್ಪೃಶ್ಯತೆ, ಜಾತಿಪದ್ಧತಿ ಮತ್ತು ಲಿಂಗಭೇದ ನೀತಿಯ ವಿರುದ್ಧ ಹೋರಾಟವನ್ನು ಮಾಡುವುದು ನಮ್ಮ ಮುಖ್ಯ ಉದ್ದೇಶಗಳಲ್ಲಿ ಒಂದು. ಇಲ್ಲಿ ಜನಪರ ನಿಲುವುಗಳಿಗೆ ನಮ್ಮ ಬೆಂಬಲ ಜನಪರವಾದ ಸಾಂಸ್ಕೃತಿಕ ಹೋರಾಟ ನಮ್ಮ ಮುಖ್ಯ ನೆಲೆ. ಇಂಥ ಒಲವಿನ ಸಾಹಿತ್ಯ ಸೃಷ್ಟಿ ಹೋರಾಟದ ಮುಖ್ಯ ದಾಖಲೆ.

ಮೇಲಿನ ಮಾತುಗಳಲ್ಲಿ ಬಂಡಾಯ ಸಾಹಿತ್ಯದ ನಿಲುವು ಧೋರಣೆಗಳ ಬಗ್ಗೆ ಒಂದು ಸ್ಪಷ್ಟ ಚಿತ್ರ ಸಿಗುತ್ತದೆ. ಶೋಷಿತರ ಪರ ಹೋರಾಟವನ್ನು ಸಂಘಟಿಸುವುದು ದೇಶದ ರಾಜಕೀಯಕ್ಕೆ ಕ್ರಿಯಾಶೀಲವಾಗಿ ಪ್ರತಿಕ್ರಿಯಿಸುವುದು, ಎಡಪಂಥೀಯ ನಿಲುವುಗಳು. ಅಸ್ಪೃಶ್ಯತೆ ಜಾತಿಪದ್ಧತಿ ಮತ್ತು ಲಿಂಗಭೇದನೀತಿಯ ವಿರುದ್ಧ ದನಿ ಎತ್ತುವುದು, ಸಾಮಾಜಿಕ ಬದುಕಿನ ಎಲ್ಲ ಅನ್ಯಾಯ ಅಕ್ರಮಗಳ ವಿರುದ್ಧ ಹೋರಾಡುವುದು ಹಾಗೂ ಇಂಥ ವಿಷಯಗಳನ್ನೇ ಮೂಲನೆಲೆಯಾಗಿಟ್ಟುಕೊಂಡು ಸಾಹಿತ್ಯ ರಚನೆ ಮಾಡಬೇಕೆನ್ನುವುದು ಈ ಪ್ರಣಾಳಿಕೆಯ ಪ್ರಮುಖ ಅಂಶಗಳು. ಅಲ್ಲದೆ ಆವರೆಗಿನ ಸಾಹಿತ್ಯ ವಿಮರ್ಶೆಯಲ್ಲಿ ನೇತ್ಯಾತ್ಮವಾಗಿ ಬಳಕೆಯಾಗುತ್ತಿದ್ದ 'ಬದ್ಧತೆ' ಎಂಬುದು ಬಂಡಾಯ ಸಾಹಿತಿಗಳಿಗೆ ನೇರವಾಗಿ ಪ್ರಜ್ಞಾಪೂರ್ವಕವಾಗಿ ಒಪ್ಪಿಕೊಳ್ಳುವ ಸಂಗತಿಯಾಯಿತು. ಈ ಬದ್ಧತೆಯು ಮನುಷ್ಯನ ಉಳಿವು ಮತ್ತು ಬೆಳವಣಿಗಾಗಿ ಎಂದು ಬಂಡಾಯ ಸಾಹಿತಿಗಳು ಭಾವಿಸುತ್ತಾರೆ. ಮನುಷ್ಯಬದುಕಿನ ಕ್ರೂರ ಹಾಗೂ ಕತ್ತಲ ಮುಖಗಳಲ್ಲಿ ವಾಸ್ತವದ ಬೆಳಕಿಗೆ ತೆರೆಯುವ ಕಳಕಳಿಯನ್ನು ಬಂಡಾಯ ಸಾಹಿತ್ಯ ತನ್ನದೆಂದು ಕೊಳ್ಳುತ್ತದೆ. 'ಮನುಷ್ಯ ಮನುಷ್ಯನ ನಡುವೆ ಕಲ್ಲಿನ ಕೋಟೆ ಕಟ್ಟುವ ಅವಮಾನನೀಯ ಬದುಕನ್ನು ಹಸನುಗೊಳಿಸುವ ಆಕಾಂಕ್ಷೆ ಬಂಡಾಯ ಸಾಹಿತ್ಯದ ಬೆನ್ನೆಲುಬು. ಈ ಆಕಾಂಕ್ಷೆ ಹೊತ್ತ ವ್ಯವಸ್ಥೆಯ ವಿರೋಧಿ ಆಶಯಗಳ ಅಭಿವ್ಯಕ್ತಿಯೇ ನಮ್ಮ ಸೃಜನಶೀಲತೆಯ ಮುಖ್ಯಕಾಳಜಿ..... ಬಾಯಿ ಇಲ್ಲದವರ ಬಾಯಿ ಬಂಡಾಯ ಸಾಹಿತ್ಯ. ಎಂದು ಬರಗೂರು ರಾಮಚಂದ್ರಪ್ಪ ಅವರೇ ಇನ್ನೊಂದು ಕಡೆ ಹೇಳಿದ್ದಾರೆ.

ಎಲ್.ಎಸ್. ಶೇಷಗಿರಿರಾವ್ ಅವರು " ಇತಿಹಾಸದ ಪ್ರಗತಿಯನ್ನು ಗುರುತಿಸುವ ಬೌದ್ಧಿಕ ಕಸರತ್ತುಗಳಿಂದ ದೂರವಾದ ವೈಯಕ್ತಿಕ ತೀಟೆಯಿಂದ ಮುಕ್ತವಾದ ಜನರ ಅನೇಕ ರೀತಿಯ ಆಶೋತ್ತರಗಳನ್ನು ಪ್ರತಿನಿಧಿಸುವ ಹಾಗೂ ಈ ಆಶೋತ್ರಗಳಿಗೆ ಕಾರಣವಾದ ಆಳವಾದ ಸಾಮಾಜಿಕ ರಾಜಕೀಯ ಸಂಗತಿಗಳು ಮತ್ತು ಈ ಸಾಮಾಜಿಕ ರಾಜಕೀಯ ಸಂಗತಿಗಳನ್ನು ನಿಯಂತ್ರಿಸುವ ಜಾತಿ ಧರ್ಮ ವರ್ಗಗಳನ್ನು ಅರ್ಥಮಾಡಿಸುವಲ್ಲಿನ ಪ್ರಯತ್ನದಲ್ಲಿಯೇ ಬಂಡಾಯ ಸಾಹಿತ್ಯದ ಒಲವಿರುವುದು "ಎಂದು ಹೇಳಿದ್ದಾರೆ. ಪೋಲಂಕಿ ರಾಮಮೂರ್ತಿಯವರಂತೂ ಬಂಡಾಯವೆಂದರೆ 'ದಂಗೆ' 'ಕ್ರಾಂತಿ' ಎಂದಿದ್ದಾರೆ.

ಬಂಡಾಯ ಸಾಹಿತ್ಯದ ಧ್ಯೇಯ ವಾಕ್ಯವೇ "ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣಮಿತ್ರ" ಎಂಬುದಾದಿದೆ. ಹಿರಿಯ ಕವಿ ಜಿ.ಎಸ್.ಶಿವರುದ್ರನವರ ಮಾತುಗಳೂ ಕೂಡ ಬಂಡಾಯ ಸಾಹಿತ್ಯದ ನಿಲುವು ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅವರ ಪ್ರಕಾರ ಹೊಸಗನ್ನಡ ಸಾಹಿತ್ಯದ ಈ ನಾಲ್ಕನೆಯ ಆಯಾಮವನ್ನೇ ಇವತ್ತು ಬಂಡಾಯ ಸಾಹಿತ್ಯದ ಸಂದರ್ಭವೆಂದು ಗುರುತಿಸಲಾಗುತ್ತದೆ. ನನ್ನ ಮಟ್ಟಿಗೆ ಹೇಳುವುದಾದರೆ ಬಂಡಾಯ ಅನುವುದೊಂದು ಮನೋಧರ್ಮ ಈ ಮನೋಧರ್ಮದ ಮುಖ್ಯ ಲಕ್ಷಣ ಸಾಮಾಜಿಕ ಅಸಮಾನತೆ ಹಾಗೂ ಅನ್ಯಾಯಗಳನ್ನು ಒಟ್ಟಾರೆಯಾಗಿ ವಸ್ತು ಸ್ಥಿತಿಯನ್ನು ಪ್ರಶ್ನಿಸುವ ಮತ್ತು ಪರಿಸ್ಥಿತಿಯನ್ನು ಬದಲಾಯಿಸುವ ಉದ್ದೇಶದಿಂದ ಪ್ರತಿಭಟಿಸುವ ಒಂದು ಪ್ರವೃತ್ತಿ... ಮೇಲಿನ ಕಲಿತು ತನ್ನ ಪ್ರತಿಭಟನೆಯನ್ನು ಅಭಿವ್ಯಕ್ತಿಸತೊಡಗಿದಾಗ ಮೂಡಿಬಂದಿತು ಬಂಡಾಯ ಸಾಹಿತ್ಯ ಈ ದೃಷ್ಟಿಯಿಂದ ಬಂಡಾಯ ಸಾಹಿತ್ಯದ ಉದಯ ಒಂದು ಚಾರಿತ್ರಿಕ ಅನಿವಾರ್ಯತೆಯಾಗಿದೆ.

ಹೀಗೆ ಮೇಲೆ ಹೇಳಿದ ವಿವಿಧ ಹೇಳಿಕೆಗಳು ಬಂಡಾಯ ಸಾಹಿತ್ಯದ ಒಲವು ನಿಲುವುಗಳನ್ನು ವಿವರಿಸುತ್ತವೆ. ಮೊದಲೇ ಹೇಳಿದ ಹಾಗೆ ಮಾತುಗಳು ಬೇರೆಯಾದರೂ ವಿವಿಧ ಬರಹಗಾರರ ಈ ಅಭಿಪ್ರಾಯಗಳು ಹೆಚ್ಚು ಕಡಿಮೆ ಒಂದೇ ಬಗೆಯವಾಗಿವೆ ಎಂಬುದನ್ನು ಗಮನಿಸಬೇಕು.

4.3.4 ದಲಿತ-ಬಂಡಾಯ ಸಾಹಿತ್ಯ ಆರಂಭ ಮತ್ತು ಬೆಳವಣಿಗೆ

ದಲಿತ ಬಂಡಾಯ ಸಾಹಿತ್ಯವು ಒಂದು ಚಳವಳಿಯಾಗಿ ಆರಂಭವಾಗಿದ್ದು 1970ರ ದಶಕದ ಉತ್ತರಾರ್ಧದಲ್ಲಿ ಹೀಗೆ ಒಂದು ಸಾಹಿತ್ಯ ಪಂಥ ರೂಪುಗೊಳ್ಳುವ ಅನಿವಾರ್ಯತೆಯನ್ನು ಅದರ ನಿಕಟಪೂರ್ವ ಸಾಹಿತ್ಯಪಂಥವೇ ಉಂಟುಮಾಡುತ್ತದೆ. ಎನ್ನುವುದನ್ನು ಹೊಸದಾಗಿ ಹೇಳಬೇಕಾಗಿಲ್ಲ. ಆದರೆ ಅದಷ್ಟೇ ಹೊಸಪಂಥದ ರಚನೆಯನ್ನು ಆಗುಗೊಳಿಸುವುದು ಕಷ್ಟ. ಜೊತೆಗೆ ಅದಕ್ಕೆ ಪೂರಕವಾದ ವಾತಾವರಣವೂ, ಪ್ರೇರಣೆಗಳೂ ಬಂದಾಗ ಮಾತ್ರ ಹೊಸ ಸಾಹಿತ್ಯ ಚಳವಳಿಯ ಗತಿ ಪ್ರವೃತ್ತಿ ಮತ್ತು ಸ್ವರೂಪಗಳೆಲ್ಲವು ಖಚಿತವಾಗಿ ರೂಪುಗೊಳ್ಳುತ್ತವೆ.

ಕನ್ನಡದಲ್ಲಿ ನವ್ಯ ಸಾಹಿತ್ಯದಲ್ಲಿ ಚಳವಳಿಯು ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮವನ್ನು ಜೋಡಿಸಿತು ಮತ್ತು ಸಾಹಿತ್ಯದ ರಚನೆ ಮತ್ತು ಓದನ್ನು ಸಾಧ್ಯವಾದಷ್ಟು ಗಂಭೀರಗೊಳಿಸಿತು. ಅದೆಲ್ಲವೂ ನಿಜ. ಆದರೆ ಎಪ್ಪತ್ತರ ದಶಕದ ಹೊತ್ತಿಗೆ ಅದೇ ನವ್ಯ ಸಾಹಿತ್ಯವು ತಾನು ಸಾಧಿಸಬಹುದಾದ್ದನ್ನೆಲ್ಲಾ ಸಾಧಿಸಿ ಮುಗಿಸಿತೇನೋ ಎಂಬಂತೆ ಶುಷ್ಕವಾಗಿ ಬಿಟ್ಟಿತು. ಅದರ ಜೊತೆಗೆ ಕನ್ನಡ ಸಾಹಿತ್ಯ ವಲಯದಲ್ಲಿ ನಡೆದ ಹಲವಾರು ಚಳವಳಿಗಳು ಮತ್ತೆ ಕೆಲವು ಸಿದ್ಧಾಂತಗಳು ಹೊಸ ಸಾಹಿತ್ಯ ಪಂಥಕ್ಕೆ ಪ್ರೇರಣೆಗಳಾಗಿ ಒದಗಿಬಂದವು.

1973ರಲ್ಲಿ ಕರ್ನಾಟಕ ಸರ್ಕಾರದಲ್ಲಿ ಸಚಿವರಾಗಿದ್ದ ಬಿ. ಬಸವಲಿಂಗಪ್ಪ ಅವರು ತಮ್ಮ ಭಾಷಣವೊಂದರಲ್ಲಿ ಕನ್ನಡ ಸಾಹಿತ್ಯದಲ್ಲಿರುವುದೆಲ್ಲ 'ಬೂಸಾ' ಎಂದು ಹೇಳುವುದರ ಮುಖಾಂತರ ಒಂದು ಹೋರಾಟದ ಕಿಡಿ ಹಚ್ಚಿದರು. ಇದರ ಪರಿಣಾಮವಾಗಿ ಕರ್ನಾಟಕದಾದ್ಯಂತ ಬಸವಲಿಂಗಪ್ಪನವರ ವಿರುದ್ಧವಾಗಿ ಉಗ್ರವಾದ ಚಳವಳಿ ಪ್ರದರ್ಶನಗಳು ನಡೆದವು. ಇದೇ ಕಾರಣಕ್ಕಾಗಿ ಆಗ ಬಸವಲಿಂಗಪ್ಪನವರು ಮಂತ್ರಿಪದವಿಯನ್ನು ಕಳೆದುಕೊಳ್ಳಲೂ ಬೇಕಾಯಿತು. ಅದೇ ಸಂದರ್ಭದಲ್ಲಿ ಬಸವಲಿಂಗಪ್ಪನವರು

ಮಂತ್ರಿಯಾಗಿದ್ದು ಕರ್ನಾಟಕದ ಕಲವು ಭಾಗಗಳಲ್ಲಿ ಆಚರಣೆಯಲ್ಲಿದ್ದ ತಲೆಯ ಮೇಲೆ ಮಲ ಹೊರುವ ಪದ್ಧತಿಯನ್ನು ನಿಲ್ಲಿಸಲು ಕೂಗೆಬ್ಬಿಸಿದರು. ಇದರ ಜೊತೆಗೆ ಜಾತಿ, ಧರ್ಮ, ದೇವರು ಈ ವಿಷಯಗಳ ಬಗ್ಗೆಯೂ ಬಸವಲಿಂಗಪ್ಪ ನಿರ್ಭಿಡೆಯಿಂದ ಮಾತಾಡತೊಡಗಿದ್ದರು. ಬಸವಲಿಂಗಪ್ಪನವರ ಅಭಿಪ್ರಾಯಗಳೂ ಶೂದ್ರವರ್ಗದ ಬುದ್ಧಿಜೀವಿಗಳಿಗೆ ಯುವಕರಿಗೆ ಸರಿಯೆನಿಸಿ ಅವರೂ ಸಹ ಅದೇ ಬಗೆಯ ಧೋರಣೆಯನ್ನು ವ್ಯಕ್ತಪಡಿಸಲು ಆರಂಭಿಸಿದರು. ಇದರ ಪರಿಣಾಮವಾಗಿ 1973ರ ಆಗಸ್ಟ್‌ನಲ್ಲಿ ಮೈಸೂರಿನಲ್ಲಿ **ಜಾತಿವಿನಾಶ ಸಮ್ಮೇಳನ** ನಡೆಯಿತು. ತೇಜಸ್ವಿ, ಲಂಕೇಶ್, ಶ್ರೀಕೃಷ್ಣ ಆಲನಹಳ್ಳಿ, ದೇವನೂರ ಮಹಾದೇವ, ಸಿದ್ದಲಿಂಗಯ್ಯ, ಚಂದ್ರಶೇಖರ ಪಾಟೀಲ ಮುಂತಾದ ಬರಹಗಾರರು ಆ ಸಮ್ಮೇಳನದಲ್ಲಿ ಭಾಗವಹಿಸಿದರು. ಮುಂದೆ 1974 ಹೊತ್ತಿಗೆ ಇದೇ ಬರಹಗಾರರು ಸೇರಿ ಬರಹಗಾರರ ಮತ್ತು ಕಲಾವಿದರ ಒಕ್ಕೂಟ ಸ್ಥಾಪಿಸಿಕೊಂಡು 1974ರ ಏಪ್ರಿಲ್ 20-21 ರಂದು ಮೈಸೂರಿನ ಮಹಾರಾಜಾ ಕಾಲೇಜು ಶತಮಾನೋತ್ಸವ ಭವನದಲ್ಲಿ ಒಂದು ಸಮ್ಮೇಳನವನ್ನು ನಡೆಸಿದರು. ಆ ಸಮ್ಮೇಳನವನ್ನು ಉದ್ಘಾಟಿಸಿದವರು ಕುವೆಂಪು. ಅವರ ಉದ್ಘಾಟನಾ ಭಾಷಣ ಒಂದು ಹೊಸ ಚಳವಳಿಗೆ ಚಾಲನೆ ಕೊಡುವಷ್ಟು ಹುರುಪಿನದಾಗಿತ್ತು. ಕುವೆಂಪು ಅವರು ಆ ಭಾಷಣದಲ್ಲೇ ಬಸವಲಿಂಗಪ್ಪನವರ ಹೇಳಿದ 'ಬೂಸಾ' ಮಾತಿಗೆ ತಮ್ಮ ಸಹಮತ ವ್ಯಕ್ತಿಪಡಿಸಿದರು. ಶೂದ್ರಪ್ರಜ್ಞೆ ಮತ್ತೊಮ್ಮೆ ಸ್ವಾಭಿಮಾನದ ಸಂಕೇತವೆನಿಸಿ ಹೊಸ ಜಾಗೃತಿ ಉಂಟಾಯಿತು.

ಇದರ ಪರಿಣಾಮವಾಗಿ 1974 ರಲ್ಲಿ ಭದ್ರಾವತಿಯಲ್ಲಿ ದಲಿತ ಸಂಘರ್ಷ ಸಮಿತಿ ರಚನೆಗೊಂಡು ಮುಂದೆ ಅದು ರಾಜ್ಯ ಮಟ್ಟದ ಒಂದು ಹೋರಾಟದ ಸಂಸ್ಥೆಯಾಗಿ ಬೆಳೆಯಿತು. ಮುಂದೆ 1975 ರಲ್ಲಿ 'ದಲಿತ ಬರಹಗಾರರ ಯುವ ಸಂಘಟನೆ' ಭದ್ರಾವತಿಯಲ್ಲೇ ಒಂದು ಸಮ್ಮೇಳನವನ್ನು ಸಂಘಟಿಸಿತು. ಇದಾದ ನಂತರ 1975 ಜೂನ್ 25 ರಂದು ಭಾರತದಲ್ಲಿ **'ತುರ್ತು ಪರಿಸ್ಥಿತಿ'**ಯನ್ನು ಅಂದಿನ ಪ್ರಧಾನಿ ಇಂದಿರಾಗಾಂಧಿ ಅವರು ಘೋಷಿಸಿದರು. ತುರ್ತು ಪರಿಸ್ಥಿತಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೇ ನೇರ ಏಟು ಹೊಡೆದದ್ದರಿಂದ ಕನ್ನಡದ ಕೆಲವು ಬರಹಗಾರರು, ಕಲಾವಿದರು ಬೀದಿಗಿಳಿದು ಹೋರಾಟ ಆರಂಭಿಸಿದರು. ಚಂದ್ರಶೇಖರ ಪಾಟೀಲರು ಸೆರೆಮನೆ ಸೇರಿದವರು. ಸ್ನೇಹಲತಾರೆಡ್ಡಿ ಎಂಬ ಕಲಾವಿದೆಯೊಬ್ಬರು ಸೆರೆಮನೆಯಲ್ಲೇ ಮತಪಟ್ಟರು. ಮತ್ತೆ ಕೆಲವು ಲೇಖಕರು ಭೂಗತ ಚಟುವಟಿಕೆಗಳನ್ನು ಆರಂಭಿಸಿದರು. ಹೀಗಾಗಿ ಸಾಹಿತ್ಯಗಳಿಗೂ ರಾಜಕೀಯಕ್ಕೂ ನೇರವಾದ ನಂಟು ಆಗಿಬಿಟ್ಟಿತು.

ಇದೆಲ್ಲವೂ ದಲಿತ ಬಂಡಾಯ ಸಾಹಿತ್ಯ ಚಳವಳಿ ರಂಗವೇರುವುದರ ಪೂರಕ ಚಟುವಟಿಕೆಗಳು ಬಂಡಾಯ ಸಾಹಿತ್ಯ ಪಂಥ ಅಧಿಕೃತವಾಗಿ ಘೋಷಣೆಯಾಗುವುದಕ್ಕೆ ಒಂದು ನೆಪ ಬೇಕಾಗಿತ್ತು. ಅಂಥ ನೆಪ ಸೃಷ್ಟಿಯಾದದ್ದು 1979 ರ ಮಾರ್ಚ್ ಹತ್ತರಂದು ಧರ್ಮಸ್ಥಳದಲ್ಲಿ 'ನವ್ಯ ಸಾಹಿತ್ಯದ ಹರಿಕಾರ' ಎಂ. ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಮ್ಮೇಳನ ನಡೆದಾಗ, ಆ ಸಮ್ಮೇಳನದಲ್ಲಿ 'ದಲಿತ ಸಾಹಿತ್ಯ' ದ ಬಗ್ಗೆ ಒಂದು ಪ್ರತ್ಯೇಕ ಗೋಷ್ಠಿಯನ್ನಿಡಲು ಒತ್ತಾಯ ಬಂದಾಗ ಕನ್ನಡ ಸಾಹಿತ್ಯ ಪರಿಷತು ಅದಕ್ಕೆ ಒಪ್ಪಲಿಲ್ಲ. ಆಗ ದಲಿತ ಪರ ಬಂಡಾಯಗಾರ ಸಾಹಿತಿಗಳು ಕೆಲವರು ಸೇರಿ ಬೆಂಗಳೂರಿನಲ್ಲಿ ಬಂಡಾಯ ಸಾಹಿತ್ಯ ಸಮ್ಮೇಳನವನ್ನು ಸಂಘಟಿಸಿದರು. ಅರವಿಂದ ಮಾಲಗತ್ತಿ ಅವರು ಹೇಳುವಂತೆ ಬಂಡಾಯ ಮೊದಲು ದಲಿತರದ್ದೇ ಮನೆಯಾಗಿತ್ತು. ಬರುಬರುತ್ತಾ ದಲಿತೇತರ ಹಿಡಿತ ಹೆಚ್ಚಾದಾಗ ಭಿನ್ನಾಭಿಪ್ರಾಯಗಳು ಬಂದು ಮುಂದೆ ಅದು ದಲಿತ ಬಂಡಾಯ ವೇದಿಕೆಯಾಯಿತು. ಸಾಹಿತ್ಯದಲ್ಲಿ ದಲಿತ ಬಂಡಾಯ ಅವಳಿ ಜವಳಿ ಪದಗಳಾಗಿಯೇ ಬಳಕೆಗೆ ಬಂದವು".

ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಹೊರಡಿಸಿದ ಕರಪತ್ರದಲ್ಲಿ ಬಂಡಾಯ ಸಾಹಿತ್ಯದ ಗೊತ್ತು ಗುರಿಗಳೆಲ್ಲವೂ ಪ್ರಕಟವಾಗಿದೆ. ಕರಪತ್ರದ ಪೂರ್ಣಪಾಠ ಹೀಗಿದೆ.

ಇದು ಭೂಕಂಪಗಳ ಯುಗ, ಗುಡಿಸಲುಗಳೇ ಚೂರು ಚೂರಾಗುತ್ತಿವೆ. ಇನ್ನು ಕವಿಗಳ ದಂತ ಗೋಪುರದ ಪಾಡೇನು?

ನಮ್ಮ ದೇಶದ ಚರಿತ್ರೆಯಲ್ಲಿ ಈಚೆಗೆ ನಡೆದ ವಿದ್ಯಮಾನಗಳು ಸಾಹಿತ್ಯದಲ್ಲಿ ಎರಡು ಲೋಕಗಳನ್ನು ಸೃಷ್ಟಿಸಿವೆ.

(1) ಸಮಕಾಲೀನ ಬದುಕಿಗೆ ಪ್ರತಿ ಸ್ಪಂದಿಸಿ, ಅದರ ಬದಲಾವಣೆಗೆ ಹೋರಾಡುವ ಸಾಹಿತಿಗಳದು

(2) ಸಮಕಾಲೀನತೆಯನ್ನು ಬದುಕಿನ ದಿನನಿತ್ಯದ ಘಟನೆಗಳಲ್ಲಿ ಗುರುತಿಸದೆ ತಂತಮ್ಮ ಭ್ರಮೆಗಳಲ್ಲಿ ತೇಲಾಡುವ ಸಾಹಿತಿಗಳದು. ಈ ಗುಂಪಿನವರು ತಮ್ಮ ಸುತ್ತಲಿನ ಕ್ರೂರ ವಾಸ್ತವಗಳಾದ-ಪೋಲೀಸರ ಮತ್ತು ಸೈನ್ಯದ ಗುಂಡಿನ ಸುರಿಮಳೆ, ಸಾಮೂಹಿಕ ನರಹತ್ಯೆ ದಲಿತರಕಗ್ಗೊಲೆ, ವಿವಿಧಶೋಷಣೆಗಳ ರುದ್ರಕುಣಿತ, ಪ್ರಜಾಪ್ರಭುತ್ವದ ವಿನಾಶ ಈ ಎಲ್ಲ ಭಯಾನಕ ಸತ್ಯಗಳ ಕಡೆಗೆ ಕಣ್ಣುಮುಚ್ಚಿದ್ದಾರೆ ಬೆಂಕಿಯ ಸಾಗರದ ಮಧ್ಯೆ ಮಂಜಿನ ಗೋಪುಗಳನ್ನು ಕಟ್ಟಿಕೊಳ್ಳುವ ಯತ್ನ ನಡೆಸಿದ್ದಾರೆ.

ಆದರೆ ಮೊದಲ ಗುಂಪಿನ ಲೇಖಕರು ಅಲ್ಲ ಕ್ರೌರ್ಯದ ವಿರುದ್ಧ ಹೋರಾಟ ನಡೆಸುವ ಛಲ ಹೊತ್ತವರು. ಇವರು ಪ್ರಜಾಪ್ರಭುತ್ವದ ರಕ್ಷಣೆಗೆ ವಿಸ್ತರಣೆಗೆ ದುಡಿಯುತಿರುವ ಜನ. ಕ್ರಾಂತಿಕಾರಿ ರಾಜಕೀಯ ಪ್ರಜ್ಞೆಯನ್ನು ಹೊಂದಿ ಜನತೆಯ ಹೋರಾಟದ ಬದುಕಿನೊಂದಿಗೆ ಬೇರೆಯವರು ಯತ್ನಿಸುತ್ತಿರುವ ಈ ಸಾಹಿತಿಗಳು ಹೊಸ ಸಂಸ್ಕೃತಿಯನ್ನು ಸೃಷ್ಟಿಸುವ ಆಸೆ ಹೊತ್ತಿದ್ದಾರೆ. ಅಂತಹ ಬಂಡಾಯ ಸಾಹಿತಿಗಳ ಸಮಾವೇಶ ಇದು. ಶೋಷಣೆಯ ವಿಕೃತ ಅಡಿಪಾಯದ ಮೇಲೆ ನಿಂತಿರುವ ವ್ಯವಸ್ಥೆಯ ವಿರುದ್ಧದ ಹೋರಾಟ ಈ ಬಂಡಾಯ ಸಾಹಿತಿಗಳ ಮುಖ್ಯ ಗುರಿ. ಈಗ ಅಸ್ತಿತ್ವದಲ್ಲಿರುವ ಯಜಮಾನ ಸಂಸ್ಕೃತಿ (Master culture) ಶೋಷಣೆ ಮತ್ತು ದಬ್ಬಾಳಿಕೆಯ ಇನ್ನೊಂದು ರೂಪ ಎಂಬುದು ಈ ಸಾಹಿತಿಗಳ ನಂಬಿಕೆ ಅದಕ್ಕಾಗಿಯೇ ಈ ಯಜಮಾನ ಸಂಸ್ಕೃತಿಯ ವಿರುದ್ಧ ಬಂಡಾಯದ ಗಟ್ಟಿ ಧ್ವನಿ. ಸಾಹಿತ್ಯ ಪರಿಷತ್ತಿನಲ್ಲಿರುವ ಒಬ್ಬರ ಅಥವಾ ಹಲವರ ವಿರುದ್ಧ ವೈಯಕ್ತಿಕ ಪ್ರತಿಭಟನೆಯ ಸಣ್ಣ ಕಾರಣದಿಂದಾಗಿ ಈ ಸಮ್ಮೇಳನ ಹುಟ್ಟಿಲ್ಲ. ಕನ್ನಡ ಸಾಹಿತ್ಯ ಪರಿಷತ್ತು ಕೂಡಾ ಮೇಲೆ ಹೇಳಿದ ಯಜಮಾನ ಸಂಸ್ಕೃತಿಯ ಒಂದು ಅಂಗ.

ಈ ಹಿನ್ನೆಲೆಯಲ್ಲಿ ಬಂಡಾಯ ಸಾಹಿತ್ಯಚಳವಳಿಯನ್ನು ಸಂಘಟಿಸುವ ಉದ್ದೇಶ ಈ ಸಮ್ಮೇಳನದ್ದು ಇದರರ್ಥ ಸಾಹಿತ್ಯದ ಅಗ್ಗದ ಪ್ರಚಾರ ಚೀಟಿಯಾಗಬೇಕು ಎಂದಲ್ಲ. ಕಲೆಯಲ್ಲಿ ರಾಜಕಾರಣವು ತತ್‌ಕ್ಷಣತೆಯನ್ನು ಮೀರಿ ಇಡೀ ಜೀವನದರ್ಶನವನ್ನು ಅವರಿಸಿಕೊಂಡಾಗ ಮಾತ್ರ ಶ್ರೇಷ್ಠ ಕೃತಿ ಹುಟ್ಟುತ್ತದೆ ಎಂಬ ನಂಬಿಕೆ ಈ ಸಮ್ಮೇಳನದ ಹಿನ್ನೆಲೆಯಲ್ಲಿದೆ. ಇಲ್ಲಿ ಮುಖ್ಯವಾಗಿ ಭಾಗವಹಿಸುವವರು ಶೋಷಿತ ಜನತೆಯ ಹೋರಾಟದೊಂದಿಗೆ ಒಂದಲ್ಲ ಒಂದು ರೀತಿಯಲ್ಲಿ ಪಾಲುಗೊಂಡಿರುವ ತರುಣ ಸಾಹಿತ್ಯಗಳು, ಬಹುಪಾಲು ಲೇಖಕರು, ದಲಿತರು ಮತ್ತು ಕೆಳವರ್ಗದಿಂದ ಬಂದವರು. ಸಾಹಿತಿ ಜನತೆಯ ಹೋರಾಟದೊಂದಿಗೆ ಪಾಲ್ಗೊಳ್ಳುವ ಈ ಚಳವಳಿ ಕರ್ನಾಟಕದಲ್ಲಿ ಕಳೆದ ನಾಲ್ಕೈದು ವರ್ಷಗಳಿಂದ ನಿಧಾನವಾಗಿ ಬೆಳೆಯುತ್ತ ಬಂದಿದೆ. ಈಗ ಸಮಕಾಲೀನ ಸಾಹಿತ್ಯದಲ್ಲಂತೂ ಇವರದ್ದೇ ಮುಖ್ಯಧ್ವನಿ. ಆದ್ದರಿಂದ ನಮ್ಮದೇ ಅರ್ಥಪೂರ್ಣ ಸಾಹಿತ್ಯ ಸಮ್ಮೇಳನ. ಕರ್ನಾಟಕದ ಬಂಡಾಯ ಸಾಹಿತ್ಯ ಚಳವಳಿಗೆ ಸ್ಪಷ್ಟರೂಪ ಕೊಡುವ ಪ್ರಯತ್ನವನ್ನು ಈ ಸಮ್ಮೇಳನ ಮಾಡುತ್ತದೆ.

- ಪ್ರಜಾಪ್ರಭುತ್ವದ ರಕ್ಷಣೆಗೆ ಹಾಗೂ ವಿಸ್ತರಣೆಗೆ
- ಶೋಷಣೆಯನ್ನು ಸಮರ್ಥಿಸುವ ಯಜಮಾನ ಸಂಸ್ಕೃತಿಯ ವಿರುದ್ಧ ಹೋರಾಟಕ್ಕೆ
- ಶೋಷಿತ ಜನತೆಯ ಹೋರಾಟಕ್ಕೆ
- ಖಡ್ಗವಾಗಲಿ ಕಾವ್ಯ : ಜನರ ನೋವಿಗೆ ಮಿಡಿವ ಪ್ರಾಣಮಿತ್ರ

ಇನ್ನು ಮೊದಲಾದ ಪ್ರಮುಖ ಅಂಶಗಳು ತುಂಬ ಗಮನಾರ್ಹ.

ಸಂಚಾಲಕರು :
ಬರಗೂರು ರಾಮಚಂದ್ರಪ್ಪ
ಡಿ.ಆರ್. ನಾಗರಾಜ್
ಕಾಳೇಗೌಡ ನಾಗವಾರ
ಶೂದ್ರ ಶ್ರೀನಿವಾಸ
ಸಿದ್ದಲಿಂಗಯ್ಯ
ಸಿ.ಜಿ.ಕೃಷ್ಣಸ್ವಾಮಿ
ರಾಮದೇವರಾಕೆ

ಬಂಡಾಯ ಸಾಹಿತ್ಯ ಚಳವಳಿಗೆ ಕರ್ನಾಟಕದ ಹೊರಗಿನ ಅನೇಕ ಚಳವಳಿಗಳೂ ಪ್ರೇರಣೆಯೆನ್ನಿತ್ತಿವೆ. ತೆಲುಗಿನ ದಿಗಂಬರ ಕಾವ್ಯ, ಮರಾಠಿ ದಲಿತ ಪ್ಯಾಂಥರ್ಸ್ ಚಳವಳಿ. ಕೇರಳದಲ್ಲಿ ಜನಪ್ರಿಯವಾದ ಕಮ್ಯುನಿಸ್ಟ್ ಸರ್ಕಾರಕ್ಕೆ ಬೆಂಬಲವಾಗಿ ನಿಂತ ಮಾರ್ಕ್ಸ್‌ವಾದಿ ಬರಹಗಾರರ ಸಾಹಿತ್ಯ ಚಳವಳಿ ಇವುಗಳ ಜೊತೆಗೆ ದಕ್ಷಿಣಆಫ್ರಿಕಾದ ಕಪ್ಪುಜನರ ಸಾಹಿತ್ಯ ಚಳವಳಿ ಇವೆಲ್ಲವೂ ಬಂಡಾಯ ಸಾಹಿತ್ಯ ಸಂಘಟನೆಯ ಆರಂಭದ ಹಿನ್ನೆಲೆಗಿವೆ. ಇವಲ್ಲದೆ ಮಾರ್ಕ್ಸ್ ಲೋಹಿಯಾ ಮತ್ತು ಅಂಬೇಡ್ಕರ್ ಅವರ ವಿಚಾರಧಾರೆಗಳೂ ಬಂಡಾಯ ಸಾಹಿತ್ಯ ಸಂಘಟನೆಗೆ ಪ್ರೇರಣೆಯನ್ನಿತ್ತಿವೆ. ಹಾಗೆಯೇ ಕರ್ನಾಟಕದಲ್ಲಿ ಪ್ರಕಟವಾಗುತ್ತಿದ್ದ ಹಲವಾರು ಪತ್ರಿಕೆಗಳೂ ಸಹ ಈ ಸಾಹಿತ್ಯ ಚಳವಳಿಯ ಬೆಂಬಲಕ್ಕೆ ನಿಂತು ಇದರ ಬೆಳವಣಿಗೆಗೆ ಕಾರಣವಾಗಿವೆ. ಚಂದ್ರಶೇಖರ ಪಾಟೀಲರು ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ 'ಸಂಕ್ರಮಣ' ಆರ್.ಜಿ.ಹಳ್ಳಿ ನಾಗರಾಜ್ ಸಂಪಾದಕತ್ವದ 'ಅನ್ವೇಷಣೆ' ವಡ್ಡರ್ಸೆ ರಘುರಾಮಶೆಟ್ಟರು ಪ್ರಕಟಿಸುತ್ತಿದ್ದ 'ಮುಂಗಾರು' ದಿನಪತ್ರಿಕೆ, ದಲಿತರ ಮುಖವಾಣಿಯಾಗಿದ್ದ 'ಪಂಚಮ'ಹೊಸದಿಕ್ಕು ಸಮುದಾಯದ ಮುಖವಾಣಿಯಾಗಿದ್ದ ಸಮುದಾಯ ವಾರ್ತಾಪತ್ರ, ಕಮ್ಯುನಿಸ್ಟ್ ಪಕ್ಷದ ಮುಖವಾಣಿಯಾದ 'ಕೆಂಬಾವುಟ', 'ಐಕ್ಯರಂಗ' ಈ ಮುಂತಾದ ಪತ್ರಿಕೆಗಳು ದಲಿತ ಬಂಡಾಯ ಸಾಹಿತ್ಯದ ಬೆಳವಣಿಗೆಯನ್ನು ನಿರಂತರವಾಗಿ ಪೋಷಿಸಿಕೊಂಡು ಬಂದಿದೆ.

ದಲಿತ ಬಂಡಾಯ ಸಾಹಿತ್ಯದಲ್ಲಿ ಜನಪ್ರಿಯವಾದ ಸಾಹಿತ್ಯ ಪ್ರಕಾರಗಳೆಂದರೆ ಕಥೆ ಮತ್ತು ಕಾವ್ಯ 1975ರಲ್ಲಿ ಪ್ರಕಟವಾದ ಸಿದ್ದಲಿಂಗಯ್ಯನವರ **ಹೊಲೆಮಾದಿಗರ ಹಾಡು ಹೊಸ** ಬಗೆಯ ಭಾಷೆ, ರೊಚ್ಚು, ಆವೇಶಗಳೊಂದಿಗೆ ಪ್ರಕಟವಾಗಿ ಕನ್ನಡ ಕಾವ್ಯಲೋಕವನ್ನೇ ಅಲ್ಲಾಡಿಸಿತು.

ಇಕ್ರಲಾ ವದೀರ್ಲಾ
ಈ ನನ್ ಮಕ್ಕಳ ಚರ್ಮ ಎಬ್ರಲಾ
ದೇವ್ರುಒಬ್ನೇಅಂತಾರೇ
ಓಣಿಗೊಂದೊಂದ್‌ತರಾ ಗುಡಿ ಕಟ್ಟವ್ರೆ
ಎಲ್ಲಾರೂ ದೇವ್ರ ಮಕ್ಳುಅಂತಾರೆ
ಹೊಲೇರ್ನ ಕಂಡ್ರೆ ಹಾವ್ ಕಂಡಂಗಾಡ್ತಾರೆ.

ಇದು ಸಿದ್ದಲಿಂಗಯ್ಯನವರ ಕಾವ್ಯದ ಧಾಟಿ. ದಲಿತರ ದುರಂತ ಬದುಕಿಗೆ ಕಾರಣವಾಗಿರುವ ವ್ಯವಸ್ಥೆಯ ವಿರುದ್ಧ ಸಿಟ್ಟು ಕಾರುತ್ತಾ. ದಲಿತರ ಅಜ್ಞಾನ, ಅಲ್ಪತೃಪ್ತಿಗಾಗಿ ನೋಯುತ್ತಾ, ಅವರನ್ನು ಸಂಘರ್ಷಕ್ಕೆ ಪ್ರಚೋದಿಸುವ ಹಾಡುಗಳು ಈ ಸಂಕಲನದಲ್ಲಿ ಪ್ರಕಟವಾದವು. ಈ ಕವನ ಸಂಕಲನವೇ ಒಂದು ರೀತಿಯಲ್ಲಿ ದಲಿತ ಕಾವ್ಯದ ಭಾಷೆ ಮತ್ತು ಲಯಕ್ಕೆ ನಿರ್ದೇಶನವೂ ಆಯಿತು. ಅದಾದ ನಂತರ 1979ರಲ್ಲಿ ಸಿದ್ದಲಿಂಗಯ್ಯನವರೇ ಸಾವಿರಾರು ನದಿಗಳು ಎಂಬ ಮತ್ತೊಂದು ಕವನ ಸಂಕಲನವನ್ನೂ ಹೊರತಂದರು. ಇದರಲ್ಲಿ ಮೊದಲನೇ ಸಂಕಲನಕ್ಕಿಂತ ಪ್ರಬುದ್ಧವಾದ ಹಲವಾರು ಕವನಗಳಿವೆ.

ನೆನ್ನೆ ದಿನ,

ನನ್ನ ಜನ ಬೆಟ್ಟದಂತೆ ಬಂದರು

ಕಪ್ಪುಮುಖ ಬೆಳ್ಳಿಗಡ್ಡ ಉರಿಯುತ್ತಿರುವ ಕುಣ್ಣುಗಳು

ಹಗಲು ರಾತ್ರಿಗಳನ್ನು ಸೀಳಿ ನಿದ್ದೆಯನ್ನು

ಒದ್ದರು ಕಂಬಳಿಗಳು ಕೊರಗಿದವು ಎದ್ದೇಳುವ ರೊಚ್ಚುಗೆ

ಭೂಕಂಪನವಾಯಿತು ಅವರು ಕುಣಿದ ಹುಚ್ಚಿಗೆ

ಎಂಬಂಥ ಸಾಲುಗಳಲ್ಲಿ ಹೊಸ ಭಾಷೆ ಛಂದಸ್ಸು, ಪ್ರತಿಮೆಗಳೆಲ್ಲ ಅತ್ಯಂತ ಧ್ವನಿಪೂರ್ಣವಾಗಿ ಪ್ರಕಟವಾಗಿರುವುದು ಕಂಡುಬರುತ್ತದೆ.

ಸಿದ್ದಲಿಂಗಯ್ಯನವರಲ್ಲದೆ, ಎಂ.ಗೋವಿಂದಯ್ಯನವರೂ ಕೂಡಾ (ಅವರು ಈವರೆಗೆ ಒಂದೂ ಕವನ ಸಂಕಲನವನ್ನು ಪ್ರಕಟಿಸಿಲ್ಲ)

ಹಲವಾರು ಒಳ್ಳೆಯ ಕವನಗಳನ್ನು ಬರೆದರು. ಅವರ "ಅ, ಆ ಮತ್ತು ... ಮಾಯಾರಣ್ಯ" ಮುಂತಾದುವು ಒಳ್ಳೆಯ ಕವನಗಳು ಇವುಗಳ ಜೊತೆಗೆ ಇಂದೂಧರ ಹೊನ್ನಾಪುರ ಅವರ ಬಂಡಾಯ. ಚನ್ನಣ್ಣಪಾಲೀಕಾರರ 'ಮರದ ಮೇಲಿನ ಗಾಳಿ' ಕರಿ 'ತೆಲಿ ಮಾನವನ ಜೀಪದ'ಪ್ಯಾಂಥರ್ ಪದ್ಯಗಳು ಬಂಡೆದ್ದ ದಲಿತರ ಬೀದಿ ಹಾಡುಗಳು ಧಿಕ್ಕಾರದ ಹಾಡುಗಳು ಮುಂತಾದ ಕವನ ಸಂಕಲನಗಳಲ್ಲಿ ಹಲವಾರು ಬಗೆಯ ಒಳ್ಳೆಯ ಪ್ರಯೋಗಗಳಿವೆ.

ಮ.ನ.ಜನರಯ್ಯನವರು ಎರಡು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. **'ಕೇಳುಜಗಮಾದಿಗ ಹೊಲೆಯ' 1981)ಮತ್ತು 'ಅತ್ತೆ ಸೊಸೆ ಆತ್ಮಕಥೆ' (1988)** ಈ ಸಂಕಲನಗಳಲ್ಲಿ ಒಳ್ಳೆಯ ಶಕ್ತಿ ಪೂರ್ಣ ಕವನಗಳಿವೆ. ಹಾಗೆಯೇ ಅರವಿಂದ ಮಾಲಗತ್ತಿಯವರ 'ಮೂಕನಿಗೆ ಬಾಯಿಬಂದಾಗ'ದಲ್ಲಿಯೂ ಹಲವಾರು ಸತ್ವಶಾಲೀ ರಚನೆಗಳಿವೆ. ಈಗಲೂ ಹಲವಾರು ದಲಿತ ಯುವಕರು ಉತ್ತಮವಾದ ರಚನೆಗಳನ್ನು ಪ್ರಕಟಿಸುತ್ತಲೇ ಇದ್ದಾರೆ. ಈ ಬಗೆಯ ಪ್ರಕಟಣೆಯಿಂದ ದಲಿತ ಸಾಹಿತ್ಯದ ನಿರಂತರತೆಯೇನೋ ಉಳಿದಿದೆಯಾದರೂ ಅದೇ ಭಾಷೆ, ಲಯದ ಪುರನಾರವರ್ತನೆಯಾಗುತ್ತಿರುವಂತೆಯೂ ಕಾಣುತ್ತಿದೆ.

ಬಂಡಾಯದ ಕತೆಗಾರರಲ್ಲಿ ಕುಂ. ವೀರಭದ್ರಪ್ಪ, ಡಾ. ಬೆಸಗರಹಳ್ಳಿರಾಮಣ್ಣ, ಬರಗೂರು ರಾಮಚಂದ್ರಪ್ಪ, ಕಾಳೇಗೌಡನಾಗವಾರ, ಚೆನ್ನಣ್ಣವಾಲಿಕಾರ, ಮೊಗಳ್ಳಿಗಣೇಶ್, ಶಾಂತರಸ, ಹಾಡ್ಲಹಳ್ಳಿ ನಾಗರಾಜ, ಕಾ.ತ.ಚಿಕ್ಕಣ್ಣ, ರಾಜಶೇಖರ ನೀರಮಾನ್ವಿ, ಕರೀಗೌಡಬೀಚನಹಳ್ಳಿ, ಎಸ್. ದಿವಾಕರ, ಹೊರೆಯಾಲ ದೊರೆಸ್ವಾಮಿ, ಚಂದ್ರಶೇಖರಧಾಮ್ಲೆ, ಪ್ರಭಾಕರಶಿಶಿಲಿ ಮುಂತಾದವರು ಒಳ್ಳೆಯ ಸಾಧನೆ ಮಾಡಿದ್ದಾರೆ. ಕಾದಂಬರಿ ಪ್ರಕಾರದಲ್ಲೂಸಾಕಷ್ಟು ಕೃಷಿ ನಡೆದಿದೆ. ಮ.ನ.ಜವರಯ್ಯ, ಕುಂ.ವೀರಭದ್ರಪ್ಪ ಬರಗೂರುರಾಮಚಂದ್ರಪ್ಪ, ಚೆನ್ನಣ್ಣವಾಲಿಕಾರ, ಹೊರೆಯಾಲ ದೊರೆಸ್ವಾಮಿ, ತೊಡೆಯರ್, ಡಿ.ಹೆಗ್ಗಡೆ, ಆರ್.ವಿ.ಭಂಡಾರಿ, ಜಾಣಗೆರೆ ವೆಂಕಟರಾಮಯ್ಯ. ಬೆನಕನಹಳ್ಳಿ ಜಿ.ನಾಯಕ, ಶಿವರಾಮೇಗೌಡ ನಾಗವಾರ, ಕೃಷ್ಣಮೂರ್ತಿ ಹನೂರು, ಮೂಳ್ಳೂರು ನಾಗರಾಜ, ಅರವಿಂದ ಮಾಲಗತ್ತಿ, ಹೀಗೆ ಹಲವಾರು ಜನ ಕಾದಂಬರಿಕಾರರು ಗಮನಾರ್ಹವಾದ ಕೃತಿಗಳನ್ನು ನೀಡಿದ್ದಾರೆ.

ದಲಿತ ಬಂಡಾಯ ಸಾಹಿತ್ಯ ಚಳವಳಿಯಲ್ಲಿ ನಾಟಕ ಪ್ರಕಾರ ಕೂಡಾ ತುಂಬಾ ಅರ್ಥಪೂರ್ಣವಾಗಿ ಬಳಕೆಯಾಗಿದೆ. ದಲಿತರ ಮೇಲಿನ ಕ್ರೌರ್ಯ, ಅತ್ಯಾಚಾರದಂಥ ಪ್ರಕರಣಗಳನ್ನು ನಾಟಕವನ್ನಾಗಿಸಿ ಬೀದಿ ಬೀದಿಗಳಲ್ಲಿ ಪ್ರದರ್ಶಿಸಿ ಜನರನ್ನು ಸಂಘಟಿಸಿದ್ದು ಒಂದು ಸಾಧನೆಯೇ ಇದಕ್ಕಾಗಿ 'ಬೀದಿ ನಾಟಕಗಳು' ಎಂಬೊಂದು ರಂಗ ಪ್ರಯೋಗವೇ ಬಳಕೆಗೆ ಬಂದದ್ದನ್ನು ಗಮನಿಸಬೇಕು. ಬಂಡಾಯ ನಾಟಕಗಳಲ್ಲಿ

ರಾಜಕೀಯವಸ್ತುಗಳನ್ನುಳ್ಳ ಹಲವಾರು ಕೃತಿಗಳು ಅತ್ಯಂತ ಜನಪ್ರಿಯವಾಗಿವೆ. ಕುರಿ, ಮುಖ್ಯಮಂತ್ರಿ, ತಾಮ್ರಪತ್ರ, ವೈಕುಂಠರಾಜು ಅವರ ಸಂದರ್ಭ, ಟಿ.ಎಸ್. ಸೀತಾರಾಂ ಅವರ 'ಆಸ್ಫೋಟ' ಪ್ರಸನ್ನರ ಒಂದು ಲೋಕ ಕಥೆ' (ದಂಗೆಯ ಮುಂಚಿನ ದಿನಗಳು, ಕೆ.ವಿ.ನಾರಾಯಣರ 'ಹುತ್ತವ ಬಡಿದರೆ ಮುಂತಾದವು ಈ ದಿಸೆಯಲ್ಲಿ ಮುಖ್ಯವಾದುವು. ದಲಿತ ಬಂಡಾಯ ಸಾಹಿತ್ಯದ ಪ್ರಮುಖ ನಾಟಕಕಾರೆಂದರೆ ಸಿದ್ದಲಿಂಗಯ್ಯ. ಸಿ.ಜಿ.ಕೃಷ್ಣಸ್ವಾಮಿ, ಬಿ. ಶ್ರೀನಿವಾಸರಾಜು, ಚೆನ್ನಣ್ಣ ವಾಲೀಕಾರ, ಕೆ.ಹೆಚ್. ಪ್ರಭು ಹ.ನ.ವಿಜಯಕುಮಾರ್, ದೇವನೂರ ಮಹಾದೇವರ 'ಒಡಲಾಳ' ಮತ್ತು 'ಕುಸುಮಬಾಲೆ' ಕೃತಿಗಳು ರಂಗರೂಪವಾಗಿಯೂ ಜನಪ್ರಿಯಗೊಂಡ ಕೃತಿಗಳಾಗಿವೆ.

ಹಾಗೆಯೇ ದಲಿತ ಬಂಡಾಯ ಸಾಹಿತ್ಯಕ್ಕೆ ಪೂರಕವಾದ ವಿಮರ್ಶಾಸಾಹಿತ್ಯವೂ ಸಾಕಷ್ಟು ಪ್ರಕಟವಾಗಿದೆ. ಪ್ರಚಾರ ಸಾಹಿತ್ಯದಲ್ಲೂ ಅನೇಕ ಗಟ್ಟಿಯಾದ ಕೃತಿಗಳು ಪ್ರಕಟಗೊಂಡಿವೆ.

ಕನ್ನಡ ನವ್ಯೋತ್ತರ ಸಾಹಿತ್ಯದ ಬಗ್ಗೆ ಚರ್ಚಿಸುವಾಗ ನೆನಪಿಸಿಕೊಳ್ಳಬೇಕಾದ ಸಾಹಿತ್ಯವೆಂದರೆ ಮಹಿಳಾ ಸಾಹಿತ್ಯ ಮತ್ತು ಇಸ್ಲಾಂ ಸಾಹಿತ್ಯ. ಈ ಕಾಲದ ದೃಷ್ಟಿ, ಧೋರಣೆಗಳಿಗೆ ಸ್ಪಂದಿಸಿ ಹಲವಾರು ಮಹಿಳೆಯರು, ಮುಸ್ಲಿಂ ಲೇಖಕ ಲೇಖಕಿಯರ ಬಂಡಾಯದ ದನಿ ಮೊಳಗಿಸಿದ್ದು ಅತ್ಯಂತ ಗಮನಾರ್ಹ.

4.3.5 ಸ್ವಪರೀಕ್ಷೆಯ ಪ್ರಶ್ನೆಗಳು

4.3.5.1 ನವ್ಯ ಸಾಹಿತ್ಯದ ವಿರುದ್ಧ ತೇಜಸ್ವಿಯವರು ಬರೆದದ್ದು, ಅವರ ಯಾವ ಕಥಾ ಸಂಕಲನದ ಮುನ್ನುಡಿಯಲ್ಲಿ?

....

....

....

4.3.5.2 ದಲಿತ ಬಂಡಾಯ ಸಾಹಿತ್ಯ ಆರಂಭವಾದುದು ಯಾವಾಗ?

....

....

....

4.3.5.3 ಬಂಡಾಯ ಸಾಹಿತ್ಯದ ಧ್ಯೇಯ ವಾಕ್ಯವೇನು?

....

....

....

4.3.5.4 'ಕನ್ನಡ ಸಾಹಿತ್ಯದಲ್ಲಿರುವುದು ಬಹುಪಾಲು ಬೂಸಾ'ಎಂದವರು ಯಾರು?

....

....

....

4.3.5.5 1974ರಲ್ಲಿ ಕುವೆಂಪು ಅವರು ಮೈಸೂರಿನಲ್ಲಿ ಉದ್ಘಾಟಿಸಿದ ಸಮಾವೇಶ ಯಾವುದು?

....

....

....

4.3.5.6 ದಲಿತ ಸಂಘರ್ಷ ಸಮಿತಿ ಮೊದಲು ಎಲ್ಲಿ ರಚನೆಗೊಂಡಿತು.

....

....

....

4.3.5.7 ಬಂಡಾಯ ಸಾಹಿತ್ಯ ಸಮ್ಮೇಳನ ಸಂಘಟಿತವಾದದ್ದು ಯಾವ ಸಂದರ್ಭದಲ್ಲಿ?

....

....

....

4.3.5.8 ಬಂಡಾಯ ಸಾಹಿತ್ಯ ಚಳವಳಿಗೆ ಪ್ರೇರಣೆಯನ್ನೊದಗಿಸಿದ ಬೇರೆ ಚಳವಳಿಗಳು ಯಾವುವು?

....

....

....

4.3.5.9 ಸಿದ್ದಲಿಂಗಯ್ಯನವರ ಮೊದಲ ಕಾವ್ಯ ಸಂಕಲನ ಯಾವುದು?

....

....

....

4.3.5.10 ದಲಿತ ಬಂಡಾಯದ ಕೆಲವು ಪ್ರಮುಖ ಲೇಖಕರ ಹೆಸರು ಹೇಳಿ?

....

....

....

4.3.6 ಘಟಕದ ಸಾರಾಂಶ

ಕನ್ನಡ ನವ್ಯಸಾಹಿತ್ಯ 1950 ರಿಂದ ಆರಂಭವಾಗಿ 1970ನೇ ದಶಕದ ಮೊದಲ ಭಾಗದವರೆಗೆ ತುಂಬಾ ಪ್ರಮುಖ ಸ್ಥಿತಿಯಲ್ಲಿತ್ತು. ಆದರೆ ಕೊನೆ ಕೊನೆಗೆ ಈ ಸಾಹಿತ್ಯ ಪಂಥವು ತನ್ನೆಲ್ಲಾ ಸಾಧ್ಯತೆಗಳನ್ನು ತೀರಿಸಿಕೊಂಡು ಜಡವಾದಾಗ ದಲಿತ ಬಂಡಾಯ ಸಾಹಿತ್ಯವು ರೂಪು ತಳೆಯುವುದು ಅನಿವಾರ್ಯವಾಯಿತು. ಅದರ ಜೊತೆಗೆ ಮಾರ್ಕ್ಸ್, ಲೆನಿನ್ ಮತ್ತು ಅಂಬೇಡ್ಕರ್ ಅವರ ವಿಚಾರ ಧಾರೆಗಳೂ, ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳುವಳಿ, ದಕ್ಷಿಣ ಆಫ್ರಿಕಾದ ಕಪ್ಪು ಜನರ ಚಳುವಳಿಗಳೂ ದಲಿತ ಬಂಡಾಯ ಸಾಹಿತ್ಯಕ್ಕೆ ಪ್ರೇರಣೆಯನ್ನಿತ್ತವು. 1979ರಲ್ಲಿ ಧರ್ಮಸ್ಥಳದಲ್ಲಿ 51ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಾಗ, ಅದರಲ್ಲಿ ದಲಿತ ಸಾಹಿತ್ಯ ಗೋಷ್ಠಿಯನ್ನಿಡಲು ಕನ್ನಡ ಸಾಹಿತ್ಯ ಪರಿಷತ್ತು

ಒಪ್ಪದೇ ಹೋದಾಗ ಬೆಂಗಳೂರಿನಲ್ಲಿ ಸಮಾನಾಂತರವಾಗಿ ಬಂಡಾಯ ಸಾಹಿತ್ಯ ಸಮ್ಮೇಳನ ನಡೆಯಿತು. ದಲಿತ ಬಂಡಾಯ ವೇದಿಕೆಯನ್ನುವುದು ಅಧಿಕೃತವಾಗಿ ಉದ್ಘಾಟನೆಗೊಂಡದ್ದು ಅಂದೇ ಎಂದು ಗುರುತಿಸುವುದು ಸೂಕ್ತ.

ದಲಿತ-ಬಂಡಾಯ ಸಾಹಿತ್ಯದಲ್ಲಿ ವ್ಯವಸ್ಥೆಯ ವಿರುದ್ಧ ಸಿಟ್ಟುರೊಚ್ಚು ಮೊದಮೊದಲು ಕಟುವಾಯಿತಾದರೂ ಬರುಬರುತ್ತಾ ಲೇಖಕರು ಕಲಾತ್ಮಕತೆಯನ್ನು ಬಿಡದೆ ಬೆಳೆಸಿಕೊಂಡು ಬಂದಿದ್ದಾರೆ. ಕಾವ್ಯ, ಕತೆ, ಕಾದಂಬರಿ, ನಾಟಕ, ವಿಮರ್ಶೆ ಮತ್ತು ವಿಚಾರ ಸಾಹಿತ್ಯದಲ್ಲಿ ಮಹತ್ವದ ಕೃತಿಗಳು ಹೊರಬಂದಿವೆ. ಒಟ್ಟಿನಲ್ಲಿ ವಿಶೇಷವಾಗಿ ಹೇಳಬೇಕಾದರೆ ದಲಿತ ಬಂಡಾಯ ಸಾಹಿತ್ಯ ಇನ್ನೂ ಚಲಾವಣೆಯಲ್ಲಿರುವ ಸಾಹಿತ್ಯ ಚಳವಳಿ. ಹಾಗಾಗಿ ಆ ಚಳವಳಿಯ ಸಾಧಕ-ಭಾಧಕಗಳನ್ನು ಒಟ್ಟಾಗಿ ಬೆಲೆ ಕಟ್ಟುವ ಕಾಲ ಇನ್ನೂ ಬಂದಿವೆಂಬುದು ಗಮನಾರ್ಹ.

4.3.7 ಸ್ವಪರೀಕ್ಷಾ ಪ್ರಶ್ನೆಗಳಿಗೆ ಉತ್ತರ

4.3.7.1 ಅಬಚೂರಿನ ಪೋಸ್ಟಾಫೀಸು.

4.3.7.2 1970ರ ದಶಕದ ಉತ್ತರ ಭಾಗದಲ್ಲಿ.

4.3.7.3 ಖಡ್ಗವಾಗಲಿ ಕಾವ್ಯ ;ಜನರ ನೋವಿಗೆ ಮಿಡಿವ ಪ್ರಾಣಮಿತ್ರ.

4.3.7.4 ಬಿ.ಬಸವಲಿಂಗಪ್ಪ.

4.3.7.5 ಬರಹಗಾರರ ಮತ್ತು ಕಲಾವಿದರ ಒಕ್ಕೂಟ.

4.3.7.6 ಭದ್ರಾವತಿಯಲ್ಲಿ.

4.3.7.7 1979ರಲ್ಲಿ ಧರ್ಮಸ್ಥಳದಲ್ಲಿ ಅಖಿಲ ಭಾರತ 51ನೇ ಸಾಹಿತ್ಯ ಸಮ್ಮೇಳನ ನಡೆದ ಸಂದರ್ಭದಲ್ಲಿ. ತೆಲುಗಿನ ದಿಗಂಬರ ಕಾವ್ಯ ಚಳವಳಿ, ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳವಳಿ, ದಕ್ಷಿಣ ಆಫ್ರಿಕಾದ ಕಪ್ಪುಜನರ ಚಳವಳಿ, ಭಾರತದ ತುರ್ತು ಪರಿಸ್ಥಿತಿ ಚಳುವಳಿ ಮೊದಲಾದವು ಪ್ರಮುಖವಾಗಿವೆ.

4.3.7.8 ದೇವನೂರ ಮಹಾದೇವ, ಮ.ನ.ಜವರಯ್ಯ, ಅರವಿಂದ ಮಾಲಗತ್ತಿ, ಬರಗೂರು ರಾಮಚಂದ್ರಪ್ಪ, ಚಂದ್ರಶೇಖರ ಪಾಟೀಲ, ಕಾಳೇಗೌಡ ನಾಗವರ, ಸಿದ್ಧಲಿಂಗಯ್ಯ, ಶೂದ್ರಶ್ರೀನಿವಾಸ, ಚನ್ನಣ್ಣವಾಲೀಕರ, ಕುಂ. ವೀರಭದ್ರಪ್ಪ, ಎಂ.ಗೋವಿಂದಯ್ಯ, ಇಂದೂಧರ ಹೊನ್ನಾಪುರ, ಮೊಗಳ್ಳಿಗಣೇಶ್, ರಂಜಾನ್‌ದರ್ಗ, ಸತ್ಯಾನಂದ ಪಾತ್ರೋಟ ಮುಂತಾದ ಪ್ರಮುಖರು ಗಮನಾರ್ಹರರು.

4.3.8 ಅಭ್ಯಾಸ ಪ್ರಶ್ನೆಗಳು

4.3.8.1 ನವ್ಯ ಸಾಹಿತ್ಯ ಎಂದರೇನು? ಅದರ ಸ್ವರೂಪ, ಲಕ್ಷಣ ಮತ್ತು ಮಹತ್ವವನ್ನು ಕುರಿತು ಬರೆಯಿರಿ.

4.3.8.2 ದಲಿತ-ಬಂಡಾಯ ಸಾಹಿತ್ಯ ಎಂದರೇನು? ಅದರ ಸ್ವರೂಪ, ಲಕ್ಷಣ ಮತ್ತು ಮಹತ್ವವನ್ನು ಕುರಿತು ಬರೆಯಿರಿ.

4.3.9 ಹೆಚ್ಚಿನ ಓದಿಗೆ ಸಹಾಯಕ ಗ್ರಂಥಗಳು

4.3.9.1 ಹೊಸಗನ್ನಡ ಸಾಹಿತ್ಯ : ಎಲ್.ಎಸ್.ಶೇಷಗಿರಿರಾವ್.

4.3.9.2 ನವ್ಯತೆ ಮತ್ತು ಕಾವ್ಯ ಜೀವನ : ವಿ.ಕೃ. ಗೋಕಾಕ್.

4.3.9.3 ನಡೆದು ಬಂದದಾರಿ : ಎಂ. ಗೋಪಾಲಕೃಷ್ಣ ಅಡಿಗ.

4.3.9.4 ಮಣ್ಣಿನ ವಾಸನೆ : ಎಂ.ಗೋಪಾಲಕೃಷ್ಣಯ್ಯ.

ಟಿಪ್ಪಣಿಗಳು


ಟಿಪ್ಪಣಿಗಳು

ಟಿಪ್ಪಣಿಗಳು

ಆದೇಶ ಸಂಖ್ಯೆ : ಕರಾಮುವಿ/ಸಿಪಾವಿ/4-813/2007-08, ಚೈತ್ರ ಎಂಟರ್‌ಪ್ರೈಸಸ್, ಬೆಂಗಳೂರು ತಾ।। 08.06.2007
ಕಾಗದ : 60 ಜಿ.ಎಸ್.ಎಂ. - ಎಂ.ಪಿ.ಎಂ. ಮುಖಪುಟ 170 ಜಿ.ಎಸ್.ಎಂ. ಆರ್ಟ್
ಪರಿಮಾಣ : 1200 ಪ್ರತಿಗಳು (ಸಂಖ್ಯೆ 1ರಿಂದ 1200)


ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಹಾಗೂ ಅಧ್ಯಯನ ಕೇಂದ್ರಗಳು

Regional and Study Centres of Karnataka State Open University



(ನಮೂದಿಸಿರುವ ಅಂಕಿ - ಜಿಲ್ಲೆಯಲ್ಲಿರುವ ಒಟ್ಟು ಅಧ್ಯಯನ ಕೇಂದ್ರಗಳ ಸಂಖ್ಯೆಯನ್ನು ಸೂಚಿಸುತ್ತದೆ.)

(The Number indicate the total number of study Centres existing in that districts.)


Feedback : improvement, revision and launching of new programmes
Multimedia learning material
Academic and other support
Evaluation - methods and modes
INSTRUCTIONAL SYSTEM